ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೮

ಪ್ರಧಾನ ಸಂಪಾದಕ:

ಕೆ. ವಿ. ಪುಟ್ಟಪ್ಪ, ಎಂ.ಎ.

ಪಂಪರಾಮಾಯಣ ಸಂಗ್ರಹ

ಸಂಪಾದಕರು:

ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್

ಮತ್ತು

ಡಿ. ಎಲ್. ನರಸಿಂಹಾಚಾರ್, ಎಂ.ಎ.

ಮೈಸೂರು:

ವಿಶ್ವವಿದ್ಯಾನಿಲಯ

೧೯೫೧

ರೂ. ~~೧-೦-೦~~ 2.00

VEC, Library
001970

VEC, Library
001970

VIJAYA EVENING COLLEGE
LIBRARY
BANGALORE-4.
ACCN. NO. 1970
SECTION
COST Rs 21/3
Date 21/7/1970 Librarian.

405

VIJAYA EVENING COLLEGE
LIBRARY
BANGALORE-4.
ACCN. NO.
SECTION
COST
Date Librarian.

VECKAN1083

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೮

ಪ್ರಧಾನ ಸಂಪಾದಕ:

ಕೆ. ವಿ. ಪುಟ್ಟಪ್ಪ, ಎಂ.ಎ.

ಪಂಪರಾಮಾಯಣ ಸಂಗ್ರಹ

ಸಂಪಾದಕರು:

ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್

ಮತ್ತು

ಡಿ. ಎಲ್. ನರಸಿಂಹಾಚಾರ್, ಎಂ.ಎ.

ಮೈಸೂರು:

ಮೈಸೂರು ವಿಶ್ವವಿದ್ಯಾನಿಲಯ

೧೯೫೧

ಮೂರನೆಯ ಮುದ್ರಣ

ಮೈಸೂರು :
ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ವಿಷಯ ಸೂಚಿಕೆ

ವಿಷಯ	ಪುಟ
ಗ್ರಂಥ ಸಂಕೇತಗಳ ವಿವರ	iv
ಪೀಠಿಕೆ	v
ಗ್ರಂಥಪಾಠ	ciii
ಪಂಪರಾಮಾಯಣ ಸಂಗ್ರಹ—	
೧. ರಾಮಲಕ್ಷ್ಮಣರ ಜನನಂ	೧
೨. ಸೀತಾ ಸ್ವಯಂವರಂ	೧೫
೩. ವನಪ್ರಯಾಣಂ	೨೨
೪. ಸೀತಾಹರಣಂ	೩೮
೫. ರಾವಣ ದಿಗ್ವಿಜಯ ವರ್ಣನಂ	೬೬
೬. ಲಂಕಾದಹನಂ	೯೦
೭. ರಾಮಲಕ್ಷ್ಮಣ ಪುಣ್ಯಪ್ರಭಾವಂ	೧೦೬
೮. ರಘುವೀರ ವಿಜಯಂ	೧೧೯
೯. ಸೀತಾಪರಿತ್ಯಾಗಂ, ರಾಮಪರಿನಿರ್ವಾಣಂ	೧೪೨
ಟಿಪ್ಪಣಿ	೧೬೧
ಶಬ್ದಕೋಶ	೧೬೫

ಗ್ರಂಥ ಸಂಕೇತಗಳ ವಿವರ

ಅ. ಪಂ.	....	ಅಭಿನವ ಪಂಪ (ಪ್ರಶಸ್ತಿ ಗ್ರಂಥ)
ಕ. ಕ. ಚ.	....	ಕರ್ಣಾಟಕ ಕವಿಚರಿತೆ
ಕ. ಸಾ. ಪ.	....	ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ
ಕೆ. ಕ. ಜೀ. ಕಾ ವಿ.	....	ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ
ಜ. ಕ.	....	ಜಯ ಕರ್ನಾಟಕ
ಪ ಚ.	....	ಪಲುಮ ಚರಿಯ
ಪ. ಪು.	....	ಪದ್ಮಪುರಾಣಮ್ (ಶ್ರೀಮದ್ರವಿಷೇಣಾಚಾರ್ಯಕೃತಂ. ಮಾಣಿಕ್ಯಚಂದ್ರದಿಗಂಬರ ಜೈನಗ್ರಂಥಮಾಲಾ)
ಪ್ರಾ. ಕ.	....	ಪ್ರಾಚೀನ ಕರ್ನಾಟಕ
ಮ. ಪು.	....	ಮಲ್ಲಿನಾಥ ಪುರಾಣ
A. B. O. R. I.	....	*Annals of the Bhandarkar Oriental Research Institute*
A. R. S. I. E.	....	*Annual Report : South Indian Epigraphy*
A. U. S.	....	*Allahabad University Series*
B. R.	....	D. C. Sen : *Bengāli Rāmāyanas*
C. S. P.	....	*Catalogue of Sanskrit and Prakrit Mss. in C. P. and Berar*
E. I.	....	*Epigraphia Indica*
E. R. E.	....	*Encyclopædia of Religion and Ethics*
F. K. D.	....	Fleet : *Dynasties of the Kanarese Districts of the Bombay Presidency*
H. I. L.	....	Winternitz : *History of Indian Literature*
H. J.	....	Mrs Stevenson : *Heart of Jainism*
I. A.	....	*Indian Antiquary*
K. H. R. J.	....	*Karnataka Historical Research Society Journal*
M. A. R.	....	*Mysore Archaeological Report*
M. U. M.	....	*Mysore University Magazine, Mysore*
N. S. M.	....	*Notices of Sanskrit Mss. (Bombay Presidency)*
P. O. C.	....	*Proceedings : Oriental Conference*

ಪೀಠಿಕೆ

೧. ಕವಿಚರಿತ್ರೆ

'ರಾಮಚಂದ್ರ ಚರಿತ ಪುರಾಣ' ಅಥವಾ 'ಪಂಪರಾಮಾಯಣ' ಎಂಬ ಈ ಕಾವ್ಯವನ್ನು ಬರೆದವನು ನಾಗಚಂದ್ರನೆಂಬ ಕವಿ. 'ಮಲ್ಲಿನಾಥ ಪುರಾಣ'ವು ಇವನ ಇನ್ನೊಂದು ಕೃತಿ. ಇವೆರಡೂ ಅಚ್ಚಾಗಿ ಪ್ರಸಿದ್ಧಿಯನ್ನು ಪಡೆದಿವೆ. ಇವಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ಇವನು ರಚಿಸಿದ್ದಾನೆಂದು ಪ್ರತೀತಿಯಿದೆ.[1] ಆದರೆ ಇವೇನೂ ಅಷ್ಟು ಮುಖ್ಯವಾದುವಲ್ಲ. ಮೊದಲಿನ ಎರಡು ಗ್ರಂಥಗಳಿಂದ ಕವಿಯ ವಿಷಯವಾಗಿ ತಿಳಿದುಬರುವ ಸಂಗತಿಗಳನ್ನು ಸಂಗ್ರಹವಾಗಿ ಇಲ್ಲಿ ಕೊಡಬಹುದು.

---

[1] 'ಜಿನಮುನಿತನಯ', ಜಿನಾಕ್ಷರಮಾಲೆ' ಎಂಬ ಗ್ರಂಥಗಳು ನಾಗಚಂದ್ರನವೆಂದು ದೇವಚಂದ್ರನೆಂಬ ಒಬ್ಬ ಅತ್ಯಂತ ಆಧುನಿಕ ಕವಿ (ಕಾಲ ೧೮೩೮) ಹೇಳುತ್ತಾನೆ (ಕ. ಕ. ಚ., I, ೯೪). ಈ ಹೇಳಿಕೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗುವುದಿಲ್ಲ. 'ಜಿನಮುನಿತನಯ'ದಲ್ಲಿ—

ಕೇಳುವ ಭವ್ಯರ ಪುಣ್ಯಂ
ಪೇಳುವ ಕವಿನೂತನಾಗಚಂದ್ರನ ಭಾಗ್ಯಂ
ಪಾಲಿಪ ಜಿನೇಂದ್ರಧರ್ಮವ
ನೇಳಿಸದಿರು ಮೋಕ್ಷಗಾಮಿ ಜಿನಮುನಿತನಯಾ

ಎಂಬೊಂದು ಪದ್ಯವಿದೆ. ಇಲ್ಲಿ ಬರುವ 'ಕವಿನೂತನಾಗಚಂದ್ರ' ಎಂಬುದನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥವನ್ನು ಹೇಳಿದವನು 'ನೂತನಾಗಚಂದ್ರ' ಎಂದರೆ ಅಭಿನವ ನಾಗಚಂದ್ರ ಎಂದು ಒಂದು ಮತವಿದೆ (ಕ. ಕ. ಚ., I, ೧೦೦). ಇದು ಸರಿಯಲ್ಲ; 'ಕವಿನೂತನಾಗಚಂದ್ರ' ಎಂದರೆ ಕವಿಸ್ತುತನಾದ ನಾಗಚಂದ್ರ ಎಂದು ಅರ್ಥ; ಆದ್ದರಿಂದ ಇದನ್ನು ಬರೆದವನು ಈ ನಾಗಚಂದ್ರನೇ ಇರಬೇಕು ಎಂಬುದು ಇನ್ನೊಂದು ಮತ (ಕೆ. ಕ. ಜೀ. ಕಾ. ವಿ., ೫೪). ಆದರೆ ಇದರ ನಿರ್ಣಯವು ಇಷ್ಟು ಸುಲಭವಾಗಿಲ್ಲ. 'ಕವಿನೂತನಾಗಚಂದ್ರ' ಎಂಬುದಕ್ಕೆ 'ಕವಿವಿನುತನಾಗಚಂದ್ರ' ಎಂದೂ (ಓರಿಯಂಟಲ್ ಲೈಬ್ರೆರಿ, ಮೈಸೂರು; K.A. 33) 'ಬೆಂಗ

(ನಾಗಚಂದ್ರನ ಗುರು ಬಾಲಚಂದ್ರಮುನಿ.) ಅನುಬದ್ಧಕೇವಲಿಗಳು, ಶ್ರುತಕೇವಲಿಗಳು, ದಶಪೂರ್ವಧರರು, ಏಕಾದಶಾಂಗಧಾರಿಗಳು, ಭೂತಬಲಿ, ಪುಷ್ಪದಂತ, ಜಿನಸೇನ, ವೀರಸೇನ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಕುಂಡಕುಂದಾಚಾರ್ಯ, ಅಕಳಂಕ, ವರ್ಧಮಾನಭಟ್ಟಾರಕ, ಬಾಲಚಂದ್ರಮುನಿ, ಮೇಘಚಂದ್ರ ತ್ರೈವಿದ್ಯ, ಶುಭಕೀರ್ತಿ, ವಾಸುಪೂಜ್ಯಮುನಿ, 'ರಾಘವ ಪಾಂಡ

ಳೂರಲ್ಲಿ ಅಚ್ಚಾಗಿರುವ ಪುಸ್ತಕದಲ್ಲಿ 'ಕವಿನೂತನಾಗವರ್ಮ' ಎಂದೂ (ಮ. ಪು., ಪೀಠಿಕೆ, ೨) ಪಾಠಾಂತರಗಳು ಇವೆ. ಆದ್ದರಿಂದ ಈ ಗ್ರಂಥದ ಕರ್ತೃ ನಾಗಚಂದ್ರನೋ ನಾಗವರ್ಮನೋ ಹೇಳುವುದು ಹೇಗೆ? ಈ ಪುಸ್ತಕವನ್ನು ನೋಡಿದರೆ ಅದು ಒಬ್ಬನೇ ಕವಿಯಿಂದ ರಚಿತವಾದದ್ದೆಂದು ತೋರುತ್ತದೆ ಎಂದರೆ ಅದು ಸಂಕಲಿತ ಗ್ರಂಥವಲ್ಲ. ಅದನ್ನು ಬರೆದವನು ಯಾರು ಎಂದು ಹೇಳುವುದಕ್ಕೆ ಆಧಾರ ಸಾಲದು.

'ಜಿನಾಕ್ಷರಮಾಲೆ' ದೊರೆತಿಲ್ಲ. ಅದನ್ನು ನಾಗಚಂದ್ರನೇ ಹಿಂದಿನ ಪೊನ್ನನ ಮಾದರಿಯನ್ನನುಸರಿಸಿ ಬರೆದಿದ್ದರೂ ಬರೆದಿರಬಹುದು.

'ಯೋಗಾಮೃತ' ಎಂಬೊಂದು ಗ್ರಂಥವೂ ನಾಗಚಂದ್ರನಿಂದಲೇ ರಚಿತವಾಗಿರಬೇಕೆಂದು ಈಚೆಗೆ ಶ್ರೀಮಾನ್ ದ. ರಾ. ಬೇಂದ್ರೆ ಅವರು ಹೇಳಿದ್ದಾರೆ (ಅ. ಪಂ., ೨-೮). ಇವರಿಗೆ ಆಧಾರ—

ಕಾನಲ ಬಾನಲ ನೀರಂ
ಮೀನೊಲ್ಗುಂ ರಾಜಹಂಸನೊಲ್ಗುಮೆ ಮಿಥ್ಯಾ
ಜ್ಞಾನಿ ಭವಸುಖಮನೊಲ್ವಂ
ತೇನೊಲ್ಗುಮೆ ಪರಮಪಾವನ ಜ್ಞಾನಪರಂ

ಎಂಬ 'ಮಲ್ಲಿನಾಥಪುರಾಣ'ದ ಪದ್ಯ (೧೩-೧೬೩) 'ಯೋಗಾಮೃತ'ದಲ್ಲಿರುವುದು. ಇದು ಸರಿಯಲ್ಲ. 'ಯೋಗಾಮೃತ'ವನ್ನು ಒಬ್ಬ ಕವಿ ಬರೆದಿಲ್ಲ. ಅದರಲ್ಲಿ ಹಲವು ಕವಿಗಳ ಕಾವ್ಯಗಳಲ್ಲಿರುವ ಪದ್ಯಗಳಿವೆ. 'ತಣಿವುಂಟೇ ಪೆಱತೊಂದಪೂರ್ವರಸಮೇಂ', 'ಎಯ್ದಿದುದಱೊಳಳವಡದುದುಂ . . .' ಎಂದು ಮೊದಲಾಗುವ ಅದರಲ್ಲಿನ ೮೭, ೮೯ ನೆಯ ಪದ್ಯಗಳು ಪಂಪನ 'ಆದಿಪುರಾಣ'ದ ೩-೬೯ ಮತ್ತು ೯-೫೨ ನೆಯ ಪದ್ಯಗಳಾಗಿವೆ. 'ಒಡಲಂ ಸಂಸೃತಿಲಕ್ಷ್ಮಿಕೆಯ ಮಡಲಂ . . .' ಎಂಬ ಅದರ ಇನ್ನೊಂದು ಪದ್ಯ II ಗುಣವರ್ಮನ 'ಪುಷ್ಪದಂತಪುರಾಣ'ದ್ದು (೯-೭, ೧೩-೩೩). ಆದ್ದರಿಂದ 'ಯೋಗಾಮೃತ'ವು ಸ್ವತಂತ್ರ ಗ್ರಂಥವಲ್ಲ, ಸಂಕಲಿತ ಗ್ರಂಥ. ಈ ಸಂಕಲನಕಾರನು ಹೀಗೆಯೇ 'ಮಲ್ಲಿನಾಥ ಪುರಾಣ'ದಿಂದಲೂ ಪದ್ಯಗಳನ್ನು ಆರಿಸಿಕೊಂಡಿದ್ದಾನೆ. 'ಯೋಗಾಮೃತ'ವನ್ನು ನಾಗಚಂದ್ರನ ತಲೆಗೆ ಕಟ್ಟುವುದು ಸರಿಯಲ್ಲ.

ವೀಯ' ವೆಂಬ ಗತಪ್ರತ್ಯಾಗತ ಕಾವ್ಯವನ್ನು ಬರೆದ ಶ್ರುತಕೀರ್ತಿ ತ್ರೈವಿದ್ಯ, ವೀರಣಂದಿ ಸೈದ್ಧಾಂತಿಕ—ಇದು ಅವನು ಸ್ತುತಿಸಿರುವ ಅನಾದಿ ಎಂದು ಹೇಳಬಹುದಾದ ಗುರುಪರಂಪರೆ. ಹಿಂದಿನ ಕವಿಗಳಲ್ಲಿ ಪಂಪ ಪೊನ್ನರನ್ನರನ್ನು ಸ್ತುತಿಸಿ ಅವರು ಬರೆದ ಪುರಾಣಗಳ ಹೆಸರುಗಳನ್ನೂ ಹೇಳಿದ್ದಾನೆ (ಮ. ಪು., ೧-೨೫). ಅವನು ವಿಜಯಪುರವೆಂಬ[2] ಒಂದು ಊರಲ್ಲಿ ಮಲ್ಲಿನಾಥ ಜಿನಾಲಯವನ್ನು

ಈ ಸಂಕಲನವನ್ನು ಮಾಡಿದವನು ಮೇಲೆ ಹೇಳಿದ 'ಜಿನಮುನಿತನಯ'ದಿಂದಲೂ

ಸಂದ ಚಿದಾನಂದದೊಳಾ
ನಂದದಿ ನಿಜಗುಣದೊಳೋದಿನಿಂದಾತ್ಮನು ಮು
ನ್ನೊಂದೆ ಪರಮಾತ್ಮನಪ್ಪುದು
ಸಂದೇಹಮೆ ಪೇಳಿಮಿದನು ಜಿನಮುನಿತನಯಾ (ಪದ್ಯ ೧೦೧)

ಎಂಬ ಪದ್ಯವನ್ನು ಆಯ್ದುಕೊಂಡಿರುವುದನ್ನು ನೋಡಿದರೆ—ಎರಡನೆಯ ಪಾದವನ್ನು 'ಳೊಂದಿನಿಂದಾತ್ಮಂ ತಾನೊಂ' ಎಂದೂ ಕೊನೆಯ ಪಾದವನ್ನು 'ಸಂದೆಯಮೆ ಪೇಳಿಮಿದನು ವಿಹಿತಾಧ್ಯಾತ್ಮಂ' ಎಂದೂ ಬದಲಾಯಿಸಿಕೊಂಡಿದ್ದರೂ—'ಆದಿ ಪುರಾಣ' 'ಪುಷ್ಪದಂತ ಪುರಾಣ'ಗಳಂತೆ 'ಜಿನಮುನಿತನಯ'ವೂ ಸ್ವತಂತ್ರ ಗ್ರಂಥವಾಗಿಯೇ ಇರಬೇಕೆಂದು ಹೇಳಬಹುದು.

'ಕಾಮನಕಾಳಗ' ಎಂಬೊಂದು ಭಾಮಿನೀಷಟ್ಪದಿಯಲ್ಲಿರುವ ಗ್ರಂಥ ಒಬ್ಬ ನಾಗಚಂದ್ರನಿಂದ ವಿರಚಿತವಾದದ್ದೆಂದು ತಿಳಿದಿದೆ. ಇದನ್ನು ಬರೆದ ನಾಗಚಂದ್ರನು ಯಾರೋ ಗೊತ್ತಿಲ್ಲ. (ಪ್ರಬುದ್ಧ ಕರ್ಣಾಟಕ, xxiv, ಸಂ ೪, ಅನುಬಂಧ ೨.)

[2] ಈ ವಿಜಯಪುರವು ಯಾವುದೋ ಹೇಳುವುದಕ್ಕಾಗುವುದಿಲ್ಲ. ನಾಗಚಂದ್ರನು ಬರೆದಿರಬಹುದಾದ ಒಂದು ಶಾಸನ ಈಗಿನ ಬಿಜಾಪುರದಲ್ಲಿ ದೊರೆತಿರುವುದರಿಂದ ಅದೇ ಅವನ ಸ್ಥಳವಾಗಿದ್ದರೂ ಇರಬಹುದು ಅಥವಾ ಅವನು ಆ ಪ್ರಾಂತದವನಾಗಿರಬಹುದು. ಜೈನ ಧರ್ಮಕ್ಕೆ ಕೇಂದ್ರಸ್ಥಾನವಾಗಿದ್ದ ತಲಕಾಡಿನ ಬಳಿ ವಿಜಯಪುರ ಎಂಬ ಮತ್ತೊಂದು ಊರಿದೆ (*M. A. R.* 1912, 38). ಕಂತಿ ಎಂಬ ಕಬ್ಬಿಗಿತಿಗೂ ನಾಗಚಂದ್ರ (ಹಂಪ)ನಿಗೂ ದೋರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಸಮಸ್ಯೆಯನ್ನು ಪೂರ್ತಿಮಾಡುವ ಸ್ಪರ್ಧೆ ನಡೆಯಿತೆಂದು ಹೇಳುವ 'ಕಂತಿಹಂಪನ ಸಮಸ್ಯೆಗಳ'ನ್ನೂ ಆ ವಿಷಯವಾಗಿ ದೇವಚಂದ್ರನ ಹೇಳಿಕೆಯನ್ನೂ (ಕ. ಕ. ಚ., I, ೧೧೧) ನಂಬಬಹುದಾದರೆ ಆ ಕಾಲದಲ್ಲಿ ಚಾಲುಕ್ಯರ ಸಾಮಂತ ರಾಜರಾಗಿದ್ದ ಹೊಯ್ಸಳರ ಹಿಡುವಳಿಯಲ್ಲಿಯೇ ಇದ್ದ ತಲಕಾಡು ಪ್ರಾಂತದ ಈ ವಿಜಯಪುರವೇ ನಾಗಚಂದ್ರನು ಹೇಳುವ ಊರು ಏಕಾಗಿರಬಾರದು?

ಕಟ್ಟಿಸಿದನು (ಮ. ಪು., ೧೪-೨೯೭). ಅವನು ಬರೆದ ಆ ಜಿನನ ಚರಿತ್ರೆಯೇ 'ಮಲ್ಲಿನಾಥ ಪುರಾಣ.' 'ಅಭಿನವ ಪಂಪ,' 'ಭಾರತೀ ಕರ್ಣಪೂರ' ಮುಂತಾದುವು ಅವನ ಬಿರುದುಗಳು. ಇಷ್ಟು ಹೊರತು ಅವನ ಕಾವ್ಯಗಳಿಂದ ಇನ್ನೇನೂ ತಿಳಿದುಬರುವುದಿಲ್ಲ.

ಕಾಲ—ನಾಗಚಂದ್ರನು ತನ್ನ ಕಾಲದ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲವಾದ್ದರಿಂದ ಅದನ್ನು ನಿರ್ದೇಶಮಾಡುವುದು ಬಲು ಸಿಕ್ಕಾದ ಗಂಟಾಗಿ ಪರಿಣಮಿಸಿದೆ. ಇದಕ್ಕೆ ಇರುವ ಆಧಾರಗಳು—

೧. ನಾಗಚಂದ್ರನು ಸ್ತುತಿಸಿರುವ ಕವಿಗಳು, ಅವನನ್ನು ಹೊಗಳಿರುವ ಕವಿಗಳು.

೨. ನಾಗಚಂದ್ರನ ಕಾವ್ಯಗಳಲ್ಲಿರುವ ಕೆಲವು ಪದ್ಯಗಳು ಶಾಸನಗಳಲ್ಲಿ ದೊರೆಯುವುದು.

೩. ಕವಿ ಹೇಳಿರುವ ಗುರುಗಳು.

ಇವುಗಳನ್ನೆಲ್ಲ ವಿಮರ್ಶೆಮಾಡಿ,

I. ರಾವ್ ಬಹಾದುರ್ ಮಹಾಮಹೋಪಾಧ್ಯಾಯ ಶ್ರೀಮಾನ್ ರಾ. ನರಸಿಂಹಾಚಾರ್ಯರು ನಾಗಚಂದ್ರನ ಕಾಲ ಸುಮಾರು ೧೧೦೦ ಇರಬೇಕೆಂದೂ (ಕ. ಕ. ಚ., I, ೧೦೧)

II. ಡಾ|| ಎ. ವೆಂಕಟಸುಬ್ಬಯ್ಯನವರು ಸುಮಾರು ೧೦೪೦ ಕ್ಕಿಂತ ಹಿಂದೆ ನಾಗಚಂದ್ರನು ತನ್ನ ಕಾವ್ಯವನ್ನು ರಚಿಸಿರಬೇಕೆಂದೂ (ಕೆ. ಕ. ಜೀ. ಕಾ. ವಿ., ೪೪)

III. ಶ್ರೀಮಾನ್ ಮಂಜೇಶ್ವರ ಗೋವಿಂದ ಪೈಗಳು ಸುಮಾರು ೧೧೪೦ ರಲ್ಲಿ 'ಪಂಪರಾಮಾಯಣ'ವು ರಚಿತವಾಗಿರಬೇಕೆಂದೂ (ಅ. ಪಂ., ೧-೩೪) ಅಭಿಪ್ರಾಯಪಟ್ಟಿದ್ದಾರೆ. ಇವರು ಕೊಡುವ ಕಾರಣಗಳು ಕ್ರಮವಾಗಿ ಹೀಗಿವೆ:

I. (೧) ಎರಡನೆಯ ನಾಗವರ್ಮನು ತನ್ನ 'ಭಾಷಾಭೂಷಣ'ದಲ್ಲಿ 'ದ್ವಿತೀಯಾರ್ಥೇ ಚತುರ್ಥೀ' ಎಂಬ ಸೂತ್ರಕ್ಕೆ 'ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ' ಎಂಬ 'ಪಂಪರಾಮಾಯಣ'ದ ಪದ್ಯಭಾಗ

ವನ್ನು ಉದಾಹರಿಸಿದ್ದಾನೆ. ಆ ನಾಗವರ್ಮನು ೧೧೩೮-೧೧೫೦ರ ವರೆಗೆ ಆಳಿದ ಚಾಲುಕ್ಯರಾಜ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದುದರಿಂದ ಅವನ ಕಾಲ ಸುಮಾರು ೧೧೪೫ ಆಗುತ್ತದೆ. ಆದ್ದರಿಂದ 'ಪಂಪರಾಮಾಯಣ'ವು ಇದಕ್ಕಿಂತ ಹಿಂದೆಯೇ ಹುಟ್ಟಿರಬೇಕು.

(೨) 'ಪಂಪರಾಮಾಯಣದ' "ಮುನಿನಾಥಂ ದಶಧರ್ಮಧಾರಿ . . ." ಎಂದು ಮೇಘಚಂದ್ರನನ್ನು ಸ್ತುತಿಸುವ ಪದ್ಯ ಶ್ರವಣಬೆಳಗೊಳದ ೧೨೭ ನೆಯ ಶಾಸನದಲ್ಲಿ ಕಂಡುಬರುತ್ತದೆ. ಈ ಮೇಘಚಂದ್ರನು ೧೧೧೫ರಲ್ಲಿ ಗತಿಸಿಹೋದನು. ಆ ಶಾಸನದ ಕಾಲವೂ ಸುಮಾರು ಇದೇ ಆಗಿದೆ. ಆದ್ದರಿಂದ ೧೧೧೫ಕ್ಕಿಂತ ಹಿಂದೆಯೇ 'ಪಂಪರಾಮಾಯಣ'ವು ರಚಿತವಾಗಿರಬೇಕು. ಆ ಶಾಸನ ಬರೆದವನು ಆ ಪದ್ಯವನ್ನು ಈ ಕಾವ್ಯದಿಂದಲೇ ಎತ್ತಿ ಬರೆದಿರಬೇಕು.

(೩) 'ನೇಮಿನಾಥಪುರಾಣ'ವನ್ನು ಬರೆದ ಕರ್ಣಪಾರ್ಯನು "ಅದ್ಯತನ ನಾಗಿಯುಂ ನೆಗಱ್ದ ದ್ಯರ ದೊರೆಯೆನಿಸಿ . . ." ಎಂಬ ಪದ್ಯದಲ್ಲಿ ನಾಗಚಂದ್ರ ನನ್ನು ಹೊಗಳಿದ್ದಾನೆ. ಆ ಕವಿಯ ಕಾಲ ಸುಮಾರು ೧೧೪೦. ಅವನು ನಾಗ ಚಂದ್ರನನ್ನು 'ಅದ್ಯತನ' ಎಂದರೆ ಈಗಿನವನು ಎಂದು ಹೇಳುವುದರಿಂದ ನಾಗ ಚಂದ್ರನು ೧೧೪೦ಕ್ಕಿಂತ ಸ್ವಲ್ಪ ಹಿಂದೆ ಇದ್ದಿರಬೇಕು.

(೪) ಮದ್ರಾಸಿನಲ್ಲಿ ದೊರೆತ ಒಂದು ಶಾಸನದಲ್ಲಿ ಒಬ್ಬ ಹಂಪಕವಿಯ ಹೆಸರು ದೊರೆಯುತ್ತದೆ. ಅದರ ಕಾಲ ೧೧೦೫. ಈ ಹಂಪನು ನಾಗಚಂದ್ರನೇ ಇರಬೇಕು.

(೫) 'ಕಂತಿ ಹಂಪನ ಸಮಸ್ಯೆಗಳು' ಎಂಬ ಪುಸ್ತಕದಿಂದ ಕಂತಿಗೂ ಒಬ್ಬ ಹಂಪನಿಗೂ ಸಂವಾದವಾಯಿತೆಂದು ತಿಳಿದುಬರುತ್ತದೆ. ಈ ಹಂಪನೇ 'ಅಭಿನವಪಂಪ'ನಾದ ನಾಗಚಂದ್ರನಿರಬೇಕು ("ಉಸಿರೆಂದಾ ಗುಣಕಂತಿಕೆ ಗಸಮಸಮಸ್ಯೆಯನೆ ಕೊಟ್ಟನಭಿನವಪಂಪಂ"). ಕಂತಿ 'ವೀರದೋರಸ' ಎಂದರೆ ದೋರಸಮುದ್ರದ ಬಲ್ಲಾಳರಾಯನ ಆಸ್ಥಾನದಲ್ಲಿ ಪಂಡಿತೆಯಾಗಿದ್ದಳು. ಈ ರಾಜನು ೧೧೦೦–೧೧೦೬ ರ ವರೆಗೆ ಆಳಿದ ಒಂದನೆಯ ಬಲ್ಲಾಳ ರಾಜನಾಗಿರ ಬೇಕು. ಕಂತಿಯ ಕಾಲವೂ ಸುಮಾರು ಇದೇ. ಇವಳ ಸಮಕಾಲಿಕನಾದ ನಾಗಚಂದ್ರನೂ ಇದೇ ರಾಜನ ಸಭೆಯಲ್ಲಿ ಕವಿಯಾಗಿದ್ದಿರಬೇಕು.

(೬) ನಾಗಚಂದ್ರನ ಗುರುವಾದ ಬಾಲಚಂದ್ರನು ವಕ್ರಗಚ್ಛಕ್ಕೆ ಸೇರಿದವನು. ಇವನು ೧೧೧೫ ರಲ್ಲಿ ಸತ್ತುಹೋದ ಮೇಘಚಂದ್ರನ ಸಧರ್ಮನು. ಸುಮಾರು ೧೧೦೦ ರಲ್ಲಿ ಬರೆದ ಶ್ರವಣಬೆಳಗೊಳದ ೬೯ ನೆಯ ಶಾಸನದಲ್ಲಿ ಇವನ ಸ್ತುತಿ ಇರುವುದರಿಂದ ಇವನೂ ೧೧೦೦ ರಲ್ಲಿ ಇದ್ದಿರಬೇಕು. ಇನ್ನೊಬ್ಬ ಬಾಲಚಂದ್ರನು ೧೧೮೧ ರಲ್ಲಿ ಬದುಕಿದ್ದನು. ಅವನು ಪುಸ್ತಕಗಚ್ಛದವನು. 'ಅಧ್ಯಾತ್ಮಿ ಬಾಲಚಂದ್ರ' ಎಂದು ಅವನಿಗೆ ಬೇರೆ ಹೆಸರು. ಅವನಿಗೂ ನಾಗಚಂದ್ರನಿಗೂ ಏನೂ ಸಂಬಂಧವಿಲ್ಲ.

(೭) ತ್ರಿಭುವನಮಲ್ಲ ವಿಕ್ರಮಾದಿತ್ಯನ ಆಳಿಕೆಯಲ್ಲಿ (೧೦೭೬–೧೧೨೬) ಹುಟ್ಟಿದ ಬಿಜಾಪುರದ ಒಂದು ಶಾಸನವನ್ನು ನಾಗಚಂದ್ರನು ಬರೆದಿರಬಹುದೆಂದು ಹೇಳುವುದಕ್ಕೆ ಅವಕಾಶವಿದೆ.

ಈ ಎಲ್ಲ ಕಾರಣಗಳಿಂದ ಸುಮಾರು ೧೧೦೦ ರಲ್ಲಿ ನಾಗಚಂದ್ರನಿದ್ದಿರಬೇಕೆಂದು ಊಹೆಮಾಡಬಹುದು.

ಈ ಅಭಿಪ್ರಾಯವನ್ನು ವಿಮರ್ಶೆಮಾಡಿ ಡಾ|| ಎ. ವೆಂಕಟಸುಬ್ಬಯ್ಯನವರು ಅದನ್ನು ಒಪ್ಪುವುದಕ್ಕಾಗದೆ ನಾಗಚಂದ್ರನು ೧೦೪೦ ಕ್ಕಿಂತ ಹಿಂದೆ ಇದ್ದಿರಬೇಕೆಂದು ಹೇಳುತ್ತಾರೆ. ಅವರ ಕಾರಣಗಳು :

II. (೧) ದುರ್ಗಸಿಂಹನು ಹೊಗಳಿರುವ ಪಂಪನು ನಾಗಚಂದ್ರನೇ. ಅವನು ತನ್ನ 'ಪಂಚತಂತ್ರ'ವನ್ನು ೧೦೩೪–೧೦೪೨ ರ ಒಳಗೆ ಬರೆದನು. ಅದರಲ್ಲಿ ಸ್ತುತನಾದ ನಾಗಚಂದ್ರನು ೧೦೪೨ ಕ್ಕಿಂತ ಹಿಂದೆ ಇದ್ದಿರಬೇಕು.

(೨) 'ಭಾಷಾಭೂಷಣ'ವನ್ನು ಬರೆದ ನಾಗವರ್ಮನು ೧೧ ನೆಯ ಶತಮಾನದ ಮಧ್ಯಭಾಗದಲ್ಲಿದ್ದನು. ಅವನು 'ಪಂಪರಾಮಾಯಣ' ದಿಂದ ಪದ್ಯವನ್ನು ಉದಾಹರಿಸಿರುವುದರಿಂದ ನಾಗಚಂದ್ರನು ಅವನಿಗಿಂತ ಹಿಂದೆ ಇದ್ದಿರಬೇಕು.

(೩) 'ಮೇಘಚಂದ್ರ' ಎಂಬ ಹೆಸರಿದ್ದ ಗುರುಗಳು ಹಲವುಮಂದಿ ಇದ್ದರು. ಅವರೆಲ್ಲರನ್ನೂ ಕವಿಚರಿತಕಾರರು ಒಂದುಮಾಡಿದ್ದಾರೆ. (i) ೧೧೧೫ ರಲ್ಲಿ ಗತಿಸಿದ ಮೇಘಚಂದ್ರನು ವಕ್ರಗಚ್ಛಕ್ಕೆ ಸೇರಿದ ಬಾಲಚಂದ್ರನ ಸಧರ್ಮನೆಂಬ ಅಭಿಪ್ರಾಯ ತಪ್ಪು. ವಾಸ್ತವವಾಗಿ ಅವನು ಮೂಲಸಂಘ ಪುಸ್ತಕಗಚ್ಛದವನು.

(ಶ್ರ. ಬೆ., ೧೨೭). (ii) ಬಾಲಚಂದ್ರನ ಸಧರ್ಮನಾದ ಮೇಘಚಂದ್ರನೊಬ್ಬನಿದ್ದಾನೆ. ಈ ಬಾಲಚಂದ್ರನು ವಕ್ರಗಚ್ಛಕ್ಕೆ ಸೇರಿದವನು. ಆದ್ದರಿಂದ ಈ ಮೇಘಚಂದ್ರನು ವಕ್ರಗಚ್ಛದವನು (ಶ್ರ. ಬೆ., ೬೯). (iii) ೧೧೭೬ ರಲ್ಲಿ ಗತಿಸಿದ ನಯಕೀರ್ತಿಯ ಗುರುವಾದ ಗುಣಚಂದ್ರನ ಸಧರ್ಮನಾದ ಮೇಘಚಂದ್ರನೆಂಬೊಬ್ಬನಿದ್ದನು (ಶ್ರ. ಬೆ., ೬೬). ಇವನು ಪುಸ್ತಕಗಚ್ಛದವನಾಗಿದ್ದರೂ ನಾಗಚಂದ್ರನು ಹೇಳಿರುವ ಮೇಘಚಂದ್ರನಲ್ಲ.[3] ನಾಗಚಂದ್ರನು ೧೦೪೨ ಕ್ಕಿಂತ ಹಿಂದೆಯೇ ಇದ್ದಿರಬೇಕಾದ್ದರಿಂದ ಅವನು ಸ್ತುತಿಸುವ ಮೇಘಚಂದ್ರನು ಈ ಮೂವರಲ್ಲಿ ಯಾರೂ ಅಲ್ಲ.

ಹೀಗೆ ಈ ಎರಡು ಭಿನ್ನಾಭಿಪ್ರಾಯಗಳಾದಮೇಲೆ ಶ್ರೀಮಾನ್ ಗೋವಿಂದ ಪೈಗಳು ಬೇರೊಂದು ಕಾಲನಿರ್ಣಯ ಮಾಡಿದ್ದಾರೆ. ಅದು ಹೀಗಿದೆ :

(೧) ಕ್ರಿ.ಶ. ೧೦೦೦ ದ ವರೆಗಾದರೂ ಇದ್ದ ರನ್ನನನ್ನು ನಾಗಚಂದ್ರ ಹೊಗಳಿರುವುದರಿಂದಲೂ ಕ್ರಿ.ಶ. ೧೧೭೦ ರಲ್ಲಿದ್ದ ಕರ್ಣಪಾರ್ಯನು ನಾಗಚಂದ್ರನನ್ನು 'ಅದ್ಯತನ' ಎಂದು ಹೇಳಿರುವುದರಿಂದಲೂ ನಾಗಚಂದ್ರನ ಕಾಲನಿರ್ಣಯದಲ್ಲಿ ಕ್ರಿ.ಶ. ೧೦೫೦ ನ್ನು ವರಿಷ್ಠಾವಧಿಯನ್ನಾಗಿಯೂ ಕ್ರಿ.ಶ. ೧೧೫೦ ನ್ನು ಕನಿಷ್ಠಾವಧಿಯನ್ನಾಗಿಯೂ ಭಾವಿಸಬಹುದು.

(೨) ಬಿಜಾಪುರದ ಶಿಲಾಲೇಖನವು ೧೧೧೦-೧೧೨೨ ರ ಒಳಗೆ ಹುಟ್ಟಿರಬಹುದು. ಅಲ್ಲಿ ಕಾಣುವ ಯುವರಾಜ ಮಲ್ಲಿಕಾರ್ಜುನನು ೧೧೦೩-೧೧೨೦ ರ ವರೆಗೆ ಬಿಜಾಪುರದ ಮಂಡಲಾಧಿಪತಿಯಾಗಿ ಇದ್ದಿರಬಹುದು. ಈ ಶಿಲಾಲೇಖನದ ೨ ಪದ್ಯಗಳು ಪಂಪರಾಮಾಯಣದಲ್ಲಿಯೂ ಇವೆ, ಅಥವಾ ಪಂಪರಾಮಾಯಣದ ೨ ಪದ್ಯಗಳು ಈ ಶಿಲಾಲೇಖನದಲ್ಲಿಯೂ ಇವೆ ಎಂಬುದರಿಂದ ಉಂಟಾಗುವ ಅನುಮಾನಗಳು (i) ಪಂಪರಾಮಾಯಣವು ಆ ಶಾಸನ ರಚಿತವಾದ ಕಾಲಕ್ಕಿಂತ ಮುಂಚೆಯೇ ಮಹಾಕಾವ್ಯವೆಂದು ಖ್ಯಾತಿ ಪಡೆದಿದ್ದಿರಬೇಕು. ಎಂದರೆ ೧೧೦೦-೧೧೧೦ ರಲ್ಲಿ ಅದು ರಚಿತವಾಗಿರಬೇಕು. (ii) ನಾಗಚಂದ್ರನೇ ಈ ಶಾಸನವನ್ನು ಮೊದಲು ಬರೆದು ಅನಂತರ ಬರೆದ ಪಂಪರಾಮಾಯಣದಲ್ಲಿ ಅವೆರಡು ಪದ್ಯ

[3] ಇದನ್ನು ಕವಿಚರಿತಕಾರರೇ ಒಪ್ಪಿಕೊಂಡಿದ್ದಾರೆ. ಈ ಶಾಸನದಲ್ಲಿ ಬರುವ ಇನ್ನೊಬ್ಬ ಮೇಘಚಂದ್ರನ ವಿಷಯ ಪ್ರಸಕ್ತವಲ್ಲ.

ಗಳನ್ನು ಸೇರಿಸಬಹುದು. ಹೀಗಾದರೆ ೧೧೧೦-೧೧೨೦ ರಲ್ಲಿ ನಾಗಚಂದ್ರನು ಇದ್ದಿರಬೇಕು.

(೩) ನಾಗಚಂದ್ರನ ಖಾಸಾ ಗುರುವಾಗಿದ್ದ ಬಾಲಚಂದ್ರನು ಶ್ರ.ಬೆ. ೧೪೦ ನೆಯ ಶಾಸನದಲ್ಲಿ ಕಂಡುಬರುವ ಸಕಲಚಂದ್ರನ ಶಿಷ್ಯನಾಗಿದ್ದ ಮತ್ತು ೧೧೧೫ ರಲ್ಲಿ ಗತಿಸಿದ ಮೇಘಚಂದ್ರನ ಸಧರ್ಮನು. ಮೇಘಚಂದ್ರನು ಕೊಂಡ ಕುಂದಾನ್ವಯ ಮೂಲಸಂಘ ದೇಶಿಕಗಣ ಪುಸ್ತಕಗಚ್ಛದವನಾದ್ದರಿಂದ ಬಾಲ ಚಂದ್ರನು ಅದೇ ಗಣಗಚ್ಛಗಳಿಗೆ ಸೇರಿದವನು ಮತ್ತು ಆ ಕಾಲದಲ್ಲಿದ್ದವನು.[4]

(೪) ನಾಗಚಂದ್ರನು ಸ್ತುತಿಸಿರುವ ಶ್ರುತಕೀರ್ತಿ ತ್ರೈವಿದ್ಯನು ಶ್ರ.ಬೆ. ೬೪ ರಲ್ಲಿ ಅದೇ ಪದ್ಯಗಳಿಂದ ಸ್ತುತಿಸಲ್ಪಟ್ಟಿರುವ ಪುಸ್ತಕಗಚ್ಛದ ಶ್ರುತಕೀರ್ತಿ ತ್ರೈವಿದ್ಯನೇ ಎಂಬಲ್ಲಿ ಸಂಶಯವಿಲ್ಲ. 'ಚಂದ್ರಪ್ರಭ ಪುರಾಣ'ವನ್ನು ೧೧೮೯ ರಲ್ಲಿ ರಚಿಸಿದ ಅಗ್ಗಳನ ಗುರು ಈ ಶ್ರುತಕೀರ್ತಿ ತ್ರೈವಿದ್ಯನೇ ಆಗಿದ್ದನು. ನಾಗ ಚಂದ್ರನು ಸ್ತುತಿಸಿರುವ ವೀರಣಂದಿ ಸೈದ್ಧಾಂತಿಕನನ್ನು ಅಗ್ಗಳನೂ ಸ್ಮರಿಸಿದ್ದಾನೆ.

(೫) 'ಮಲ್ಲಿನಾಥ ಪುರಾಣ'ದ ನಾಯಕನಾದ ವೈಶ್ರವಣನೊಡನೆ ಚಾಲುಕ್ಯ ವಿಕ್ರಮಾದಿತ್ಯನನ್ನೂ (೧೦೭೬–೧೧೨೬) ಅವನ ಮಗನಾದ ಶ್ರೀಧರನೊಡನೆ ಸೋಮೇಶ್ವರನನ್ನೂ (೧೧೨೬–೧೧೩೮) ನಾಗಚಂದ್ರನು ಹೋಲಿಸಿರುವಂತಿದೆ. ಆ ಶ್ರೀಧರನಂತೆ 'ದಿವ್ಯಭಾಷಾವ್ಯಾಪಾರೋದಾರ'ನಾದ III ಸೋಮೇಶ್ವರನು 'ಅಭಿಲಷಿತಾರ್ಥ ಚಿಂತಾಮಣಿ'ಯನ್ನು ೧೧೨೯ ರಲ್ಲಿ ರಚಿಸಿದನು. ಅದರ ಅನಂತರ ಎಂದರೆ ಸುಮಾರು ೧೧೩೦ ರಲ್ಲಿ 'ಮಲ್ಲಿನಾಥ ಪುರಾಣ'ವು ರಚಿತವಾಗಿರಬೇಕು. ಶ್ರವಣಬೆಳಗೊಳದ ೧೪೦ ನೆಯ ಶಾಸನದಲ್ಲಿ ರುವ (ಕಾಲ ೧೧೪೫) ಮೇಘಚಂದ್ರ ತ್ರೈವಿದ್ಯನ ಮತ್ತು ವೀರಣಂದಿಯ ಸ್ತೋತ್ರ ಪದ್ಯಗಳು 'ಪಂಪರಾಮಾಯಣ'ದವೇ ಆಗಿವೆ. ಆದ್ದರಿಂದ ೧೧೪೫ ಕ್ಕಿಂತ ಸ್ವಲ್ಪ ಮುಂಚೆ ಎಂದರೆ ೧೧೪೦ ರಲ್ಲಿ 'ಪಂಪರಾಮಾಯಣ'ವು ಹುಟ್ಟಿರಬೇಕು.

ಈ ಮೂವರು ವಿದ್ವಾಂಸರ ಮೂರು ಬಗೆಯಾದ ಅಭಿಪ್ರಾಯಗಳಲ್ಲಿ ಮೊದಲ

---

[4] ಈ ಬಾಲಚಂದ್ರಮುನಿರಾಜನನ್ನು ರಾ. ನರಸಿಂಹಾಚಾರ್ಯರೂ ಡಾ|| ಎ. ವೆಂಕಟ ಸುಬ್ಬಯ್ಯನವರೂ ಕೈಬಿಟ್ಟಿದ್ದಾರೆ.

ಎರಡನ್ನು ನಿರಾಕರಿಸಬಹುದು. ಎರಡನೆಯದಕ್ಕೆ ಡಾ|| ವೆಂಕಟಸುಬ್ಬಯ್ಯನವರು ಕೊಟ್ಟಿರುವ ಕಾರಣಗಳು ತೀರ ದುರ್ಬಲವಾದುವು.[5] ಶ್ರೀಮರ್ಾ ಗೋವಿಂದ

[5] ದುರ್ಗಸಿಂಹನು ಸ್ತುತಿಸಿರುವ ಪಂಪನು ನಾಗಚಂದ್ರನೇ ಎಂದು ಇವರ ವಾದ. ಇದು ಸಾಧುವಾಗಿರುವಂತೆ ಕಾಣುವುದಿಲ್ಲ. ನಾಗಚಂದ್ರನಿಗೆ 'ಅಭಿನವ ಪಂಪ' ಎಂಬ ಬಿರುದಿದ್ದ ಮಾತ್ರಕ್ಕೆ ಕೇವಲ 'ಪಂಪ' ಎಂದು ಅವನನ್ನು ವ್ಯವಹರಿಸುವುದು ಸರಿಯಾಗಿಲ್ಲ. ಹಾಗೆ ಮಾಡಿದರೆ ಆದಿಪಂಪನಿಗೂ ಅಭಿನವಪಂಪನಿಗೂ ಐಕ್ಯವನ್ನು ಕಲ್ಪಿಸಿದ ಹಾಗಾಗುತ್ತದೆ. ಆದ್ದರಿಂದಲೇ ನಾಗವರ್ಮನು ತನ್ನ 'ಭಾಷಾಭೂಷಣ'ದಲ್ಲಿ 'ಹಿರಿಯ ಹಂಪದೇವ,' 'ಗುರುಹಂಪದೇವ' ಎಂದು ಆದಿಪಂಪನಿಗೆ ವಿಶೇಷಣಗಳನ್ನು ಕೊಟ್ಟಿದ್ದಾನೆ. ಅಲ್ಲದೆ ನಾಗಚಂದ್ರನನ್ನು ಸ್ಮರಿಸಿರುವ ಕರ್ಣಪಾರ್ಯ, ಜನ್ನ, II ಗುಣವರ್ಮ, ಕಮಲಭವ, ನಾಗರಾಜ, ಮಧುರ, ಮಂಗರಸ ಮುಂತಾದ ಕವಿಗಳೆಲ್ಲ 'ನಾಗಚಂದ್ರ' ಎಂದು ಅವನ ಹೆಸರು ಹಿಡಿದು ಹೇಳಿದ್ದಾರೆಯೇ ಹೊರತು 'ಪಂಪ' ಎಂದು ಅವನನ್ನು ಕರೆದಿಲ್ಲ. ಪಾರ್ಶ್ವಪಂಡಿತನೇನೋ ಹಾಗೆ ಕರೆದಿರುವಂತೆ ಕಾಣುತ್ತದೆ; ಆದರೆ ಅದು ಆದಿಪಂಪನಿಗೆ ಅನ್ವಯಿಸಿದರೂ ಅನ್ವಯಿಸಬಹುದು. ಇದು ಸಂದೇಹಾಸ್ಪದವಾದದ್ದು. ಇದರಿಂದ ಕನ್ನಡ ಕವಿಗಳಲ್ಲಿ ನಾಗಚಂದ್ರನನ್ನು 'ಪಂಪ' ಎಂದು ಕರೆಯುವ ಸಂಪ್ರದಾಯವಿದ್ದಿಲ್ಲ ಎಂದು ಹೇಳಬಹುದು. ಹೀಗೆಯೇ ದುರ್ಗಸಿಂಹನು ಸ್ಮರಿಸಿರುವ ಪಂಪನು ಆದಿಪಂಪನೇ ಹೊರತು ನಾಗಚಂದ್ರನಲ್ಲ. ಆದರೆ ನಾಗಚಂದ್ರನು ಗತಿಸಿದ ಹೊಸದರಲ್ಲಿಯೂ ಅವನು ಜೀವಿಸಿದ್ದಾಗಲೂ ಅವನನ್ನು 'ಪಂಪ' ಎಂದು ಕರೆಯುತ್ತಿದ್ದರೆಂದು ಹೇಳಲು ಆಧಾರವಿದೆ. ದುರ್ಗಸಿಂಹನು ಸ್ಮರಿಸಿರುವ ಪಂಪನು ಆದಿಪಂಪನೇ ಹೊರತು ನಾಗಚಂದ್ರನಲ್ಲ. ಮದರಾಸಿನ ೧೧೧೫ ರಲ್ಲಿ ಹುಟ್ಟಿದ ಶಾಸನದಲ್ಲಿ, ಕಂಡುಬರುವ ಹಂಪ ಕವಿ ನಾಗಚಂದ್ರನೇ ಇರಬಹುದು ಎಂಬ ಕವಿಚರಿತಕಾರರ ಅಭಿಪ್ರಾಯವೂ ಆ ಶಾಸನದ ವಿಷಯ ಹೆಚ್ಚು ತಿಳಿದ ಹೊರತು ಅನಿರ್ದಿಷ್ಟವಾಗಿಯೇ ಉಳಿಯುತ್ತದೆ.

ಡಾ|| ವೆಂಕಟಸುಬ್ಬಯ್ಯನವರು ಮಾಡಿರುವ ಕಾಲನಿರ್ದೇಶಕ್ಕೆ ತಳಹದಿಯಾದ ಈ ಕಾರಣ ಇಷ್ಟು ಶಿಥಿಲವಾದುದು. ಎರಡನೆಯದು ಇದಕ್ಕಿಂತ ದುರ್ಬಲವಾದದ್ದು. ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದವನು 'ಇದಾಸೀಂತನ ಶರ್ವವರ್ಮ'ನಾದ ನಾಗವರ್ಮನು ಎಂದು (ಈ ಸಂದರ್ಭದಲ್ಲಿ "ಜನನಾಥಂ ಜಗದೇಕನಲ್ಲಿ . . . ." ಎಂಬ ಪದ್ಯಕ್ಕೆ ಅವರು ಮಾಡಿರುವ ವ್ಯಾಖ್ಯಾನವು ಸರಿಯಲ್ಲ) ಜನ್ನನ ಸ್ಪಷ್ಟೋಕ್ತಿ ಇರುವಾಗ ಆ ದೊರೆಯ ಕಾಲದಲ್ಲಿದ್ದ (೧೧೩೮—೧೧೫೧) ನಾಗವರ್ಮನನ್ನು ಹನ್ನೊಂದನೆಯ ಶತಕದ ಮಧ್ಯಭಾಗಕ್ಕೆ ತಳ್ಳುವುದು ವಸ್ತುವನ್ನು ಬಿಟ್ಟು ನೆರಳನ್ನು ಹಿಡಿಯುವಂತಾಗುತ್ತದೆ. ಈ ಎರಡು ತಪ್ಪು ಆಧಾರಗಳ ಮೇಲೆ ೧೧೧೫ ರಲ್ಲಿ ಗತಿಸಿದ ಮೇಘಚಂದ್ರನು ನಾಗಚಂದ್ರನು ಸ್ತುತಿಸಿರುವ ಆ ಗುರುವಲ್ಲ ಎಂದು ಅವರು ಕಟ್ಟಿರುವ ಅಭಿಪ್ರಾಯವೂ ತಪ್ಪಾದುದು. ಮೇಘಚಂದ್ರ

ಪೈಗಳ ನಿರ್ಣಯ ಬಲವಾದ ಕಾರಣಗಳ ಆಧಾರದ ಮೇಲೆ ನಿಂತಿದೆ.[6] ಇದಕ್ಕೆ ಪೋಷಕವಾಗಿ ಈಚೆಗೆ ದೊರೆತ ಹೊಸ ಅಂಶವೊಂದನ್ನು ಇಲ್ಲಿ ಸೂಚಿಸಿದೆ:

(೧) ಬ್ರಹ್ಮಶಿವನ 'ಸಮಯ ಪರೀಕ್ಷೆ'ಯ ಮೊದಲ ಓಲೆ ಕವಿಚರಿತಕಾರರಿಗೆ ಸಿಕ್ಕಿರಲಿಲ್ಲ. ಈಚೆಗೆ ಆ ಗ್ರಂಥಾದಿಯ ಪದ್ಯಗಳು ದೊರೆತು ಅಚ್ಚಾಗಿವೆ.[7] ಬ್ರಹ್ಮಶಿವನು ಅಗ್ಗಳ ದೇವನ ಕೆಳೆಯನೆಂದೂ ಈ ಅಗ್ಗಳ ಯಾರೋ ತಿಳಿಯದೆಂದೂ ಕವಿಚರಿತಕಾರರು ಬರೆದರು. ಈ ವಿಷಯವನ್ನು ಹೇಳುವ ಬ್ರಹ್ಮಶಿವನ ಪದ್ಯ ಹೀಗಿದೆ:

ಇಳೆಯೊಳ್ ಸಲೆ ನೆಲಸಿದ ಪೊ
ಟ್ಟಳಗೆಱೆಯೊಳ್ ನೆಗಟ್ದ ಸಿಂಗರಾಜನ ಸುತನ
ಗ್ಗಳ ದೇವನ ಕೆಳೆಯಂ ದ್ವಿಜ
ಕುಳ ರತ್ನಂ ವತ್ಸಗೋತ್ರ ತಿಳಕಂ ಬ್ರಹ್ಮಂ

'ಚಂದ್ರಪ್ರಭ ಪುರಾಣ'ವನ್ನು ಬರೆದ ಅಗ್ಗಳನೇ ಬ್ರಹ್ಮಶಿವನು ಹೇಳುವ ಅಗ್ಗಳನೆಂಬುದರಲ್ಲಿ ಸಂಶಯವಿಲ್ಲ. ಈ ಕೆಳಗಣ ಮತ್ತೊಂದು ಕಂದದಲ್ಲಿ ಅಗ್ಗಳನು ಪಂಪರನ್ನಾದಿಗಳಿಗೆ ಸದೃಶನಾದ ಕವಿಯೆಂದು ಕೊಂಡಾಡಿದೆ:

ನಾಮಕರಾದ ಹಲವು ಯತಿಗಳು ಇದ್ದರೆಂಬ ಅಮೂಲ್ಯವಾದ ಅಂಶ ಅವರ ಲೇಖನದಿಂದ ಹೊರಪಡುತ್ತದೆ.

[6] 'ಅಭಿನವ ಪಂಪ' ಗ್ರಂಥವನ್ನು ವಿಮರ್ಶೆಮಾಡುತ್ತ ಡಾ|| ಎ. ವೆಂಕಟಸುಬ್ಬಯ್ಯನವರು ಶ್ರೀಮಾನ್ ಪೈಗಳ ನಿರ್ಣಯದ ಮೇಲೆ ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದಾರೆ (ಕ. ಸಾ. ಪ. XIV, ಪು. ೨೯೬-೩೦೨). ಇವುಗಳ ಅಸಾರತೆಯನ್ನು ಶ್ರೀಮಾನ್ ಪೈಗಳು ತೋರಿಸಿದ್ದಾರೆ. ಜ. ಕ. XIII; ಪು. ೧೦೬-೧೧೭). ಮೇಲ್ಕಂಡ 'ಅಭಿನವ ಪಂಪ' ಗ್ರಂಥವನ್ನೇ ವಿಮರ್ಶೆ ಮಾಡು (ಪ್ರ. ಕ. XVI; ಸಂಚಿಕೆ ೩, ಪು. ೧೦೪-೧೩೬) ವಾಗಲೂ, 'ಪಂಪ ರಾಮಾಯಣ ಸಂಗ್ರಹ'ದ ಮೊದಲ ಮುದ್ರಣದ ಮುನ್ನುಡಿಯಲ್ಲಿಯೂ ನಾನು ಸೂಚಿಸಿರುವ ಸಂದೇಹಗಳನ್ನು ಶ್ರೀಮಾನ್ ಪೈಗಳು ೧೯೩೬ ನೆಯ 'ಸ್ವದೇಶಾಭಿಮಾನಿ' ದಸರಾ ಸಂಚಿಕೆಯ ೨೭-೩೦ ಪುಟಗಳಲ್ಲಿ ಸಮರ್ಪಕವಾಗಿ ಪರಿಹರಿಸಿದ್ದಾರೆ. ಅವರ ನಿರ್ಣಯವನ್ನು ಕುರಿತು ನಾನು ಮಾಡಿರುವ ಟೀಕೆ ಸುತರಾಂ ತಪ್ಪೆಂದು ಇಲ್ಲಿ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ.

[7] ಈ ಪದ್ಯಗಳನ್ನು ಶ್ರೀಮಾನ್ ಎಚ್. ದೇವೀರಪ್ಪ ಎಂ.ಎ., ಅವರು ಪ್ರ ಕ. XXIV, ಸಂಚಿಕೆ ೪, ಪು. ೧೭-೩೧ ರಲ್ಲಿ ಪ್ರಕಟಿಸಿ ಬ್ರಹ್ಮಶಿವನ ಕಾಲವಿಚಾರವನ್ನು ಮಾಡಿದ್ದಾರೆ.

ಪೊನ್ನನೆ ಪಂಪನೆ ರಜಕನೆ
ರನ್ನನೆ ಕವಿತಾಗುಣೋದಯನೆ ದರ್ಶನ ಸಂ
ಪನ್ನತೆಯೊಳ್ ಕವಿತೆಯೊಳವ
ರನ್ನನೆ ವಿದಿತಾತ್ಮ ಭಾವನಗ್ಗಳ ದೇವಂ

ಇಲ್ಲಿ 'ಕವಿತಾಗುಣೋದಯ' ಎಂಬ ಬಿರುದಿದ್ದು ಸು. ೧೧೪೫ರಲ್ಲಿದ್ದ II ನಾಗವರ್ಮನನ್ನು ಬ್ರಹ್ಮಶಿವನು ಸ್ಮರಿಸಿದ್ದಾನೆ. ಅವನಿಂದೀಚೆಗೆ ಬರುವ ಅಗ್ಗಳ 'ಚಂದ್ರಪ್ರಭ ಪುರಾಣ'ದ ಕರ್ತನಲ್ಲದೆ ಬೇರೊಬ್ಬನಲ್ಲ. ಆದ್ದರಿಂದ ಬ್ರಹ್ಮಶಿವನು ಅಗ್ಗಳನ ಸಮಕಾಲಿಕನಾಗಿದ್ದನು ಎಂದರೆ ಅವನು ಕ್ರಿ.ಶ. ೧೧೮೯ರಲ್ಲಿ ಇದ್ದಿರಬೇಕು.

(೨) ಬ್ರಹ್ಮಶಿವನು

ವಿತ್ತಂ ಸತ್ಪಾತ್ರಕ್ಕಾ
ಯತ್ತಂ ನಿಜವಾಣಿ ತೀರ್ಥಕರ ಕೀರ್ತನೆಗಾ
ಯತ್ತಂ ವ್ರತಕ್ಕೆ ತನುವಾ
ಯತ್ತವೆನಲ್ ನಾಗಚಂದ್ರ ಬುಧನೆ ಕೃತಾರ್ಥಂ

ಎಂಬ ಪದ್ಯದಲ್ಲಿ ನಾಗಚಂದ್ರನನ್ನು ಸ್ತುತಿಸಿದ್ದಾನೆ. ಅಲ್ಲದೆ

ಪಿರಿದರ್ತಿ ಮುನ್ನ ಮಾಹೇ
ಶ್ವರದೊಳ್ ತನಗದಱೊಳೊಳ್ಪು ಗಾಣದೆ ನೆಗಟ್ದೀ
ಪರಮಜಿನ ಧರ್ಮದೊಳಪೊ
ಕ್ಕು ರಾಗಿಪಂ ಸುಕವಿ ಪಂಪರಾಜನ ಮೊಮ್ಮಂ[8]

ಎಂಬ ಪದ್ಯದಲ್ಲಿ ತನ್ನನ್ನು ಪಂಪನ ಮೊಮ್ಮಗನೆಂದು ಹೇಳಿಕೊಂಡಿದ್ದಾನೆ. ಈ ಪಂಪನು ಆದಿಪಂಪನಾಗಿರಲಾರ; ಏಕೆಂದರೆ ಅಜ್ಜನಿಗೂ ಮೊಮ್ಮಗನಿಗೂ ೨೪೭ ವರ್ಷಗಳಷ್ಟು ಅಂತರವಾಗುತ್ತದೆ, ಆದ್ದರಿಂದ ಅವನು ನಾಗಚಂದ್ರನೇ ಇರಬೇಕು. ಬ್ರಹ್ಮಶಿವ ಅವನ ಪೌತ್ರನೋ ದೌಹಿತ್ರನೋ ಆಗಿದ್ದಿರಬೇಕು. ಪೂಜ್ಯಪಾದರ 'ಸಮಾಧಿ ಶತಕ'ಕ್ಕೆ ಕ್ರಿ.ಶ. ೧೧೪೭ರಲ್ಲಿ ವ್ಯಾಖ್ಯಾನವನ್ನು

---

[8] ಈ ಪದ್ಯ ಶ. ಬೆ. ದಲ್ಲಿರುವ 'ಸಮಯ ಪರೀಕ್ಷೆ'ಯ ಒಂದು ಪ್ರತಿಯಲ್ಲಿದೆ. ಇದನ್ನು ನನಗೆ ದೊರಕಿಸಿಕೊಟ್ಟವರು ಶ್ರೀ ಪರ್ಮ ಎಚ್. ದೇವೀರಪ್ಪನವರು. ಕವಿಚರಿತಕಾರರು ಈ ಪದ್ಯವನ್ನು ಉದ್ಧರಿಸಿರುವುದರಲ್ಲಿ ನಾಲ್ಕನೆಯ ಪಾದ ಪೂರ್ತಿಯಾಗಿಲ್ಲ,

ಬರೆದ ಮೇಘಚಂದ್ರನು ತನ್ನ ಟೀಕೆಯನ್ನು "ವಿತತ ಯಶೋನಿಧಿ ಪಂಪನಸುತಂಗೆ ತಿಳಿವಂತು ಪೊಚ್ಚ ಪೊಸಗನ್ನಡದಿಂ" ಬರೆದನು. ಇಲ್ಲಿ ಉಕ್ತನಾಗಿರುವ ಪಂಪನೂ ನಾಗಚಂದ್ರನೇ. ಬ್ರಹ್ಮಶಿವನ ತಂದೆಯಾದ ಸಿಂಗರಾಜನು ನಾಗ ಚಂದ್ರನ ಮಗ ನಾಗಿರಬಹುದು. ಹೀಗಾದರೆ ಸಿಂಗರಾಜನು ೧೧೪೫ ರಲ್ಲಿದ್ದನು. ೧೧೪೫ ರ ಹೊತ್ತಿಗೆ ನಾಗಚಂದ್ರನು 'ವಿತತ ಯಶೋನಿಧಿ'ಯಾಗಿರಬೇಕು. ಈ ಕೀರ್ತಿ 'ಪಂಪ ರಾಮಾಯಣ'ದ ರಚನೆಯ ಅನಂತರದಲ್ಲಿ ತಾನೆ ನಾಗಚಂದ್ರನಿಗೆ ಉಂಟಾಗಿರಬೇಕು. ಆದ್ದರಿಂದ 'ಪಂಪರಾಮಾಯಣ'ವು ಕ್ರಿ.ಶ. ೧೧೪೦ ರಲ್ಲಿ ರಚಿತವಾಗಿರಲು ಸಾಕು. ಈ ವಿಷಯ ಶ್ರೀಮಾನ್ ಗೋವಿಂದಪೈಗಳು ಮಾಡಿರುವ ಕಾಲನಿರ್ಣಯವನ್ನು ಸಮರ್ಥಿಸುತ್ತದೆ. ನಾಗಚಂದ್ರನು ೧೨ ನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರಸಿದ್ಧನಾಗಿ ಬಾಳಿದನೆಂಬುದರಲ್ಲಿ ಸಂದೇಹಕ್ಕೆ ಅವಕಾಶವಿಲ್ಲ.

೨. ಜೈನ ರಾಮಾಯಣಗಳು

ಸಂಸ್ಕೃತ ಸಾಹಿತ್ಯದಲ್ಲಿ ಆದಿಕಾವ್ಯವೆಂದು ಪೂಜ್ಯವಾಗಿರುವ 'ವಾಲ್ಮೀಕಿ ರಾಮಾಯಣ'ವೊಂದೇ ಅಲ್ಲದೆ, ಇನ್ನೂ ಹಲವು ಬಗೆಯ ರಾಮಾಯಣಗಳಿವೆ. ಅದ್ಭುತರಾಮಾಯಣ, ಅಧ್ಯಾತ್ಮರಾಮಾಯಣ, ವಾಸಿಷ್ಠರಾಮಾಯಣ, ಶೇಷ ರಾಮಾಯಣ—ಇವೇ ಮುಂತಾದ ಅನೇಕ ಪ್ರಭೇದಗಳ ಗುಂಪಿಗೆ ಬೌದ್ಧ ಜೈನ ರಾಮಾಯಣಗಳನ್ನೂ ಸೇರಿಸಬಹುದು. ಇಷ್ಟುಬಗೆಯ ರಾಮಾಯಣಗಳು ಹುಟ್ಟುವುದಕ್ಕೆ ವಿಶೇಷಕಾರಣಗಳಿರಬೇಕು. ಅವುಗಳಲ್ಲಿ ಮತ ಮುಖ್ಯವಾದ ದ್ದೆಂದು ತೋರುತ್ತದೆ. ಅದ್ಭುತರಾಮಾಯಣದಲ್ಲಿ ಶಾಕ್ತೇಯ ಮತದ ಪ್ರಭಾವ ವಿದೆಯೆಂದು ಹೇಳುತ್ತಾರೆ. ಬೌದ್ಧರ ರಾಮಾಯಣ ಕಥೆಯಲ್ಲಿ ಅವರ ಮತ ಪ್ರವೇಶಮಾಡಿದೆ. ಅವರ ಜಾತಕ ಕಥೆಗಳಲ್ಲಿ 'ದಶರಥ ಜಾತಕ' ಎಂಬುದು ಈ ದೃಷ್ಟಿಯಿಂದ ಗಮನಾರ್ಹವಾಗಿದೆ.[1] ಅದರಲ್ಲಿ ರಾವಣನ ಪ್ರಸ್ತಾವವೇ ಇಲ್ಲ;

---

[1] *The Jataka* (Tr. Rouse), Vol. IV, 78-82. ರಾಮಾಯಣದಲ್ಲಿ ಕಂಡುಬರುವ ಕೆಲವು ಉಪಕಥೆಗಳನ್ನು ಹೋಲುತ್ತಿರುವ ಜಾತಕ ಕಥೆಗಳು ಇನ್ನೂ ಹಲವಿವೆ. 'ಸಾಮ ಜಾತಕ' ಎಂಬ ಕಥೆ ದಶರಥನಿಗೆ ಶಾಪ ಬಂದ ವೃತ್ತಾಂತವನ್ನೂ 'ವೆಸ್ಸಂತರ ಜಾತಕ'ದ ಕಥೆ ರಾಮನು ಕಾಡಿಗೆ ಹೋಗುವಾಗ ಸೀತೆ ತಾನು ಅವನೊಡನೆ ಹೋಗಬೇಕೆಂದು ಅಂಗಲಾಚಿ

ಸೀತಾಪಹರಣವೂ ಅದರ ಮುಂದಿನ ಕಥೆಯೂ ಕಂಡುಬರುವುದಿಲ್ಲ[2]. ರಾಮ ಲಕ್ಷ್ಮಣ ಸೀತೆಯರು ಅಣ್ಣ ತಂಗಿಯರು ; ಒಬ್ಬ ತಾಯಿಯ ಮಕ್ಕಳು. ದಶರಥನ ಹದಿನಾರುಸಾವಿರ ಮಹಿಷಿಯರಲ್ಲಿ ಪ್ರಮುಖಳಾದ ಒಬ್ಬಳ ಮಗ ಭರತ. ಆ ರಾಣಿಗೆ ದಶರಥನು ಎಂದೋ ಒಂದು ವರವನ್ನು ಕೊಟ್ಟಿದ್ದನು. ರಾಮನಿಗೆ ಪಟ್ಟಾಭಿಷೇಕವಾಗುವ ಸಂದರ್ಭದಲ್ಲಿ ಈ ವರ ಅದಕ್ಕೆ ಅಡ್ಡಿಯಾಗಿ ಬಂದು ರಾಮ ಲಕ್ಷ್ಮಣ ಸೀತೆಯರು ಕಾಡಿಗೆ ಹೋಗಬೇಕಾಗಿ ಬರುತ್ತದೆ. ಅನಂತರ ದಶರಥನ ಮರಣ ಸಂಭವಿಸುತ್ತದೆ. ಭರತನು ಅಣ್ಣನ ಬಳಿಗೆ ಹೋಗಿ ರಾಜ್ಯವನ್ನು ಸ್ವೀಕರಿಸಬೇಕೆಂದು ಬೇಡುತ್ತಾನೆ. ಅವಧಿ ಮುಗಿಯುವವರೆಗೂ ರಾಮನು ರಾಜ್ಯಕ್ಕೆ ಹಿಂದಿರುಗುವುದಿಲ್ಲ. ಅದು ಮುಗಿದ ಮೇಲೆ ಅವನು ಮರಳಿ ಬಂದು ಸೀತೆಯನ್ನು ಮದುವೆಮಾಡಿಕೊಂಡು ಸುಖವಾಗಿ ರಾಜ್ಯಭಾರಮಾಡುತ್ತಾನೆ. ಅಣ್ಣ ತಂಗಿಯರು ವಿವಾಹವಾಗುವ ಸಂಪ್ರದಾಯ ಬುದ್ಧನು ಜನ್ಮಗ್ರಹಣ ಮಾಡಿದ ಶಾಕ್ಯಕುಲದಲ್ಲಿ ಪ್ರಚುರವಾಗಿತ್ತೆಂದು ಕಾಣುತ್ತದೆ.[3] ಈ ಕಥೆಯಲ್ಲಿ ಬರುವ ರಾಮಪಂಡಿತನು ಸತ್ವಗುಣ ಪ್ರಧಾನನಾಗಿ ಬುದ್ಧನಿಗೆ ಸಾಟಿಯಾಗಿರುವ ವ್ಯಕ್ತಿ. ಅವನು ಪರಮ ಸಾಧು, ವೈರಾಗ್ಯನಿಧಿ. ಬೌದ್ಧರಿಗೆ ಬೇಕಾಗಿದ್ದದ್ದು ಧರ್ಮಮೂರ್ತಿಯಾದ ರಾಮಭದ್ರನ ಪಾತ್ರ. ಅವನನ್ನು ತಮ್ಮವನನ್ನಾಗಿ ಮಾಡಿಕೊಂಡಿದ್ದಾರೆ. ಅಲ್ಲದೆ ಬುದ್ಧನ ಹಿಂದಿನ ಜನ್ಮಾವಳಿಗಳಲ್ಲಿ ರಾಮನ

ಬೇಡಿಕೊಳ್ಳುವ ದೃಶ್ಯವನ್ನೂ 'ಸಂಬುಲ ಜಾತಕ'ವು ಶೂರ್ಪನಖಿ ರಾಮನನ್ನು ಮೋಹಿಸಿ ಕಿವಿ ಮೂಗುಗಳನ್ನು ಕಳೆದುಕೊಂಡ ಕಥೆಯನ್ನೂ ಬಲುಮಟ್ಟಿಗೆ ಹೋಲುತ್ತವೆ. ಈ ಜಾತಕ ಕಥೆಗಳೇ ಹೆಚ್ಚು ಪ್ರಾಚೀನವೋ 'ವಾಲ್ಮೀಕಿ ರಾಮಾಯಣ'ವೇ ಹಳೆಯದೋ ಎಂಬ ವಿಷಯ ಬಹು ಚರ್ಚೆಗೆ ಕಾರಣವಾಗಿದೆ. ಎರಡಕ್ಕೂ ಮೂಲ ಹಿಂದೆ ಜನಪದ ಸಾಹಿತ್ಯದಲ್ಲಿ ಪ್ರಚಾರವಾಗಿದ್ದ ರಾಮಾಯಣದ ಕಥೆಗೆ ಸಂಬಂಧಪಟ್ಟ ಹಾಡುಗಳೂ ಲಾವಣಿಗಳೂ ಆಗಿದ್ದಿರಬಹುದು. ಹೀಗೆಯೇ ಮಹಾಭಾರತದ ಉಪಾಖ್ಯಾನಗಳನ್ನು ಹೋಲುವ ಕೆಲವು ಕಥೆಗಳು 'ಜಾತಕ'ದಲ್ಲಿ ಕಂಡುಬರುತ್ತವೆ.

[2] 'ಲಂಕಾವತಾರ ಸೂತ್ರ' ವೆಂಬ ಬೌದ್ಧ ಗ್ರಂಥದಲ್ಲಿ ರಾವಣನ ಹೆಸರು ಬರುತ್ತದೆ. ಇಲ್ಲಿ ಅವನು ಪರಮತಪಸ್ವಿಯಂತೆ ಬುದ್ಧನೊಡನೆ ಚರ್ಚೆಮಾಡುತ್ತಾನೆ. ಧರ್ಮದಲ್ಲಿ ಆಸಕ್ತಿಯುಳ್ಳವನಂತೆ ಕಾಣುತ್ತಾನೆ.

[3] *B. R.*, 14.

ಅವತಾರವೂ ಒಂದೆಂದು ಅವರು ಪರಿಗಣಿಸಿದ್ದಾರೆ. ಇದರಿಂದ ಬೌದ್ಧ ಮತದ ಕಡೆಗೆ ಜನತೆಯ ಒಲವು ಕೊಂಚಮಟ್ಟಿಗಾದರೂ ಹರಿಯಲು ಅವಕಾಶವಾಗಿರಬೇಕು. ಜನಜೀವನಕ್ಕೆ ಆದರ್ಶಪ್ರಾಯವಾಗಿದ್ದ ರಾಮಾಯಣವನ್ನು ಅವರು ಧರ್ಮಕಥೆಯನ್ನಾಗಿ ಮಾಡಿಕೊಂಡು ತಮ್ಮ ಮತಕ್ಕೆ ಹೆಚ್ಚು ಜನರು ಬಂದು ಸೇರುವಂತೆ ಪ್ರೋತ್ಸಾಹಿಸಿರಬಹುದು. ಹೀಗೆ ಆಯಾ ಮತದವರು ತಮ್ಮ ಧರ್ಮದ ದೃಷ್ಟಿಯಿಂದ ರಾಮಾಯಣವನ್ನು ರೂಪಾಂತರಗೊಳಿಸುವುದು ಸ್ವಾಭಾವಿಕವಾದ ಪದ್ಧತಿಯಾಗಿ ಪರಿಣಮಿಸಿದೆ. ಜೈನರೂ ರಾಮಾಯಣವನ್ನು ತಮ್ಮ ಮತದ ದೃಷ್ಟಿಯಿಂದ ಮಾರ್ಪಡಿಸಿಕೊಂಡಿದ್ದಾರೆ. ರಾಮಾಯಣದ ಮೂಲವೃಕ್ಷದಿಂದ ಕವಲೊಡೆದಿರುವ ಈ ಜೈನಶಾಖೆಯ ಚರಿತ್ರೆಯನ್ನು ಇಲ್ಲಿ ಸಂಕ್ಷೇಪವಾಗಿ ಹೇಳಬಹುದು.

ದೇವಚಂದ್ರನು ಜೈನ ರಾಮಾಯಣದ ಪರಂಪರೆಯನ್ನು ಹೀಗೆ ಹೇಳುತ್ತಾನೆ: ಮೊದಲು ಈ ಕಥೆಯನ್ನು ಆದಿತೀರ್ಥಂಕರನಾದ ಪುರುದೇವನು ತನ್ನ ಮಗನಾದ ಭರತ ಚಕ್ರವರ್ತಿಗೆ ಹೇಳಿದನು. ಅದು ಪರಂಪರೆಯಿಂದ ಕೊನೆಯ ತೀರ್ಥಂಕರನಾದ ಮಹಾವೀರನ ಹಸ್ತಗತವಾಯಿತು. ಮಹಾವೀರ ಜಿನನು ಮಗಧೇಶ್ವರನಾದ ಶ್ರೇಣಿಕನಿಗೆ ಆ ಕಥೆಯನ್ನು ಹೇಳಿದನು. ಹೀಗೆ ಅನುಕ್ರಮವಾಗಿ ಬಂದ ಕಥೆಯನ್ನೇ ಕೂಚಿಭಟ್ಟಾರಕನೂ ನಂದಿಮುನಿವರನೂ ಕವಿಪರಮೇಷ್ಠಿಗಳೂ ರವಿಷೇಣಾರ್ಯನೂ ವೀರಸೇನ ಸಿದ್ಧಸೇನ ಪದ್ಮನಂದೀಶರೂ ಗುಣಭದ್ರಾಚಾರ್ಯನೂ ಸಕಲಕೀರ್ತಿಯೂ ಮುಂದಕ್ಕೆ ಪೋಷಿಸಿಕೊಂಡು ಬಂದರು. ಅನಂತರ ಕನ್ನಡ ಕವಿಗಳಾದ ಚಾಮುಂಡರಾಯ, ನಾಗಚಂದ್ರ, ಮಾಘಣಂದಿ ಸಿದ್ಧಾಂತಿ, ಕುಮುದೇಂದು, ನಯಸೇನ ಮುಂತಾದವರು ಇದೇ ಕಥೆಯನ್ನೇ ಹೇಳಿದರು.[4] ಈ ಪರಿವಿಡಿಯನ್ನು ನೋಡಿದರೆ ಜೈನ ರಾಮಾಯಣವು ಅತಿ ಪ್ರಾಚೀನವಾದ ಕಾಲದಲ್ಲಿ ಜನ್ಮತಾಳಿ ಬೆಳೆದುಕೊಂಡು ಬಂದಿರುವಂತೆ ಕಾಣುತ್ತದೆ. ಇಲ್ಲಿ ಹೇಳಿರುವ ಕವಿಗಳಲ್ಲಿ ರವಿಷೇಣ ಗುಣಭದ್ರಾಚಾರ್ಯರ ರಾಮಾಯಣಗಳು ಈಗಲೂ ಜೀವಿಸಿಕೊಂಡು ಬಂದಿವೆ. ಇನ್ನು ಮಿಕ್ಕ ಕೃತಿಗಳಲ್ಲಿ ಕನ್ನಡದಲ್ಲಿ ದೊರೆತಿರುವುವನ್ನು ಬಿಟ್ಟು ಯಾವುದೂ ಸಿಕ್ಕಿರುವಂತೆ ತೋರು

[4] ಕ. ಕ. ಚ., III, ೧೫೦.

ವುದಿಲ್ಲ. ದೇವಚಂದ್ರನು ಹೇಳಿರುವ ಈ ಪೀಳಿಗೆಯೂ ಪೂರ್ತಿಯಾಗಿಲ್ಲ. ಜೈನ ಮಹಾರಾಷ್ಟ್ರೀ ಪ್ರಾಕೃತ ಭಾಷೆಯಲ್ಲಿ ಆದಿಕಾವ್ಯವೆಂದು ಪರಿಗಣಿತವಾಗಿರುವ ವಿಮಲಸೂರಿಯ 'ಪಉಮಚರಿಯ'ವೂ ಹೇಮಚಂದ್ರನ 'ರಾಮಾಯಣ'ವೇ ಮೊದಲಾದ ಇನ್ನೂ ಹಲವು ಜೈನ ರಾಮಾಯಣಗಳ ಹೆಸರುಗಳೂ ಈ ಪಟ್ಟಿಯಲ್ಲಿಲ್ಲ. ದೇವಚಂದ್ರನಿಗೆ ಇವುಗಳ ವಿಷಯ ಗೊತ್ತಿರಲಿಲ್ಲವೇನೊ! ರಾಮಾಯಣದ ಕಥೆ ಇಪ್ಪತ್ತನೆಯ ತೀರ್ಥಂಕರನಾದ ಮುನಿಸುವ್ರತ ಜಿನನ ಕಾಲದಲ್ಲಿ ನಡೆದಂತೆ ಜೈನ ಪುರಾಣಗಳಿಂದ ತಿಳಿದುಬರುವುದರಿಂದ ಮೊದಲನೆಯ ತೀರ್ಥಂಕರನೇ ಈ ರಾಮಾಯಣಕ್ಕೆ ಪ್ರವರ್ತಕನೆಂದು ದೇವಚಂದ್ರನು ಹೇಳಿರುವುದು ನಂಬಿಕೆಗೆ ಯೋಗ್ಯವಾಗಿಲ್ಲ. ಮಹಾವೀರನೇ ಈ ಕಥೆಯನ್ನು ಶ್ರೇಣಿಕ ಮಹಾರಾಜನಿಗೆ ಹೇಳಿದನೆಂಬುದು ದೇವಚಂದ್ರನ ಅಭಿಪ್ರಾಯವಾದರೆ ವಿಮಲಸೂರಿ ನಾಗಚಂದ್ರ ರವಿಷೇಣರೇ ಮೊದಲಾದವರು ಆ ರಾಜನಿಗೆ ಈ ಕಥೆಯನ್ನು ಆ ಜಿನನ ಗಣಧರರಲ್ಲಿ ಒಬ್ಬನಾದ ಗೌತಮಸ್ವಾಮಿ ಕೇಳಿಸಿದನೆಂದು ಹೇಳುತ್ತಾರೆ. ಹೀಗೆ ಈ ಪರಂಪರೆಯಲ್ಲಿ ಹಲವು ಕೊರತೆಗಳಿದ್ದರೂ ಕೂಚಿಭಟ್ಟಾರಕನಿಂದ ಹಿಡಿದು ಮುಂದೆ ಹೇಳಿರುವ ವಿಷಯಗಳು ಐತಿಹಾಸಿಕವಾಗಿದ್ದರೂ ಇರಬಹುದು. ಇದನ್ನು ಇಲ್ಲಿ ಚರ್ಚೆಮಾಡಲು ಅವಕಾಶವಿಲ್ಲ. ಒಟ್ಟಿನಲ್ಲಿ ಪ್ರಾಕೃತ ಸಂಸ್ಕೃತ ಕನ್ನಡ ಸಾಹಿತ್ಯಗಳಲ್ಲಿ ಕಂಡುಬರುವ ಜೈನ ರಾಮಾಯಣಗಳ ಬೆಳೆ ಬಲು ಹುಲುಸಾಗಿದೆಯೆಂಬುದು ವ್ಯಕ್ತವಾಗುತ್ತದೆ.

ಈಗ ಇರುವ ಜೈನ ರಾಮಾಯಣಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದದ್ದು ವಿಮಲಸೂರಿಯ 'ಪಉಮಚರಿಯ.'[5] ಅದು ಹುಟ್ಟುವ ಕಾಲಕ್ಕೆ 'ವಾಲ್ಮೀಕಿ

---

[5] ಮಹಾವೀರನ ನಿರ್ವಾಣವಾಗಿ ೫೩೦ ವರ್ಷಗಳು ಸಂದ ಮೇಲೆ ವಿಮಲಸೂರಿ ತನ್ನ 'ಪಉಮ ಚರಿಯ'ವನ್ನು ಬರೆದನೆಂದು.

ಪಂಚೇವ ಯ ವಾಸಸಯಾ, ದುಸಮಾಏ ತೀಸವರಿಸ ಸಂಜುತ್ತಾ
ವೀರೇ ಸಿದ್ಧಿಮುವಗಏ, ತಓ ನಿಬದ್ಧಂ ಇಮಂ ಚರಿಯಂ || ೧೧೮-೧೦೩

ಎಂಬ ಅವನ ಪದ್ಯದಿಂದಲೇ ವ್ಯಕ್ತವಾಗುತ್ತದೆ. ಮಹಾವೀರ ಜಿನನು ನಿರ್ವಾಣವನ್ನು ಹೊಂದಿದ್ದು ಕ್ರಿ. ಪೂ. ೫೨೭ (H.J., 43) ಆದ್ದರಿಂದ ವಿಮಲಸೂರಿ ತನ್ನ ಗ್ರಂಥವನ್ನು ಕ್ರಿ. ಶ. ೩ ನೆಯ ವರ್ಷದಲ್ಲಿಯೇ ಬರೆದಂತಾಯಿತು, ಆದರೆ ಈ ಗ್ರಂಥವು ಹುಟ್ಟಿದ ಕಾಲದ ವಿಷಯದಲ್ಲಿ

ರಾಮಾಯಣ 'ವು ಈಗ ತನಗಿರುವ ರೂಪವನ್ನು ಬಹುಶಃ ಆಗಲೇ ತಾಳಿಕೊಂಡು ಜನರ ಪ್ರೀತಿ ಗೌರವಗಳಿಗೆ ಪಾತ್ರವಾಗಿತ್ತು. ವಿಮಲಸೂರಿ ವಾಲ್ಮೀಕಿ ಮಹರ್ಷಿಗಳು ಹೇಳಿದ ಕಥೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಜೈನಧರ್ಮದ ತತ್ತ್ವಗಳಿಗೂ ಆಚಾರಗಳಿಗೂ ಹೊಂದಿಕೆಯಾಗುವಂತೆ ಬೇಕಾದ ಮಾರ್ಪಾಟುಗಳನ್ನು ಮಾಡಿ ಜೈನಧರ್ಮಾನುಯಾಯಿಗಳಿಗಾಗಿ ತನ್ನ ರಾಮಾಯಣವನ್ನು ಬರೆದನೆ? ಇಲ್ಲದಿದ್ದರೆ ಅದಕ್ಕೆ ಮೂಲ ಇನ್ನಾವುದಾದರೂ ಜೈನ ಸಂಪ್ರದಾಯದ ರಾಮಾಯಣವೆ? ಈ ಸಮಸ್ಯೆಗಳನ್ನು ಬಿಡಿಸುವುದು ಕಷ್ಟ. ಆದರೆ ಈ ವಿಷಯವಾಗಿ ವಿಮಲಸೂರಿ ಸೂಚನೆಯೊಂದನ್ನು ಕೊಟ್ಟಿರುವಂತೆ ಕಾಣುತ್ತದೆ. ಗೌತಮಗಣಧರನ ಮುಖದಿಂದ ಕಥೆಯನ್ನು ಕೇಳುವುದಕ್ಕೆ ಮುಂಚೆ ಶ್ರೇಣಿಕ ಮಹಾರಾಜನಿಗೆ ರಾಮಾಯಣದ ಕಥೆಯ ವಿಚಾರವಾಗಿ ಅನೇಕ ಸಂದೇಹಗಳು ಉಂಟಾದುವಂತೆ. "ರಾಕ್ಷಸರು ಅತಿ ಬಲಶಾಲಿಗಳಾಗಿದ್ದರೂ ವಾನರರು ಅವರನ್ನು ಹೇಗೆ ಜಯಿಸಿದರು? ರಾವಣನೇ ಮೊದಲಾದವರು ಜೈನರಾಗಿದ್ದರೂ ಮಹಾಕುಲದಲ್ಲಿ ಹುಟ್ಟಿದ್ದರೂ ಮಜ್ಜೆ ಮಾಂಸಗಳನ್ನೇಕೆ ತಿಂದರು? ರಕ್ತವನ್ನೇಕೆ ಕುಡಿಯುತ್ತಿದ್ದರು? ಕುಂಭಕರ್ಣನು ಒಟ್ಟಿಗೆ ಆರು ತಿಂಗಳು ಯಾವ ಭಯವೂ ಇಲ್ಲದೆ ಹೇಗೆ ನಿದ್ರಿಸುತ್ತಿದ್ದನು? ಹಾಗೆ ನಿದ್ದೆಮಾಡುತ್ತಿದ್ದಾಗ ಕಾದೆಣ್ಣೆಯಿಂದ ಕಿವಿಗಳನ್ನು ತುಂಬಿದರೂ ಬೆಟ್ಟದಂತಿರುವ ಆನೆಗಳು ಬಂದು ಅವನನ್ನು ತುಳಿದರೂ ಶಂಖಭೇರಿಗಳೇ ಮೊದಲಾದ ಅನೇಕ ವಾದ್ಯಗಳು ಅವನ ಹತ್ತಿರ ಮೊಳಗುತ್ತಿದ್ದರೂ ಅವನಿಗೆ ಎಚ್ಚರವಾಗಲಿಲ್ಲವೇಕೆ? ಆರು ತಿಂಗಳಿಗೊಂದು ಸಲ ಅವನಿಗೆ ನಿದ್ದೆ ತಿಳಿದ ಕೂಡಲೇ ಹಸಿವನ್ನು ಆರಿಸುವುದಕ್ಕಾಗಿ ಆನೆಗಳನ್ನೂ ಎಮ್ಮೆಗಳನ್ನೂ ಹೇಗೆ ನುಂಗಿಬಿಡುತ್ತಿದ್ದನು? ರಾವಣನು ಇಂದ್ರನನ್ನು ಗೆದ್ದು ಅವನಿಗೆ ಬೇಡಿಹಾಕಿ ಲಂಕಾನಗರಿಗೆ ಎಳೆದುಕೊಂಡು ಬಂದ

ಬಹು ಭಿನ್ನವಾದ ಅಭಿಪ್ರಾಯಗಳಿವೆ (*A.B.O.R.I.*, Vol. XVI, Parts I and II.; *P.O.C.*, VII, 109). ಅಂತೂ ಬಲು ಹಿಂದೆಯೇ ರಾವಣನ ಪಾತ್ರದ ದುರಂತ ಕಲ್ಪನೆ ಇತ್ತು. ಜೈನ ಮಹಾರಾಷ್ಟ್ರೀ ಪ್ರಾಕೃತ ಭಾಷೆಯಲ್ಲಿ ವಿಮಲಸೂರಿಯ ಕಾವ್ಯವೇ ಮೊದಲನೆಯದೆಂದು ಡಾ|| ಯಾಕೋಬಿ ಅವರು (*E.R.E.*, VII, 467) ಅಭಿಪ್ರಾಯಪಡುತ್ತಾನೆ. ವಿಮಲಸೂರಿಯಾದರೆ ತನಗೇ ಆ ಕಥೆ ಪರಂಪರಾಗತವಾಗಿ ಬಂತೆಂದು ಹೇಳಿಕೊಂಡಿದ್ದಾನೆ.

ಸೆಂದು ಹೇಳುತ್ತಾರೆ. ಇಂದ್ರನನ್ನು ಗೆಲ್ಲಲು ಯಾರು ಸಮರ್ಥರು? ಅವನ ಐರಾವತವನ್ನೂ ವಜ್ರಾಯುಧವನ್ನೂ ತಡೆಯಲು ಯಾರಿಗೆ ಸಾಧ್ಯ? ಏನೋ ಎಲ್ಲಾ ವಿಪರೀತವಾಗಿ ಕಾಣುತ್ತಿದೆಯಲ್ಲ; ಹೀಗೇಕೆ ರಾಮಾಯಣವು ರಚಿತ ವಾಯಿತು? ಇದೆಲ್ಲ ಶುದ್ಧ ಸುಳ್ಳು, ಉಪಪತ್ತಿ ವಿರುದ್ಧವಾದುದು"[6] ಎಂದು ಶ್ರೇಣಿಕನು ಯೋಚನೆಮಾಡಿ ಸಂದೇಹ ಪರಿಹಾರ್ಥವಾಗಿ ಗೌತಮನನ್ನು ಪ್ರಶ್ನೆಮಾಡುತ್ತಾನೆ. ಆತನು "ರಾಜನೆ, ಶ್ರದ್ಧೆಯಿಂದ ಕೇಳು, ಕೇವಲಿಗಳು ಹೇಳಿದ್ದನ್ನು ನಿನಗೆ ಹೇಳುತ್ತೇನೆ. ರಾವಣನು ರಾಕ್ಷಸನಲ್ಲ, ಮಾಂಸಾಹಾರಿಯಲ್ಲ, ನರಭಕ್ಷಕನಲ್ಲ. ಹೀಗೆ ಕುವಾದಿಗಳೂ ಕುಕವಿಗಳೂ ಮೂಢರೂ ಹೇಳುವುದೆಲ್ಲ ಸುಳ್ಳು"[7] ಎಂದು ಕಥೆಯನ್ನು ಆರಂಭಿಸುತ್ತಾನೆ. ಇದನ್ನು ನೋಡಿದರೆ ವಿಮಲಸೂರಿಗೆ 'ವಾಲ್ಮೀಕಿ ರಾಮಾಯಣ'ದ ಪರಿಚಯವಿದ್ದಿತೆಂದೂ ಅವನು ಅದರಲ್ಲಿರುವುದನ್ನೆಲ್ಲ ನಂಬಿಕೊಳ್ಳದೆ ಜೈನಧರ್ಮಕ್ಕನುಸಾರವಾಗಿ ಅದನ್ನು ತಿದ್ದಲು ತೊಡಗಿದನೆಂದೂ ಹೇಳಬಹುದಾಗಿದೆ. ಈ ನೂತನ ದೃಷ್ಟಿಯಿಂದ ವಿಮಲಸೂರಿ ನಿರ್ಮಿಸಿದ ದುರಂತರಾವಣನ ಪಾತ್ರವನ್ನು ಮುಂದೆ ವಿಶದವಾಗಿ ನಿರೂಪಿಸಿದೆ.[8]

ಜೈನ ರಾಮಾಯಣಗಳಲ್ಲಿ ಎರಡು ಸಂಪ್ರದಾಯಗಳಿರುವಂತೆ ಕಂಡು ಬರುತ್ತದೆ. ಎರಡಕ್ಕೂ ಕಥೆಯಲ್ಲಿ ವ್ಯತ್ಯಾಸಗಳುಂಟು. ಮೊದಲನೆಯದು ವಿಮಲಸೂರಿಯ ರೀತಿ; ಎರಡನೆಯದು ಗುಣಭದ್ರಾಚಾರ್ಯರ ಪದ್ಧತಿ. ದೇವಚಂದ್ರನು ಇವೆರಡಕ್ಕೂ ಸಮನ್ವಯಮಾಡಲು ಪ್ರಯತ್ನಪಟ್ಟಿರುವಂತೆ ಹೇಳಿ

---

[6] ಪ. ಚ., II, ೧೦೫-೧೧೮; ಪ.ಪು., II, ೨೨೪-೨೮೫.

[7] ಪ. ಚ., III, ೧೪, ೧೫; ಪ.ಪು., III, ೨೬-೨೮.

[8] 'ಪಂಪರಾಮಾಯಣ'ದ ಅಧಾರದಿಂದಲೇ ರಾವಣನ ಪಾತ್ರದ ದುರಂತತೆಯನ್ನು ಮೊದಲು ಮನಗಂಡವರು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಅವರು (*M. U. M.*, Vol. VII, (1923), 266-282. '*Tragic Ravana.*'; ಅ. ಪಂ. ಮುನ್ನುಡಿ, ೧-೩೩). ಪಾಶ್ಚಾತ್ಯ ರುದ್ರನಾಟಕಗಳಲ್ಲಿ ಕಾಣುವ ದುರಂತ ನಾಯಕರಂತೆ ವಿಮಲಸೂರಿಯೇ ಮುಂತಾದ ಜೈನ ಕವಿಗಳು ರಾವಣನ ಪಾತ್ರವನ್ನು ನಿರ್ಮಿಸಲು ಸಂಕಲ್ಪಿಸಿ ಹೊರಟರೆಂದು ಹೇಳುವುದಕ್ಕಾಗುವುದಿಲ್ಲ. ಆ ದೃಷ್ಟಿಯನ್ನು ಹೊಂದಿದ ಇಂದಿನವರಾದ ನಮಗೆ ಆ ರಾವಣನ ಪಾತ್ರ ಹಾಗೆ ಕಾಣುತ್ತದೆ.

ಕೊಂಡಿದ್ದಾನೆ.[9] ಎರಡು ಉಪಶಾಖೆಗಳಲ್ಲಿಯೂ ಅನೇಕ ಗ್ರಂಥಗಳು ಹುಟ್ಟಿವೆ. ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದ ಗ್ರಂಥಗಳ ವಿಷಯವಾಗಿ ಇಲ್ಲಿ ಕೆಲವು ಮಾತುಗಳನ್ನು ಹೇಳಬಹುದು. 'ಅಪಭ್ರಂಶ ಸಾಹಿತ್ಯದಲ್ಲಿ ಪಉಮ ಚರಿಯು' ಎಂಬ ಹೆಸರಿನ ಎರಡು ಪುರಾಣಗಳಿರುವಂತೆ ತಿಳಿದುಬಂದಿದೆ. ಒಂದನ್ನು ಚೌಮುಹ ಎಂಬ ಕವಿ ಬರೆದಿದ್ದಾನೆ. ಈ ವಿಷಯವನ್ನು ಹತ್ತನೆಯ ಶತಮಾನ ದಲ್ಲಿ 'ಹರಿವಂಶ ಪುರಾಣ' ವನ್ನು ಬರೆದ ಧವಳಕವಿ ಹೇಳುತ್ತಾನೆ. ಸ್ವಯಂಭು ದೇವನೆಂಬ ಬೇರೊಬ್ಬ ಕವಿ ಇನ್ನೊಂದು 'ಪಉಮಚರಿಯು' ವನ್ನು ಬರೆದಿರು ವನು. ಅವನು ಅದನ್ನು ಪೂರ್ತಿಗೊಳಿಸುವುದಕ್ಕೆ ಮುಂಚೆ ಸತ್ತುಹೋಗಲು ಅವನ ಮಗನಾದ ತ್ರಿಭುವನ ಸ್ವಯಂಭು ಎಂಬವನು ಮಿಕ್ಕ ಭಾಗವನ್ನು ಬರೆದನು. ಕಾಲಾನುಕ್ರಮದಲ್ಲಿ ಈ ಕವಿ ಬರೆದ ಭಾಗ ಲುಪ್ತವಾಗಲು ಗ್ವಾಲಿ ಯರ್ ನಗರವಾಸಿಯಾಗಿದ್ದ ಜಸಕಿತ್ತಿ ಭಟ್ಟಾರಕನು ತಿರುಗಿ ಅದನ್ನು ಬರೆದು ಸಮಾಪ್ತಿಮಾಡಿದನು. ಹೀಗೆ ಎರಡನೆಯ 'ಪಉಮಚರಿಯು'ದಲ್ಲಿ ಮೂವರು ಕವಿಗಳ ಕೈವಾಡವಿದೆ. ಇದರಲ್ಲಿ ಒಟ್ಟು ಹನ್ನೆರಡುಸಾವಿರ ಶ್ಲೋಕಗಳಿವೆಯಂತೆ. ಸ್ವಯಂಭುದೇವನ ಕಾಲ ಏಳನೆಯ ಮತ್ತು ಹತ್ತನೆಯ ಶತಮಾನಗಳ ನಡುವೆ ಬೀಳುತ್ತದೆ.[10] ಈ ಎರಡು ಪುಸ್ತಕಗಳನ್ನು ನಾವು ಕಣ್ಣಾರ ಕಂಡಿಲ್ಲವಾದರೂ ನಾಮಸಾದೃಶ್ಯವನ್ನೂ ಒಂದರ ಶ್ಲೋಕ ಬಾಹುಳ್ಯವನ್ನೂ ಆಧಾರವಾಗಿಟ್ಟುಕೊಂಡು ಅವೆರಡೂ ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದು ವೆಂದು ಇಲ್ಲಿ ಊಹೆಮಾಡಲಾಗಿದೆ. ಸಂಸ್ಕೃತದಲ್ಲಿರುವ ಜೈನರಾಮಾಯಣ ಗಳಲ್ಲಿ ರವಿಷೇಣನ 'ಪದ್ಮ ಪುರಾಣ' ಅಥವಾ 'ಮಹಾರಾಮಾಯಣ'ವೇ ಅತಿ ಪ್ರಾಚೀನವಾದುದು. ಇದು ಕ್ರಿ. ಶ. ೬೭೮ ರಲ್ಲಿ ರಚಿತವಾಯಿತು.[11] ರವಿಷೇಣನು ಎಷ್ಟರಮಟ್ಟಿಗೆ ವಿಮಲಸೂರಿಯನ್ನು ಅನುಸರಿಸುತ್ತಾನೆಂದರೆ, ಅವನ ಶ್ಲೋಕ ಗಳಲ್ಲಿ ಹಲವು ವಿಮಲಸೂರಿಯ ಶ್ಲೋಕಗಳ ಸಂಸ್ಕೃತ ಛಾಯೆಗಳಂತೆ ಇವೆ. ಕ್ರಿ. ಶ. ಹನ್ನೆರಡನೆಯ ಶತಮಾನದಲ್ಲಿ ಹೇಮಚಂದ್ರಾಚಾರ್ಯರು ಬರೆದಿರುವ

[9] ಕ. ಕ. ಚ., III, ೧೫೦—೧೫೧.

[10] *A. U. S.*, Vol. I, 157-185.

[11] *C.S.P.*; Introduction, xxi.

ಜೈನರಾಮಾಯಣವಿದೆ. ಆ ಕವಿಯ 'ತ್ರಿಷಷ್ಟಿಶಲಾಕಾಪುರುಷ ಚರಿತ್ರ'ದಲ್ಲಿ ಏಳನೆಯ ಪರ್ವವಾಗಿ ಈ ಕಥೆ ಬಂದಿದೆ. ದೇವವಿಜಯಗಣಿ ಎಂಬಾತನು ಕ್ರಿ. ಶ. ೧೫೯೬ ರಲ್ಲಿ 'ರಾಮಚರಿತ' ವನ್ನು ಸಂಸ್ಕೃತ ಗದ್ಯದಲ್ಲಿ ಬರೆದಿದ್ದಾನೆ.[12] ಕನ್ನಡ ಸಾಹಿತ್ಯದಲ್ಲಿ 'ಪಂಪರಾಮಾಯಣ'ವೂ 'ಕುಮುದೇಂದು ರಾಮಾಯಣ'ವೂ 'ರಾಮವಿಜಯ ಚರಿತೆ'ಯೂ 'ರಾಮಕಥಾವತಾರ'ವೂ 'ಜಿನರಾಮಾಯಣ'ವೂ ಪ್ರಸಿದ್ಧವಾಗಿವೆ. ಇವನ್ನೆಲ್ಲ 'ಕರ್ಣಾಟಕ ಕವಿಚರಿತೆ'ಯಲ್ಲಿ ನೋಡಿಕೊಳ್ಳಬಹುದು. ಕೋಷ್ಟಕರೂಪದಲ್ಲಿ ಈ ಶಾಖೆಯ ಗ್ರಂಥಗಳನ್ನು ಇಲ್ಲಿ ಕೊಟ್ಟಿದೆ.

'ಪಉಮ ಚರಿಯ'

(ವಿಮಲಸೂರಿ)

ಪ್ರಾಕೃತ	ಸಂಸ್ಕೃತ	ಕನ್ನಡ
೧. 'ಪಉಮ ಚರಿಯ' (ಚಉಮುಹ)	೧. 'ಪದ್ಮಪುರಾಣಮ್' (ರವಿಷೇಣ)	೧. 'ಪಂಪರಾಮಾಯಣ' (ಚಂಪು—ನಾಗಚಂದ್ರ)
೨. 'ಪಉಮ ಚರಿಯ' {ಸ್ವಯಂಭುದೇವ, ತ್ರಿಭುವನ ಸಯಂಭು, ಜಸಕಿತ್ತಿ ಭಟ್ಟಾರಕ}	೨. 'ಜೈನರಾಮಾಯಣ' (ಹೇಮಚಂದ್ರ)	೨. 'ಕುಮುದೇಂದು ರಾಮಾಯಣ' (ಷಟ್ಪದಿ)
	೩. 'ರಾಮಚರಿತ' (ದೇವವಿಜಯ ಗಣಿ)	೩. 'ರಾಮವಿಜಯ ಚರಿತೆ' (ಸಾಂಗತ್ಯ—ದೇವಪ್ಪ)
		೪. 'ರಾಮಕಥಾವತಾರ' (ಚಂಪು—ದೇವಚಂದ್ರ)
		೫. 'ಜಿನ ರಾಮಾಯಣ' (ಷಟ್ಪದಿ—ಚಂದ್ರಸಾಗರ ವರ್ಣಿ)

ಈ ಸಂಪ್ರದಾಯಕ್ಕೂ 'ವಾಲ್ಮೀಕಿ ರಾಮಾಯಣ'ಕ್ಕೂ ಇರುವ ವ್ಯತ್ಯಾಸಗಳಲ್ಲಿ ಕೆಲವನ್ನು 'ಕರ್ಣಾಟಕ ಕವಿಚರಿತ' ಕಾರರೂ 'ಪಂಪರಾಮಾಯಣ'ದ ಸಂಪಾದಕರೂ ತೋರಿಸಿದ್ದಾರೆ. ಮುಖ್ಯವಾದ ಇನ್ನೂ ಕೆಲವನ್ನು

---

12 *H.I.L.*, Vol. II, 495.

ಇಲ್ಲಿ ಹೇಳಬಹುದು. ಸಶರೀರನಾಗಿಯೇ ಸ್ವರ್ಗಕ್ಕೆ ಹೋಗಬೇಕೆಂಬ ಅಭಿಲಾಷೆಯಿಂದ ವರ್ಣಾಶ್ರಮ ಧರ್ಮಗಳಿಗೆ ವಿರುದ್ಧವಾಗಿ ತಪಸ್ಸುಮಾಡುತ್ತಿದ್ದ ಶೂದ್ರನಾದ ಶಂಬುಕನನ್ನು ರಾಮನು ಕೊಂದ ಕಥೆ 'ವಾಲ್ಮೀಕಿ ರಾಮಾಯಣ'ದ ಉತ್ತರ ಕಾಂಡದ ಎಪ್ಪತ್ತಾರನೆಯ ಸರ್ಗದಲ್ಲಿ ಹೇಳಿದೆ.[13] ಇದನ್ನೇ ವಿಮಲಸೂರಿ ಬಲು ಜಾಣ್ಮೆಯಿಂದ ತನ್ನ ಪುರಾಣದಲ್ಲಿ ಉಪಯೋಗಿಸಿಕೊಂಡಿದ್ದಾನೆ. ಇಲ್ಲಿ ಶಂಬುಕನು ರಾವಣನ ತಂಗಿಯಾದ ಚಂದ್ರನಖಿಯ ಮಗ. ತಿಳಿಯದೆ ಲಕ್ಷ್ಮಣನು ಅವನನ್ನು ಕೊಂದದ್ದರಿಂದ—ರಾಮನು ಮುಂದೆ ನಿರ್ವಾಣಹೊಂದುವವನಾದ್ದರಿಂದ ಅವನಿಂದ ಕೊಲೆಗೆಲಸ ನಡೆಯಬಾರದು—ಚಂದ್ರನಖಿ ಕೋಪಗೊಂಡು ರಾವಣನಿಗೆ ದೂರುಹೇಳಿ ಸೀತಾಪಹರಣಕ್ಕೆ ಕಾರಣವಾಗುತ್ತಾಳೆ. ವಸ್ತು ರಚನೆಯ ದೃಷ್ಟಿಯಿಂದ ಈ ಮಾರ್ಪಾಟು ಶ್ಲಾಘ್ಯವಾಗಿದೆ. ಸುಗ್ರೀವ ಹನುಮಂತರೇ ಮೊದಲಾದ ಕಪಿಧ್ವಜರು 'ಪಉಮ ಚರಿಯ'ದಲ್ಲಿ ಬರುವ ಇತರ ವ್ಯಕ್ತಿಗಳಂತೆ ಜೈನರಾಗಿರುವುದೊಂದೇ ಅಲ್ಲದೆ ರಾವಣನ ಮಾಂಡಲಿಕರೂ ನಂಟರೂ ಹೌದು. ವರುಣನ ಮೇಲೆ ರಾವಣನು ಯುದ್ಧಮಾಡುವಾಗ ಆಂಜನೇಯನು ಸಹಾಯಮಾಡುತ್ತಾನೆ. ರಾವಣನನ್ನು ಸಂಹರಿಸಿದವನು ರಾಮನೆಂದು ವಾಲ್ಮೀಕಿ ಹೇಳಿದರೆ ವಿಮಲಸೂರಿ ಲಕ್ಷ್ಮಣನೇ ಕೊಂದನೆಂದು ಹೇಳುತ್ತಾನೆ. ಪ್ರತಿವಾಸುದೇವನಾದ ರಾವಣನನ್ನು ವಾಸುದೇವನಾದ ಲಕ್ಷ್ಮಣನೇ ಕೊಲ್ಲಬೇಕು; ರಾಮನು ಕರ್ಮಬಂಧವನ್ನು ಕಳೆದುಕೊಂಡು ಸಿದ್ಧಪದವಿಯನ್ನು ಹೊಂದುವಂಥವನು, ಚರಮದೇಹಧಾರಿ; ಅವನಿಗೆ ಜೀವಹಿಂಸೆಯ ಪಾಪ ತಟ್ಟಕೂಡದು. ರಾವಣನ ವಧೆ ಮಾಡಿದ್ದಕ್ಕಾಗಿ ಲಕ್ಷ್ಮಣನು ನರಕದಲ್ಲಿ ನರಳಬೇಕಾಗುತ್ತದೆ. ಇಂಥ ಬದಲಾವಣೆಗಳಿಗೆಲ್ಲ ವಿಮಲಸೂರಿಯ ಧಾರ್ಮಿಕದೃಷ್ಟಿ ಪ್ರಬಲವಾದ ಕಾರಣವಾಗಿದೆ.

ಇನ್ನು ಎರಡನೆಯ ಶಾಖೆಯನ್ನು ಕುರಿತು ವಿಚಾರಮಾಡೋಣ. ಗುಣಭದ್ರನಿಗಿಂತ ಹಿಂದಿನ ಇಂಥ ಕಥೆ ದೊರೆತಿಲ್ಲವಾದ್ದರಿಂದ ಈ ಶಾಖೆಗೆ ಅವನ ಹೆಸರನ್ನೇ ಇಡಬಹುದು. 'ಉತ್ತರಪುರಾಣ'ದಲ್ಲಿ ಮುನಿಸುವ್ರತಜಿನನ ಕಥೆ

---

[13] ಭಾಷತಸ್ತಸ್ಯ ಶೂದ್ರಸ್ಯ ಖಡ್ಗಂ ಸುರುಚಿರಪ್ರಭಮ್
ನಿಷ್ಕೃಷ್ಯ ಕೋಶಾದ್ವಿಮಲಂ ಶಿರಶ್ಚಿಚ್ಛೇದ ರಾಘವಃ || ೪ ||

ಯನ್ನು ಬರೆಯುವಾಗ ಗುಣಭದ್ರನು ೬೮ ನೆಯ ಅಧ್ಯಾಯದಲ್ಲಿ ರಾಮಾಯಣದ ಕಥೆಯನ್ನು ಹೇಳುತ್ತಾನೆ. ಅದನ್ನು ಸಂಕ್ಷೇಪಿಸಿ ಇಲ್ಲಿ ಹೇಳಿದೆ—

ರತ್ನಪುರಕ್ಕೆ ರಾಜನಾದ ಪ್ರಜಾಪತಿಗೂ ಅವನ ಹೆಂಡತಿ ಗುಣಕಾಂತೆಗೂ ಚಂದ್ರಚೂಳನು ಮಗನಾಗಿ ಹುಟ್ಟುವನು. ಮಂತ್ರಿಯ ಮಗನಾದ ವಿಜಯನೂ ಇವನೂ ಪರಮ ಸ್ನೇಹಿತರು. ಇಬ್ಬರೂ ಆ ಊರಿನಲ್ಲಿದ್ದ ಕುಬೇರನೆಂಬವನ ಮಗಳನ್ನು ಮೋಹಿಸಿದ ತಪ್ಪಿಗಾಗಿ ದೇಶಭ್ರಷ್ಟರಾಗುತ್ತಾರೆ. ಮಹಾಬಲನೆಂಬ ಜೈನಋಷಿ ಇವರಿಗೆ ಉಪದೇಶಮಾಡಿ ದೀಕ್ಷೆಕೊಡುತ್ತಾನೆ. ಮೂರು ಜನ್ಮಗಳು ಕಳೆದ ಬಳಿಕ ಕಾಶೀವಿಷಯದ ವಾರಣಾಸೀಪುರವನ್ನು ಆಳುತ್ತಿದ್ದ ದಶರಥನಿಗೆ ಇವರು ರಾಮಲಕ್ಷ್ಮಣರೆಂಬ ಮಕ್ಕಳಾಗಿ ಹುಟ್ಟಿದರು. ದಶರಥನು ರಾಜಧಾನಿಯನ್ನು ಸಾಕೇತಪುರಕ್ಕೆ ಬದಲಾಯಿಸಿದನು; ಅಲ್ಲಿಯೇ ಭರತ ಶತ್ರುಘ್ನರ ಜನನವಾಗುತ್ತದೆ. ಇತ್ತ ಮಿಥಿಲೆಗೆ ರಾಜನಾದ ಜನಕನಿಗೂ ಅವನ ಹೆಂಡತಿ ವಸುಧಾದೇವಿಗೂ ಒಂದು ಹೆಣ್ಣುಮಗು ಸಿಕ್ಕುತ್ತದೆ. ಅದಕ್ಕೆ ಸೀತೆ ಎಂದು ನಾಮಕರಣವಾಯಿತು.

ಲಂಕಾಧಿಪತಿಯಾದ ಪುಲಸ್ತ್ಯನಿಗೂ ಅವನ ಹೆಂಡತಿ ಮೇಘಶ್ರೀಗೂ ರಾವಣನು ಸೌಧರ್ಮಕಲ್ಪದಿಂದ ಬಂದು ಮಗನಾದನು. ಒಮ್ಮೆ ತಪಸ್ಸುಮಾಡುತ್ತಿದ್ದ ಮಣಿಮತಿ ಎಂಬುವಳನ್ನು ರಾವಣನು ಕಂಡು ಮೋಹಿಸಲು ಅವಳು ಕುಪಿತಳಾಗಿ ಅವನನ್ನು ಕೊಲ್ಲಬೇಕೆಂದು ಸಂಕಲ್ಪಿಸಿ ಮಂಡೋದರಿಯ ಗರ್ಭವನ್ನು ಹೊಕ್ಕು ಮಗಳಾಗಿ ಹುಟ್ಟಿದಳು. ಈ ಕೂಸು ಹುಟ್ಟುತ್ತಲೇ ಅನೇಕ ಅಪಶಕುನಗಳಾದುವು. ಮಂಡೋದರಿ ಹೆದರಿ ಅದನ್ನು ಪೆಟ್ಟಿಗೆಯಲ್ಲಿ ಹಾಕಿ ಮುಚ್ಚಿಟ್ಟು ಮಾರೀಚನ ಕೈಗೆ ಕೊಟ್ಟು, ಇದನ್ನು ಎಲ್ಲಿಯಾದರೂ ದೂರ ಎಸೆದು ಬಾಯೆಂದು ಹೇಳಿಕಳುಹಿಸಿದಳು. ಅವನು ಮಿಥಿಲೆಗೆ ಸಮೀಪವಾಗಿರುವ ಒಂದು ತೋಟದಲ್ಲಿ ಆ ಪೆಟ್ಟಿಗೆಯನ್ನು ಹೂತಿಟ್ಟು ಹೊರಟುಹೋದನು. ಯಜ್ಞಕ್ಕಾಗಿ ಭೂಶೋಧನೆಮಾಡಿಸುತ್ತಿದ್ದ ಜನಕನಿಗೆ ಅದು ಸಿಕ್ಕಿತು; ಅದರಲ್ಲಿದ್ದ ಮಗು ಇನ್ನೂ ಬದುಕಿತ್ತು. ಈ ಮಗುವೇ ಸೀತೆ.

ರಾಮನಿಗೂ ಸೀತೆಗೂ ವಿವಾಹವಾಗುತ್ತದೆ. ಲಕ್ಷ್ಮಣ ಸೀತೆಯರೊಡನೆ ರಾಮನು ವಾರಣಾಸೀಪುರಕ್ಕೆ ಬಂದು ಅಲ್ಲಿ ಕೆಲವುಕಾಲ ವಿನೋದದಿಂದ

ಇರುತ್ತಾನೆ. ನಾರದನು ರಾವಣನ ಬಳಿಗೆ ಹೋಗಿ ಸೀತೆಯ ಸೌಂದರ್ಯವನ್ನು ವರ್ಣಿಸಿ ಅವನಿಗೆ ಸಮ್ಮೋಹವನ್ನುಂಟುಮಾಡುವನು. ರಾವಣನು ಶೂರ್ಪನಖಿಯನ್ನು ಕರೆದು ಸೀತೆಯ ಮನಸ್ಸನ್ನು ತಿಳಿದುಕೊಂಡು ಬರುವಂತೆ ಆಜ್ಞಾಪಿಸಲು ಅವಳು ವಾರಣಾಸಿಯ ಹತ್ತಿರ ಇದ್ದ ಚಿತ್ರಕೂಟೋದ್ಯಾನಕ್ಕೆ ಬಂದು ಅಲ್ಲಿ ರಾಮನೊಡನೆ ವಿಹರಿಸುತ್ತಿದ್ದ ಸೀತೆಯನ್ನು ನೋಡಿ ಮುದುಕಿಯ ವೇಷ ಹಾಕಿಕೊಂಡು ಅವಳೊಡನೆ ಮಾತಾಡಿ ಪ್ರಯೋಜನವಾಗದೆ ತಿರಸ್ಕೃತಳಾಗಿ ಹಿಂದಕ್ಕೆ ಹೊರಟುಬಂದಳು. ರಾವಣನೇ ಅಲ್ಲಿಗೆ ಬಂದನು; ತನ್ನ ಮಾಯೆಯಿಂದ ಮಾರೀಚನನ್ನು ಮಣಿಹರಿಣಪೋತಕವನ್ನಾಗಿ ಮಾಡಿ ಸೀತೆಯ ಎದುರಿನಲ್ಲಿ ಸುಳಿಯುವಂತೆ ಬಿಟ್ಟನು. ರಾಮನು ಅದನ್ನು ಅಟ್ಟಿಕೊಂಡು ಬಹುದೂರ ಸಾಗಿ ಹೋಗುತ್ತಲು ರಾವಣನು ಮಾಯಾವಿದ್ಯೆಯಿಂದ ರಾಮನ ಆಕಾರವನ್ನು ಹೊಂದಿ, ಪುಷ್ಪಕವಿಮಾನವನ್ನು ಪಲ್ಲಕ್ಕಿಯಾಗಿ ಮಾರ್ಪಡಿಸಿಕೊಂಡು, ಅಶ್ವಾರೂಢನಾಗಿ ಬಂದು "ಸೀತೆ, ಸಾಯಂಕಾಲವಾಯಿತು; ನಡೆ, ಪಟ್ಟಣಕ್ಕೆ ಹೋಗೋಣ" ಎಂದು ಪಲ್ಲಕ್ಕಿಯನ್ನು ಹತ್ತುವಂತೆ ಮಾಡಿ ಲಂಕಾನಗರಿಗೆ ಅಪಹರಿಸಿಕೊಂಡುಹೋದನು. ಆಮೇಲೆ ಸೀತೆಗೆ ಎಲ್ಲ ವಿಷಯವನ್ನೂ ತಿಳಿಯಪಡಿಸಿ ತನ್ನನ್ನು ಸ್ವೀಕರಿಸುವಂತೆ ಅವನು ಒತ್ತಾಯಪಡಿಸುವನು. ಸೀತೆ ರಾಮನ ಯೋಗಕ್ಷೇಮ ತಿಳಿಯುವವರೆಗೂ ಅನಶನವ್ರತವನ್ನು ಹಿಡಿಯುತ್ತಾಳೆ.

ರಾಮಲಕ್ಷ್ಮಣರು ಸೀತೆಯನ್ನು ಹುಡುಕಿಕೊಂಡು ಬರುವಾಗ ಸುಗ್ರೀವ ಆಂಜನೇಯರ ಸ್ನೇಹವಾಗುತ್ತದೆ. ಲಕ್ಷ್ಮಣನು ವಾಲಿಯನ್ನು ಕೊಲ್ಲುತ್ತಾನೆ. ಹನುಮಂತನು ಸೀತಾನ್ವೇಷಣಮಾಡಿಕೊಂಡು ಬರುವನು. ಈ ನಡುವೆ ಮಂಡೋದರಿ ಏನೋ ಅಜ್ಞಾತವಾದ ಹೃದಯವಾಣಿಯಿಂದ ಸೀತೆ ತನ್ನ ಪರಿತ್ಯಕ್ತಪುತ್ರಿ ಎಂದು ತಿಳಿದು ರಾಮನಿಗೆ ಅವಳನ್ನು ಒಪ್ಪಿಸಿಬಿಡಬೇಕೆಂದು ರಾವಣನಿಗೆ ಬುದ್ಧಿ ಹೇಳುತ್ತಾಳೆ. ಅದು ವ್ಯರ್ಥವಾಗುತ್ತದೆ. ವಿಭೀಷಣನು ರಾಮನ ಕಡೆ ಸೇರುತ್ತಾನೆ. ಯುದ್ಧ ನಡೆಯಲೇ ಬೇಕಾಗುವುದು. ರಾವಣನು ಯುದ್ಧಭೂಮಿಗೆ ಬರುವಂತೆ ಮಾಡುವುದಕ್ಕಾಗಿ ಹನುಮಂತನು ಲಂಕಾದಹನಮಾಡುತ್ತಾನೆ. ಆದರೆ ಅವನು ಆದಿತ್ಯಗಿರಿಯಲ್ಲಿ ನಿಯಮಸ್ಥನಾಗಿ ಅನೇಕ ಶಕ್ತಿಗಳನ್ನು ಸಂಪಾದಿಸಿದ ಬಳಿಕ ಯುದ್ಧಕ್ಕೆ ಮೈಗೊಡುತ್ತಾನೆ. ಮುಂದೆ ನಡೆಯುವ ಸಂಗ್ರಾಮದಲ್ಲಿ

ರಾವಣನು ಮಾಯಾಸೀತೆಯ ಶಿರಸ್ಸನ್ನು ಕತ್ತರಿಸುವನು. ಅದರಿಂದ ರಾಮನಿಗೆ ಬಹಳ ವ್ಯಥೆಯಾಗುವುದು. ಕೊನೆಗೆ ಲಕ್ಷ್ಮಣನು ಚಕ್ರಾಯುಧದಿಂದ ರಾವಣನನ್ನು ಕೊಲ್ಲುವನು. ವಾರಣಾಸಿಗೆ ಹಿಂದಿರುಗಿ ಬಂದು ಕೆಲವು ಕಾಲದ ಮೇಲೆ ರಾಮನು ವೈರಾಗ್ಯಹೊಂದಿ ಕೇವಲಿಯಾಗುತ್ತಾನೆ. ಲಕ್ಷ್ಮಣನು ಪಂಕಪ್ರಭೆಯೆಂಬ ನರಕಕ್ಕೆ ಹೋಗುತ್ತಾನೆ.

ಈ ಕಥೆಯನ್ನು ಕೆಲವು ಕವಿಗಳು ತೆಗೆದುಕೊಂಡು ಪ್ರತಿಪಾದನೆ ಮಾಡಿದ್ದಾರೆ. ಪ್ರಾಕೃತದಲ್ಲಿ ಇಂಥ ಕಥೆ ಬೇರೆ ಇರುವಂತೆ ಖಂಡಿತವಾಗಿ ಗೊತ್ತಾಗಿಲ್ಲವಾದರೂ ಕ್ರಿ. ಶ. ೯೬೫ ರಲ್ಲಿ 'ತಿಸಟ್ಠಿಮಹಾಪುರಿಸ ಗುಣಾಲಂಕಾರ'ವನ್ನು ಬರೆದ ಪುಷ್ಪದಂತನು ಇದೇ ಕಥೆಯನ್ನೇ ಬರೆದಿದ್ದಾನೆ. ಅವನು 'ಉತ್ತರ ಪುರಾಣ'ವನ್ನು ಅನುಸರಿಸಿದ್ದಾನೆ. ರಾಮಚಂದ್ರ ಮುಮುಕ್ಷುವಿನಿಂದ ಕ್ರಿ. ಶ. ೧೩೩೧ ಕ್ಕಿಂತ ಹಿಂದೆ ರಚಿತವಾದ ಸಂಸ್ಕೃತ 'ಪುಣ್ಯಾಸ್ರವ ಕಥಾಸಾರ'ದಲ್ಲಿ ಬರುವ ರಾಮಾಯಣದ ಕಥೆ ಸ್ವಲ್ಪ ಮಟ್ಟಿಗೆ ಹೀಗೆಯೇ ಇದೆ. ಕೃಷ್ಣಕವಿ ಕ್ರಿ. ಶ. ೧೫೨೮ ರಲ್ಲಿ 'ಪುಣ್ಯಚಂದ್ರೋದಯ ಪುರಾಣ' ಎಂಬ ಕಾವ್ಯವನ್ನು ಸಂಸ್ಕೃತದಲ್ಲಿ ಬರೆದಿರುವನು. ಶ್ರೀಮಾನ್ ರಾಜೇಂದ್ರ ಲಾಲಮಿತ್ರರು ಕೊಟ್ಟಿರುವ ಅದರ ಕಥಾಸಂಗ್ರಹವನ್ನು ನೋಡಿದರೆ[14] ಅದು ಈ ಸಂಪ್ರದಾಯಕ್ಕೆ ಸೇರಿದ್ದೆಂದು ಹೇಳಬಹುದು. ಕನ್ನಡ ಸಾಹಿತ್ಯದಲ್ಲಿನ 'ಚಾವುಂಡರಾಯಪುರಾಣಾ'ಂತರ್ಗತವಾದ ರಾಮಕಥೆಯೂ ನಾಗರಾಜನ 'ಪುಣ್ಯಾಸ್ರವ'ದಲ್ಲಿರುವ ರಾಮಾಯಣವೂ ಈ ಪಂಗಡಕ್ಕೆ ಸೇರಿವೆ. ಈ ಉಪಶಾಖೆಯ ಪಟ್ಟಿ ಮುಂದಿನ ಪುಟದಲ್ಲಿ ಕಾಣಿಸಿದಂತಿದೆ :—[15]

ಇವೆರಡು ಸಂಪ್ರದಾಯಗಳಿಗೂ ಸೇರದ ಇನ್ನೂ ಕೆಲವು ಜೈನ ರಾಮಾಯಣಗಳಿರುವಂತೆ ಕಾಣುತ್ತದೆ. "ಸಕಲ ಜಿನಶಾಸ್ತ್ರ ಕಥೆಗಳಂ ಸಂಬಂಧಿಸಿ" 'ರಾಮಕಥಾವತಾರ'ವನ್ನು ಬರೆದ ದೇವಚಂದ್ರನ ಹೇಳಿಕೆ ಈ ಊಹೆಗೆ ಅವಕಾಶವನ್ನು ಕಲ್ಪಿಸಿದೆ. ಬಂಧುವರ್ಮನ 'ಜೀವಸಂಬೋಧನೆ'ಯಲ್ಲಿರುವ ರಾವಣನ ಕಥೆ ಯಾವ ಪಂಗಡಕ್ಕೆ ಸೇರಿದ್ದೋ ಗೊತ್ತಾಗುವುದಿಲ್ಲ.

---

14 *N. S. M.*, VI, 70–74.

15 ಈ ಪಟ್ಟಿಯೂ ಹಿಂದೆ ಕೊಟ್ಟಿರುವುದೂ ಸಮಗ್ರವಾಗಿವೆಯೆಂದು ಹೇಳಲಾರೆವು.

‘ ಉತ್ತರ ಪುರಾಣ ’ದ ರಾಮಕಥೆ

(ಗುಣಭದ್ರ)

ಪ್ರಾಕೃತ

೧. ‘ ತಿಸಟ್ಠಿಮಹಾಪುರಿಸ ಗುಣಾಲಂಕಾರ ’ದಲ್ಲಿರುವ ರಾಮಕಥೆ ? (ಪುಷ್ಪದಂತ)

ಸಂಸ್ಕೃತ

೧. ‘ ಪುಣ್ಯಾಸ್ರವ ’ ? (ರಾಮಚಂದ್ರ ಮುಮುಕ್ಷು)
೨. ‘ ಪುಣ್ಯಚಂದ್ರೋದಯ ಪುರಾಣ’ (ಕೃಷ್ಣಕವಿ)

ಕನ್ನಡ

೧. ‘ ಚಾವುಂಡರಾಯ ಪುರಾಣ’ದ ರಾಮಕಥೆ
೨. ‘ ಪುಣ್ಯಾಸ್ರವ ’ದಲ್ಲಿರುವ ಕಥೆ (ನಾಗರಾಜ)

ಮೇಲೆ ಕೊಟ್ಟಿರುವ ಕಥಾಸಂಗ್ರಹವು ಎರಡು ಸಂಪ್ರದಾಯಗಳೂ ಬೇರೆ ಬೇರೆ ಎಂಬುದನ್ನು ತೋರಿಸುತ್ತದೆ. ಇಲ್ಲಿ ಸೀತೆ ಮಂಡೋದರಿಯ ಮಗಳು. ‘ ಅದ್ಭುತರಾಮಾಯಣ ’ದಲ್ಲಿಯೂ ಹೀಗೆ ಇದ್ದರೂ ಗುಣಭದ್ರನು ಆ ಕಥೆಯನ್ನು ಮಾರ್ಪಡಿಸಿಕೊಂಡಿದ್ದಾನೆಂದು ಹೇಳಲಾಗುವುದಿಲ್ಲ; ಸೀತೆ ಮಂಡೋದರಿಯ ಮಗಳೆಂದು ಹೇಳುವ ಕಥೆಗಳು ಭರತಖಂಡದ ಸಾಹಿತ್ಯದಲ್ಲಿ ಹೇರಳವಾಗಿವೆ.[16] ಈ ಕಥೆಯಲ್ಲಿ ದಶರಥನ ರಾಜಧಾನಿ ವಾರಣಾಸಿ; ಸೀತಾಪಹರಣವಾದದ್ದು ಆ ನಗರದ ಸಮೀಪದ ಉದ್ಯಾನದಲ್ಲಿ. ‘ ದಶರಥ ಜಾತಕ ’ದಲ್ಲಿ ಸೀತಾಹರಣವಿಲ್ಲದಿದ್ದರೂ ಸನ್ನಿವೇಶಗಳು ಹೀಗೆಯೇ ಇವೆ. ಆದ್ದರಿಂದ ಇದರಲ್ಲಿ ಬೌದ್ಧಕಥೆಯ ಪ್ರಭಾವವೇನಾದರೂ ಸೇರಿಕೊಂಡಿದೆಯೆ? ಸುವರ್ಣಮೃಗದ ವೃತ್ತಾಂತವೂ ವಾಲಿವಧೆಯೂ ಮಾಯಾಸೀತೆಯ ಶಿರಸ್ಸನ್ನು ಕತ್ತರಿಸುವುದೂ ‘ ವಾಲ್ಮೀಕಿ ರಾಮಾಯಣ ’ದ ಕಡೆಗೆ ಕೈತೋರಿಸುತ್ತಿವೆ. ಈ ಕಾರಣಗಳಿಂದ ಗುಣಭದ್ರನ ಸಂಪ್ರದಾಯಕ್ಕೆ ಯಾವ ಒಂದು ರಾಮಾಯಣವನ್ನೂ ಮೂಲವೆಂದು ಹೇಳುವ ಹಾಗಿಲ್ಲ. ಅದು ಹಲವು ರಾಮಕಥೆಗಳು ಸಮ್ಮಿಶ್ರವಾದ ಕಲಸುಮೇಲೋಗರವೆಂದು ಕಾಣುತ್ತದೆ. ವಿಮಲಸೂರಿಯ ಕಥೆಗೂ ಇದಕ್ಕೂ ಚಿಲ್ಲರೆ ವಿಷಯಗಳನ್ನು ಬಿಟ್ಟರೆ ಇರುವ ಮುಖ್ಯ ಸಾಮ್ಯಗಳು ಎರಡೇ ; ಹರಿಷೇಣನ ಕಥೆಯೂ ಯಜ್ಞಯಾಗಾದಿಗಳ ಪ್ರಭಟನೆಯೂ ಎರಡರಲ್ಲಿಯೂ ಬರುತ್ತವೆ.

[16] Winternitz, *H. I. L.*, ii. 494, n. 4.

ಸಾಹಿತ್ಯದೃಷ್ಟಿಯಿಂದ ಗುಣಭದ್ರನ ಕಥೆ ನೀರಸವಾದುದು; ಅದರಲ್ಲಿ ಯಾವ ಬಗೆಯ ಉತ್ಕೃಷ್ಟಕಲೆಯೂ ಕಾಣುವುದಿಲ್ಲ. ವಿಮಲಸೂರಿಯ ಕಥೆ, ಅನೇಕ ಸುಂದರ ಸನ್ನಿವೇಶಗಳನ್ನೊಳಕೊಂಡು ರಮಣೀಯವಾಗಿದೆ; ಕವಿಗಳ ಮೆಚ್ಚಿಕೆಗೆ ಹೆಚ್ಚು ಪಾತ್ರವಾಗಿದೆ, ಜನಪ್ರಿಯವಾಗಿದೆ.

೩. ವಿಮಲಸೂರಿಯ ರಾವಣ

'ಪಂಪರಾಮಾಯಣ'ವು ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದೆ ಯೆಂದು ಹಿಂದೆಯೇ ಸೂಚನೆಮಾಡಿದೆ. ನಾಗಚಂದ್ರನು ವಿಮಲಸೂರಿ ರವಿಷೇಣ ರಿಬ್ಬರ ಕಾವ್ಯಗಳನ್ನೂ[1] ಆರ್ದ್ರಹೃದಯದಿಂದ ಅಭ್ಯಾಸಮಾಡಿ ಅಲ್ಲಿಯ ರಾವಣ ಪಾತ್ರದ ರಮಣೀಯತೆಯಿಂದ ಪರವಶನಾಗಿದ್ದಾನೆ. ಅವನ ಆವೇಶಕ್ಕೆ ಆ ಕಾವ್ಯ ಪರಿಚಯವು ತಲಕಾವೇರಿ. ಪ್ರಾಚೀನರು ನಡೆದ ಮಾರ್ಗದಲ್ಲಿಯೇ ನಡೆದು ಎಡ ಯೆಡೆಯ ಸೊಗಸಿಗೆ ಹೆಚ್ಚಾಗಿ ಮನಸೋಲದೆ ಔತ್ಸುಕ್ಯದಿಂದ ಮುಂದೆ ಮುಂದೆ ಸಾಗಿ ರಾವಣಮೂರ್ತಿಯ ಸಂದರ್ಶನದಿಂದ ಪುಲಕಿತನಾಗಿ ಅವನು ಅದನ್ನೇ ವಿಶದವಾಗಿ ವರ್ಣಿಸಿದ್ದಾನೆ. "ಪಿರಿದೆನಿಸಿರ್ದ ರಾಮುಕಥೆಯಂ ಕಿಱಿದಾಗಿರೆ ದೇಸಿ ಮಾರ್ಗಮೆಂಬೆರಡಱೊಳಂ ರಸಂಬಡೆದು" ಹೇಳಿದನೆಂಬ ಅವನ ಆ ಮಾತುಗಳ ಒಳ ಅರ್ಥವು ಈಗ ಸ್ಫುರಿಸುತ್ತದೆ. ಪ್ರಕೃತ ವಿಮಲಸೂರಿಯ ಪ್ರಭಾವವೆಷ್ಟಿದೆ ಎಂಬುದನ್ನು ನೋಡೋಣ. ಇದಕ್ಕಾಗಿ ಅವನು ಚಿತ್ರಿಸಿರುವ ರಾವಣನ ಪಾತ್ರವನ್ನು ಸಮಾಲೋಚಿಸುವುದು ಆವಶ್ಯಕವಾಗಿದೆ.

ರಾವಣನು ಪ್ರಸಿದ್ಧನಾದ ತೋಯದವಾಹನನ ವಂಶದಲ್ಲಿ ಹುಟ್ಟಿದವನು. ಅವನ ಗರ್ಭಾವತರಣವಾಗುವಾಗಲೇ ಅವನ ತಾಯಿ ಕೈಕಸಿ ಕಂಡ ಶುಭ ಸ್ವಪ್ನಗಳಿಂದ ಮುಂದೆ ಹುಟ್ಟುವ ಮಗನು ವಿಶಾಲಕೀರ್ತಿಶಾಲಿಯೂ ಚಕ್ರಧರ ಸದೃಶವಿಭವವುಳ್ಳವನೂ ರಣಕೇಳಿಕಲಹಾಭಿಲಾಷೆಯುಳ್ಳವನೂ ಆಗುವನೆಂದು ತಿಳಿದು ಅವನ ತಂದೆ ರತ್ನಶ್ರವನು ಸಂತೋಷದಿಂದ ಹಿಗ್ಗುವನು. ವಿವಿಧ

[1] ನಾಗಚಂದ್ರನು ವಿಮಲಸೂರಿ ರವಿಷೇಣರಿಬ್ಬರ ಕೃತಿಗಳಲ್ಲಿ ಯಾವುದನ್ನು ಮೂಲ ವಾಗಿಟ್ಟುಕೊಂಡು ಅನುಸರಿಸಿದ್ದಾನೆ ಎಂಬ ವಿಷಯದಲ್ಲಿ ನಿಷ್ಕೃಷ್ಟವಾಗಿ ಹೇಳುವಂತಿಲ್ಲ.

ತೂರ್ಯಮಿಶ್ರವಾದ ದುಂದುಭಿಗಳ ಸಿನಾದದಿಂದ ಅವನ ಜನ್ಮೋತ್ಸವವು ರಮ್ಯವಾಯಿತು.[1] ಕ್ರಮೇಣ ಬಾಲ್ಯವನ್ನು ಕಳೆದು ಕುಮಾರಲೀಲೆಯಿಂದ ತಂದೆ ತಾಯಿಗಳ ಕಣ್ಣುಗಳಿಗೆ ಹಬ್ಬವನ್ನು ಮಾಡಿ ಸಕಲಶಾಸ್ತ್ರಪಾರಂಗತನಾಗಿ ರಾವಣನು ನವಯೌವನದಿಂದ ಪರಿಪೂರ್ಣನಾಗುವನು. ತನ್ನ ತಮ್ಮಂದಿರೊಡನೆ ತಪಸ್ಸುಮಾಡಿ ಆಕಾಶಗಾಮಿನೀವಿದ್ಯೆಯೇ ಮೊದಲಾದ ವಿದ್ಯೆಗಳನ್ನು ಸಾಧಿಸುವನು; ಚಂದ್ರಹಾಸಾಸಿಯನ್ನು ಪಡೆಯುವನು. ಈ ವೈಭವವನ್ನು ಕೇಳಿ ಮಯನು ತನ್ನ ಮಗಳಾದ ಮಂಡೋದರಿಯನ್ನು ಅವನಿಗೆ ಕೊಟ್ಟು ಮದುವೆ ಮಾಡುವನು. ತನ್ನ ಮುತ್ತಜ್ಜನಾದ ಮಾಲಿಯನ್ನು ಕೊಂದು ಲಂಕೆಯನ್ನು ಆಕ್ರಮಿಸಿಕೊಂಡಿದ್ದ ವೈಶ್ರವಣನನ್ನು ರಾವಣನು ಯುದ್ಧದಲ್ಲಿ ಸೋಲಿಸಿ ರಾಜ್ಯವನ್ನು ವಶಪಡಿಸಿಕೊಂಡು ಅವನ ಪುಷ್ಪಕವಿಮಾನವನ್ನು ಕಸಿದುಕೊಳ್ಳುವನು; ತ್ರಿಜಗದ್ಭೂಷಣವೆಂಬ ಭದ್ರಗಜದ ದರ್ಪವನ್ನಡಗಿಸುವನು; ಕೈಲಾಸ ಪರ್ವತವನ್ನು ಚಾಲಿಸಿ ಧರಣೇಂದ್ರನು ಮೆಚ್ಚಿ ಕೊಟ್ಟ ಶಕ್ತ್ಯಾಯುಧದಿಂದ ಅಪ್ರತಿಹತನಾಗುವನು. ದಿಗ್ವಿಜಯೋದ್ಯುಕ್ತನಾದ ಅವನ ಮಂಗಳಾಕಾರವನ್ನು ಕಣ್ತಣಿಯೆ ಕಂಡ ಲೋಕದ ಜನಗಳು ಆ ರಾವಣನ "ಪಚ್ಚೆಯ ಮಣಿಯ ಕಿರಣಗಳಂತಿರುವ ಶ್ಯಾಮಲವರ್ಣ, ಅರಳಿದ ಕಮಲಕ್ಕೆಣೆಯಾದ ಮುಖಕಾಂತಿ, ಅಗಲವಾದ ಎದೆ, ತೋರವಾದ ಉದ್ದವಾದ ಬಾಹುಗಳು, ಹಿಡಿನಡು, ಸಿಂಹಕಟಿ, ಆನೆಯ ಸೊಂಡಿಲಿನಂತಿರುವ ತೊಡೆಗಳು, ಕೂರ್ಮನ ಪಾದಗಳಂತಿರುವ ಚಾರು ಚರಣಗಳು, ಮೂವತ್ತೆರಡು ಶುಭರಾಜಲಕ್ಷಣಗಳು, ಶ್ರೀವತ್ಸಲಾಂಛನದಿಂದ ಮುಂಡಿತವಾದ ಸರ್ವಾಲಂಕಾರಭೂಷಿತವಾದ ಶರೀರ"—ಇವನ್ನೆಲ್ಲ ನೋಡಿ ಇಂದ್ರನ ಹಾಗೆ ಮಹರ್ಧಿಸಂಪನ್ನನೆಂದು ಹೊಗಳುವರು.[2] ಯುದ್ಧವು ಕ್ರೂರ ಕರ್ಮವೆಂದು ಪರಿಗಣಿತವಾದರೂ ದಶಾನನು ಕೈಕೊಂಡ ಆ ಜೈತ್ರಯಾತ್ರೆಯಲ್ಲಿ ರಾಜರು ಸೋತು ಅವನಿಗೆ ಶರಣಾಗತರಾಗುತ್ತಾರೆಯೇ ವಿನಾ ಅವನ ಕೈಯಿಂದ ಒಬ್ಬರೂ ಮಡಿಯುವುದಿಲ್ಲ. ಇದಕ್ಕೆ ಕಾರಣ ಅವನ ದಯಾಲು ಸ್ವಭಾವ. ಮಾಹಿಷ್ಮತೀಪುರಕ್ಕೆ ಒಡೆಯನಾದ ಸಹಸ್ರಬಾಹುವನ್ನು ರಾವಣನು

[1] ಇದಕ್ಕೂ ಇನ್ನು ಮುಂದೆ ಬರುವ ಸಂಖ್ಯೆಗಳಿಗೂ ಪರಿಶಿಷ್ಟವನ್ನು ನೋಡಿ. ಇಲ್ಲಿ ಕೊಟ್ಟಿರುವುದು ತಾತ್ಪರ್ಯವೇ ಹೊರತು ಪದಶಃ ಭಾಷಾಂತರವಲ್ಲ.

ಸೆರೆಹಿಡಿಯುವನು. ಅವನ ಪರವಾಗಿ ಜೈನಮುನಿಗಳು ಬಂದು ವಾದಿಸಿ ಬಿಟ್ಟು ಬಿಡೆಂದು ಹೇಳಿದಕೂಡಲೇ ರಾವಣನು ಅವರ ಮಾತನ್ನು ಮನ್ನಿಸಿ ಅವನಿಂದ ಕಪ್ಪವನ್ನು ತೆಗೆದುಕೊಂಡು ರಾಜ್ಯವನ್ನು ಒಪ್ಪಿಸಿಬಿಡುತ್ತಾನೆ. ವರುಣನು ತನ್ನ ಅಧೀನತೆಯನ್ನೊಪ್ಪದಿರಲು ದಶಮುಖನು ಅವನಮೇಲೆ ದಂಡೆತ್ತಿಹೋಗಿ ಅವನನ್ನು ನಿಗ್ರಹಿಸಿ ಕೈಸೆರೆಗೊಳ್ಳುವನು. ವರುಣನ ನಗರವೆಲ್ಲ ದುಃಖದಿಂದ ಗೋಳಿಡುತ್ತದೆ. ಅದನ್ನು ಕೇಳಿ ರಾವಣನು ಎದೆಕರಗಿ ಅವನನ್ನು ಸೆರೆಯಿಂದ ಬಿಟ್ಟು ತನ್ನ ದಯಾಲುಸ್ವಭಾವವನ್ನು ಮೆರೆಯುತ್ತಾನೆ.[3] ರಾವಣನು ಒಮ್ಮೆ ವಿಜಯಾರ್ಧ ಪರ್ವತದ ತಪ್ಪಲಲ್ಲಿ ಬೀಡುಬಿಟ್ಟಿರಲು ಆ ಪ್ರಾಂತಕ್ಕೆ ಒಡೆಯನಾದ ಇಂದ್ರನು ಕುಪಿತನಾಗಿ ಅವನನ್ನು ಕಾಳಗದಲ್ಲಿ ಎದುರಿಸುತ್ತಾನೆ. ರಾವಣನು ಇಂತಹ ಇಂದ್ರರನ್ನು ಬಗೆಯುವವನಲ್ಲ. ಕೂಡಲೆ ಅವನನ್ನಡಸಿ ಕಟ್ಟಿ ತನ್ನ ಸಾಟಿಯಿಲ್ಲದ ಶೌರ್ಯವನ್ನು ಪ್ರಕಟಿಸುತ್ತಾನೆ. ಆ ಇಂದ್ರನ ತಂದೆ ಸಹಸ್ರಾರನು ಮಗನ ಮೇಲಿನ ಮೋಹದಿಂದ ಬಂದು ಬೇಡಿಕೊಳ್ಳುತ್ತಾನೆ. ಅವನ ದೈನ್ಯವನ್ನೂ ಮಗನ ಮೇಲಣ ಪ್ರೀತಿಯನ್ನೂ ನೋಡಿ ರಾವಣನು ಇಂದ್ರನನ್ನು ಬಿಟ್ಟು ಅವನ ರಾಜ್ಯದಲ್ಲಿ ಅವನನ್ನು ನಿಲ್ಲಿಸುತ್ತಾನೆ. ಹೀಗೆ ರಾವಣನು ವಿಜಯಯಾತ್ರೆಯನ್ನು ಕೈಕೊಂಡದ್ದು ಲೋಕಕಂಟಕನಾಗಬೇಕೆಂಬ ಬಯಕೆಯಿಂದಲ್ಲ, ತನ್ನ ಪೌರುಷವನ್ನು ಸಾರ್ಥಕಗೊಳಿಸುವುದಕ್ಕಾಗಿ. ಅವನು ಹೋದೆಡೆಯಲ್ಲೆಲ್ಲ ತನ್ನ ದಯೆಯನ್ನೂ ಕ್ಷಮಾಗುಣವನ್ನೂ ತೋರಿಸುವನು. ಜಿನಗೃಹವನ್ನಾಗಲಿ ಜೈನಮುನಿಗಳನ್ನಾಗಲಿ ಕಂಡರೆ ಭಕ್ತಿಯಿಂದ ವಿನಮ್ರನಾಗುವನು; ಹರಿಷೇಣನೆಂಬ ಮುನಿಯ ಪುಣ್ಯಚರಿತ್ರೆಯನ್ನು ಆದರದಿಂದ, ಕುತೂಹಲದಿಂದ, ಕೇಳಿ ಪರಿತುಷ್ಟನಾಗಿ ಸಿದ್ಧರಿಗೆ ನಮಸ್ಕಾರಮಾಡುವನು.

ಇವೆಲ್ಲಕ್ಕಿಂತಲೂ ಹೆಚ್ಚಾಗಿ ಆ ವಿಜಯ ಪ್ರಯಾಣದಲ್ಲಿ ರಾವಣನ ಶುಚಿತ್ವವನ್ನು ಪ್ರಕಟಿಸಬೇಕೆಂದೇನೋ ಒಂದು ಅಪೂರ್ವ ಸನ್ನಿವೇಶವು ಅನಿರೀಕ್ಷಿತವಾಗಿ ಬಂದೊದಗಿತು. ಅಷ್ಟಾಪದಶೈಲದ ಕಟಕ ಪ್ರದೇಶದಲ್ಲಿ ರಾವಣನ ಪಾಳೆಯವಿದೆ. ಅದರ ಹತ್ತಿರದಲ್ಲೇ ದುರ್ಲಂಘ್ಯಪುರವೆಂಬ ಒಂದು ಊರು. ಅದಕ್ಕೆ ಒಡೆಯನು ಇಂದ್ರನ ಲೋಕಪಾಲಕನಾದ ನಲಕೂಬರನು. ರಾವಣನು ಬಂದ ಸುದ್ದಿಯನ್ನು ಕೇಳಿ ಅವನು ಮಣಿಯದೆ ಉರಿಯನ್ನು ಕಾರುವ ಯಂತ್ರಗಳಿಂದ ತನ್ನ ಕೋಟೆ

ಕೊತ್ತಲಗಳನ್ನು ಭದ್ರಪಡಿಸಿಕೊಂಡನು. ಅದನ್ನು ಮುತ್ತುವ ಉಪಾಯವಾವುದೆಂದು ರಾವಣನು ಮಂತ್ರಿಗಳೊಡನೆ ಆಲೋಚನೆಯಲ್ಲಿ ಮಗ್ನನಾಗಿದ್ದಾನೆ. ಆ ಹೊತ್ತಿಗೆ ಸರಿಯಾಗಿ ನಲಕೂಬರನ ಹೆಂಡತಿ ಉಪರಂಭೆ ಅಟ್ಟಿದ ಚಿತ್ರಮಾಲೆಯೆಂಬ ದೂತಿ ಅಲ್ಲಿಗೆ ಬರುತ್ತಾಳೆ.

ದೂತಿ :—(ರಾವಣನಿಗೆ ಪ್ರಣಾಮವನ್ನು ಮಾಡಿ) ನಲಕೂಬರನ ಹೆಂಡತಿ ಉಪರಂಭೆ ವಿಖ್ಯಾತಳು. ನನ್ನನ್ನು ನಿಮ್ಮ ಬಳಿ ಕಳಿಸಿದ್ದಾಳೆ. ನಿಮ್ಮನ್ನು ನೋಡಬೇಕೆಂದು ಬಹುದಿನಗಳಿಂದ ಉತ್ಸುಕಹೃದಯಳಾಗಿದ್ದಾಳೆ. ಯಾವಾಗಲೂ ನಿಮ್ಮಲ್ಲಿಯೇ ಅವಳ ಪ್ರೇಮಚಿಂತೆ. ದಯವಿಟ್ಟು ಒಂದುಸಲ ಅವಳಿಗೆ ನಿಮ್ಮ ದರ್ಶನಮಾಡಿಸಿ, ಕರುಣಿಸಿ.

ರಾವಣ :—(ಎರಡು ಕಿವಿಗಳನ್ನೂ ಮುಚ್ಚಿಕೊಂಡು, ಮನಸ್ಸಿನಲ್ಲಿ) ದೃಢಶೀಲಯುಕ್ತನಾದ ನಾನು ಈ ಕಾರ್ಯವನ್ನು ಮಾಡಲೆ? ಎಷ್ಟೇ ರೂಪವಂತಳಾಗಿರಲಿ ವೇಶ್ಯೆಯನ್ನೇ ಕಣ್ಣೆತ್ತಿ ನೋಡದ ನಾನು ಪರಮಹಿಳೆಯನ್ನು ಬಯಸುವುದೆ? ಈ ಪಾಪಕೃತ್ಯ ಇಹಪರಲೋಕಗಳಿಗೆ ವಿರುದ್ಧ. ಎಂಜಲಂತೆ ಪರಸ್ತ್ರೀ ವರ್ಜನೀಯಳು.[4] (ಎಂದು ಯೋಚಿಸಿ, ಮಂತ್ರಿಗಳೊಡನೆ ಪಿಸುಮಾತಾಡಿ) ದೂತೀ, ಆಗಬಹುದು, ನಿನ್ನೊಡತಿಯನ್ನು ಕರೆದುಕೊಂಡು ಬಾ. (ಅವಳು ಹೋಗುವಳು).

ಉಪರಂಭೆ ಬಹಳ ಉತ್ಕಂಠತೆಯಿಂದ ಬರುತ್ತಾಳೆ.

ರಾವಣ :—(ಹುಸಿಯೊಲುಮೆಯಿಂದ)—ಭದ್ರೇ, ಬಂದೆಯಾ! ಸಂತೋಷ. ಕುಳ್ಳಿರು. ದೂತಿಯಿಂದ ಎಲ್ಲ ತಿಳಿಯಿತು. ಆದರೆ ಈ ರಣಭೂಮಿಯಲ್ಲಿ, ಈ ಗದ್ದಲದಲ್ಲಿ ಎಲ್ಲಿ ಅವಕಾಶ? ನಿಮ್ಮ ಊರು ಆ ದುರ್ಲಂಘ್ಯಪುರ, ಅಲ್ಲಾಗಲಿ.

ಉಪರಂಭೆ ಈ ಮಾತುಗಳನ್ನು ನಿಜವೆಂದೇ ನಂಬುತ್ತಾಳೆ. ಮದನಾತುರಳಾದ ಅವಳು ಅವನಿಗೆ ಸಾಲಭಂಜಿನೀವಿದ್ಯೆಯನ್ನು ಉಪದೇಶಮಾಡುತ್ತಾಳೆ. ಅದರ ಸಹಾಯದಿಂದ ಅವನು ಕೋಟೆಯನ್ನೊಡೆದು ಮಲೆತು ಬಂದ ನಲಕೂಬರನನ್ನು ಸೋಲಿಸಿ ಸೆರೆಹಿಡಿಯುವನು. ಅನಂತರ ಉಪರಂಭೆಯ ಬಳಿಗೆ ಬಂದು "ತಾಯಿ, ನನಗೆ ಗುರು ನೀನು. ವಿದ್ಯೋಪದೇಶಮಾಡಿದ್ದೀಯೆ. ಉತ್ತಮಕುಲದಲ್ಲಿ ಹುಟ್ಟಿ ಈ ರೀತಿ ನಡೆಯಬಾರದು. ಕಾಶಧ್ವಜನ ಮಗಳು ಶೀಲವನ್ನು

ಕಾಪಾಡಿಕೊಳ್ಳಬೇಕು. ನಿನ್ನ ಪತಿ ಇನ್ನೂ ಇದ್ದಾನೆ; ಸುಂದರ. ಅವನೊಡಗೂಡಿ ಸುಖವನ್ನು ಹೊಂದು" ಎಂದು ಹೇಳಿ ಅವನು ನಲಕೂಬರನನ್ನು ಮನ್ನಿಸಿ ರಾಜ್ಯವನ್ನು ಕೊಡುತ್ತಾನೆ. ರಾವಣನು ಎಂತಹ ವಿವೇಕಶಾಲಿ! ಎಂತಹ ಸನ್ನಿವೇಶದಿಂದ ಎಳ್ಳಷ್ಟೂ ಕಳಂಕಿತನಾಗದೆ ಪಾರಾದನು! ಇಂದು ಅವನ ಸತ್ವಪರೀಕ್ಷೆ ಆಯಿತು. ಅದರಲ್ಲಿಯೂ ಅವನು ಜಯವನ್ನು ಹೊಂದಿ ಪ್ರಹೃಷ್ಟನಾಗಿ ಸೈನ್ಯದೊಡನೆ ನಡೆದು ನಾಡುನಾಡಿನ ದೊರೆಗಳನ್ನು ಗೆದ್ದು ಅನಂತವೀರ್ಯ ಕೇವಲಿಗಳು ತಪಸ್ಸುಮಾಡುತ್ತಿದ್ದ ಪ್ರದೇಶಕ್ಕೆ ಬರುತ್ತಾನೆ. ಆ ಯತಿಪತಿಗಳನ್ನು ನೋಡುತ್ತಲೇ ಅವನು ಅವರಿಗೆ ಸಾಷ್ಟಾಂಗ ಪ್ರಣಾಮಮಾಡಿ "ಸ್ವಾಮಿ, ಜೀವಹಿತವಾದ ಧರ್ಮಸ್ವರೂಪವನ್ನು ನನಗೆ ತಿಳಿಸಿ" ಎಂದು ವಿನಯದಿಂದ ಕೇಳುವನು. ಇಂಥ ಶಿಷ್ಯ ಸಿಕ್ಕಿದನಲ್ಲ ಎಂದು ಅವರೂ ಪ್ರಸನ್ನರಾಗಿ ಧರ್ಮದ ಮೇಲೆ ಒಂದು ಉಪನ್ಯಾಸ ಮಾಡಿ, "ರಾವಣ, ರತ್ನದ್ವೀಪದಲ್ಲಿ ರತ್ನಗಳನ್ನಾರಿಸಿ ಕೊಳ್ಳುವಂತೆ ಪಂಚಾಣುವ್ರತಗಳಲ್ಲಿ ಯಾವುದಾದರೂ ಒಂದನ್ನು ತೆಗೆದುಕೊ" ಎಂದು ಹೇಳುವರು. ಬಹುಶಃ ಹಿಂದಿನ ಘಟನೆಯನ್ನು ಸ್ಮರಿಸಿಕೊಂಡ ರಾವಣನು 'ಭಗವಾನ್, ಮುನಿಗಳ ಚರ್ಯೆ ದುಷ್ಕರವಾದುದು. ನನ್ನಿಂದ ಅದು ಸಾಧ್ಯವಿಲ್ಲ. ಆದರೂ ಪರಮಹಿಲಾವಿರತಿ ವ್ರತವನ್ನು ಕೈಕೊಳ್ಳುತ್ತೇನೆ" ಎಂದು ಹೇಳಿ, ತನ್ನ ಮನಸ್ಸನ್ನು ಸಂಯಮಮಾಡಲು ಪ್ರಯತ್ನಪಡುತ್ತಾನೆ. ಹೀಗೆ ರಾವಣನು ಪೂರ್ವಕೃತ ಪುಣ್ಯದಿಂದ ಸಿರಿವಂತನೂ ಕೀರ್ತಿಶಾಲಿಯೂ ಲೋಕಪೂಜ್ಯನೂ ಆದನು. ಲೋಕವೆಲ್ಲ ಅವನನ್ನು ಅಭಿನಂದಿಸಿತು. "ಅವನು ಹೊಕ್ಕ ನಾಡು ಸ್ವರ್ಗಸನ್ನಿಭವಾಯಿತು; ಧನಧಾನ್ಯ ರತ್ನಪೂರ್ಣವಾಯಿತು ; ದುರ್ಭಿಕ್ಷ ಭಯಾದಿಗಳ ಹೆಸರೇ ಇಲ್ಲದೆ ಪುಣ್ಯಮಯವಾಯಿತು. ಭೂದೇವಿ ಮುಗುಳುನಗೆಯಿಂದ ಅವನಿಗೆ ಸ್ವಾಗತವನ್ನು ಕೊಡುವಳು." ಜನಾನುರಾಗಕ್ಕೆ ಪಾತ್ರನಾಗಿ ರಾವಣನು ಸುಖದಿಂದ ರಾಜ್ಯಭಾರಮಾಡುತ್ತಾನೆ. ವಿಮಲಸೂರಿಯ ಹೃದಯವೈಶಾಲ್ಯಕ್ಕೆ ಈ ಚಿತ್ರವೇ ಸಾಕು. ಅವನ ರಾವಣನು ಮಾನವಹೃದಯದ ವಿದ್ಯುಲ್ಲೇಖೆಯಿಂದ ವಿಲಸಿತನಾಗಿರುವನು. ಸೌಮ್ಯಾಕಾರ, ಸೌಜನ್ಯ, ದಯೆ, ಕ್ಷಮಾಗುಣ, ಧರ್ಮಭೀರುತ್ವ, ಗಾಂಭೀರ್ಯ—ಮುಂತಾದ ಸದ್ಗುಣಗಳು ಒಂದರೊಡನೊಂದು ಸ್ಪರ್ಧಿಸುತ್ತ ರಾವಣನನ್ನು 'ಪ್ರವರ ಪುರುಷ'ನನ್ನಾಗಿ ಮಾಡಿವೆ.

ವಿಮಲಸೂರಿ ರಾವಣನ ಉದಾತ್ತತೆಯನ್ನು ಅದ್ಭುತ ಕೌಶಲದಿಂದ ಬಣ್ಣಿಸಿ ಅವನಲ್ಲಿದ್ದ ಲೋಪವನ್ನೂ ಸೂಕ್ಷ್ಮವಾಗಿ ಸೂಚಿಸಿ ನಮ್ಮ ಗೌರವವನ್ನೂ ಸಹಾನುಭೂತಿಯನ್ನೂ ಅವನ ಕಡೆಗೆ ಹರಿಯಿಸಿದ್ದಾನೆ. ಇನ್ನು ಮೇಲೆ ಅವನ ಜೀವನದ ಮುಂದಿನ ಪ್ರಗತಿಯಲ್ಲಿ ನಾವು ಕುತೂಹಲಿಗಳಾಗುತ್ತೇವೆ; ಆ ಮಹಾವ್ಯಕ್ತಿಯ ಜೀವನ ನೌಕೆ ಸಂಸಾರಸಾಗರದ ಊರ್ಮಿಮಾಲೆಗಳಿಂದ ಪ್ರತಿಹತವಾಗಿ ಚಂಡಮಾರುತದ ಭೀಷಣ ಅಂದೋಲನದಲ್ಲಿ ಗಿರ್ರೆಂದು ಸುತ್ತಿ ಮುಳುಗುವುದನ್ನು ಎವೆಯಿಕ್ಕದ ಕಣ್ಣುಗಳಿಂದ ನೋಡಿ ಆತಂಕಗೊಳ್ಳುತ್ತೇವೆ; ಅಂಥ ಸುಸಜ್ಜಿತವಾದ ನಾವೆಯೂ ಯಾವುದೋ ಒಂದು ಅಲ್ಪದೋಷದಿಂದ ವಿಧಿಯ ಮುಸಕಕ್ಕೆ ತುತ್ತಾಗುವುದನ್ನು ನೋಡಿ ವಿಸ್ಮಿತರಾಗುತ್ತೇವೆ; ಜೀವನವು ಎಂದಿನಂತೆ ಗಭೀರವಾಗಿಯೇ ಉಳಿಯುತ್ತದೆ. ಪುಣ್ಯಾವಸಾನ ಸಮಯ ಸಮೀಪಿಸಿದರೆ ವ್ಯಕ್ತಿ ಎಷ್ಟೇ ಉದಾತ್ತನಾಗಿರಲಿ ಅವನ ವೈಭವಗಳು ಒಂದಾದಮೇಲೊಂದು "ಕಿಸುಸಂಜೆಯ ರಂಜನೆ"ಯಂತೆ ಜಾರಿ ಮಾಯವಾಗುವುವು. ರಾವಣನಿಗೂ ಅಂಥ ಕಾಲ ಬಂದೊದಗಿತು. ಅವನ ಭೋಗವಿಲಾಸಗಳು ಅವನ ಆ ಸಂಚಿತ ಪುಣ್ಯವನ್ನು ಅಳಿದಳಿದು ತವಿಸುತ್ತಿದ್ದುವು. ಜೊತೆಗೆ ದೈವವೂ ನೈಮಿತ್ತಿಕನ ಕಂಠವನ್ನಾಶ್ರಯಿಸಿ ರಾವಣನ ಮರಣ ಕಹಳೆಯನ್ನೂದಿ ಅವನೆದೆಯನ್ನು ತಲ್ಲಣಗೊಳಿಸಿತು. "ಸೀತೆಯೇ ಕಾರಣವಾಗಿ ದಾಶರಥಿಯ ಕೈಯಿಂದ ರಾವಣನು ಹತನಾಗುವನು; ಸಂದೇಹವಿನಿತಿಲ್ಲ"[7] ಎಂಬ ಆ ಆದೇಶದ ವರ್ಣಮಾಲೆ ಕಾದ ಕಬ್ಬಿಣದ ತೋರ ತೊಟ್ಟುಗಳಂತೆ ವಿಧಿಯ ವಿಕಟಕಂಠದಿಂದ ಹೊರಹೊರಟು ಅವನ ಚಿತ್ತವನ್ನು ಸುಟ್ಟಿತು. ಆ ಪರುಷ ಭವಿಷ್ಯವಾಣಿ ಅವನ ದಿಟ್ಟ ಹೃದಯವನ್ನು ಜಗ್ಗಿಸಿತು. ಆದರೆ ಅದಕ್ಕೆ ಹೆದರಿ ಕೈಕಟ್ಟಿ ಕುಳಿತುಕೊಳ್ಳುವವನಲ್ಲ ರಾವಣನು; ವಿಧಿಯನ್ನು ಮೂದಲಿಸಿ ಪುರುಷಪ್ರಯತ್ನದ ಶಕ್ತಿಯನ್ನು ಅದಕ್ಕೆ ತೋರಿಸಲು ಬಯಸುವನು; ಹತ್ತಿರದಲ್ಲಿಯೇ ನಿಂತಿದ್ದ ವಿಭೀಷಣನ ಪಟುನಯನಗಳನ್ನು ನೋಡುವನು. "ಇದಕ್ಕೇಕೆ ಇಷ್ಟು ಚಿಂತೆ! ಜನಕ ದಶರಥರನ್ನು ಕೊಂದರೆ ಅವರಿಗೆ ಮಕ್ಕಳಾಗುವ ಹಾಗೇ ಇಲ್ಲ"* ಎಂಬ

---

* . . . . ಸುಣಿಊಣ ವಿಹೀಸಣೋ ಭಣಇ ಏವಂ
ಮಾರೇಮಿ ದಸರಹಂ ತಂ ಜಾವ ಸುಓ ಸೇ ನ ಸಂಭವಇ || ಪ. ಚ. ೨೩-೪೪.

ವಿಭೀಷಣನ ಮಾತುಗಳು ಅವನ ಚಿಂತೆಯನ್ನು ತೇಲಿಸಿದುವು. ಅಣ್ಣನ ಕ್ಷೇಮಾ ಕಾಂಕ್ಷಿಯಾದ ವಿಭೀಷಣನು ಸನ್ನದ್ಧನಾಗಿ ಕೊಲೆಗೆಲಸಕ್ಕೆ ಹೊರಟನು. ಆದರೆ ವಿಧಿಯ ಬುದ್ಧಿ ಉತ್ಪಾತಕ ಬುದ್ಧಿ ! ವಿಭೀಷಣನು ಚಾಪೆಯ ಕೆಳಗೆ ನುಸಿದರೆ ಅದು ರಂಗವಲ್ಲಿಯ ಕೆಳಗೆ ನುಸಿಯುತ್ತದೆ. ಅವನಿಗಿಂತ ಮುಂಚೆಯೇ ನಾರದನ ಮೂಲಕ ಅದು ದಶರಥ ಜನಕರಿಗೆ ಈ ವಿಪತ್ತನ್ನು ತಿಳಿಸಿ ವೇಷ ಮರೆಸಿಕೊಂಡು ದೇಶಸಂಚಾರಕ್ಕೆ ಹೋಗುವಂತೆ ಮಾಡುತ್ತದೆ ; ವಿಭೀಷಣನ ಕಣ್ಣಿಗೂ ಮಂಜು ಕವಿಸುತ್ತದೆ. ಅವನು ಅವರ ಲೆಪ್ಪದ ಬೊಂಬೆಗಳನ್ನೇ ನಿಜವಾದ ದಶರಥ ಜನಕ ರೆಂದು ಭ್ರಮಿಸಿ ಅವುಗಳ ತಲೆಗಳನ್ನು ಕತ್ತರಿಸುವನು. ಲಂಕೆಗೆ ಹೋಗಿ ರಾವಣ ನಿಗೆ ಈ ಶುಭಸಮಾಚಾರವನ್ನು ತಿಳಿಸಲು ಅನಿಷ್ಟ ತೊಲಗಿತೆಂದು ಅವನು ಸಂತೋಷಗೊಳ್ಳುವನು. ಆದರೆ ವಿಧಿ ಗುಪ್ತವಾಹಿನಿಯಂತೆ ಒಳಗೊಳಗೇ ಕೊರೆಯುತ್ತಿತ್ತು. ರಾವಣನು ಕೋಲನ್ನು ಕಾಣದೆ ಹಾಲನ್ನು ಚಪ್ಪರಿಸುತ್ತಿದ್ದನು. ಬಹುಕಾಲ ಹೀಗೆ ಕಳೆಯಿತು. ಆ ನೈಮಿತ್ತಿಕಾದೇಶವೂ ಸಂಧ್ಯಾಕಾಲದ ರಕ್ತಕಿರಣದಂತೆ ಮೈದೆಗೆದು ಮರವೆಯ ತಿಮಿರದಲ್ಲಿ ಅಂತರ್ಹಿತವಾಯಿತು.

ಇತ್ತಲಾಗಿ ವಿಧಿ ಈ ಮಹಾನಾಟಕದ ಮಹಾಶಕ್ತಿಗಳನ್ನು ಸಜ್ಜುಗೊಳಿಸುತ್ತಿತ್ತು. ತಲೆ ಮರೆಸಿಕೊಂಡು ಹೋದ ದಶರಥಜನಕರು ಸುಖವಾಗಿ ತಮ್ಮ ತಮ್ಮ ಪಟ್ಟಣವನ್ನು ಸೇರಿದರು. ಕಾಲಕ್ರಮದಲ್ಲಿ ರಾಮಸೀತೆಯರ ಜನನವೂ ಆಯಿತು. ದಶರಥನು ಎಂದೋ ಕೈಕೆ ಮಾಡಿದ್ದ ಸಹಾಯಕ್ಕೆ ಮೆಚ್ಚಿ ಕೊಟ್ಟ ವರಗಳೆರಡು ಕಾಳಾಹಿಯ ನಿಶಿತ ದಂಷ್ಟ್ರಗಳಂತೆ ಅವನ ಹೃದಯವನ್ನು ಭೇದಿಸಿ ದುವು. ರಾಮನು ಕಾಡಿನಲ್ಲಿ ಅಲೆಯಬೇಕಾಯಿತು. ಸೀತೆಯೂ ಲಕ್ಷ್ಮಣನೂ ಕಸ್ತೂರಿಯ ಬಳಿಸಾರುವ ಕಂಪಿನಂತೆ ಅವನ ಜೊತೆಯಲ್ಲಿಯೇ ನಡೆದರು. ಪೂರ್ವ ಜನ್ಮ ಕೃತಾಪರಾಧವು ಅಂಥವರನ್ನೂ ಬಿಡಲಿಲ್ಲ. ಅರಣ್ಯಗಳಲ್ಲಿ ತೊಳಲಿ ಬೆಟ್ಟ ಗುಡ್ಡ ತೊರೆಗಳನ್ನು ಹಾಯ್ದು ದಂಡಕಾರಣ್ಯಕ್ಕೆ ಬಂದು ಅಲ್ಲಿ ಅವರು ಚಿರಕಾಲ ವಿಶ್ರಮಿಸಿಕೊಂಡಿರುತ್ತಾರೆ. ಆಗ ಮಳೆಗಾಲ ಮೊದಲಾಯಿತು. ವನದ ಮೆಯ್ಸಿರಿ ಯನ್ನು ನೋಡಬೇಕೆಂಬ ಅಭಿಲಾಷೆಯಿಂದ ಲಕ್ಷ್ಮಣನು ಅಲ್ಲಲ್ಲಿ ಸುಳಿಯುತ್ತಿರು ವನು. ಎಲ್ಲಿಂದಲೋ ಸುರಭಿ ಶೀತಲ ಸುಗಂಧವು ಅಲೆಯಲೆಯಾಗಿ ಬಂದು ಅವನ ನಾಸಿಕವನ್ನು ತೀಡುತ್ತದೆ. ಲಕ್ಷ್ಮಣನು ವಿಸ್ಮಿತನಾಗಿ ಆ ಕಂಪಿನ ಕುಡಿ

ಯನ್ನೇ ಹಿಡಿದು ಒಂದು ದೊಡ್ಡ ಬಿದಿರುಮೆಳೆಗೆ ಬರುತ್ತಾನೆ. ಅದರ ಬಳಿ ಸ್ವರ್ಗಸುಮಗಳಿಂದ ಸಂಪೂಜಿತವಾದ ಸೂರ್ಯಹಾಸವೆಂಬ ಖಡ್ಗವು ಕಣ್ಣು ಕೋರೈಸುವಂಥ ಪ್ರಭೆಯಿಂದ ತೊಳಗುತ್ತಿತ್ತು. ಲಕ್ಷ್ಮಣನು ಅದಕ್ಕೆ ತನ್ನ ಬಲಗೈಯನ್ನು ನೀಡಿದನು. ಅದು ಅವನ ಕೈಸೇರಿತು; ಕೂಡಲೆ ಆ ಕತ್ತಿಯನ್ನು ಬೀಸಿದನು. ಹತ್ತಿರಿದ್ದ ಬಿದಿರು ಮೆಳೆ ಕತ್ತರಿಸಿ ಬಿತ್ತು. ಅದರೊಡನೆಯೇ ಕುಂಡಲ ಮಂಡಿತವಾದ ಹುಡುಗನ ತಲೆಯೊಂದು ಪುಟನೆಗೆದು ಪತಿತವಾಯಿತು. ರಕ್ತದಲ್ಲಿ ತೊಯ್ದು ಹವಳದಂತಿದ್ದ ಒಂದು ದೇಹ ಆಗ ಕಾಣಿಸಿಕೊಂಡಿತು. ಮಾಡುವುದೇನು? ಕಾರ್ಯ ಮಿಂಚಿಹೋಯಿತು. ಆ ಹುಡುಗನು ರಾವಣನ ತಂಗಿ ಚಂದ್ರನಖಿಯ ಮಗ. ಮಗನ ಭಿನ್ನಮಸ್ತಕವನ್ನು ಕಂಡು ಚಂದ್ರನಖಿ ಹಲುಬಿದಳು; ತನ್ನ ಪತಿ ಖರದೂಷಣನಲ್ಲಿ ಮೊರೆಯಿಟ್ಟಳು. ಅವನು ಕುಪಿತನಾಗಿ ಮಗನನ್ನು ಕೊಂದವನನ್ನು ಕೊಲ್ಲುತ್ತೇನೆಂದು ಅಸ್ತ್ರಪಾಣಿಯಾಗಿ ಹೊರಟನು; ಮಂತ್ರಿಯ ಮಾತಿನಂತೆ ರಾವಣನಿಗೆ ಈ ಸುದ್ದಿಯನ್ನು ತಿಳಿಸಲು ದೂತನನ್ನಟ್ಟಿದನು. ಲಕ್ಷ್ಮಣನಿಗೂ ಖರನಿಗೂ ಆದ ಸಂಗ್ರಾಮದಲ್ಲಿ ಅಸ್ತ್ರ ಶಸ್ತ್ರ ಪ್ರಹಾರಗಳ ಮಾರ್ಮೊಳಗಿನಿಂದ ದಿಕ್ತಟಗಳು ಕ್ಷುಭಿತವಾಗುತ್ತಿದ್ದುವು.

ದೂತನ ಮಾತನ್ನು ಕೇಳಿ ಕೋಪದಿಂದ ರಾವಣನ ಬಗೆ ಕದಡಿತು; ತಂಗಿಯ ಮಗನ ಹಗೆಯನ್ನು ತೀರಿಸುತ್ತೇನೆಂದು ಪುಷ್ಪಕ ವಿಮಾನವನ್ನು ಹತ್ತಿ ಆಕಾಶದಲ್ಲಿ ತೇಲುತ್ತ ರಣಭೂಮಿಯ ಕಡೆಗೆ ಬರುವಾಗ ವಿಧಿಯೊಡ್ಡಿದ ಬಲೆಯ ಬಾಗಿಲಲ್ಲಿ ಇಣಿಕಿನೋಡಿದನು. ಮೋಹಕಾರಿಣಿಯಾದ ಸೀತೆಯ ಮಂಜುಳ ಮುಖವು ಅವನ ದೃಷ್ಟಿಯನ್ನತ್ತ ಸೆಳೆಯಿತು. "ಅಹೋ, ಏನು ಮುಖ! ಸುರಪತಿ ಮಹಿಳೆಯಂತೆ ಸರ್ವಾಂಗಸುಂದರಿ ಇವಳು. ಇವಳಿಲ್ಲದೆ ನನಗೀ ರಾಜ್ಯವೇಕೆ?"[8] ಎಂದು ರಾವಣನು ಮೋಹಕ್ಕೊಳಗಾಗಿ ಮನಸ್ಸಿನಲ್ಲಿಯೇ ಚಿಂತಿಸಿದನು. ಕೂಡಲೇ ತನ್ನ ಅವಲೋಕಿನೀವಿದ್ಯೆಯನ್ನು ಸ್ಮರಿಸಿಕೊಂಡನು. ಅದು ಸನ್ನಿಹಿತವಾಗಲು ಆ ಸುಂದರಿಯ ನಾಮಗೋತ್ರಗಳನ್ನು ವಿಚಾರಿಸಿ ತಿಳಿದನು. ರಾಮನನ್ನು ವಂಚಿಸಿ ಸೀತೆಯನ್ನು ಅವನಿಂದ ಅಗಲಿಸುವ ಉಪಾಯವೇನೆಂದು ಆ ವಿದ್ಯೆಯನ್ನು ಔತ್ಸುಕ್ಯದಿಂದ ಕೇಳಿದನು. ಲಕ್ಷ್ಮಣನು ಸಿಂಹನಾದ ಮಾಡುತ್ತಲೇ ರಾಮನು ಅವನ ಸಹಾಯಕ್ಕೆ ಹೋಗಬೇಕೆಂಬ ಪೂರ್ವಸಂಕೇತವನ್ನು ವಿದ್ಯೆ

ರಾವಣನಿಗೆ ತಿಳಿಸುತ್ತದೆ. ಆದರಂತೆ ಹೇಗಿದ್ದರೂ ಖರದೂಷಣನು ಇಬ್ಬರನ್ನೂ ಕೊಂದುಬಿಡುತ್ತಾನೆ ಎಂದು ಭಾವಿಸಿ ಲಕ್ಷ್ಮಣನ ಸ್ವರಸದೃಶವಾದ ಸಿಂಹನಾದ ವನ್ನು ಅವನು ಮಾಡಿದನು. ರಾಮನು ಅದನ್ನು ಲಕ್ಷ್ಮಣನ ಸ್ಫುಟವಿಕಟ ಸಿಂಹ ನಾದವೆಂದೇ ಬಗೆದು ಸಮಾಕುಲಮನನಾಗಿ ಸೀತೆಯನ್ನು ಜಟಾಯುವಿನ ಕಾಪಿ ನಲ್ಲಿಟ್ಟು ಕೋದಂಡಪಾಣಿಯಾಗಿ ತಮ್ಮನ ಕೆಲಕ್ಕೆ ಬಂದನು. ಆಗ ರಾವಣನು ವಿಮಾನದಿಂದ ಕೆಳಗಿಳಿದು ಕಮಲಿನಿಯನ್ನು ಕೊಂಡೊಯ್ಯುವ ಮತ್ತಗಜದಂತೆ ಸೀತೆಯನ್ನು ಅಪಹರಿಸಿದನು. ಸ್ವಾಮಿಗೃಹಿಣಿಯ ಸಂಕಟವನ್ನು ನೋಡಿ ಜಟಾಯು ರಾವಣನನ್ನು ಅಡ್ಡಗಟ್ಟುತ್ತದೆ. ಆದರೆ ರಾವಣನು ಇಂಥದ್ದನ್ನೆಲ್ಲ ಲಕ್ಷ್ಯಮಾಡುವನೆ? ಆ ಪಕ್ಷಿ ಅವನ ಕರಪ್ರಹಾರದಿಂದ ಸಂಚೂರ್ಣಿತ ವಾಗಿ ಜರ್ಜರಿತವಾಗಿ ಹತ್ತಿಯಂತೆ ಹಗುರವಾಗಿ ಭೂಮಿಯ ಮೇಲೆ ಬಿತ್ತು. ರಾವಣನು ನಿರಾತಂಕನಾಗಿ ಲಂಕೆಯ ಕಡೆಗೆ ಓಡಿದನು ; ದಾರಿಯಲ್ಲಿ ಅವನನ್ನು ತರುಬಿದ ರತ್ನಜಟಿಯನ್ನು ಅವನ ತಂದೆಯ ಮೇಲಣ ಮಮತೆಯಿಂದ ಕೊಲ್ಲಲು ಒಲ್ಲದೆ ಕರುಣಿಸಿ ಅವನ ಗಗನಗಾಮಿನೀವಿದ್ಯೆಯನ್ನು ಮಾತ್ರ ಕತ್ತರಿಸಿದನು. ವಿಮಾನದಲ್ಲಿ ಹೋಗುತ್ತ ಅವನು ಸೀತೆಯ ಕರುಣಪ್ರಲಾಪವನ್ನು ಕೇಳಿ ಅವಳನ್ನು ಸಮಾಧಾನಪಡಿಸಲು ಪ್ರಯತ್ನಮಾಡುವನು. ಎಷ್ಟೆಷ್ಟು ಹೇಳಿದರೂ ಅವಳ ಹೃದಯ ಅವನ ಕಡೆ ಪ್ರಸನ್ನವಾಗಲಿಲ್ಲ. ರಾವಣನೂ "ಹೇಗಿದ್ದರೂ ಮೊದಲೇ ಸಾಧುಗಳ ಹತ್ತಿರ ವ್ರತವನ್ನು ತೆಗೆದುಕೊಂಡಿದ್ದೇನೆ. ಇವಳೂ ಪ್ರಸನ್ನಳಾಗಲಿಲ್ಲ. ವ್ರತವೂ ನಡೆದ ಹಾಗಾಯಿತು, ಬಹುಕಾಲದ ಮೇಲೆ ಇವಳೂ ಪ್ರಸನ್ನಳಾಗಬಹುದು" ಎಂದು ಯೋಚಿಸುತ್ತ ಲಂಕೆಯನ್ನು ಹೊಗುವನು.

ಇನ್ನು ರಾವಣನ ಅಧೋಗತಿಗೆ ಮೊದಲಾಯಿತು. ವ್ರತವೇನಾಯಿತು! ಧರ್ಮವೇನಾಯಿತು! ತನ್ನ ಸುಕೃತಕ್ಷಯದಿಂದ ಅವೂ ಮಂಕಾದುವು. ವಿಧಿಯ ಕಣ್ಣು ಕೆರಳಿತು. ಅವನ ಹೃದಯಪ್ರಾಕಾರದಲ್ಲಿ ಮೊದಲೇ ಸಡಿಲವಾಗಿದ್ದ, ಆದರೂ ತಕ್ಕಮಟ್ಟಿಗೆ ಎಚ್ಚರಿಕೆಯಿಂದಲೇ ರಕ್ಷಿತವಾದ ಒಂದು ಕಲ್ಲು ಕಳಚಿ ಕೊಂಡಿತು. ವಿಧಿಯ ಗುಂಡಿನೇಟಿನಿಂದ ಈ ದುರ್ಬಲಪ್ರದೇಶವೇ ಹೆದ್ದಾರಿ ಯಾಯಿತು. ಪಾಪದ ಪ್ರವಾಹದಿಂದ ಅವನ ಆತ್ಮವು ತುಂಬಿ ಕೋಡಿಯಿಡಲು

ಮೊದಲಿಟ್ಟಿತು. ಪ್ರಾಣಿಹಿಂಸೆ ಆಗುತ್ತದೆಂದು ಮರುತ್ತನ ಯಜ್ಞವನ್ನು ನಿಲ್ಲಿಸಿದ ರಾವಣನು ಈಗ ದುರ್ಮೋಹದಿಂದ ಕಣ್ಣುಕುರುಡಾಗಿ ಸೀತೆಯನ್ನು ಕದ್ದೊಯ್ದನು; ಜಟಾಯುವನ್ನು ಕೊಂದನು; ರತ್ನಜಟಿಯನ್ನು ಹಿಂಸಿಸಿದನು; ಪಾಪದಿಂದ ಪಾಪಕ್ಕೆ ಬೇಗ ಬೇಗನೆ ದಾಟುವನು. ಸಿಡಿಲ ಆಘಾತದಿಂದ ಗಿರಿಶಿಖರದ ಮಹಾ ಗ್ರಾವವು ಆಯತಪ್ಪಿ ಅಡ್ಡಬಂದ ಬಂಡೆಗಳನ್ನಪ್ಪಳಿಸಿ ಮರ ಬಳ್ಳಿಗಳನ್ನು ನುಗ್ಗು ನುರಿಮಾಡಿ ಅಗಾಧ ಕಂದರಾಭಿಮುಖವಾಗುವಂತೆ ರಾವಣನು ಅಧೋಗತಿಯಲ್ಲಿ ಕಾಲಿಟ್ಟನು. ಪತನವು ನಿಧಾನವಾದರೂ ನಿಶ್ಚಿತವಾಯಿತು.

ರತ್ನಜಟಿಯನ್ನು ನಿಗ್ರಹಿಸಿದನಂತರ ವಿಮಾನದಲ್ಲಿ ಹೋಗುತ್ತ ರಾವಣನು ಕಾಮಕಾತರನಾಗಿ ಸೀತೆಯನ್ನು ಕುರಿತು, 'ಓ ಸುಂದರಿ, ಸೌಮ್ಯಶಶಿವದನೇ, ಪ್ರಸನ್ನಳಾಗು; ನನ್ನ ಕಡೆ ಒಂದು ಸಲ ನೋಡು. ನಿನ್ನ ಕಣ್ಣೀರಿನಿಂದ ನನ್ನ ಕಾಮಾನಲವನ್ನು ಆರಿಸು; ಓ ದರಕಮಲಪತ್ರದಲನಯನೇ, ನೀನು ಕರುಣಿಸ ದಿದ್ದರೆ ನನ್ನ ಈ ದೇಹವು ನಿನ್ನ ಚರಣಾರವಿಂದಗಳಲ್ಲಿ ಬೀಳುತ್ತದೆ"[9] ಎಂದು ಮಧುರವಾದ ಮಾತುಗಳಿಂದ ಬೇಡಿಕೊಂಡನು. ಅವನು ಹೀಗೆ ಹರಟುತ್ತಿರಲು ಮುಖ ತಿರುಗಿಸಿಕೊಂಡು ಕುಳಿತಿದ್ದ ಸೀತೆ, "ಪರಲೋಕವಿರುದ್ಧವಾದ ಇಂಥ ಮಾತುಗಳನ್ನು ಏಕೆ ಆಡುತ್ತೀಯೆ? ಪರಮಹಿಳೆಯೆಂಬ ಬೆಂಕಿಯಲ್ಲಿ ಪತಂಗದ ಹುಳುವಿನಂತೆ ಬಿದ್ದೆಯಲ್ಲ; ದುಃಖ ಸಹಸ್ರಾಕುಲವಾದ ಘೋರ ನರಕಕ್ಕೆ ದಾರಿ ಮಾಡಿಕೊಂಡೆ" ಎಂದು ಪರುಷ ವಚನಗಳನ್ನಾಡಿದಷ್ಟೂ ಅವನ ಮೋಹವು ಆರದೆ ಕೆರಳಿತು. ಕೂಡಲೆ ಅವನು ಕೈಮುಗಿದುಕೊಂಡು ಸೀತೆಯ ಪಾದಗಳಲ್ಲಿ ಬಿದ್ದನು. ರಾಮನ ಕುಶಲವಾರ್ತೆಯನ್ನು ಕೇಳುವವರೆಗೂ ಊಟಮಾಡುವುದಿಲ್ಲ ವೆಂದು ಸೀತೆ ಅನಶನ ವ್ರತವನ್ನು ಕೈಕೊಂಡಳು. ನಿರಾಶನಾದ ರಾವಣನು ಸೀತೆಯನ್ನು ದೇವರಮಣವೆಂಬ ಉದ್ಯಾನವನದಲ್ಲಿ ಸೆರೆಯಿಟ್ಟು ಒಲ್ಲದ ಮನಸ್ಸಿ ನಿಂದ ಮನೆಯ ಕಡೆಗೆ ತೆರಳಿದನು.

ಮನೆಗೆ ಬಂದರೆ ಅಲ್ಲಿಯೂ ಅವನಿಗೆ ಸಮಾಧಾನವಿಲ್ಲ. ಮಣಿಮಯೂಖ ಪ್ರಜ್ವಲಿತಾಂಗನಾಗಿ ಸಿಂಹಾಸನದಲ್ಲಿ ಕುಳಿತಿದ್ದರೂ ಸೀತೆಯ ಹಂಬಲು ಅವ ನನ್ನು ಒಂದು ನಿಮಿಷವಾದರೂ ಬಿಡಲಿಲ್ಲ. ಅಷ್ಟುಹೊತ್ತಿಗೆ ಪತಿಯ ಮರಣ ವಾರ್ತೆಯನ್ನು ಕೇಳಿ ಚಂದ್ರನಖಿ ಅಳುತ್ತಾ ಬಂದು ಅಣ್ಣನ ಪಾದಗಳ ಮೇಲೆ

ಹೊರಳಿದಳು. ಅವಳ ಪ್ರಲಾಪವನ್ನು ಕೇಳಿ ರಾವಣನು, "ತಂಗಿ, ಸಾಕು. ಏಕೆ ಅಳುತ್ತೀಯೆ? ಹಿಂದೆ ಮಾಡಿದ ಕರ್ಮ ಈಗ ಬಂತು. ಖರದೂಷಣನನ್ನು ಕೊಂದ ವನು ಬೇಗನೆ ಮಡಿಯುವುದನ್ನು ನೀನೇ ನೋಡುವೆ" ಎಂದು ಸಂತವಿಟ್ಟು ನಿಯತ ಗೃಹಕ್ಕೆ ಬರುತ್ತಾನೆ. ಮದನಜ್ವರ ಪೀಡಿತನಾದ ಅವನಿಗೆ ನಿದ್ರೆ ಬರಲಿಲ್ಲ. ನಿಟ್ಟುಸಿರು ಬಿಡುತ್ತ ಕುಳಿತಿದ್ದ ಅವನನ್ನು ಮಂಡೋದರಿ ನೋಡಿ, "ಸ್ವಾಮಿಾ, ಏಕಿಷ್ಟು ವಿಷಾದ? ಖರದೂಷಣನು ಮಡಿದನೆಂದೆ? ಇಷ್ಟು ಚಿಂತೆ ಹಿಂದೆ ಎಂದೂ ಇರಲಿಲ್ಲ. ನನಗೆ ತಿಳಿಸಬಾರದೆ?" ಎಂದು ಕೇಳುವಳು. ರಾವಣನು ನಾಚಿಕೆಪಡುತ್ತ, "ಸುಂದರಿ, ಕೋಪಿಸಿಕೊಳ್ಳದಿದ್ದರೆ ಹೇಳುತ್ತೇನೆ. ಸೇಡು ತೀರಿಸಿ ಕೊಳ್ಳಬೇಕೆಂದು ಸಂಗ್ರಾಮ ರಂಗಕ್ಕೆ ಹೋದ ನಾನು ರಾಮನ ಮಹಿಳೆ ಸೀತೆ ಯನ್ನು ಕದ್ದು ಇಲ್ಲಿಗೆ ತಂದಿದ್ದೇನೆ. ಮದನತಪ್ತನಾದ ನನ್ನನ್ನು ಅವಳು ಬಯಸಳು. ಅವಳಿಲ್ಲದಿದ್ದರೆ ಜೀವಿಸಲಾರೆ. ನೀನೂ ಅವಳನ್ನೊಲಿಸುವುದಕ್ಕೆ ಪ್ರಯತ್ನಪಡ ಬಾರದೆ? ಅವಳನ್ನು ಒಡಗೂಡುವುದಕ್ಕೆ ಅಪ್ಪಣೆಯನ್ನು ಕೊಡು" ಎಂದು ಮಂಡೋದರಿಗೆ ತನ್ನ ಅಳಲಿನ ಆಳವನ್ನು ತಿಳಿಸುವನು. ತಾನು ತೆಗೆದುಕೊಂಡಿದ್ದ ವ್ರತವನ್ನೂ ಅವಳಿಗೆ ಹೇಳುವನು. ಮಂಡೋದರಿ ಅವನ ಅವಸ್ಥೆಯನ್ನು ಕಂಡು ಹೆದರಿ ಸೀತೆಯ ಹತ್ತಿರಕ್ಕೆ ಬಂದು ರಾವಣನ ಸೌಭಾಗ್ಯಸಾಮರ್ಥ್ಯಗಳನ್ನು ಬಣ್ಣಿಸಿ, "ಬಾಲೆ, ಮನುಜನಾದ ರಾಮನಲ್ಲಿ ಏನಿದೆ? ರಾವಣನೊಡಗೂಡಿ ಸುಖ ವಾಗಿರು" ಎಂದು ಛುಲ್ಲವಿಸುವಳು. ಸೀತೆ ಅದನ್ನು ಕೇಳಿ "ಉತ್ತಮ ಕುಲದಲ್ಲಿ ಹುಟ್ಟಿದ ನಿಮ್ಮಂಥವರು ಇಂಥ ಮಾತುಗಳನ್ನು ಆಡಬಾರದು. ಹೆಚ್ಚು ಮಾತೇಕೆ? ಈ ನನ್ನ ಶರೀರವು ಛಿನ್ನಭಿನ್ನವಾಗಿ ಹತವಾದರೂ ರಾಮನನ್ನು ಬಿಟ್ಟು ಬೇರೊ ಬ್ಬನನ್ನು—ಅವನು ಇಂದ್ರನೇ ಆಗಿರಲಿ, ಸನತ್ಕುಮಾರನ ಹಾಗೆ ರೂಪವಂತನೇ ಆಗಿರಲಿ—ಕಣ್ಣೆತ್ತಿ ಕೂಡ ನೋಡೆನು" ಎನ್ನುವಳು. ಸೀತೆಯ ಈ ಸೌಮ್ಯ ಕಟುಭಾಷಣವನ್ನು ಕೇಳಿ ಮಂಡೋದರಿ ನಿರುತ್ತರಳಾಗುವಳು. ಅವಳ ಬರ ವನ್ನೇ ಎದುರುನೋಡುತ್ತಿದ್ದ ರಾವಣನು ಕೊಂಚ ತಡವಾದರೂ ತಾಳಲಾರದೆ ರಾಗಾಂಧನಾಗಿ ಉನ್ಮತ್ತನಾಗಿ, ಆಗತಾನೇ ತಂಗಿಗೆ ಕೊಟ್ಟ ಮಾತನ್ನೂ ಮರೆತು ಸೀತೆಯಿದ್ದ ವನಕ್ಕೆ ಓಡಿಬರುವನು; ಬಂದು ಅವಳೆದುರಿಗೆ ಕುಳಿತು ಕೊಂಡು—

ರಾವಣ :—ಸುಂದರಿ, ಬಿನ್ನಪವನ್ನು ಲಾಲಿಸು, ದೀನನಾಗಿದ್ದೇನೆ. ಭರ್ತೃವಾಗಿ ನನ್ನನ್ನು ಸ್ವೀಕರಿಸು.

ಸೀತೆ :—ವಿದ್ಯಾಧರಾಧಮ, ಅತ್ತ ಸರಿ. ನನ್ನನ್ನು ಮುಟ್ಟಬೇಡ. ಇಂಥ ಮಾತುಗಳನ್ನೆ ಹೇಳುವುದು ?

ರಾವಣ :—ಕೃಶೋದರಿ, ನನ್ನ ಯುವತಿಯರಿಗೆಲ್ಲ ಉತ್ತಮ ಮಹಾದೇವಿಯಾಗು. ಬೇಕಾದಷ್ಟು ವಿಷಯ ಸೌಖ್ಯವನ್ನನುಭವಿಸು, ಬಿಡಬೇಡ.

ಸೀತೆ :—ಕಾಡಿನಲ್ಲಿದ್ದರೂ ರಾಮನು ಸ್ವರ್ಗಕ್ಕಿಂತ ಮಿಗಿಲಾದ ಸುಖವನ್ನು ಕೊಡುವನು. ಹೆಂಗಸರಿಗೆ ಶೀಲವೇ ಆಭರಣ. ಬೇರೆ ಒಡವೆ ಇಲ್ಲದಿದ್ದರೂ ಸರಿ. ಶೀಲವನ್ನು ಕಳೆದುಕೊಳ್ಳುವುದಕ್ಕಿಂತ ಹೆಂಗಸಿಗೆ ಮರಣವೇ ಲೇಸು.

ರಾವಣನು ನಿರಾಕೃತನಾದನು. ಕೋಪವನ್ನು ತೋರಿಸಿ ಭಯಪ್ರದರ್ಶನ ಮಾಡಿ ಅವಳನ್ನು ಒಲಿಸಿಕೊಳ್ಳಬೇಕೆಂದು ಅವನು ಭಯಂಕರ ದೃಶ್ಯವೊಂದನ್ನು ಮಾಯೆಯಿಂದ ಕಲ್ಪಿಸಿದನು. ಇದ್ದಕ್ಕಿದ್ದ ಹಾಗೆ ಸೂರ್ಯನು ಮುಳುಗಿದನು, ಅಂಧಕಾರ ಕವಿಯಿತು ; ಆನೆಗಳೂ ಸಿಂಹಗಳೂ ಹುಲಿಗಳೂ ಅವ್ವಳಿಸಿ ನುಂಗುವಂತೆ ನುಗ್ಗಿದುವು. ಆದರೂ ಸೀತೆ ಹೆದರಲಿಲ್ಲ ; ಅವನಿಗೆ ಶರಣಾಗಲಿಲ್ಲ. ಇರುಳೆಲ್ಲ ಸೀತೆಯನ್ನು ಹೆದರಿಸುವುದರಲ್ಲಿಯೇ ಕಳೆಯಿತು. ಹಗಲಾಯಿತು. ವಿಭೀಷಣನು ಸೀತೆಯ ಆಕ್ರಂದನ ಧ್ವನಿಯನ್ನು ಕೇಳಿ ಕರುಣಿಸಿ ಅವಳ ಸಂಕಟವನ್ನು ತಿಳಿಯುವನು; ರಾವಣನಿಗೆ ವಿವೇಕ ಹೇಳುವನು. ಆದರೆ ಅವನು ಈಗ ಉಪದೇಶವನ್ನು ಕೇಳುವ ಹಾಗಿರಲಿಲ್ಲ. ಹಿತವನ್ನು ಹೇಳಿದ ತಮ್ಮನನ್ನೇ ತಂದೆ ಮಕ್ಕಳಿಬ್ಬರೂ ಸೇರಿ ಹೀಯಾಳಿಸಿ ಹೊರಡಿಸುತ್ತಾರೆ. ಕತ್ತಿಯನ್ನು ಸೆಳೆದು ಝಳಪಿಸುತ್ತ ರಾವಣನು ತಮ್ಮನ ಮೇಲೆ ಹಾಯುವನು. ಅಣ್ಣತಮ್ಮಂದಿರ ಕಲಹದ ಘೋರ ಪರಿಣಾಮವನ್ನು ಕಂಡು ಇಂದಗಿಯೂ ಭಾನುಕರ್ಣನೂ ಇಬ್ಬರನ್ನೂ ಸಮಾಧಾನಪಡಿಸುತ್ತಾರೆ. ರುಷ್ಟನಾದ ರಾವಣನು "ದುಷ್ಟ, ಪಟ್ಟಣವನ್ನು ಬಿಟ್ಟು ತೊಲಗು, ಪ್ರತಿಕೂಲಮನಸ್ಕನಾದ ನಿನ್ನಿಂದ ಏನೂ ಪ್ರಯೋಜನವಿಲ್ಲ" ಎಂದವನನ್ನು ಅಟ್ಟಿಬಿಡುವನು. ರಾವಣನು ಅಡಿಗಡಿಗೂ ಆಳವಾದ ಪಾಪ ಪಂಕದಲ್ಲಿ ಕುಸಿಯುತ್ತಾನೆ. ಅವನಿಗೆ ತನ್ನ ಪಶುಶಕ್ತಿಯಲ್ಲಿ ನಂಬಿಕೆ ಹೆಚ್ಚಾ

ಯಿತು. ಮನುಷ್ಯಮಾತ್ರನಾದ ರಾಮನು ಖೇಚರನಾದ ತನ್ನನ್ನು ಗೆಲ್ಲುವನೆ? ಎಂದು ಧಿಕ್ಕಾರದಿಂದ ಗರ್ವಿತನಾದನು.

ಯುದ್ಧವು ಅನಿವಾರ್ಯವಾಯಿತು. ರಾಮಲಕ್ಷ್ಮಣರ ಮಹಾ ಸೈನ್ಯವು ಗಗನಮಾರ್ಗದಿಂದ ವಾರಧಿಯನ್ನುತ್ತರಿಸಿ ಲಂಕೆಯನ್ನು ಮುತ್ತಿತು. ರಾವಣನ ಸೈನ್ಯವೂ ಗರ್ಜಿಸುತ್ತ ಅದನ್ನು ಎದುರಿಸಿತು. ಸಮರಸನ್ನಾಹಭೇರೀರವಗಳಿಂದ ದಿಕ್ತಟಗಳು ಕಿವುಡಾದವು. ಉಭಯ ಸೈನ್ಯಗಳೂ ಕಲೆತು ಮೇರೆದಪ್ಪಿ ಕಪಿವ ಮಹಾಸಾಗರಗಳಂತೆ ಸಂಘಟ್ಟಿಸಿದುವು. ಆ ಮಹಾ ಸಂಗ್ರಾಮದಲ್ಲಿ ಹಸ್ತ ಪ್ರಹಸ್ತರೇ ಮೊದಲಾದ ರಾವಣನ ನಚ್ಚಿನ ಬಂಟರು ಮೃತ್ಯುವಿನ ತಾಳಿಗೆಗೆ ತುತ್ತಾದರು. ಅವನ ಮಕ್ಕಳೂ ತಮ್ಮನೂ ಒಬ್ಬೊಬ್ಬರಾಗಿ ಶತ್ರುಗಳ ವಶವಾದರು. ಅವನ ಶಕ್ತಿ ಉಡುಗಿದ ಹಾಗಾಯಿತು. ರಣಭೂಮಿಯಲ್ಲಿ ಮಹಾ ಉಲ್ಕೆಯಂತೆ ಪ್ರಜ್ವಲಿಸುತ್ತ ರಾವಣನು ಶಕ್ತಿಪ್ರಹಾರದಿಂದ ಲಕ್ಷ್ಮಣನ ವಕ್ಷಃಸ್ಥಲಕ್ಕೆ ಹೊಡೆದು ಮೂರ್ಛೆಗೊಳಿಸಿದನು. ಅಂದಿನ ರಣಕೋಲಾಹಲವು ಅಲ್ಲಿಗೆ ನಿಂತಿತು. ತಮ್ಮನ ಅವಸ್ಥೆಯನ್ನು ನೋಡಿ ರಾಮನು ಶೋಕವಿಹ್ವಲನಾದನು. ರಾವಣನಾದರೆ ಮಹಾ ಶತ್ರುವೊಬ್ಬನನ್ನು ನಿಗ್ರಹಿಸಿದೆನೆಂದು ಹರ್ಷಗೊಂಡ ಮನಸ್ಸಿನಿಂದ ಚಿಂತಿಸುತ್ತ ಅರಮನೆಯ ಕಡೆಗೆ ತೆರಳಿದನು. ಮನೆಗೆ ಬಂದು ನೋಡಿದರೆ, ಭಾನುಕರ್ಣನಿಲ್ಲ, ಮೇಘವಾಹನನಿಲ್ಲ, ಇಂದಗಿಯಿಲ್ಲ; ಎಲ್ಲವೂ ಶೂನ್ಯವಾಗಿ ಕಾಣುತ್ತದೆ. ಶೋಕಭಾರವನ್ನು ತಡೆಯಲಾರದೆ ರಾವಣನು, "ಹಾ, ತಮ್ಮ ಭಾನುಕರ್ಣ, ಯಾವಾಗಲೂ ನನ್ನ ಹಿತಸಾಧನೆಯಲ್ಲಿ ನಿರತನಾಗಿದ್ದೆ. ವಿಧಿವಶದಿಂದ ಶತ್ರುಗಳಿಗೆ ಕೈಸೆರೆಯಾದೆ ಹೇಗೆ? ಹಾ, ಮೇಘವಾಹನನೇ, ಇಂದಗಿಯೇ, ಸುಕುಮಾರ ಕೋಮಲ ಶರೀರರಾದ ನೀವು ಶತ್ರುಗಳ ಕಟ್ಟಿಗೊಳಗಾಗಿ ಅವರ ನಡುವೆ ಅತಿ ದುಃಖಿತರಾಗಿ ಹೇಗೆ ಇದ್ದೀರಿ? ಲಕ್ಷ್ಮಣನೇನಾದರೂ ಕಾಲಗತಿಯನ್ನೈದಿದರೆ ಶೋಕಾರ್ತರಾದ ರಿಪುಭಟರು ಅಶರಣರಾದ ನನ್ನ ಮಕ್ಕಳನ್ನು ಏನುಮಾಡುತ್ತಾರೋ ತಿಳಿಯೆನಲ್ಲ"[10] ಎಂದು ಬಂಧುಗಳೊಡನೆ ದುಃಖದಲ್ಲಿ ಮುಳುಗುವನು, ಅವನು ಹೀಗೆ ಕೊರಗುತ್ತಿರಲು ವಿಶಲ್ಯಸೌಂದರಿಯ ಆಗಮನದಿಂದ ಲಕ್ಷ್ಮಣನು ಮೂರ್ಛೆ ತಿಳಿದನೆಂಬ ಸುದ್ದಿ ಬರುತ್ತದೆ. ಏನುಮಾಡುವುದಕ್ಕೂ ತೋರದೆ ಅವನು ಮಂತ್ರಿಗಳನ್ನು ಕರೆಯಿಸಿ ಅವರ ಆಲೋಚನೆಯನ್ನು ಕೇಳುವನು. ಮದಾಂಕ

ನೆಂಬೊಬ್ಬ ಮಂತ್ರಿ ಎದ್ದುನಿಂತು, "ಸ್ವಾಮಿ, ಕೋಪ ಬಂದರೂ ಬರಲಿ, ಸಂತೋಷವಾದರೂ ಆಗಲಿ, ನನ್ನ ಮನಸ್ಸಿನಲ್ಲಿರುವುದನ್ನು ಹೇಳಿಬಿಡುತ್ತೇನೆ. ರಾಮಲಕ್ಷ್ಮಣರಿಗೆ ಸುಲಭವಾಗಿ ಸಿಂಹಗರುಡವಾಹಿನೀವಿದ್ಯೆಗಳು ದಕ್ಕಿವೆ. ನಿಮ್ಮೆದುರಿಗೇ ನಿಮ್ಮ ತಮ್ಮನೂ ಪುತ್ರರೂ ಅವರ ಕೈಗೆ ಬಿದ್ದರು. ಶಕ್ತ್ಯಾಯುಧವೂ ವ್ಯರ್ಥವಾಯಿತು. ನಮಗೆಲ್ಲ ವಿನಾಶಕಾಲ ಬಂದೊದಗಿದೆ. ಧರ್ಮಬುದ್ಧಿ ತಮಗೆ ಉಂಟಾಗಲಿ. ಸೀತೆಯನ್ನು ಒಪ್ಪಿಸಿಬಿಡಿ. ಸಂಧಿಮಾಡಿಕೊಳ್ಳಿ" ಎಂದು ಅಪ್ರಿಯವಾದರೂ ಹಿತವಾಗಿಯೇ ಆಡಿದನು. ಮಕ್ಕಳ ಮೇಲಿನ ಪ್ರೇಮವು ಈ ಸಂಧಿಗೊಡಂಬಡುವಂತೆ ರಾವಣನನ್ನು ಪ್ರೇರಿಸಿತು. ಉತ್ತಮ ಕುಲಸಂಭೂತನೂ ನಯವಿನಯಶಕ್ತಿಸಂಪನ್ನನೂ ಆದ ಸುಮಂತನೆಂಬ ದೂತನನ್ನು ಕರೆದು ರಾವಣನು, "ದೂತ, ರಾಮನ ಬಳಿಗೆ ಹೋಗಿ ಮಹಾತ್ಮನಾದ ರಾವಣನು ಹೀಗೆ ಹೇಳಿದನೆಂದು ಹೇಳು: ಪಾತಾಳದಲ್ಲಿ, ಗಗನತಳದಲ್ಲಿ, ನೆಲದಲ್ಲಿ, ಜಲದಲ್ಲಿ ರಾವಣನ ವೀರಗಮನವನ್ನು ತಡೆಯುವವರಿಲ್ಲ. ರಣಮುಖದಲ್ಲಿ ಇಂದ್ರನನ್ನು ಅಡಸಿ ಕಟ್ಟಿ ದೇವಾಸುರರ ದರ್ಪವನ್ನಡಗಿಸಿದ ರಾವಣನನ್ನು ನೀನು ಅರಿಯೆಯಾ? ಕ್ಷೇಮವಾಗಿರಬೇಕೆಂಬ ಆಶೆ ನಿನಗಿದ್ದರೆ ಉದಧಿಪರೀತವಾದ ಈ ಖೇಚರ ರಾಜ್ಯವನ್ನು ಲಂಕಾನಗರಿಯೊಡನೆ ತೆಗೆದುಕೊಂಡು ತಮ್ಮನನ್ನೂ ಮಕ್ಕಳನ್ನೂ ಬಿಟ್ಟುಬಿಡು. ಸೀತೆಯನ್ನೊಪ್ಪಿಸು" ಎಂದು ಸಂಧಿಯ ಮಾತನ್ನು ಅಟ್ಟಿದನು. ಇಂಥ ಸಂಧಿಗೆ ರಾಮನು ಒಪ್ಪುವನೆ? ಹೋದ ದೂತನು ತಿರಸ್ಕೃತನಾಗಿ ಹಿಂದಿರುಗಿದನು. ಒಂದು ಕಡೆ ಪುತ್ರವಾತ್ಸಲ್ಯ, ಸ್ವಾಭಿಮಾನ; ಇನ್ನೊಂದು ಕಡೆ ಜಾನಕಿಯ ಮೇಲಣ ಮೋಹ; ರಾವಣನ ಮನುಸ್ಸು ಡೋಲಾಯಮಾನವಾಗಿ ಅತ್ತ ಇತ್ತ ಎಳೆದಾಡುತ್ತಿತ್ತು.

ಸಂಧಿಯ ಮಾತು ಮುಗಿಯಿತು. ಗಾಢಸುತಶೋಕಸಂತಪ್ತನಾದ ರಾವಣನು ಗೆಲ್ಲುವ ಉಪಾಯವೇನೆಂದು ಚಿಂತಿಸಿದನು. ಬಹುರೂಪಿಣೀವಿದ್ಯೆಯನ್ನು ಸಾಧಿಸಬೇಕೆಂಬ ಬುದ್ಧಿ ಅವನಿಗೆ ಬಂತು. ಕೂಡಲೆ ಶಾಂತಿಜಿನಭವನಕ್ಕೆ ಹೋಗಿ ಭಕ್ತಿಯಿಂದ ಎರಗಿ ಪೂಜೆಮಾಡಿ ವಿದ್ಯಾಸಾಧನೆಗೋಸ್ಕರ ತಪಸ್ಥಿತನಾದನು. ಇತ್ತ ಮಂಡೋದರಿ ನಗರದಲ್ಲೆಲ್ಲ ಜೀವಹಿಂಸೆ ನಡೆಯಕೂಡದೆಂದು ಸಾರಿಸಿದಳು. ಪುಣ್ಯಮಯವಾದ ಈ ಆವರಣದಲ್ಲಿ ಅವನ ವಿದ್ಯೆ ಸಿದ್ಧಿಸಲೇ ಬೇಕು. ಅಷ್ಟು

ಚಿಂತಾಕುಲನಾಗಿದ್ದರೂ ಚಿತ್ತಸಂಯಮ ಮಾಡಿ, ಅಂಗದಾದಿ ನಾಯಕರು ಅಂತಃಪುರ ಸ್ತ್ರೀಯರನ್ನೂ ಮಂಡೋದರಿಯನ್ನೂ ಎಳೆದಾಡಿ ಹಿಂಸಿಸಿದರೂ ಮೇರುವಿನಂತೆ ನಿಷ್ಕಂಪನಾಗಿ ಏಕಮನಸ್ಸಿನಿಂದ ಧ್ಯಾನಿಸುವ ರಾವಣನನ್ನು ನೋಡಿದರೆ ಬೆರಗಾಗುತ್ತೇವೆ. ದಶದಿಕ್ಕುಗಳನ್ನು ಪ್ರಜ್ವಲಿಸುತ್ತ ಬಹುರೂಪಿಣೀ ವಿದ್ಯೆ ಸನ್ನಿಹಿತವಾಗಿ ಬಂದು, "ರಾವಣ, ನಿನ್ನ ಕಾರ್ಯಕ್ಕೆ ಸಿದ್ಧವಾಗಿದ್ದೇನೆ. ಅಪ್ಪಣೆಯನ್ನು ಕೊಡು. ಸಕಲ ಲೋಕವನ್ನೂ ಜಯಿಸುತ್ತೇನೆ. ಆದರೆ ಪ್ರಭೂ, ಚಕ್ರಧರನೊಬ್ಬನನ್ನು ಬಿಟ್ಟು ತ್ರಿಭುವನವನ್ನು ಬೇಕಾದರೂ ಜಯಿಸುವೆನು. ರಾಮಲಕ್ಷ್ಮಣರು ಯಾವ ಲೆಕ್ಕ ?" ಎಂದು ಗರ್ಜಿಸಿತು. ರಾವಣನು ಸಂತುಷ್ಟನಾಗಿ ವಿದ್ಯಾದೇವತೆಗೆ ನಮಸ್ಕಾರಮಾಡಿ ಜಿನಮಂದಿರದಿಂದ ಹೊರಹೊರಟನು. ಪಾಪ ! ಲಕ್ಷ್ಮಣನೇ ಚಕ್ರಧರನೆಂದು ಅವನಿಗೇನು ಗೊತ್ತು !

ವಿದ್ಯಾಸಾಧನೆಗೋಸ್ಕರ ಸಂಯಮಿವ್ರತವನ್ನು ತಾಳಿದ ರಾವಣನ ಮನಸ್ಸು ಈಗ ಸ್ವಲ್ಪ ಶಾಂತವಾಗಿದೆ. ಕಳೆದುಹೋಗಿದ್ದ ವಿವೇಕ ಮರಳಿ ಬರುವ ಕಾಂತಿ ಕಾಣುತ್ತಿದೆ. ಅರಮನೆಗೆ ಬಂದರೆ ಅವನ ಅಷ್ಟಾದಶ ಮಹಿಷಿಯರ ಅಶ್ರುಧಾರೆಯ ಮ್ಲಾನ ಮುಖಗಳು ಅವನನ್ನು ಎದುರುಗೊಳ್ಳುತ್ತವೆ. ಅಂಗದನಿಂದ ತಮಗುಂಟಾದ ಮಾನಭಂಗವನ್ನು ಕಣ್ಣುಗಳಿಂದ ಕೋಡಿವರಿಯಿಸುತ್ತ ರಾವಣನ ಕಾಲಮೇಲೆ ಅವರು ಕವಿದು ಬೀಳುವರು. ಅವರ ರೋದನಕ್ಕೆ ಕಾರಣವನ್ನು ತಿಳಿದು ರಾವಣನು ರೋಷಾವಿಷ್ಟನಾಗಿ "ನಿಮ್ಮೊಡನೆ ಈ ರೀತಿ ನಡೆದವನು ಮೃತ್ಯುವಿನ ಕುಣಿಕೆಗೆ ಸಿಕ್ಕಿದವನೇ ಸರಿ. ಸುಗ್ರೀವನು ನಿರ್ಜೀವನೆಂದು ತಿಳಿಯಿರಿ. ಉಳಿದ ದುಷ್ಟ ಪಾದಚಾರಿಗಳ ಜೀವ ನನ್ನ ಕೈಯಲ್ಲಿದೆ" ಎಂದವರನ್ನು ಸಮಾಧಾನಪಡಿಸಿ ಮಜ್ಜನಗೃಹಕ್ಕೆ ನಡೆದುಬರುವನು. ಅಲ್ಲಿ ವೈಡೂರ್ಯಮಯವಾದ ಪೀಠದಲ್ಲಿ ಕುಳಿತುಕೊಂಡು ಮುನಿಸುವ್ರತಜಿನನು ಪಾಂಡುಕಶಿಲೆಯ ಮೇಲೆ ಕುಳಿತು ಅಭಿಷೇಕಮಾಡಿಸಿಕೊಳ್ಳುವಂತೆ ಶೀತಲವಾರಿಸೇಚನೆಯಿಂದ ಸ್ನಾನವನ್ನು ಮಾಡಿ ಶಾಂತಿಜಿನನಿಗೆ ನಾನಾ ವಿಧವಾದ ಕುಸುಮಗಂಧಗಳಿಂದ ತನ್ನ ಕೊನೆಯ ಪೂಜೆಯನ್ನು ಸಲ್ಲಿಸುತ್ತಾನೆ. ಬಂಧುಗಳು ಬಳಸಿಕೊಂಡಿರಲು ಎಲ್ಲರೊಡನೆ ಊಟಮಾಡಿ ತನ್ನ ಸುಭಟರನ್ನು ಯುದ್ಧಭೂಮಿಗೆ ಕಳುಹಿಸಿ ವಿದ್ಯೆ ತನಗೆ ಒಲಿದಿದೆಯೋ ಇಲ್ಲವೋ ಎಂದು ಪರೀಕ್ಷೆಮಾಡುತ್ತಾನೆ. ಒಲಿದಿದೆಯೆಂದು

ತೃಪ್ತಿಗೊಂಡ ಮನಸ್ಸಿನ ಆಳದಿಂದ ಸೀತೆಯು ನೆನಪು ಎಲ್ಲಿಂದಲೋ ಹೇಗೋ ಮೇಲೆ ತೇಲಿಬರುತ್ತದೆ. ಕೂಡಲೆ ಸರ್ವಾಲಂಕಾರಭೂಷಿತ ಶರೀರನಾಗಿ ಇಂದ್ರನು ನಂದನವನಕ್ಕೆ ಬರುವಂತೆ ರಾವಣನು ಸೀತೆಯಿದ್ದ ವನಕ್ಕೆ ಬರುತ್ತಾನೆ. ಸೀತೆ, "ಇವನ ಸೈನ್ಯವಾದರೊ ಬಲು ದೊಡ್ಡದು. ಇಂದ್ರನೂ ಇವನನ್ನು ಗೆಲ್ಲಲು ಸಮರ್ಥನಲ್ಲ. ಏನಾಗುವುದೋ ಏನೋ" ಎಂದು ಚಿಂತೆಯಿಂದ ಕಂದಿ ಕುಳಿತಿರುವಳು.

ರಾವಣ:—(ಅವಳನ್ನು ನೋಡಿ) ಸುಂದರಿ, ಯಾವ ಪಾಪದಿಂದಲೋ ಅಳುತ್ತಿರುವ ನಿನ್ನನ್ನು ಮೋಸದಿಂದ ಕದ್ದುಕೊಂಡು ಬಂದೆನು. ಅಪ್ರಸನ್ನಳಾದ ಪರಮಹಿಳೆಯೊಡನೆ ಕೂಡುವವನಲ್ಲ. ಅದು ನನ್ನ ವ್ರತ, ನೆನಪಿನಲ್ಲಿದೆ. ವಿಶಾಲಾಕ್ಷಿ, ಇದುವರೆಗೂ ನೀನು ಪ್ರಸನ್ನಳಾಗಲಿಲ್ಲ. ಆದ್ದರಿಂದ ನಿನ್ನ ಆಲಂಬನವನ್ನು ಕತ್ತರಿಸಲು ಬಯಸಿದ್ದೇನೆ. ಸುಮ್ಮನೆ ನನ್ನೊಡನೆ ಈ ಪುಷ್ಪಕ ವಿಮಾನವನ್ನು ಹತ್ತಿ ಈ ಸಕಾನನ ಪೃಥ್ವಿಯನ್ನು ನೋಡು. ನನ್ನ ಪ್ರಸಾದವನ್ನು ಪಡೆದು ಉತ್ತಮ ಸುಖವನ್ನು ಹೊಂದು.

ಸೀತೆ:—(ಗದ್ಗದ ಕಂಠೆಯಾಗಿ) ದಶವದನ, ನನ್ನಲ್ಲಿ ನಿನಗೆ ಕರುಣೆಯಿದ್ದರೆ ಈ ನನ್ನ ಮಾತುಗಳನ್ನು ಕೇಳು. ಎಷ್ಟು ಕೋಪಬಂದರೂ ಯುದ್ಧದಲ್ಲಿ ರಾಮನನ್ನೂ ಅಣ್ಣ ಪ್ರಭಾಮಂಡಲನನ್ನೂ ಕೊಲ್ಲಬೇಡ. ಅವರ ಮರಣ ಶಬ್ದವನ್ನು ಕೇಳುವವರೆಗೇ ನಾನು ಬದುಕಿರುವುದು. (ಎಂದು ಅಳುತ್ತ ದುಃಖದಿಂದ ಭೂಮಿಯಲ್ಲಿ ಬಿದ್ದು ಮೂರ್ಛೆಹೋದಳು.)

ಅವಳು ಬಿದ್ದ ಕೂಡಲೇ ರಾವಣನ ದುರ್ಮೋಹ ಮಾಯೆಯೂ ಕಳಚಿಬಿತ್ತು. ಅವಳ ಆ ಅಶ್ರುಧಾರೆಗಳನ್ನೂ ಮರಣಾವಸ್ಥೆಯನ್ನೂ ಅವನು ನೋಡಿ ಕ್ಷಣ ಮಾತ್ರದಲ್ಲಿ—ಅವನ ತಪಸ್ಸಿನ ಫಲವೋ, ಜಿನ ಪೂಜೆಯ ಪುಣ್ಯವೋ—ಮೃದು ಮಾನಸನಾದನು. ಕಾಲ ಹೊರಳಿತು. ಅಳಿದ ವಿವೇಕ ಮರಳಿ ಸುಳಿದು ಬಂತು. ಪಶ್ಚಾತ್ತಾಪದ ಬೆಂಕಿಯಲ್ಲಿ ಅವನ ಹೃದಯ ಕುಕ್ಕುಳ ಕುದಿಯುತ್ತದೆ. ತಾನು ಮಾಡಿದ ಕ್ರೂರ ಕರ್ಮವನ್ನು ನೆನೆಸಿಕೊಂಡು—

"ಆಹಾ! ಯಾವ ಪ್ರೀತಿ ತಾನೇ ಇಷ್ಟು ದೊಡ್ಡದು. ಯಾವ ಪಾಪದಿಂದ

ಈ ಅನ್ಯೋನ್ಯ ಪ್ರೀತಿಪ್ರಮುಖವಾದ ದಂಪತಿಗಳನ್ನು ಅಗಲಿಸಿದೆನೋ ಆ ನನ್ನ ನಿಂದ್ಯಕರ್ಮಕ್ಕೆ ಧಿಕ್ಕಾರ. ಪರಮಹಿಳೆಗೋಸ್ಕರ ವ್ಯಾಮೋಹಗೊಂಡು ಕಟ್ಟಿಲ್ಲದ ಚಿತ್ತವುಳ್ಳ ನನ್ನಿಂದ ಆ ನನ್ನ ಶಶಿಪುಂಡರೀಕಧವಲವಾದ ಉತ್ತಮ ಕುಲಕೀರ್ತಿ ಮಲಿನವಾಯಿತು. ಹಾ, ಧಿಕ್, ಮಾಡಬಾರದ ಕೆಲಸ. ಆ ಪುರುಷ ಸಿಂಹನ ಮಡದಿಯನ್ನು ಮದನಮೂಢನಾದ ನಾನು ವನಾಂತರದಿಂದ ಅಪ ಹರಿಸಿ ಇಲ್ಲಿಗೆ ತಂದೆನಲ್ಲ. ಹಾ! ನರಕದ ಹೆದ್ದಾರಿಗಳು ಅತಿಕಷ್ಟ, ಅನಂತ. ಅಯ್ಯೋ ಅಪಕೀರ್ತಿಯೆ! ಅವಮಾನವೆ! ಹಾ! ತಮ್ಮ ವಿಭೀಷಣ, ಉಪದೇಶ ಪರನಾದ ಅನುಕೂಲನಾದ ನಿನ್ನಲ್ಲಿ ನನಗೆ ಪ್ರೀತಿ ಹುಟ್ಟಲಿಲ್ಲವಲ್ಲ! ನನ್ನ ಪ್ರವರ ಯೋಧರೆಲ್ಲ ಮಡಿದರೆ! ನನ್ನ ಸುಭಟರೆಲ್ಲ ಸೆರೆಯಾದರೆ! ಆ ರಾಮನನ್ನು ಅವಮಾನ ಪಡಿಸಿದೆನೆ! ಅಂಥ ಪ್ರೀತಿ ಈಗ ಇನ್ನೆಲ್ಲಿಯದು? ಈಗೇನು ಮಾಡಲಿ? ಸೀತೆಯ ನ್ನೊಪ್ಪಿಸಲೆ? ದುಗ್ರ್ರಹ ಹೃದಯವುಳ್ಳ ಈ ಲೋಕ ಅಶಕ್ತನೆಂದು ತೆಗಳುವುದಲ್ಲ! ಆಗದು, ಆಗದು! ಸಂಗ್ರಾಮದಲ್ಲಿ ರಾಮಲಕ್ಷ್ಮಣರನ್ನು ಜಯಿಸಿ ವೈಭವ ದಿಂದ ಸೀತೆಯನ್ನೊಪ್ಪಿಸಲೆ? ಅದೊಳ್ಳೆಯದು. ಪೌರುಷ ಹಾನಿಯೂ ಇಲ್ಲ, ಕೀರ್ತಿಯೂ ಲೋಕದಲ್ಲೆಲ್ಲ ನಿರ್ಮಲವಾಗುತ್ತದೆ. ಆದ್ದರಿಂದ ಯುದ್ಧವೇ ಮುಂದಿನ ಕೆಲಸ" ಎಂದು ಪರಿತಾಪಪಡುವ ರಾವಣನ ಹೃದಯ ಪರಿವರ್ತನೆ ಯನ್ನು ಕಂಡು ಅನುಕಂಪೆಯಲ್ಲಿ ಮುಳುಗದವರಾರು! ದೈವವು ಪ್ರತಿಕೂಲವಾಗಿ ದ್ದರೂ ಪುರುಷಪ್ರಯತ್ನವನ್ನು ಬಿಡುವ ಕಾಪುರುಷನು ಅವನಲ್ಲ. ಇಷ್ಟಾದರೂ ವಿಧಿಗೆ ಕರುಣೆ ಹುಟ್ಟಲಿಲ್ಲ. ಅವನನ್ನು ಸುಟ್ಟು ಬೊಟ್ಟಿಟ್ಟುಕೊಳ್ಳುವವರೆಗೂ ಅದಕ್ಕೆ ತೃಪ್ತಿಯಿಲ್ಲ. ಈಗ ಪಶ್ಚಾತ್ತಾಪದಿಂದ ರಾವಣನು ಕಳಂಕವಿಮುಕ್ತನಾಗಿದ್ದಾನೆ. ನಿರಾಶೆಯ ಕತ್ತಲೆ ಅವನ ಮುಂದಿನ ಜೀವನವನ್ನು ಆವರಿಸಿಕೊಂಡಿದೆ. ಮನಸ್ಸು ರಾಗರಹಿತವಾಗಿದೆ. ಕೀರ್ತಿಗೋಸ್ಕರ ಮಡಿದರೂ ಲೇಸೆಂಬ ದೃಢನಿಶ್ಚಯ ತುಂಬಿದೆ. ಸೀತೆಯ ಕೊನೆಯ ಸಂದರ್ಶನವು ಅವನಿಗೆ ಸದ್ದರ್ಶನವಾಯಿತು. ನಿರಾಶೆಯ ಕಣಿವೆಯನ್ನಿಳಿದು ಯಶಸ್ಸಿನ ತೆಮರನ್ನೇರಿ ಬಹುರೂಪಿಣಿಯಿಂದ ಪ್ರೋತ್ಸಾಹಿತನಾಗಿ ರಣಭೂಮಿಗೆ—ಮೃತ್ಯುವಿನ ಗಂಟಲಿಗೆ—ದುಮುಕುವ ರಾವಣನು ತಿಮಿರಾಚ್ಛಾದಿತವಾದ ಕಾಳಗಗನದಲ್ಲಿ ಯಾವುದೋ ನಿಯತಿಯ ನಿಯಮಕ್ಕೆ ಸಿಕ್ಕಿ ಸಿಡಿದುಬೀಳುವ ಮಹಾತಾರೆಯಂತೆ ಕಂಗೊಳಿಸುವನು;

ಭೀಷಣ ರಮಣೀಯನಾಗಿ ಕಾಣುವನು. ಇಂಥ ಮಹಾ ವ್ಯಕ್ತಿಗೂ ಕೊನೆಗೂ ಇಂಥ ಗತಿಯೆ! ಎಂದು ಎದೆ ಮಿಡಿಯುವುದು.

ಸೀತೆಯನ್ನು ನೋಡಿದ ಬಳಿಕ ಚಿಂತೆಯೇ ನಡೆದು ಬರುವಂತೆ ರಾವಣನು ನಿಜ ಭವನಕ್ಕೆ ಬರುವನು. ಅಲ್ಲಿ ಅವನ ಮಹಿಷಿಯರ ಬಾಡಿದ ಮುಖಗಳು ಅಂಗದಾದಿಗಳ ಅನಾರ್ಯವರ್ತನೆಯನ್ನು ನೆನಪಿಗೆ ತರುತ್ತವೆ. ಕ್ರೋಧ ತಾಮ್ರಾಕ್ಷನಾದ ರಾವಣನು ಚಂದ್ರಹಾಸವನ್ನು ಝಳಪಿಸುತ್ತ ಅಶೇಷರಿಪು ಸುಭಟರನ್ನು ಕತ್ತರಿಸುವೆನೆಂದು ಗರ್ಜಿಸುವನು. ಆದರೆ ಆ ಕೋಪವನ್ನು ಒಂದು ಕ್ಷಣಕಾಲ ಮರೆಮಾಡಿ ಸೀತೆಯ ದುಃಖಕಂಪಿತ ದೀನಚಿತ್ರವು ಅವನ ಚಿತ್ತ ದೆದುರಿಗೆ ಬಂದು ನಿಂತು ಅವನ ಕರುಣೆಯನ್ನು ಕೆದಕುತ್ತದೆ. "ಅಯ್ಯೋ! ಏನು ಹೇಳಿದೆ? ಅಶೇಷರಿಪುಸುಭಟರನ್ನೆ?—ಅಲ್ಲ, ಅಲ್ಲ, ರಾಮಲಕ್ಷ್ಮಣರನ್ನುಳಿದು—" ಎಂದು ಅವನ ಹೃದಯ ತುಡಿದು ಅವರನ್ನು ಸೆರೆಹಿಡಿದು ಸೀತೆಯನ್ನೊಪ್ಪಿಸ ಬೇಕೆಂಬ ನಿಶ್ಚಯ ಎಚ್ಚರಗೊಳ್ಳುತ್ತದೆ. ಹಾಗೆಯೇ ಶೂನ್ಯದೃಷ್ಟಿಯಿಂದ ಶೂನ್ಯಮಂದಿರವನ್ನು ನೋಡುವನು. ಆ ಪ್ರದೇಶದಲ್ಲಿ ಒಬ್ಬರೂ ಕಾಣರು. "ಹಾ ಪುತ್ರ, ಮೇಘವಾಹನ, ಇಂದಗಿ, ಹಾ ತಮ್ಮ, ಭಾನುಕರ್ಣ, ಇಲ್ಲೊ ಬ್ಬರೂ ಇಲ್ಲವಲ್ಲ" ಎಂದು ಶೋಕದಿಂದ ಕಣ್ಣೀರಿಡುವನು, ಕೋಪದಿಂದ ಕನಲುವನು. ಹೇಗೆ ಅವನ ಮನಸ್ಸು ಪಶ್ಚಾತ್ತಾಪ, ಕರುಣೆ, ನಿರ್ವೇಗ, ಅಭಿಮಾನ, ಕ್ರೋಧ, ನಿರಾಶೆ—ಇವುಗಳ ಎಳತಟಕ್ಕೆ ಸಿಕ್ಕಿ ಊರ್ಧ್ವಮುಖವಾಗಿ ಚಿಮ್ಮುವ ಜಲಧಾರೆಗೆ ಸಿಕ್ಕಿದ ಚೆಂಡಿನಂತೆ ಏರಿಬೀಳುವುದು; ಸಂಕ್ರುದ್ಧ ಘನವೀಚಿಗಳ ಆಸ್ಫಾಲನದಿಂದ ಆಂದೋಲಿತವಾದ ರಣನೌಕೆಯಂತೆ ತೂಗಿ ತೊನೆಯುವುದು. ಕೊನೆಗೆ ಅಭಿಮಾನ ಕ್ರೋಧಗಳ ಸಂಘಟ್ಟನೆಯೇ ಪ್ರಬಲ ವಾಗಿ ಅವನನ್ನು ಸಮರಾಂಗಣಕ್ಕೆ ಸಾರುವಂತೆ ಚೋದಿಸುವುದು.

ಇಂದು ರಾವಣನ ಚರಮ ದಿನ. ನಕ್ಷತ್ರಬಲ ವಿಮುಕ್ತನೂ ಅತ್ಯಂತ ಕುಟಿಲವಾದ ಗ್ರಹಗತಿಯುಳ್ಳವನೂ ಆದ ಅವನು ಸಮರೋದ್ಯೋಗವನ್ನು ಕೈಕೊಂಡು ಸೈನ್ಯಸಮೇತನಾಗಿ ಅರಮನೆಯಿಂದ ಹೊರಡುವನು. ಅನೇಕ ದುರ್ನಿಮಿತ್ತಗಳು ಅವನನ್ನು ಎದುರುಗೊಂಡುವು. ಭೂಕಂಪವುಂಟಾಯಿತು; ರುಧಿರ ವರ್ಣದ ಉಲ್ಕೆಗಳು ಪೂರ್ವದಿಕ್ಕಿನಲ್ಲಿ ತೋಳಗಿದುವು; ಕಂಪಿತಕಂಠ

ನಿಂದ ಕುದುರೆಗಳು ಸ್ವರ್ಶವಿರಸವಾಗಿ ಕೂಗಿದುವು; ಹಸ್ತಿಗಳು ಘೋರವಾಗಿ ಘೀಳಿಬಿಟ್ಟುವು; ದೇವತಾಪ್ರತಿಮೆಗಳು ಅತ್ತುವು; ಗಿರಿಶಿಖರಗಳು ಕಳಚಿಬಿದ್ದುವು; ಗಗನವು ರಕ್ತಸಿಕ್ತವಾಯಿತು; ಉತ್ತರೀಯವು ಜಾರಿ ಬಿದ್ದಿತು; ವೈಡೂರ್ಯ ಮಯ ಛತ್ರದಂಡವು ಭಗ್ನವಾಯಿತು. ಈ ಉತ್ಪಾತಗಳಿಂದ ಚಕಿತಹೃದಯಳಾದ ಮಂಡೋದರಿ ಪತಿಯನ್ನು ಅಡ್ಡಗಟ್ಟಿ

ಮಂಡೋದರಿ:—ಸ್ವಾಮೀ, ನಿನ್ನನ್ನು ಅಗಲಲಾರೆ. ಭಯಂಕರವಾದ ದುಃಖ ಸಲಿಲದಿಂದ ಕೈಗೊಟ್ಟು ಮೇಲೆತ್ತು. ಈ ಉತ್ಪಾತಗಳು ಅಪಜಯವನ್ನು ತೋರಿಸುತ್ತಿವೆ. ನಾನು ಹೇಳುವ ಮಾತುಗಳನ್ನು ಮನಸ್ಸಿಲ್ಲದಿದ್ದರೂ ಕೇಳು. ಔಷಧವು ಕಹಿಯಾದರೂ ಹಿತವಾಗಿರುವುದಲ್ಲವೆ? ಕಲಹಕ್ಕೆ ಮೂಲವಾದ ಸೀತೆಯನ್ನು ಒಪ್ಪಿಸಿಬಿಡು. ಪರನಾರೀ ಸಂಗವು ಹಾಲಾಹಲ, ಅಗ್ನಿಜ್ವಾಲೆ. ಅಪಯಶಸ್ಸುಂಟಾಗುವುದು. ಮುನಿಗಳೆದುರಿಗೆ ತೆಗೆದುಕೊಂಡ ವ್ರತವನ್ನು ಪರಿಪಾಲಿಸು.

ರಾವಣ:—(ಗರ್ವಿತ ಹಸಿತದಿಂದ) ಪ್ರಿಯೆ, ಏಕೆ ಸುಮ್ಮನೆ ಹೆದರುತ್ತೀಯೆ? ಲಂಕಾಧಿಪನಾದ ನಾನು ರಿಪುಪಾದಪಗಳಿಗೆ ಅಗ್ನಿ ಎಂದು ತಿಳಿಯೆಯಾ? ಭಯಪಡಬೇಡ. ಶಶಿಮುಖಿ ಸೀತೆಯನ್ನೊಪ್ಪಿಸೆನು.

ಮಂಡೋದರಿ:—(ಈರ್ಷ್ಯಾಕೋಪದಿಂದ ಪತಿಯನ್ನು ಕರ್ಣೋತ್ಪಲದಿಂದ ಹೊಡೆಯುತ್ತ) ಸೀತೆಯಲ್ಲಿ ಏನು ಸೌಭಾಗ್ಯವನ್ನು ಕಂಡಿದ್ದೀರೊ! ಗುಣವೇ, ರೂಪವೇ, ಏನಿದೆ? ಸಾಮಾನ್ಯ ಮಾನವ ಸ್ತ್ರೀ ಅವಳು; ಕಲಾವಿಹೀನಳು. ಖೇಚರಿಯಾದ ನಾನಿಲ್ಲವೆ? ನಿನ್ನ ಹೃದಯಕ್ಕೆ ಇಷ್ಟಳಲ್ಲವೆ? ಯಾವ ದೇವ ಗಣಿಕೆ ತಾನೆ ನನಗಿಂತ ಹೆಚ್ಚು!

ರಾವಣ:—(ಲಜ್ಜಿತನಾಗಿ ಅಧೋಮುಖನಾಗಿ, ಮನಸ್ಸಿನಲ್ಲಿ) ನಾನು ಹೇಗಿದ್ದರೂ ಪರಮಹಿಳಾಸಕ್ತ; ಅಪಯಶಸ್ಸು ಸುಲಭವಾಗಿ ಬಂದಿದೆ. (ವಿಲಕ್ಷಣವಾದ ನಗೆಯಿಂದ, ಪ್ರಕಾಶವಾಗಿ) ಕಾಂತೆ, ಎಲ್ಲರಿಗಿಂತಲೂ ನೀನು ಹೆಚ್ಚು; ನನ್ನ ಹೃದಯ ನೀನು.

ಮಂಡೋದರಿ:—ನೀತಿಜ್ಞನಾದರೂ ವಿಧಿವಶದಿಂದ ಎಂಥ ಪ್ರಮಾದಮಾಡಿದೆ! ನಾನು ಪ್ರಬೋಧಿಸುತ್ತೇನೆ, ನನ್ನನ್ನು ಪ್ರೀತಿಸುವ ಹಾಗಿದ್ದರೆ. ಹೃದಯೇಷ್ಟ

ಳಾದ ಸೀತೆಯನ್ನು ಬಿಟ್ಟುಬಿಡು. ಮುನಿಗಳಿದ್ದಾರೆ, ಅವರಲ್ಲಿ ಉಪದೇಶವನ್ನು ಪಡೆ. ನೀನು ಅಪ್ಪಣೆಕೊಟ್ಟರೆ ಸೀತೆಯನ್ನು ನಾನೇ ಕರೆದುಕೊಂಡು ಹೋಗಿ ರಾಮನಿಗೆ ಒಪ್ಪಿಸಿ ಅವನ ಪ್ರಸಾದವನ್ನು ಪಡೆದು ಮಕ್ಕಳನ್ನೂ ಭಾನು ಕರ್ಣನನ್ನೂ ಬಿಡಿಸಿಕೊಂಡು ಬರುತ್ತೇನೆ.

ರಾವಣ :—(ರುಷ್ಟನಾಗಿ) ಪಾಪಿ, ತೊಲಗು ಇಲ್ಲಿಂದ, ಬೇಗನೆ ತೊಲಗು ; ನಿನ್ನ ಮುಖವನ್ನೆಲ್ಲಿ ನೋಡೆನೋ ಅಲ್ಲಿಗೆ ತೊಲಗು.

ಮಂಡೋದರಿ:—ಪ್ರಭೂ, ಲೋಕವೆಲ್ಲ ಹೇಳುತ್ತಿದೆ, ಬಲದೇವ ವಾಸುದೇವರಜನ್ಮ ಪ್ರತಿವಾಸುದೇವನಿಗಾಗಿ ಎಂದು. ಭರತಖಂಡದಲ್ಲಿ ಎಷ್ಟೋ ಜನ ಅಂಥವರು ಆಗಿಹೋಗಿದ್ದಾರೆ. ಈಗ ಈ ರಾಮಲಕ್ಷ್ಮಣರು ಬಲದೇವ ವಾಸುದೇವರು. ಆದ್ದರಿಂದ ಸ್ವಾಮಿಾ, ನೀನೂ ಈಗ ವಿನಾಶ ಹೊಂದಲು ಬಯಸುತ್ತೀಯಾ ? ಎಷ್ಟುಕಾಲ ಅನುಭವಿಸಿದರೂ ವಿಷಯಸುಖದಿಂದ ತೃಪ್ತಿ ಬೇರೆ ಉಂಟಾಗುವು ದಿಲ್ಲ. ಆದ್ದರಿಂದ ದೇವ ಗುರು ಭಕ್ತಿಯುಳ್ಳವನಾಗಿ ದೀಕ್ಷೆಯನ್ನು ಹೊಂದಿ ದುಃಖಕ್ಷಯವನ್ನು ಮಾಡು. ಸುಮ್ಮನೆ ಯುದ್ಧದಿಂದ ಏನು ಪ್ರಯೋಜನ? ಬಹು ಪ್ರಾಣಹಾನಿಯಷ್ಟೇ ಅಲ್ಲವೆ? ಮಹಾಶಯ, ಯುದ್ಧವನ್ನು ಬಿಡು, ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ.

ರಾವಣ :—(ನಕ್ಕು) ಕೃಶೋದರಿ, ಬೇಡ ಬೇಡ, ಏಳು. ವಾಸುದೇವನ ನಾಮ ಮಾತ್ರದಿಂದಲೇ ಉದ್ವೇಗವನ್ನು ಪಡಬೇಡ. ಇಂಥ ಬಲದೇವ ವಾಸು ದೇವರು ಈ ಭರತಖಂಡದಲ್ಲಿ ಬಹುಮಂದಿ ಇದ್ದಾರೆ. ಇಂದ್ರನನ್ನು ತಂದ ಹಾಗೆ ಈ ನಾರಾಯಣನನ್ನೂ ಬೇಗ ಎಳೆದುಕೊಂಡು ಬರುತ್ತೇನೆ.

ಎಂದು ಮಂಡೋದರಿಯನ್ನು ಸಮಾಧಾನಮಾಡಿ ರಾವಣನು ಗೈರಿಕ ಕೃತಾಂಗ ರಾಗವುಳ್ಳ ತನ್ನ ಮತ್ತಗಜವನ್ನೇರಿ ಸಮರಾಂಗಣಕ್ಕೆ ದುಮುಕಿದನು. ಹದ್ದೆರ ಗಿದರೆ ಚೆದರಿಹೋಗುವ ಹಕ್ಕಿಗಳಂತೆ ರಾಮನ ಸೈನ್ಯವು ವಿಕೀರ್ಣವಾಯಿತು. ಆ ಆಟೋಪವನ್ನು ಕಂಡು ಲಕ್ಷ್ಮಣನು ಬದ್ಧ ಭ್ರುಕುಟಿಯಾಗಿ ರಥಾರೂಢನಾಗಿ ಮಿಂಚಿನ ವೇಗದಿಂದ ಅವನನ್ನು ಅಡ್ಡೈಸಿ ಮೂದಲಿಸುತ್ತ, "ರೇ ದುಷ್ಟ, ಪಾಪಿ, ತಸ್ಕರ, ನನ್ನೆದುರಿಗೆ ನಿನ್ನ ರಥವನ್ನು ಕೊಂಚ ನಿಲ್ಲಿಸು, ನಿನ್ನ ಜೀವವನ್ನು ಹಿಂಡು ತ್ತೇನೆ" ಎಂದು ಬಾಯ್ಮಸಗಿ ಗರ್ಜಿಸಿದನು.

ರಾವಣ :—ರಾವಣನೆಂಬ ಹೆಸರನ್ನು ಹಿಂದೆ ನೀನು ಕೇಳಲಿಲ್ಲವೆ! ಅವನು ಅಶೇಷ ಪೃಥ್ವೀನಾಥನು. ಉತ್ತಮ ದರ್ಪಾರೂಢನು ಈ ಲೋಕದಲ್ಲಿ.

ಲಕ್ಷ್ಮಣ :—ಎಲ್ಲ ಬಲ್ಲೆ ! ನಿನ್ನ ಪ್ರತಾಪ ಕತ್ತೆಯ ಕೊರಳಲ್ಲಿ ವಿಜಯ ಗಂಟೆ ಇದ್ದಹಾಗೆ. ಯೋಚನೆಮಾಡಿ ನೋಡು. ಈಗಲಾದರೂ ಸೀತೆಯನ್ನು ಬಿಟ್ಟುಕೊಡು.

ರಾವಣ :—ದೇವಾಸುರರಲ್ಲಿ ಕೀರ್ತಿಪಡೆದವನು ನಾನು. ಮೂರು ಲೋಕದಲ್ಲಿಯೂ ಅಪ್ರತಿಹತವಾಗಿ ಪ್ರತಾಪವನ್ನು ಮೆರೆದವನು. ಮನುಷ್ಯರೊಡನೆ ಯುದ್ಧಮಾಡುವುದಕ್ಕೆ ನನಗೆ ಬಹು ಸಂಕೋಚ. ನೀನು ನಿರ್ವಿಣ್ಣ. ನಿನ್ನದು ನಿಯತಜೀವ. ಯುದ್ಧಮಾಡುವುದೇ ಆದರೆ ನಿಲ್ಲು. ಎರಡೇಟು ಕೊಟ್ಟರೆ ಎಲ್ಲ ಅಡಗುತ್ತದೆ.

ಲಕ್ಷ್ಮಣ :—ನಿನ್ನ ತಿರುಳೆಲ್ಲ ನನಗೆ ಗೊತ್ತಿದೆ. ನಿನ್ನ ದೊಡ್ಡ ಕತ್ತನ್ನು ಈಗಲೇ ಕಿವುಚಿಬಿಡುತ್ತೇನೆ.

ಎಂದು ಹೇಳುತ್ತ ಲಕ್ಷ್ಮಣನು ರೋಷಪರವಶನಾಗಿ ಧನುಷ್ಟಂಕಾರ ಮಾಡುತ್ತ ಬಾಣಜಾಲವನ್ನು ಹರಡಿ ವರ್ಷಾಕಾಲದ ಮೇಘದಂತೆ ಗಗನತಲವನ್ನು ಮುಚ್ಚಿದನು. ದಶಮುಖನು ಅದನ್ನು ನಿವಾರಿಸುತ್ತ ಯಮದಂಡ ಸದೃಶವಾದ ಬಾಣಗಳಿಂದ ಅವನನ್ನು ಮರ್ದಿಸಿದನು. ಉಭಯ ವೀರರೂ ಜನಿತಾಭಿಮಾನದಿಂದ ಮಲೆತು ಅಸ್ತ್ರ ಶಸ್ತ್ರ ಪ್ರಹಾರಗಳಿಂದ ಒಬ್ಬರನ್ನೊಬ್ಬರು ಗಾರುಗೆಡಿಸಲು ಹವಣಿಸುವ ಭಯಂಕರ ದೃಶ್ಯವನ್ನು ನೋಡಿ ವಿಯತ್ತಲದ ವಿಭುಗಳು ಭ್ರಮೆಗೊಂಡರು. ಜಯವಧುವಿನ ಚಂಚಲಕಟಾಕ್ಷವು ಕಾರ್ಗಾಲದ ತುಂಡು ಮೋಡಗಳ ಮಿಂಚಿನಂತೆ ಅತ್ತ ಇತ್ತ ಸುಳಿಯುತ್ತಿತ್ತು. ಸೋಲುಗೆಲವುಗಳು ಸಂಶಯತುಲಾವಲಗ್ನವಾದುವು. ಆ ಸಮಯದಲ್ಲಿ ದಶಾನನನು ಬಹು ರೂಪಿಣೀ ಮಹಾವಿದ್ಯೆಯನ್ನು ವಿಜೃಂಭಿಸಿದನು. ಅಸಂಖ್ಯ ರಾವಣರು ಮೈದೋರಿ ಮಾರ್ಮಲೆತು ಸುತ್ತಿ ಮುತ್ತಿದರೂ ಎದೆಗೆಡದೆ ಲಕ್ಷ್ಮಣನು ಬೇಗಬೇಗನೆ ತಲೆ ತೋಳುಗಳನ್ನು ಕತ್ತರಿಸಿ ಕತ್ತರಿಸಿ ಹೆಬ್ಬೆಟ್ಟಗಳನ್ನು ಕಟ್ಟಿದನು. ಮೇಲಕ್ಕೆ ಚಿಮ್ಮುವ ಉದ್ದಾಮರುಧಿರ ಧಾರೆಗಳಿಂದ ಗಗನ ತಲವು ಸಂಧ್ಯಾರುಣಚ್ಛಾಯೆಯನ್ನು ಬೀರಿತು. ಈ ಮಹಾ ಘೋರಸಂಗ್ರಾಮಕ್ಕೆ ಕೊನೆಯಾವುದೆಂದು

ಲಕ್ಷ್ಮಣನು ಚಿಂತಿಸಿದನು. ರಾವಣನೂ ಬೆವರಿನಲ್ಲಿ ಮಿಂದು ದೀರ್ಘ ನಿಶ್ವಾಸವನ್ನು ಬಿಡುತ್ತ ತನ್ನ ಚಕ್ರಾಯುಧವನ್ನು ಸ್ಮರಿಸಿಕೊಂಡನು. ಶರತ್ಕಾಲದ ಸೂರ್ಯನಂತೆ ಪ್ರಜ್ವಲಿಸುತ್ತ ಪ್ರಳಯ ಮಹಾ ಮೇಘ ನಿರ್ಘೋಷದಿಂದ ಆ ಚಕ್ರರತ್ನವು ಸನ್ನಿಹಿತವಾಗಿ ರಾವಣನ ಕೈಯಲ್ಲಿ ರಂಜಿಸಿತು. ಪ್ರಲಯಾರ್ಕ ಸನ್ನಿಭವಾದ ಆ ಚಕ್ರವನ್ನು ಮನೋವೇಗದಿಂದ ತಿರುಗಿಸುತ್ತಾ ಕೆಂಪಡರಿದ ಕಣ್ಣುಳ್ಳ ರಾವಣನು, "ಏ ಲಕ್ಷ್ಮಣ, ದೇಹದಲ್ಲಿ ತ್ರಾಣವಿದ್ದರೆ ಸಹಿಸಿಕೋ ಇದನ್ನು" ಎಂದು ಗರ್ಜಿಸುತ್ತ ಬೀಸಿಬಿಟ್ಟನು. ಅದು ಗುಡುಗಿಡುತ್ತ ತಡೆಯಲು ಸಿದ್ಧರಾಗಿದ್ದ ವಿಭೀಷಣಾದಿಗಳ ಕೈಮೀರಿ ರೋಷದಿಂದ ಮುನ್ನುಗ್ಗಿ ಬಂದು ವಾಸುದೇವನಾದ ಲಕ್ಷ್ಮಣನನ್ನು ಪ್ರದಕ್ಷಿಣೆಮಾಡಿ ಅವನ ಕೈಯಲ್ಲಿ ಅಧಿಷ್ಠಿತವಾಯಿತು. ಕೊಲ್ಲಲೆಳಸಿ ಬಂದ ಚಕ್ರವು ಸುಕೃತ ಫಲದಿಂದ ಲಕ್ಷ್ಮಣನಿಗೆ ಕೊಲ್ಲಲು ಕೈದುವಾಯಿತು. ಬಹುರೂಪಿಣೀ ವಿದ್ಯೆಯೂ ಲಕ್ಷ್ಮಣನು ವಾಸುದೇವನೆಂದು ತಿಳಿದಬಳಿಕ ರಾವಣನನ್ನು ನಡುನೀರಿನಲ್ಲಿ ಕೈಬಿಟ್ಟು ಓಡಿಹೋಯಿತು.

ರಾವಣನ ನಿರಾಶೆ ಸಾಂದ್ರತರವಾಯಿತು. ಅವನ ನಚ್ಚಿನ ಆಯುಧವು ಅವನಿಗೆ ಕಿಚ್ಚಾಯಿತು. ಇದಿರಲ್ಲಿ ಚಕ್ರಪಾಣಿ ನಿಂತಿರುವುದನ್ನು ನೋಡಿ, "ಅನಂತವೀರ್ಯ ಗುರುಗಳು ಅಂದು ಹೇಳಿದ ಮಾತು ಇಂದು ನಿಜವಾಯಿತು. ಹೇ ಪೊಡವಿವೆಣ್ಣೆ, ಆಜ್ಞೆಗೆ ಒಳಗಾಗಿ ದಾಸಿಯ ಹಾಗೆ ನನ್ನ ವಶದಲ್ಲಿದ್ದೆ. ನನ್ನನ್ನು ಮನುಷ್ಯಮಾತ್ರನಾದ ಈ ಲಕ್ಷ್ಮಣನು ಈ ಅವಸ್ಥೆಗೆ ತಂದಿರುವುದನ್ನು ನೋಡಿ ನಿನಗೆ ಆಶ್ಚರ್ಯವಾಗಲಿಲ್ಲ! ಹೇ ರಾಜಲಕ್ಷ್ಮಿ, ನೀನು ಚಿರಕಾಲ ಒಂದೆಡೆಯಲ್ಲಿ ಇರುವವಳಲ್ಲ, ಮುಹೂರ್ತ ಮಾತ್ರ ರಮಣೀಯಳು, ನಿನಗೆ ಧಿಕ್ಕಾರ. ಭೋಗಗಳು ಕಿಂಪಾಕಫಲಕ್ಕೆ ಸಮಾನವಾದುವು; ಆ ಮೇಲೆ ವಿಷ ಕಟುವಾಗಿ ಪರಿಣಮಿಸುತ್ತವೆ; ಬಹು ದುಃಖ ದುರ್ಗತಿಗಳನ್ನುಂಟುಮಾಡುತ್ತವೆ. ಆದ್ದರಿಂದಲೇ ಸಾಧುಗಳೆಲ್ಲರೂ ನಿನ್ನನ್ನು ನಿಂದಿಸುವರು. ಭರತಾದಿ ಮಹಾಪುರುಷರು ರಾಯಸಿರಿಯನ್ನು ಬಿಟ್ಟು ಧನ್ಯರಾಗಿದ್ದಾರೆ; ಅಚಲವಾದ ಅನುತ್ತರವಾದ ಕಲ್ಯಾಣವನ್ನು ಪಡೆದಿದ್ದಾರೆ. ಇನ್ನು ಮೋಹದಿಂದ ಜಿತನಾದ ನಾನು ಉಪಸ್ಥಿತವಾದ ಘೋರವಾದ ಈ ಶತ್ರುಭಯದಲ್ಲಿ ಏನುತಾನೆ ಮಾಡಲಿ?" ಎಂದು ರಾವಣನು ಚಿಂತಿಸುತ್ತ ಪುತ್ತಳಿಯಂತೆ ನಿಂತಿರುವನು. ವಿಭೀಷಣನು

VIJAYA EVENING COLLEGE LIBRARY
BANGALORE-4. 1970

ಅವನನ್ನು ನೋಡಿ ಮಧುರ ವಚನಗಳಿಂದ, "ಪ್ರಭೂ, ಆತ್ಮಹಿತವನ್ನು ತಿಳಿದು ಈಗಲಾದರೂ ನನ್ನ ಮಾತನ್ನು ಕೇಳು. ಸೀತೆಯನ್ನೊಪ್ಪಿಸಿ ಪದ್ಮದೇವನ ಪ್ರಸಾದದಿಂದ ಬಾಳು" ಎಂದು ಹಿತೋಕ್ತಿಗಳನ್ನು ಹೇಳುವನು. ಬಹುದೂರ ಸಾಗಿಹೋದವನು ಮರಳಿ ಬರುವುದಕ್ಕೆ ಆದೀತೆ? ಸಹೋದರನ ಮಾತುಗಳನ್ನು ಕಡೆಗಣಿಸುತ್ತ—

ರಾವಣ :—ಎಲೋ ಲಕ್ಷ್ಮಣ! ಭೂಮಿಗೋಚರ, ನಿನ್ನ ಗರ್ವ ಮಿತಿಮೀರಿದೆ. ನಿನ್ನ ಗರ್ಜನೆ ಅಡಗುವಷ್ಟರಲ್ಲಿ ನನ್ನೆದುರಿಗೆ ನಿನ್ನ ವಿಕಟಜಟಾಭಾಸುರವಾದ ಮುಖ ಬೀಳುವುದನ್ನು ನೋಡದಿರುವೆಯಾ? ರತ್ನಶ್ರವನ ಮಗನೂ ವಿಜಿತ ಶತ್ರುವೂ ಆದ ನಾನು ಅಪ್ರತಿಹತನು. ನಿನ್ನ ಜೀವವಿರುವವರೆಗೂ ನಿನ್ನ ಸೊಲ್ಲಡಗಿಸುತ್ತೇನೆ.

ಲಕ್ಷ್ಮಣ :—ಹೆಚ್ಚು ಮಾತುಗಳಿಂದ ಪ್ರಯೋಜನವೇನು? ನಿನ್ನನ್ನು ಕೊಲ್ಲುವ ಶತ್ರು ನಾರಾಯಣನಾದ ನಾನು ಈಗ ಬಂದಿದ್ದೇನೆ. ತಂದೆಯ ಮಾತಿನಿಂದ ನೆಲೆ ತಪ್ಪಿ ಕಾಡಿನ ಹಣ್ಣು ಹಂಪಲುಗಳನ್ನು ತಿನ್ನುವ ನನ್ನನ್ನು ಈ ಕೂಡಲೇ ನಾರಾಯಣಾತ್ಮಕನೆಂದು ತಿಳಿಯುವೆ.

ರಾವಣ :—ನಾರಾಯಣ, ಸುಮ್ಮನೆ ಮಾತಾಡಬೇಡ. ನೀನು ಯಾರೇ ಆಗಿರು, ನಿನ್ನ ಮಾನಭಂಗವನ್ನು ನಿಸ್ಸಂಶಯವಾಗಿ ಈಗಲೇ ಮಾಡುತ್ತೇನೆ. ಲಕ್ಷ್ಮಣ, ಕೈಗೆ ಚಕ್ರ ಸಿಕ್ಕಿದೆಯೆಂದು ಅತಿಗರ್ವಿತನಾಗಿದ್ದೀಯೆ! ಒಂದು ವೇಳೆ ಖಲನಾದ ನಿನ್ನಿಂದ ಪಾದಚಾರಿಗಳಿಗೆ ಮಹೋತ್ಸವವಾದರೂ ಆಗಲಿ.

ಲಕ್ಷ್ಮಣ :—ಈ ಚಕ್ರದಿಂದ ನಿನ್ನನ್ನು ನಿನ್ನ ರಥತುರಗಖೇಚರರೊಡನೆ ಪಾತಾಳದಲ್ಲಿ ನೋಡುತ್ತೇನೆ. ಬಹೂಕ್ತಿಗಳಿಂದ ಏನು?

ಎಂದು ಹೇಳುತ್ತಾ ಘನಘೋಷಭೀಷಣವಾದ ಚಕ್ರವನ್ನು ತಿರುಗಿಸಿಟ್ಟನು. ರಾವಣನು ಕಂಡು ರೋಷಗೊಂಡು ಅದನ್ನು ನಿವಾರಿಸುವುದಕ್ಕೆ ತನ್ನ ನಿಖಿಲ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಿದನು. ಆದರೆ ಪುಣ್ಯಾವಸಾನ ಸಮಯದಲ್ಲಿ ಮರಣವು ಸನ್ನಿಹಿತವಾಗಿದ್ದುದರಿಂದ ಅವನ ಘನೋದ್ಯಮವೆಲ್ಲ ವ್ಯರ್ಥವಾಯಿತು. ಆ ಚಕ್ರರತ್ನವು ಅವನೆದುರಿಗೆ ವಿಜೃಂಭಿಸುತ್ತ ಅವನ ಪ್ರಹಾರಗಳನ್ನೆಲ್ಲ ತಡೆದು

ಅತಿಮಾನಿಯಾದ ಅವನ ವಿಪುಲವಕ್ಷಃಸ್ಥಲವನ್ನು ಶೀಘ್ರವಾಗಿ ಸೀಳಿತು. ಅಂಜನ ಗಿರಿಯಂತೆ ರಣಮಹೀತಲದಲ್ಲಿ ಅವನು ಉರುಳಿದನು. ಸುಪ್ತ ಕುಸುಮ ಕೇತುವಿನಂತೆ, ನಿರ್ಜಿತ ದೇವನಂತೆ, ಅಸ್ತಗಿರಿಸ್ಥಿತ ದಿವಸಕರನಂತೆ ಲಂಕಾಧಿಪತಿ ರಾರಾಜಿಸಿದನು.

ಅಣ್ಣನ ಸಾವನ್ನು ಕಂಡು ವಿಭೀಷಣನಿಗೆ ಬಹು ಸಂಕಟವಾಯಿತು. ಸಹೋದರನ ಮಗ್ಗುಲಲ್ಲಿ ನಿಂತುಕೊಂಡು, "ಹಾ ಅಣ್ಣ, ರಾವಣ, ಮಹಾಯಶ, ಇಂದ್ರನ ಹಾಗೆ ಸಂಪತ್ತಿನಿಂದ ಕೂಡಿದ್ದರೂ ಮಹಾ ಘೋರವಾದ ಈ ಅವಸ್ಥೆ ನಿನಗೆ ಹೇಗೆ ಉಂಟಾಯಿತು ? ಹಿಂದೆ ನಾನು ಹೇಳಿದ ಹಿತಕರವಾದ ಮಾತುಗಳನ್ನು ಕೇಳದೆ ಹೋದೆಯಾ ? ಕಠಿನವಾದ ಚಕ್ರದ ಏಟಿನಿಂದ ಈಗ ಈ ಪೆಡಸಾದ ನೆಲದಲ್ಲಿ ಹೇಗೆ ಮಲಗಿರುವೆ? ಏಳು ತಂದೆ, ಮಾತಾಡು. ಶೋಕ ಮಹಾ ಸಾಗರದಲ್ಲಿ ಬಿದ್ದಿದ್ದೇನೆ. ಕೈ ಹಿಡಿದೆತ್ತು" ಎಂದು ಗೋಳಿಡುವನು. ಅಂತಃಪುರ ಸ್ತ್ರೀಯರೂ ಅವನ ಮರಣವಾರ್ತೆಯನ್ನು ಕೇಳಿ ಶೋಕದಿಂದ ಕುದಿಯುತ್ತ ಅಳುತ್ತ ಯುದ್ಧಭೂಮಿಗೆ ಬಂದು ರಕ್ತ ಸುತ್ತಿಕೊಂಡು ಕೆಸರಂಟಿದ್ದ ಅವನ ದೇಹವನ್ನು ನೋಡಿ ಅವನ ಗುಣಗಳನ್ನು ನೆನೆದುಕೊಂಡು ಮರುಕೊಳಿಸುವ ದುಃಖದಿಂದ ದಿಕ್ಕುಗೆಟ್ಟು ದೀನರಾಗಿ ಹಂಬಲಿಸುವರು. ಇಷ್ಟುಹೊತ್ತಿಗೆ ರಾಮನು ಲಕ್ಷ್ಮಣನೊಡನೆ ಇವರನ್ನು ಸಂತೈಸುವುದಕ್ಕಾಗಿ ಅಲ್ಲಿಗೆ ಬರುತ್ತಾನೆ. ಬಂದವನು ವಿಭೀಷಣನನ್ನು ಕುರಿತು, "ಭದ್ರ, ಅಳಬೇಡ. ಲೋಕದ ವೃತ್ತಾಂತ ನಿನಗೆ ಗೊತ್ತಿದೆ. ಸಂಸಾರದಲ್ಲಿ ಕರ್ಮಗಳ ಚೇಷ್ಟೆಯೇ ಹೀಗೆ. ಜೀವನು ಹಿಂದೆ ಮಾಡಿದ್ದನ್ನು ಈಗ ಅನುಭವಿಸುತ್ತಾನೆ. ಸುಮ್ಮನೆ ಹೀಗೆ ಮರುಗುವುದರಿಂದ ಏನು ಪ್ರಯೋಜನ? ಈ ರಾವಣನು ಬಹು ಸತ್ವಸಂಪನ್ನನಾಗಿದ್ದರೂ ಈ ಭೂಮಿಗೆಲ್ಲ ಒಡೆಯನಾಗಿದ್ದರೂ ಮೋಹದಿಂದ ಕೆಟ್ಟು ಈ ಅವಸ್ಥೆಗೆ ಇಳಿದನು" ಎಂದು ಅವನ ದುಃಖವನ್ನು ಆರಿಸುವನು.

೪. ನಾಗಚಂದ್ರನ ರಾವಣ

ವಿಮಲಸೂರಿ ಇಷ್ಟು ಸುಂದರವಾಗಿ ಚಿತ್ರಿಸಿರುವ ಈ ದುರಂತ ರಾವಣನ ಪಾತ್ರ ನಾಗಚಂದ್ರನಿಗೆ ಮಾದರಿ. ಈ ಚಿತ್ರದ ಸೌಂದರ್ಯವನ್ನು ತನ್ನ ದೃಷ್ಟಿಗೆ

ನಿಲುಕುವಷ್ಟುಮಟ್ಟಿಗೆ ನಾಗಚಂದ್ರನು ಅನುಭವಿಸಿ ಕೆಲವೆಡೆಗಳಲ್ಲಿ ಅದಕ್ಕೆ ಹೆಚ್ಚು ಕಳೆಯೇರುವಂತೆ ವರ್ಣಿಸಿರುವನು. ರಾವಣನ ಉದಾತ್ತತೆಯನ್ನೂ ಪ್ರವರ ಪುರುಷತ್ವವನ್ನೂ ನಾಗಚಂದ್ರನೇಕೋ ಅಷ್ಟು ಸಮರ್ಪಕವಾಗಿ ಹೇಳದೆ ಬಿಟ್ಟಿದ್ದಾನೆ. ದೊಡ್ಡ ಕಥೆಯನ್ನು ಸಣ್ಣದು ಮಾಡಬೇಕೆಂಬ ಆತುರದಿಂದ ಹೀಗೆ ಮಾಡಿರಬಹುದು. ರಾವಣನ ಸೌಮ್ಯ ಆಕಾರವನ್ನಾಗಲಿ, ಜನಗಳಿಗೆ ಅವನಲ್ಲಿದ್ದ ಅನುರಾಗವನ್ನಾಗಲಿ ನಾಗಚಂದ್ರನು ವಿಶದವಾಗಿ ಹೇಳದೆ ಕಡೆಗಣಿಸಿದ್ದಾನೆ. ಅಲ್ಲದೆ ಅವನ ಪಾತ್ರಕ್ಕೆ ಕಳಂಕ ತಟ್ಟುವಂಥ ಒಂದು ಸನ್ನಿವೇಶವನ್ನೂ ಕಲ್ಪಿಸಿಕೊಂಡಿದ್ದಾನೆ. ವಾಲಿಯ ತಂಗಿಯಾದ ಶ್ರೀಪ್ರಭೆಯನ್ನು ಬಯಸಿ ರಾವಣನು ಅವಳನ್ನು ತನಗೆ ಮದುವೆಮಾಡಿಕೊಡುವಂತೆ ಅವನಿಗೆ ಓಲೆಯನ್ನು ಬರೆದು ಕಳಿಸುತ್ತಾನೆ. ವಾಲಿ ಅದನ್ನು ಓದಿಕೊಂಡು ಆಲೋಚನೆ ಮಾಡುತ್ತ "ತಗದೆ ನಗುನ್ಮಾರ್ಗಿಗೆ ಕೂಸುಗುಡಲ್. ದಶಕಂಧರಂ ಮದಾಂಧಂ. ಧರ್ಮಾನುಗನಲ್ಲನ್. ಅನುಜೆಯಂ ಕುಡೆ ತೆಗಟಿಹದೊಳ್ ಪರದೊಳೆನಗೆ ಪಾತಕಮಕ್ಕುಂ. ಕುಡೆ ಕೂಸ ನುದ್ಧತಂಗಾಂ ಪೊಡೆವಡುವನಿತಕ್ಕುಂ. ಆದೊಡೆನ್ನ ಚರಿತ್ರಂ ಕಿಡುಗಂ" ಎಂದು ಪರಿಜನರಿಗೆ ಹೇಳುವನು. ಇದನ್ನು ಓದಿದ ಕೂಡಲೆ ರಾವಣನ ವಿಷಯದಲ್ಲಿ ನಮಗೆ ದುರಭಿಪ್ರಾಯವುಂಟಾಗುವುದು. ಅವನು ಉನ್ಮಾರ್ಗಿಯೆಂದೂ ಮದಾಂಧನೆಂದೂ ಧರ್ಮಿಷ್ಠನಲ್ಲವೆಂದೂ ಉದ್ಧತನೆಂದೂ ಅವನ ನಂಟತನ ಸತ್ಪುರುಷರಿಗೆ ಕೇಡು ಎಂದೂ ಮನಸ್ಸಿಗೆ ತಿಳಿದು ಅವನ ಕಡೆಗೆ ಹರಿಯುವ ಸಹಾನುಭೂತಿಗೆ ತಡೆಯುಂಟಾಗುವುದು. ಆ ಮಾತುಗಳನ್ನಾಡುಲು ವಾಲಿಗೇನೂ ರಾವಣನು ಕೆಡುಕುಮಾಡಿಲ್ಲ; ಅವನ ವಿಷಯದಲ್ಲಿ ಗರ್ವದಿಂದ ನಡೆದುಕೊಂಡಿಲ್ಲ. ಒಂದು ರೀತಿಯಿಂದ ವಾಲಿಯೇ ಅವನ ಹಂಗಿಗೆ ಒಳಗಾಗಿದ್ದಾನೆ. ಅವನ ತಂದೆಯಾದ ಸೂರ್ಯಜನಿಗೆ ರಾವಣನು ಕಿಷ್ಕಿಂಧಾಪುರವನ್ನು ಕೊಟ್ಟು ರಾಜನನ್ನಾಗಿ ಮಾಡಿದ್ದಾನೆ. ಈ ಉಪಕಾರಕ್ಕಾಗಿ ವಾಲಿ ತನ್ನ ತಂಗಿಯನ್ನು ಅವನಿಗೆ ಕೊಡಬೇಕಾದದ್ದು ಏನೂ ಹೆಚ್ಚಲ್ಲ. ರಾವಣನಿಗೂ ಕೇಳುವುದಕ್ಕೆ ಬಾಯಿದೆ, ಅರ್ಹತೆಯಿದೆ. ಮನಸ್ಸೊಪ್ಪದಿದ್ದರೆ ತಂಗಿಯನ್ನು ಕೊಡುವುದಕ್ಕಿಷ್ಟವಿಲ್ಲವೆಂದು ವಾಲಿ ಹೇಳಬೇಕಾಗಿತ್ತು. ಹೀಗೆ ಹೇಳದೆ ಅವನು ರಾವಣನನ್ನು ಕಾರಣವಿಲ್ಲದೆ ಎತ್ತಿಹಾಕುವುದು ಚೆನ್ನಾಗಿಲ್ಲ. ಇದೇ ಸಂದರ್ಭದಲ್ಲಿ ವಿಮಲಸೂರಿಯು ವಾಲಿ

ಹೇಳುವ ಮಾತುಗಳನ್ನು ನೋಡಬಹುದು. ರಾವಣನ ದೂತನು ಬಂದು ಶ್ರೀಪ್ರಭೆಯನ್ನು ತನ್ನ ಸ್ವಾಮಿಗೆ ಒಪ್ಪಿಸಬೇಕೆಂದು ಕೇಳುತ್ತಲೇ ವಾಲಿ "ಮಕುಟ ಕುಂಡಲಾಟೋಪವನ್ನುಳ್ಳ ನನ್ನ ಈ ತಲೆ ಜಿನಪತಿಯನ್ನು ಬಿಟ್ಟು ಇತರರ ಪಾದಗಳಿಗೆ ಎರಗದು"* ಎಂದು ಅರ್ಥಪೂರ್ಣವಾದ ಮಾತುಗಳನ್ನು ಹೇಳುವನು. ಈ ಮಾತುಗಳಿಂದ ವಾಲಿ ಜಿನಭಕ್ತನೆಂದೂ ರಾವಣನು ಜಿನನಿಗೆ ಸರಿಯಲ್ಲವೆಂದೂ ಮಾತ್ರ ಹೊರಪಡುವುದು. ವಾಲಿಯ ಘನತೆಯೂ ನಿಲ್ಲುತ್ತದೆ, ರಾವಣನ ಉದಾತ್ತತೆಯೂ ನಿಲ್ಲುತ್ತದೆ. ಹೀಗೆಯೇ ರವಿಷೇಣನೂ ವಾಲಿಯ ಬಾಯಿಂದ ಇಂಥ ಮಾತುಗಳನ್ನಾಡಿಸಿಲ್ಲ. ರಾವಣನಲ್ಲಿ ಔದ್ಧತ್ಯವೇ ಮೊದಲಾದ ದುರ್ಗುಣಗಳು ಸೀತಾಪಹರಣವಾದ ಮೇಲೆ ಒಂದೊಂದಾಗಿ ಮೇಲಕ್ಕೆ ತೇಲುತ್ತವೆಯೇ ಹೊರತು ಅದಕ್ಕೆ ಮುಂಚೆ ಅವು ಆವನಲ್ಲಿ ಕಂಡುಬರುವುದಿಲ್ಲ. ಇದನ್ನೆಲ್ಲ ತಿಳಿದು ತಿಳಿದು ನಾಗಚಂದ್ರನು ರಾವಣನಿಗೆ ಸಲ್ಲದ ಮಾತುಗಳನ್ನು ವಾಲಿಯಿಂದ ಹೇಳಿಸಿರುವುದನ್ನು ನೋಡಿದರೆ ಅವನು ಆ ಪಾತ್ರದ ಉದಾತ್ತತೆಯನ್ನು ಚೆನ್ನಾಗಿ ಮನಗಂಡಿಲ್ಲವೆಂದು ಹೇಳಬೇಕಾಗುತ್ತದೆ.

ಇಷ್ಟೇ ಅಲ್ಲ. ಇನ್ನೂ ಹಲವು ಸಂದರ್ಭಗಳಲ್ಲಿ ನಾಗಚಂದ್ರನು ರಾವಣನನ್ನು ಹೆಚ್ಚು ಸಹಾನುಭೂತಿಯಿಂದ ನೋಡಿಲ್ಲ. ಸೀತೆಯನ್ನು ಕಂಡ ಕೂಡಲೇ ರಾವಣನು ಮೋಹದಲ್ಲಿ ಸಿಕ್ಕಿಬಿದ್ದ ದೃಶ್ಯವನ್ನು ನಾಗಚಂದ್ರನು ಎಣೆಯಿಲ್ಲದ ಸೊಗಸಿನಿಂದ ವರ್ಣಿಸಿದ್ದಾನೆ. ವಿಮಲಸೂರಿ ಈ ದೃಶ್ಯವನ್ನು ಅಷ್ಟು ವಿಸ್ತಾರವಾಗಿ ಚಿತ್ರಿಸಿಲ್ಲ. ರವಿಷೇಣನೂ ಇದನ್ನು ವಿವರವಾಗಿ ನಿರೂಪಿಸಿಲ್ಲ. ಆದ್ದರಿಂದ ಈ ದೃಶ್ಯದ ವಿವರಣೆ ನಾಗಚಂದ್ರನಿಗೇ ಸೇರಿದ್ದೆಂದು ಭಾವಿಸಬಹುದು. ಇಲ್ಲಿ ರಾವಣನು ಹೊಂಚುಕಾಯುತ್ತಿದ್ದ ವಿಧಿಯ ಬಲೆಗೆ ಸಿಕ್ಕಿಬೀಳುವನು. 'ಬಲೆದೃಷ್ಟಿಗೆ ವಜ್ರದ ಸಂಕಲೆ ಹೃದಯಕ್ಕೆನಿಸಿಪ್ಪ ರೂಪವತಿ' ಜಾನಕಿಯ 'ಕೊಂಕಿದ ಕುರುಳ್ಗಳ'ನ್ನೂ ತಳತಳಿಸಿ ಹೊಳೆಯುವ 'ಚಳನಯನಗಳ'ನ್ನೂ ಕಂಡು ರಾವಣನ ಚಿತ್ತ ಕದಡಿತು; 'ಪದ್ಮಪತ್ರದ ಜಲಬಿಂದುವಿ'ನಂತೆ ಚಲಿತವಾಯಿತು. ಈ ಸಮಯದಲ್ಲಿ ನಾಗಚಂದ್ರನು ರಾವಣನನ್ನು 'ಪಾಣ್ಬನ್' 'ಪಾತಕನ್'

* ಅಹ ಭಣಇ ಪವಂಗನಾಹೋ, ಮಜ್ಝ ಸಿರಂ ಮಉಡಕುಂಡಲಾಡೋವಂ
ಮೋತ್ತೂಣ ಜಿಣವರಿಂದಂ. ನ ಪಡಇ ಚಲಣೇಸು ಅನ್ನಸ್ಸ || ಪ ಚ ೯-೨೯

ಎಂದು ಕರೆಯುತ್ತಾನೆ. ಈ ವಿಶೇಷಣಗಳು ಅವನಿಗೆ ಈಗ ಯೋಗ್ಯವಲ್ಲ. ರಾವಣನ ಅಧೋಗತಿ ಮೊದಲಾಗುವ ಈ ದೃಶ್ಯದಲ್ಲಿ ಅವನ ಕಡೆಗೆ ಓದುಗರ ಅನುಕಂಪೆ ಹರಿಯಬೇಕು ; ಅವನು ವಿಧಿಯ ಕೈಯಲ್ಲಿನ ಒಂದು ಬೊಂಬೆ. ಅದು ಆಡಿಸಿದಂತೆ ಅವನು ಕುಣಿಯಬೇಕಾಗಿದೆ. ಅವನ ಯತ್ನ ಏನೂ ಇಲ್ಲ. ಸೀತೆಯನ್ನು ನೋಡುವುದಕ್ಕಿಂತ ಮುಂಚೆ ರಾವಣನೆಂದೂ ಜಾರನಾಗಿರಲಿಲ್ಲ, ಪಾಪಿಯಾಗಿರಲಿಲ್ಲ. ಈಗ ಮಾತ್ರ ಹಾಗಾಗುವುದಕ್ಕೆ ಕಾಲಿಟ್ಟಿದ್ದಾನೆ. ನಾಗಚಂದ್ರನಿಗೆ ಇದೇನೂ ತಿಳಿಯದ ವಿಷಯವಲ್ಲ. "ಪಲರುಂ ವಿದ್ಯಾಧರ ಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತಮ್ಮೊಲವಿಂ ಮೇಲ್ವಾಯ್ದೊಡಂ ಮುಂಬಗೆಯದ ಬಗೆ"ಯುಳ್ಳವನು ರಾವಣನೆಂದು ಅವನೇ ಹೇಳಿದ್ದಾನೆ. ರಾವಣನು ದುರ್ಮೋಹಕ್ಕೆ ಒಳಗಾಗುತ್ತಲೇ ಅವನ ಸತ್ಯಶೌಚ ಗುಣ ಸಂಪತ್ತುಗಳೂ ಕೀರ್ತಿಯೂ ಮಾಸುವುದಕ್ಕೆ ಮೊದಲಿಟ್ಟುವು. "ಕಿಡಿ ಮಸಿಯಾದವೊಲ್ ವಿಷಯ ಲೋಭದಿನೆನ್ನರುಮೇಳಿದರಾಗದಿರ್ಪರೇ" "ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ" ಎಂದು ಅವನಲ್ಲಿ ಮರುಕಗೊಂಡ ನಾಗಚಂದ್ರನು ಅದೇ ದೃಶ್ಯದಲ್ಲಿಯೇ ಅವನನ್ನು ಪಾಪಿಯೆಂದೂ ಪಾಂಬನೆಂದೂ ಕರೆದಿರುವುದು ಉಚಿತವೆಂದು ತೋರುವುದಿಲ್ಲ. ವಿಮಲಸೂರಿ ಇಂಥ ಮಾತುಗಳನ್ನು ತನ್ನ ಕಾವ್ಯದಲ್ಲಿ ಒಂದು ಸಲವಾದರೂ ಉಪಯೋಗಿಸಿಲ್ಲ. ನಾಗಚಂದ್ರನೆಲ್ಲಿಯೋ ಎಚ್ಚರ ತಪ್ಪಿ ಹೀಗೆ ಬರೆದಿದ್ದಾನೆ. ಸ್ವಾಭಾವಿಕವಾಗಿಯೇ ಜಾರನಾದ ವ್ಯಕ್ತಿ ದುರ್ಗತಿಗಿಳಿಯುವುದರಲ್ಲಿ ದುರಂತತೆಯೇನೂ ಇರುವುದಿಲ್ಲ. ರಾವಣನು ಇಂಥವನಲ್ಲ. ಆದ್ದರಿಂದ ಇವನ ವಿಷಯವಾಗಿ ನಾಗಚಂದ್ರನು ಹೇಳಿರುವ ಮಾತುಗಳನ್ನು ಒಪ್ಪಿಕೊಂಡರೆ ಆ ಪಾತ್ರದ ದುರಂತತೆಯ ರಂಗು ತೆಳ್ಳಗಾಗುತ್ತದೆ.

ವಿಮಲಸೂರಿಯ ರಾವಣನು ಎಂಥ ಸನ್ನಿವೇಶದಲ್ಲಿಯೂ ಸಭ್ಯತೆಯಿಂದಲೂ ರಾಜಗಾಂಭೀರ್ಯದಿಂದಲೂ ನಡೆದು ಸುಸಂಸ್ಕೃತನಾದ ಆರ್ಯನಂತೆ ಕಾಣುವನು. ಒಂದು ಸಲವಾದರೂ ಅವನ ಬಾಯಿಂದ ಅನಾಗರಿಕವಾದ ಮಾತುಗಳು ಹೊರಬೀಳುವುದಿಲ್ಲ. ಸೀತೆಯನ್ನು ಎತ್ತಿಕೊಂಡುಹೋದ ಮೇಲೆ ಅವನು ಹಲವು ಬಾರಿ ಅವಳ ಮನಸ್ಸನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನ

ಪಡುವನು. ಆ ಸಮಯಗಳಲ್ಲೆಲ್ಲ ಕಾಮಪರವಶನಾಗಿ ಕಣ್ಣಾಗಣದಂತಿದ್ದರೂ ಸೀತೆಯ ಎದುರಿಗೆ ಅಸಭ್ಯವಾದ ಮಾತುಗಳನ್ನು ಆಡನು. "ದೇವಿ, ಪ್ರಸನ್ನಳಾಗು" ಎಂದು ಅಂಗಲಾಚಿ ಬೇಡಿಕೊಳ್ಳುವನೇ ಹೊರತು ನಾಗಚಂದ್ರನ ರಾವಣನಂತೆ ಅವನು

ನೂಪುರಮಂ ಪಡಕ್ಕೆ ಮಣಿಮೇಖಲೆಯಂ ಜಘನಕ್ಕೆ ಕುಂಕುಮಾ
ಲೇಪನಮಂ ಕುಚಕ್ಕೆ ಪಸುರ್ಗಂಕಣಮಂ ನಳಿತೋಳ್ಗೆ ಪತ್ರಲೇ
ಖಾ ಪರಿಶೋಭೆಯಂ ನಿಜ ಕಪೋಲ ತಲಕ್ಕೆ ಕುಡಲ್ ಮನೋಜ ಸಂ
ತಾಪನ ತಪ್ತಮಾತುರಿಸಿದಪ್ಪುದು ಮನ್ಮನಮಂಬುಜಾನನೇ
. . . . ವೈದೇಹಿ ವಿದ್ಯಾಧರ
ಕ್ರೀಡಾಸದ್ಮದೊಳಂಗರಾಗ ವಸನಾದಿ ದ್ರವ್ಯದಿಂ ಮನ್ಮಥ
ಕ್ರೀಡಾಸೌಖ್ಯಮನಪ್ಪುಕಯ್ದು ಮೆಱೆ ನೀಂ ನಾನಾ ವಿನೋದಂಗಳಂ

ಎಂಬುದಾಗಿ ಮರ್ಯಾದೆಯುಳ್ಳವನು ಹೇಳುವುದಕ್ಕೆ ಸಂಕೋಚಪಡುವಂಥ ಮಾತುಗಳನ್ನು ಹೇಳನು. ಎಷ್ಟಾದರೂ ಸೀತೆ ಪರಸ್ತ್ರೀ ಎಂಬ ಅರಿವು ಅವನಿಗಿದೆ. ಅವಳು ಈಗ ನಿಸ್ಸಹಾಯಳಾಗಿದ್ದರೂ ಅವನು ಅವಳ ವಿಷಯದಲ್ಲಿ ಮೇರೆ ಮೀರಿ ನಡೆಯಲು ಹಿಂಜರಿಯುವನು, ಏನುಬೇಕಾದರೂ ಮಾಡಬಹುದಾಗಿತ್ತು. ಆದರೆ ಅವನು ತನ್ನನ್ನು ತಾನೇ ಸಂತಯಿಸಿಕೊಂಡು ಕಾಲ ಕಳೆದರೆ ಸೀತೆ ಒಪ್ಪಿಕೊಳ್ಳದೆ ಇನ್ನೇನು ಮಾಡಿಯಾಳು ಎಂದು ತನ್ನ ಮನಸ್ಸನ್ನು ಹತೋಟಿಗೆ ತಂದುಕೊಳ್ಳುವನು. ಪರಸ್ತ್ರೀಯೊಬ್ಬಳನ್ನು ಕದ್ದು ತಂದಿದ್ದೇನೆ ಎಂದು ತನ್ನ ಹೆಂಡತಿಗೇ ಹೇಳಲು ನಾಚಿಕೊಂಡ ರಾವಣನು ಸೀತೆಯ ಎದುರಿಗೆ ಇಂಥ ಮಾತುಗಳನ್ನಾಡುವುದು ಅವನ ಪ್ರಕೃತಿಗೆ ವಿರುದ್ಧವೆಂದು ತೋರುತ್ತದೆ. ರಾವಣನ ಈ ಸ್ವಭಾವ ನಾಗಚಂದ್ರನಿಗೆ ತಿಳಿದಿದ್ದರೂ ಇಂಥ ಮಾತುಗಳನ್ನು ಅವನಿಂದ ಏಕೆ ಹೇಳಿಸಿದನೋ! ವಿಮಲಸೂರಿಯ ಕಾಲಕ್ಕೂ ನಾಗಚಂದ್ರನ ಕಾಲಕ್ಕೂ ಅಭಿರುಚಿಯಲ್ಲಿ ಬದಲಾವಣೆ ಉಂಟಾಗಿತ್ತು. ಕಾಮುಕನ ದಶಾವಸ್ಥೆಗಳನ್ನು ವರ್ಣಿಸಬೇಕೆಂಬ ಸಂಪ್ರದಾಯ ನಾಗಚಂದ್ರನ ಕಾಲಕ್ಕೆ ಬಂದಿದ್ದಿತೆಂದೂ ತೋರುವುದು. ಅದಕ್ಕೆ ಕಟ್ಟುಬಿದ್ದು ಅವನು ಹೀಗೆ ಮಾಡಿದನೆಂದು ಕಾಣುತ್ತದೆ. ಇದರಿಂದ ರಾವಣನ ಪಾತ್ರ ಘನತೆಯಲ್ಲಿ ಕಿರಿದಾಗಿದೆ.

ನಾಗಚಂದ್ರನ ಕಲ್ಪನೆಯಲ್ಲಿ ಈ ಕೊರತೆಗಳಿದ್ದರೂ ಗುಣಗಳೂ ಇವೆ. ರಾವಣನ ಪಾತ್ರಕ್ಕೆ ಕಳೆಕಟ್ಟುವಂಥ ಒಂದೆರಡು ಸನ್ನಿವೇಶಗಳನ್ನೂ ಅವನು ತಂದಿದ್ದಾನೆ. "ಮೇಗಿಲ್ಲದ ಬಲ್ಲಾಳ್ ರಣರಾಗರಸಂ ಕದನಕರ್ಕಶಂ ದಶ ವದನಂ" ದಿಗ್ವಿಜಯ ಯಾತ್ರೆಯಲ್ಲಿ ಅನೇಕ ರಾಜರನ್ನು ಅಧೀನಮಾಡಿಕೊಂಡು ಮುಂದೆ ಬರುತ್ತ ತನ್ನನ್ನು ಬಗೆಯದೆ ಎದುರುಬಿದ್ದ ವರುಣನನ್ನು ಸೋಲಿಸಿ ಸೆರೆಹಿಡಿಯುತ್ತಾನೆ. "ಭುವನೋನ್ಮಾದವೆಂಬುದ್ಯಾನದೊಳ್ ಬೀಡಂ ಬಿಟ್ಟು" ವರುಣನನ್ನು ಬರಮಾಡಿ ರಾವಣನು "ಕಲಿ ಸಾವಂ ಪಿಡಿವಡೆವಂ ಕಲಹದೊಳ್. ಇದು ಭಂಗಮಲ್ತು ನೀಂ ಮುನ್ನಿನವೋಲ್ ನೆಲಸಿರ್ಪುದು ನಿಜರಾಜ್ಯದೊಳೊಲ ವಿಂದೆಂದು ಮನ್ನಿಸಿದಂ." ಈ ಮಾತುಗಳು ರಾವಣನ ಮನೋಧರ್ಮವನ್ನು ಪ್ರತಿಬಿಂಬಿಸುತ್ತವೆ. "ಕಲಿಯಾದವನು ಯುದ್ಧದಲ್ಲಿ ಸಾಯುತ್ತಾನೆ, ಸೆರೆಸಿಕ್ಕು ತ್ತಾನೆ, ಆದರೆ ಅದು ಸೋಲಲ್ಲ" ಎಂಬ ಸೂತ್ರ ರಾವಣನ ಜೀವನದ ಆದರ್ಶ ದಂತಿದೆ. 'ಪೌರುಷ ಪ್ರಣಯಿ'ಯಾದ ಅವನು ಮುಂದೆ ತನ್ನ ಗತಿ ಏನಾಗುವು ದೆಂಬುದನ್ನು ತಿಳಿಯದೆ ಈ ಮಾತುಗಳನ್ನು ಆಡುವುದು ರಮ್ಯವಾಗಿದೆ. ಅವನ ಜೀವನದ ಪ್ರಗತಿಯನ್ನು ಕುತೂಹಲಾವಿಷ್ಟರಾಗಿ ನೋಡುವವರಿಗೆ ಅವನ ಮೇಲೆ ಕರುಣೆ ಉಕ್ಕುವುದು. ಪೌರುಷ ಪ್ರದರ್ಶನವೇ ಜಯವೆಂದು ಅವನ ನಂಬಿಕೆ. ಇದರಿಂದಲೇ ಅವನು ವಿಧಿಯನ್ನು ಪ್ರತಿಭಟಿಸುವುದಕ್ಕೆ ಸ್ವಲ್ಪವೂ ಹಿಂಜರಿಯದೆ ವೀರಮರಣವನ್ನು ಸಾಧಿಸಿದುದು. ನಾಗಚಂದ್ರನು ಇಲ್ಲಿ ವ್ಯಂಗ್ಯ ವಾಗಿ ರಾವಣನ ದುರ್ಗತಿಯನ್ನು ವಾಚಕರಿಗೆ ಸೂಚಿಸಿರುವನು. ತನ್ನ ಪ್ರತಿಭೆಯ ಸೂಕ್ಷ್ಮದೃಷ್ಟಿಯಿಂದ ಆ ಪಾತ್ರದ ಹೃದಯವನ್ನು ಕಂಡು ಕೊಂಡಿದ್ದಾನೆ.

ಇನ್ನೊಂದು ಸಂದರ್ಭದಲ್ಲಿ ನಾಗಚಂದ್ರನು ರಾವಣ ಪಾತ್ರದ ಮಹತ್ವ ವನ್ನು ಚೆನ್ನಾಗಿ ವ್ಯಕ್ತಪಡಿಸಿರುತ್ತಾನೆ. ಅವನ ಜೀವಿತದ ಕೊನೆಯಲ್ಲಿ ಆ ಸನ್ನಿವೇಶ ಬಂದಿದೆ. ರಾಮಲಕ್ಷ್ಮಣರು ಸೀತೆಯ ಬಿಡುಗಡೆಗಾಗಿ ಅಪಾರವಾದ ದಂಡಿನಿಂದ ಕೂಡಿ ರಾವಣನೊಡನೆ ಯುದ್ಧಕ್ಕೆ ಬರುತ್ತಾರೆ. ಆ ಯುದ್ಧದಲ್ಲಿ ರಾವಣನ ತಮ್ಮನೂ ಮಕ್ಕಳೂ ಶತ್ರುಗಳಿಗೆ ಸೆರೆಯಾಗುತ್ತಾರೆ. ಈಗ ಒಬ್ಬನೇ ಆದರೂ ಅವನು ಎದೆಗೆಡುವುದಿಲ್ಲ. ಒಬ್ಬನೇ ಲಕ್ಷ್ಮಣನನ್ನು ಎದುರಿಸಿ ದಿವ್ಯ

ಶಕ್ತಿಯನ್ನು ಅಭಿಮಂತ್ರಿಸಿ ಅವನ ಮೇಲೆ ಬೀಸಿ ಇಡುವನು. ಅದು 'ಜನಾರ್ದನನ ವೀರ ವಕ್ಷ'ದಲ್ಲಿ ನಾಟಿಕೊಳ್ಳುವುದು. ಅದರ ಹೊಡೆತದಿಂದ ಅವನು ಬಳಲಿ ಬೆಂಡಾಗಿ ಮೂರ್ಛೆಬೀಳುವನು. ತನ್ನೆದುರಿಗೇ ತನ್ನ ಪ್ರಬಲ ವೈರಿ ಶಕ್ತಿಗುಂದಿ ಬಿದ್ದಿದ್ದರೂ ರಾವಣನು ಅವನನ್ನು ಘಾತಿಸಲು ಮನಸ್ಸು ಮಾಡುವುದಿಲ್ಲ. ಅದಕ್ಕೆ ಬದಲಾಗಿ

ಅನುವರದೊಳ್ ಸಮುಬಲನೀ
ತನೆ ದೋರ್ವಲ ದೃಪ್ತನೆಂಬ ಬಗೆದಾರದೆ ಬಿ
ಟ್ಟನಸಿಱಿಯಲೊಲ್ದನಿಲ್ಲಾ
ವನೊ ರಾವಣನಂತು ಪಾಟಿಯಂ ಪಾಳಿಸುವಂ

ಇಲ್ಲಿ ನಾಗಚಂದ್ರನು ಅವನ ಧಾರ್ಮಿಕ ಪ್ರವೃತ್ತಿಯನ್ನು ಹೊಗಳಿದ್ದಾನೆ. ಇದನ್ನು ನೋಡಿದ ಕೂಡಲೆ ಇಂಥ ಸನ್ನಿವೇಶದಲ್ಲಿ ಬರುವ ರನ್ನನ ದುರ್ಯೋಧನನ ಚಿತ್ರವು ಮನಸ್ಸಿನೆದುರಿಗೆ ಬಂದು ನಿಲ್ಲುತ್ತದೆ. ನಾಗಚಂದ್ರನ ಈ ಕಲ್ಪನೆ ಸ್ವೋಪಜ್ಞವಲ್ಲದಿರಬಹುದು. ರನ್ನನಿಂದ ಅದನ್ನು ಎರವು ತೆಗೆದುಕೊಂಡಿದ್ದರೂ ಹದ ತಿಳಿದು ರಾವಣಪಾತ್ರವನ್ನು ಬೆಳಗುವುದಕ್ಕೆ ಅದನ್ನು ಉಪಯೋಗಿಸಿಕೊಂಡಿರುವುದು ಅವನ ಪೆರ್ಮೆ. ಇದರಿಂದ ಆ ಪಾತ್ರ ಹೆಚ್ಚು ಉನ್ನತವಾಗಿ ಕಂಡುಬರುತ್ತದೆ.

ಹೀಗೆ ವಿಮಲಸೂರಿ ತನ್ನ ಅದ್ಭುತ ಕುಂಚಿಕೆಯಿಂದ ಬರೆದ ರಾವಣನ ವರ್ಣಚಿತ್ರವನ್ನು ತನ್ನ ಪ್ರತಿಭೆಯಲ್ಲಿ ನಕಲು ಮಾಡಿಕೊಳ್ಳುವಾಗ ನಾಗಚಂದ್ರನು ಕೆಲವು ಛಾಯೆಗಳನ್ನು ತೇಲಿಸಿ ಕೆಲವನ್ನು ಗಟ್ಟಿಮಾಡಿಕೊಂಡಿರುವನು. ಇವನ ಚಿತ್ರ ಮೂಲಕೃತಿಯನ್ನು ಬಲುಮಟ್ಟಿಗೆ ಹೋಲುತ್ತದೆ. ಆದರೆ ಅದರಲ್ಲಿ ಮೂಲದಲ್ಲಿರುವಷ್ಟು ಸೌಂದರ್ಯವಿಲ್ಲ, ಗಾಂಭೀರ್ಯವಿಲ್ಲ, ದುರಂತತೆಯ ಬೃಹತ್ಪ್ರಮಾಣವಿಲ್ಲ. ತುಪ್ಪದ ಹನಿ ಅಲ್ಲಲ್ಲಿ ಹತ್ತಿದ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಆ ಚಿತ್ರವಿದೆ. ಆದರೂ ಮನೋಹರವಾಗಿದೆ.

೫. ಕಥಾಸರಣಿಯಲ್ಲಿ ಮಾರ್ಪಾಟುಗಳು

ವಿಮಲಸೂರಿಯ "ಪಉಮ ಚರಿಯ"ವನ್ನು ನಾಗಚಂದ್ರನು ಅನುಸರಿಸಿದ್ದರೂ ಕಥಾಸರಣಿಯಲ್ಲಿ ಕೊಂಚ ಮಾರ್ಪಾಟುಗಳನ್ನು ಮಾಡಿಕೊಂಡಿರುವನು.

ಅವನ ದೃಷ್ಟಿ ಸಂಗ್ರಹಕಾರನ ದೃಷ್ಟಿ. ದೊಡ್ಡ ಕಥೆಯನ್ನು ಚಿಕ್ಕದಾಗಿ ಹೇಳಬೇಕೆಂಬ ಉದ್ದೇಶ. ಹಾಗೆ "ಪಿರಿದೆನಿಸಿರ್ದ ರಾಮ ಕಥೆಯಂ ಕಿಱಿದಾಗಿರೆ" ಹೇಳಿದರೂ ರಸವತ್ತಾಗಿರಬೇಕು; ಅದನ್ನು "ಪಂಡಿತ ಮಂಡಲಿ" ಮೆಚ್ಚಬೇಕು. ಇದಕ್ಕಾಗಿ ಅವನು ನೀರಸವಾದ ಭಾಗಗಳನ್ನು ಬಿಡಬೇಕಾಯಿತು. ಮೂಲದಲ್ಲಿ ಅನೇಕ ರಸವಿಹೀನವಾದ ಭಾಗಗಳಿವೆ. ರಾಕ್ಷಸ ವಾನರ ವಂಶಗಳಿಗೆ ಸಂಬಂಧಪಟ್ಟ ಕಥೆ ಬಹಳ ದೊಡ್ಡದಾಗಿದೆ. ದಶರಥನವರೆಗೆ ಇಕ್ಷ್ವಾಕುವಂಶದರಸುಗಳ ದೀರ್ಘವಾದ ವೃತ್ತಾಂತವಿದೆ. ಅಲ್ಲಲ್ಲಿ ಬರುವ ಜನ್ಮಾಂತರದ ಕಥೆಗಳೂ ಧರ್ಮೋಪದೇಶಗಳೂ ತಲೆ ಚಿಟ್ಟುಹಿಡಿಸುವಷ್ಟು ಉದ್ದವಾಗಿ ಬೆಳೆಯುತ್ತ ಹೋಗಿವೆ. ಇವುಗಳಿಗೂ ರಾಮಾಯಣದ ಕಥೆಗೂ ಇರುವ ಸಂಬಂಧ ಬಹಳ ದೂರದ ಸಂಬಂಧ. ಈ ಭಾಗವೇ ಮೂಲದಲ್ಲಿ ಸುಮಾರು ಇಪ್ಪತ್ತೆರಡು "ಉದ್ದೇಶ"ಗಳ ವರೆಗೆ ಸೀಗೆಯ ಬೇಲಿಯಂತೆ ಹೆಣೆದುಕೊಂಡಿದೆ. ಪೂರ್ತಿ ಕಾವ್ಯದ ಕಾಲು ಭಾಗವನ್ನು ವಿಮಲಸೂರಿ ಇಂಥ ಕಥೆಗಳಿಗೇ ಮೀಸಲಿಟ್ಟಿದ್ದಾನೆ. ಸಂಗ್ರಹಕಾರನಾದ ನಾಗಚಂದ್ರನು ಈ ರಗಳೆಗೆ ಕೈಹಾಕಿದ್ದರೂ ಅದರಲ್ಲಿ ಬಹುಭಾಗವನ್ನು ಕತ್ತರಿಸಿದ್ದಾನೆ. ರಾವಣನ ವಿಜಯಯಾತ್ರೆಗೆ ಸಂಬಂಧಪಟ್ಟ ಭಾಗವೆಲ್ಲ ಸಂಗ್ರಹವಾದರೂ ಸಮಗ್ರವಾಗಿ ಬಂದಿದೆ. ಉಳಿದ ಭಾಗಗಳನ್ನು ನಾಗಚಂದ್ರನು ಹೇಳಬೇಕಲ್ಲ ಎಂದು ಹೇಳಿದ್ದಾನೆ. ಏಕೆಂದರೆ, ಅವನು ಕಾವ್ಯವನ್ನು ಬರೆಯುವುದಕ್ಕೆ ಹೊರಟಿದ್ದರೂ ಅದು ಪುರಾಣವೂ ಆಗಿರಬೇಕೆಂಬುದನ್ನು ಮರೆತಿಲ್ಲ. 'ರಾಮಚಂದ್ರಚರಿತ ಪುರಾಣಂ' ಎಂಬ ಹೆಸರೇ ಸಾಕು. ಇಲ್ಲಿ ಅವನ ಧರ್ಮಾನುರಾಗ ಕಾವ್ಯಪ್ರೇಮವನ್ನು ಮೀರಿಸಿದೆ. ಆದ್ದರಿಂದ ಲೋಕ ಕಾಲಗಳ ವರ್ಣನೆಯೂ ಜೈನಋಷಿಗಳ ಉಪನ್ಯಾಸಾದಿಗಳೂ ಅನಿವಾರ್ಯವಾಗಿ ಬರಬೇಕಾಯಿತು, 'ವಾಲ್ಮೀಕಿ ರಾಮಾಯಣ' ದಲ್ಲಿಯೂ ಇಂಥ ನೀತಿಗಳ ಉಪದೇಶವಿಲ್ಲವೆಂದಲ್ಲ, ಅಲ್ಲಿಯೂ ಇದೆ. ಜೈನಕವಿಗಳೂ ಈ ಸಂಪ್ರದಾಯವನ್ನೇ ಅನುಕರಿಸಿರಬಹುದು. ಪ್ರಕೃತ ಮೂಲದೊಡನೆ ಹೋಲಿಸಿ ನೋಡಿದರೆ ನಾಗಚಂದ್ರನು ಕೊಟ್ಟಿರುವ ಸಂಗ್ರಹ ಹತ್ತರಲ್ಲಿ ಒಂದು ಪಾಲು ಕೂಡ ಆಗಿಲ್ಲ. ಇದಕ್ಕಾಗಿ ಅವನನ್ನು ಹೊಗಳಬೇಕಾಗಿದೆ. ಅವನ ಮನವೆಲ್ಲ ರಾಮಾಯಣದ ಕಥೆಯ ಕಡೆಗೆ ಹರಿದಿದೆ. ಅವನು ಹೇಳುತ್ತಿರುವುದು 'ರಾಮಕಥೆ'

ಆದ್ದರಿಂದ ಅವನು ವಂಶೇತಿಹಾಸಗಳನ್ನೂ ಧರ್ಮೋಪಾಖ್ಯಾನಗಳನ್ನೂ ಅದಷ್ಟು ಮಟ್ಟಿಗೆ ಕಡಮೆಮಾಡಿ ಆ 'ರಾಮಕಥೆ'ಯ ಕೆಲವು ಸನ್ನಿವೇಶಗಳನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಯಾವುದನ್ನು ಬಿಡಬೇಕು. ಯಾವುದನ್ನು ಮಿತವಾಗಿ ಹೇಳಬೇಕು, ಯಾವುದನ್ನು ವಿಸ್ತರಿಸಬೇಕು ಎಂಬ ಪ್ರಮಾಣಜ್ಞಾನವು ನಾಗಚಂದ್ರನಲ್ಲಿ ಬಲುಮಟ್ಟಿಗೆ ಇದೆ. ಹಿಂದೆ ಆದಿಪಂಪನು ಮುಖ್ಯವಾದ ಒಂದು ಕಥೆಯನ್ನೂ ಬಿಡದಂತೆ ಮಹಾಭಾರತವನ್ನು ಸಂಗ್ರಹಿಸಿದ ಮಾದರಿಯೂ ಅವನಿಗಿತ್ತು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾಗಚಂದ್ರನು ಸಂಗ್ರಹಕಾರ್ಯವನ್ನು ಮಾಡಿದ್ದಾನೆ. ಜೊತೆಗೆ ತನ್ನ ಕಾವ್ಯವು ಮಹಾಕಾವ್ಯದ ಲಕ್ಷಣಗಳಿಗನುಸಾರವಾಗಿ ಇರಬೇಕೆಂಬ ಆಶಯವೂ ಅವನಿಗಿದೆ. ಆದ್ದರಿಂದ ಹದಿನೆಂಟು ವರ್ಣನೆಗಳನ್ನು ಸ್ವಲ್ಪ ಅಳತೆ ಮೀರಿಯೇ ತನ್ನ ಕಾವ್ಯದಲ್ಲಿ ಬರಮಾಡಿಕೊಂಡಿದ್ದಾನೆ. ಮೂಲದಲ್ಲಿ ಇಂತಹ ವರ್ಣನೆಗಳು—ಯುದ್ಧ ವರ್ಣನೆ ಒಂದನ್ನು ಬಿಟ್ಟು—ಹೆಚ್ಚಾಗಿ ಬಂದಿಲ್ಲ. ರವಿಷೇಣನ 'ಪದ್ಮಪುರಾಣ'ದಲ್ಲಿ ಇವು ವಿಪುಲವಾಗಿವೆ. ನಾಗಚಂದ್ರನು ಇವನನ್ನು ಅನುಸರಿಸಿ ಈ ವರ್ಣನೆಗಳನ್ನು ತಂದು ತುರುಕಿದ್ದರೂ ಅವೇನೂ ಕಥೆಯಲ್ಲಿ ಆಗಿರುವ ಮಾರ್ಪಾಟುಗಳಿಗೆ ಸಂಬಂಧಪಟ್ಟಿಲ್ಲ. ಅವನ್ನು ಈ ವಿಚಾರಣೆಯಲ್ಲಿ ಬಿಟ್ಟುಬಿಡಬಹುದು.

ಮೂಲದಲ್ಲಿರುವ ಕೆಲವು ಉಪಾಖ್ಯಾನಗಳಿಗೆ ನಾಗಚಂದ್ರನ ಕಾವ್ಯದಲ್ಲಿ ಸ್ಥಾನಪಲ್ಲಟವುಂಟಾಗಿದೆ. ರಾವಣನ ಮತ್ತು ಅವನ ಪೂರ್ವಜರ ವೃತ್ತಾಂತವು ಮೂಲದಲ್ಲಿ ಆರಂಭದಲ್ಲಿಯೇ ಬಂದಿದೆ. ನಾಗಚಂದ್ರನು ಇದನ್ನು ಮೊದಲಲ್ಲಿ ಹೇಳದೆ ಸೀತಾಪಹರಣವಾದ ಮೇಲೆ ದುಃಖಪಡುವ ರಾಮನಿಗೆ 'ಜೈನಾಗಮಕೋವಿದ'ನಾದ ಜಾಂಬೂನದನೆಂಬ ವೃದ್ಧವಾನರನಿಂದ ಹೇಳಿಸಿದ್ದಾನೆ. ಕಾವ್ಯದ ಮೊದಲಲ್ಲಿಯೇ ರಾಕ್ಷಸವಂಶದ ಪರಿಕೀರ್ತನೆಮಾಡುವುದೆ? ಎಂದು ಅವನಿಗೆ ತೋರಿರಬಹುದು. ಸೀತೆಯನ್ನು ಕಳೆದುಕೊಂಡು ಅವಳ ಸಮಾಚಾರವೇ ತಿಳಿಯದೆ ಸಂಕಟಪಡುವ ರಾಮನಿಗೆ ರಾವಣನ ಹಿಂದಿನ ಪುರಾಣವನ್ನೆಲ್ಲ ಕೇಳಲು ತಾಳ್ಮೆ ಇರುತ್ತದೆಯೆ? ಆದರೆ ರಾಮನು ಮುಂದೆ ಜಿನನಾಗುವಂಥ ವ್ಯಕ್ತಿ. ಆದ್ದರಿಂದ ಅವನಲ್ಲಿ ಅಷ್ಟು ಸೈರಣೆ ಸಮತೆಗಳು ಇದ್ದರೂ ಇರಬಹುದು. ಹೀಗೆಂದು ಭಾವಿಸಿಯೇನೊ ನಾಗಚಂದ್ರನು ರಾವಣನ ಕಥೆಯನ್ನು ತನ್ನ

ಕಾವ್ಯದ ನಡುವೆ ತೂರಿಸಿರುವನು. ಇದರಿಂದ ಅವನಿಗೆ ರಾಮನ ಕಥೆಯನ್ನು ಗ್ರಂಥಾರಂಭದಲ್ಲಿಯೇ ಮೊದಲುಮಾಡಲು ಅನುಕೂಲವಾಯಿತು. ಈ ಮಾರ್ಪಾಟಿನಿಂದ ಓದುವವರಿಗೆ ಹೆಚ್ಚು ಬೇಸರ ಉಂಟಾಗುವುದಿಲ್ಲ, ನಿಜ. ಆದರೆ ರಾವಣನ ಪಾತ್ರದ ದೃಷ್ಟಿಯಿಂದ ನೋಡಿದರೆ, ಇದು ಅಷ್ಟು ತೃಪ್ತಿಕರವಾಗಿಲ್ಲ ವೆಂದು ತೋರುತ್ತದೆ. ರಾವಣನ ಮರಣದ ವಿಷಯವಾಗಿ ಜೋಯಿಸರು ಹೇಳುವ ಭವಿಷ್ಯ ವಾಣಿಯ ಸನ್ನಿವೇಶವನ್ನು ತೆಗೆದುಕೊಂಡರೆ ಇದು ಸ್ಪಷ್ಟವಾಗುತ್ತದೆ.

ಒಂದು ದಿನ ದಶರಥನು ಒಡ್ಡೋಲಗದಲ್ಲಿರುತ್ತಾನೆ. ಇದ್ದಕ್ಕಿದ್ದ ಹಾಗೆ ನಾರದರ ಸವಾರಿ ಚಿತ್ತೈಸುತ್ತದೆ. ದಶರಥನು ಅವರನ್ನು ಎದುರುಗೊಂಡು ಅರ್ಘ್ಯಪಾದ್ಯಗಳನ್ನಿತ್ತು ಸತ್ಕರಿಸಿದ ಮೇಲೆ ನೈಮಿತ್ತಿಕರು ವಿಭೀಷಣಗೆ

ಏನುಂ ತೊದಳಿಲ್ಲದುವೆ ಶಿ
ಲಾನಿಕ್ಷಿಪ್ತಾಕ್ಷರಂ ವಿಭೀಷಣ ರಣದೊಳ್
ಜಾನಕಿಯ ದೂಸಱಿಂ ಲಂ
ಕಾನಾಥಂ ದಾಶರಥಿಯ ಕಯ್ಯೊಳ್ ಮಡಿಗುಂ

ಎಂದು ರಾವಣನ ಮರಣ ಕಾರಣವನ್ನು ಹೇಳಿಬಿಡುತ್ತಾರೆ. ಇದನ್ನು ಮೊದಲು ಸಲ ಓದುವವರಿಗೆ ಕೊಂಚ ಕಕಮಕ ಹಿಡಿಯುತ್ತದೆ. ರಾವಣನ ಪರಿಚಯ ಎಲ್ಲರಿಗೂ ಇದ್ದರೂ ಜೈನ ರಾವಣನ ವಿಷಯ ತಿಳಿದಿರುವುದಿಲ್ಲ. ಇದೇನೊ ಹೊಸ ವಿಷಯ ಬಂತಲ್ಲ ಇಲ್ಲಿ ಎನ್ನಿಸುತ್ತದೆ. ದಶರಥನ ವೃತ್ತಾಂತ ಹೇಳುವಾಗ ಕವಿ ಈ ಕಥೆಯನ್ನು ಅನಿರೀಕ್ಷಿತವಾಗಿ ತಂದುಹಾಕಿದ್ದಾನೆ. ಪರಿಚಿತ ವ್ಯಕ್ತಿಗಳ ನಡುವೆ ಹೊಸಬನು ಬಂದು ಕುಳಿತುಕೊಂಡಂತಿದೆ ಈ ಕಥೆಯ ಜೋಡಣೆ. ಮೂಲದಲ್ಲಿ ಹೀಗಿಲ್ಲ. ರಾವಣನ ಪ್ರವರಪುರುಷತ್ವದ ಸುಂದರ ಚಿತ್ರ ಚಿತ್ತವನ್ನು ಮೋಹಿಸಿದ ಮೇಲೆ ಅಂಥ ಮಹಾ ವ್ಯಕ್ತಿಯೂ ಸಾಯಲೇಬೇಕೆಂಬ ವಿಧಿಯ ನಿಯಮ ತಿಳಿದರೆ ಅವನಲ್ಲಿ ಹೆಚ್ಚು ಅನುಕಂಪೆಯುಂಟಾಗುತ್ತದೆ. ನಾಗಚಂದ್ರನ ಮಾರ್ಪಾಟಿನಲ್ಲಿ ಇಂಥ ಮರುಕಕ್ಕೆ ಎಡೆ ಸಾಲದು. ಇದಕ್ಕೆ ಬದಲಾಗಿ ರಾವಣನ ಮೇಲೆ ಅಸಮಾಧಾನವುಂಟಾಗುವುದಕ್ಕೆ ಅವಕಾಶವಿದೆ. ಅಲ್ಲದೆ ಕಾವ್ಯಾರಂಭದಲ್ಲಿಯೇ ಬಂದಿರುವ ಈ ಸಂದೇಶ ಕಥೆ ಮುಂದೆ ಮುಂದೆ ಸಾಗುತ್ತ ಹೋದ ಹಾಗೆಲ್ಲ ಮರೆತುಹೋಗುತ್ತದೆ. ತಿರುಗಿ ಕವಿ ಅದನ್ನು ನೆನಪಿಗೆ ತಂದು

ಕೊಡುವ ಅವಶ್ಯಕತೆಯುಂಟಾಗುತ್ತದೆ. ರಾವಣನ ಜೀವನದಲ್ಲಿ ವಿಧಿವಿಲಾಸದ ಪ್ರಮುಖ ಕಾರ್ಯಭಾಗವು ಎದ್ದು ಕಾಣಿಸದೆ ಕಣ್ಮರೆಯಾಗುತ್ತದೆ. ಆದ್ದರಿಂದ ನಾಗಚಂದ್ರನು ಇಲ್ಲಿ ಈ ಮಾರ್ಪಾಟನ್ನು ಮಾಡಿಕೊಳ್ಳದೆ ಮೂಲವನ್ನೇ ಅನುಸರಿಸಿದ್ದರೆ—ಎಂದರೆ ರಾವಣನ ಉದಾತ್ತತೆಯನ್ನು ಮೊದಲು ವ್ಯಕ್ತಪಡಿಸಿ ಆ ಮೇಲೆ ಈ ವಿಧಿಲಿಖಿತವನ್ನು ಹೇಳಿದ್ದರೆ—ಅವನ ಕಾವ್ಯದ ಗುಣ ಮಿಗಿಲಾಗುತ್ತಿತ್ತೆಂದು ತೋರುತ್ತದೆ.

ನಾಗಚಂದ್ರನು ಸಂಗ್ರಹ ಕಾರ್ಯವನ್ನು ಕೈಕೊಂಡಿದ್ದಾನೆಂದು ಹಿಂದೆಯೇ ಹೇಳಿದೆಯಷ್ಟೆ. ಇದರಲ್ಲಿ ಅವನು ತನ್ನ ವಿಮರ್ಶನ ಶಕ್ತಿಯನ್ನು ಹಿತವಾಗಿಯೇ ಉಪಯೋಗಪಡಿಸಿಕೊಂಡಿದ್ದರೂ ಮೂಲ ಕಥೆಗೆ ಅನಾವಶ್ಯಕವಾದ ಭಾಗಗಳನ್ನು ನಿರ್ದಾಕ್ಷಿಣ್ಯವಾಗಿ ಕೈಬಿಟ್ಟಿರುವಂತೆಯೇ ಬಿಡಬಾರದ ಕೆಲವು ಸನ್ನಿವೇಶಗಳನ್ನೂ ಬಿಟ್ಟಿದ್ದಾನೆ. ಅವನ ಮನಸ್ಸಿನಲ್ಲಿ ಈ ವಿಷಯವಾಗಿ ಹೋರಾಟ ಬಲವಾಗಿಯೇ ನಡೆದಿರುವಂತೆ ಕಾಣುತ್ತದೆ. ರಾವಣನು ರೈವತ ನದೀ ತೀರದಲ್ಲಿ ಜಿನ ಪ್ರತಿಮೆಯನ್ನು ಪೂಜೆ ಮಾಡುತ್ತಿದ್ದ ಒಂದು ಸನ್ನಿವೇಶವನ್ನು ತೆಗೆದುಕೊಳ್ಳೋಣ. ಆಗ ಮಾಹಿಷ್ಮತೀಪುರಕ್ಕೆ ಒಡೆಯನಾದ ಸಹಸ್ರಬಾಹು ಆ ನದಿಯನ್ನು ಯಂತ್ರಗಳ ಸಹಾಯದಿಂದ ಕಟ್ಟಿನಿಲ್ಲಿಸಿ ತನ್ನ ಅರಸಿಯರೊಡನೆ ನೀರಾಟವಾಡುತ್ತಿರುತ್ತಾನೆ. ಈ ನೀರಾಟದ ವರ್ಣನೆ ಮೂಲದಲ್ಲಿ ಸ್ವಲ್ಪ ಇದೆ. ರವಿಷೇಣನ ಪುರಾಣದಲ್ಲಿ ಇದು ಇನ್ನೂ ದೊಡ್ಡದಾಗಿದೆ. ಈ ಎರಡು ವರ್ಣನೆಗಳೂ ಸುಂದರವಾದ ಕಾವ್ಯ ಖಂಡಗಳು. ನಾಗಚಂದ್ರನು ಈ ವರ್ಣನೆಯ ಮೋಹಕ್ಕೆ ಸಿಕ್ಕಿಬಿದ್ದಿಲ್ಲ. ಮಹಾ ಕಾವ್ಯದಲ್ಲಿ ಜಲಕೇಳಿಯ ವರ್ಣನೆ ಇರಬೇಕೆಂಬ ನಿಯಮವಿದ್ದರೂ ಆ ಸಮಗ್ರ ಪುರಾಣದಲ್ಲೆಲ್ಲ ಅಂಥ ವರ್ಣನೆಗೆ ಇದೊಂದೇ ಸನ್ನಿವೇಶವಾದರೂ ಮೂಲ ಕಥೆಗೆ ಇದರಿಂದೇನೂ ಪ್ರಯೋಜನವಿಲ್ಲದಿರುವುದರಿಂದ ನಾಗಚಂದ್ರನು ಇದರ ವರ್ಣನೆಮಾಡಬೇಕೆಂಬ ಚಾಪಲ್ಯವನ್ನು ಅಮುಕಿಹಿಡಿದು ಮುಂದಿನ ಕಥೆಗೆ ದಾಟುವನು. ಇದರಿಂದ ಅವನ ಯುಕ್ತಾಯುಕ್ತ ಪರಿಜ್ಞಾನ ಗೊತ್ತಾಗುತ್ತದೆ.

ಆದರೆ ಇದೇ ವಿಮರ್ಶನ ಶಕ್ತಿಯನ್ನು ಅವನು ಕೆಲವು ಕಡೆ ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ರಾವಣನು ವಿಜಯಯಾತ್ರೆ ಮಾಡಿಕೊಂಡು ಬರುವಾಗ

ದಾರಿಯಲ್ಲಿ ಅನಂತವೀರ್ಯ ಕೇವಲಿಗಳನ್ನು ನೋಡಿ ಅವರ ಧರ್ಮೋಪದೇಶದ ಮಹಿಮೆಯಿಂದ ಪರಾಂಗನಾ ವಿರತಿವ್ರತವನ್ನು ಕೈಕೊಳ್ಳುವನು. ಆ ಋಷಿಗಳು ತಪಸ್ಸು ಮಾಡುತ್ತಿದ್ದದ್ದು ಪವಿತ್ರವಾದ ಶಾಂತಿಮಯವಾದ ಸುವರ್ಣಪರ್ವತದ ಸುಂದರ ವನಸ್ಥಳ. ಅವರಿಗೆ ಆಗತಾನೆ ಕೇವಲ ಜ್ಞಾನ ಹುಟ್ಟಿದೆ. ಈ ಉತ್ಸವಕ್ಕಾಗಿ ದೇವತೆಗಳೆಲ್ಲರೂ ನೆರೆದು ಅವರನ್ನು ಮಧುರ ಸಂಗೀತದಿಂದ ಸ್ತುತಿಸುತ್ತಿದ್ದಾರೆ. ಎಲ್ಲೆಲ್ಲಿಯೂ ಶುದ್ಧ ತಪೋಮಯ ಸಾತ್ವಿಕ ಆವರಣ. ರಾವಣನೂ ಅಲ್ಲಿಗೆ ಬರುತ್ತಾನೆ. ಅವನ ಹೃದಯವೂ ಆ ಸಾತ್ವಿಕ ಪ್ರವಾಹದಿಂದ ತುಂಬಿಕೊಳ್ಳುತ್ತದೆ. ಉದಾತ್ತ ಭಕ್ತಿಯಿಂದ ಅವನು ಅವರಿಗೆ ನಮಸ್ಕಾರಮಾಡಿ "ಭಗವನ್, ಧರ್ಮಾಧರ್ಮಫಲವನ್ನೂ ಮುಕ್ತಿಹೇತುವನ್ನೂ ಕೇಳಲು ಜನರು ಬಯಸುತ್ತಾರೆ. ಅದೆಲ್ಲವನ್ನೂ ತಾವು ಹೇಳಿರಿ"* ಎಂದು ಬಿನ್ನವಿಸಿ ಕೊಳ್ಳುವನು. ಈ ಸಮಯದಲ್ಲಿ ರಾವಣನ ಸಾತ್ವಿಕ ಚಿತ್ತವೃತ್ತಿ ಪ್ರಕಟ ವಾಗುತ್ತದೆ. ಅವನ ಮನೋಧರ್ಮವನ್ನು ತಿಳಿಯಲು ಇದಕ್ಕಿಂತ ಉತ್ತಮ ಸನ್ನಿವೇಶವಿಲ್ಲ. ನಾಗಚಂದ್ರನು ಇದನ್ನು ಉಪೇಕ್ಷೆಮಾಡಿಬಿಟ್ಟಿದ್ದಾನೆ. ಎಂದರೆ ಅವನಿಗೆ ರಾವಣನು ಆ ವ್ರತವನ್ನು ಕೈಕೊಂಡ ವಿಷಯ ತಿಳಿದಿಲ್ಲವೆಂದಲ್ಲ. ರಾವಣನು ಸೀತೆಯನ್ನು ಕದ್ದು ವಿಮಾನದಲ್ಲಿಟ್ಟು ಲಂಕೆಯ ಕಡೆಗೆ ಹೋಗು ತ್ತಿರುವಾಗ "ಧೈರ್ಯಂಗೆಟ್ಟು ಮೇಲ್ವಾಯ್ವ ದರ್ಪಕನ ಚೇಷ್ಟೆ"ಯಿಂದ ಬಗೆ ಕಡಿದ ಅವಳನ್ನು ಮುಟ್ಟಲು ಕಾತರಪಡುವನು. ಈಗ ನಾಗಚಂದ್ರನು 'ಅನಂತ ವೀರ್ಯ ಕೇವಲಿಗಳಿತ್ತ ಪರವಧೂವಿರತಿವ್ರತ'ವನ್ನು ರಾವಣನ ನೆನಪಿಗೆ ತಂದು ಕೊಡುತ್ತಾನೆ. ಹಿಂದಿನ ಕಥೆಯನ್ನು ಅವನು ಕೈಬಿಟ್ಟಿರುವುದರಿಂದ ಇದನ್ನು

---

* ರಾವಣೋಽಪಿ ನಮಸ್ಕೃತ್ಯ ಸ್ತುತ್ವಾ ಚೋದಾತ್ತ ಭಕ್ತಿತಃ
ವಿದ್ಯಾಧರ ಜನಾಕೀರ್ಣಃ ಸ್ಥಿತಃ ಸಮುಚಿತಾವನೌ ||

ಪ. ಪು. ೧೪-೧೪

ತತಶ್ಚ ತುರ್ವಿಧೈರ್ದೇವೈಸ್ತಿರ್ಯಗ್ಭಿರ್ಮನುಜೈಸ್ತಥಾ
ಕೃತಾಶಂಸಂ ಮುನಿಶ್ರೇಷ್ಠಃ ಶಿಷ್ಯೇಣೈವಮಪೃಚ್ಛ್ಯತ ||-೧೫

ಭಗವನ್ ಜ್ಞಾತುಮಿಚ್ಛಂತಿ ಧರ್ಮಾಧರ್ಮಫಲಂ ಜನಾಃ |
ಸಮಸ್ತ ಮುಕ್ತಿಹೇತುಂ ಚ ತತ್ಸರ್ವಂ ವಕ್ತುಮರ್ಹಥ ||-೧೬

ಓದಿದ ಕೂಡಲೇ ಆ ವ್ರತದಿಂದ ರಾವಣನ ಮನಸ್ಸಿನ ಮೇಲೆ ಉಂಟಾಗಿದ್ದ ಪ್ರಭಾವದ ಆಳವು ಗೊತ್ತಾಗುವುದಿಲ್ಲ. ದುರ್ಮೋಹದ ಸುಳಿಗೆ ಸಿಕ್ಕಿ ತರಗೆಲೆಯಂತೆ ತಿರ್ರನೆ ತಿರುಗುವ ಅವನ ಮನಸ್ಸು ಇಂಥ ಸಮಯದಲ್ಲಿ ಆ ವ್ರತವನ್ನು ಸ್ಮರಿಸಿಕೊಂಡಿತೆಂದರೆ ಅದರ ಪ್ರಭಾವವೆಂಥದಿರಬೇಕು! ಅದನ್ನು ಅವನು ತೆಗೆದುಕೊಂಡ ಸನ್ನಿವೇಶದ ಸಾತ್ವಿಕ ಪ್ರಭೆ ಎಂಥದು! ಎಂಥದೋ ಅವನ ಆಗಿನ ಪುಣ್ಯಮಯ ಮಾನಸಿಕ ಪರಿಸ್ಥಿತಿ! ಇದುವರೆಗೂ ಅವನ ಶೌಚ ಗುಣವನ್ನು ಕಾಪಾಡಿಕೊಂಡು ಬಂದ ಆ ವ್ರತದ ಕಟ್ಟು ಎಷ್ಟು ಬಿಗಿಯಾದದ್ದು! ಅದರ ಬಲದಿಂದಲ್ಲವೇ ಅವನ ಆ ಅದಮ್ಯ ದುರ್ಮೋಹವಾಹಿನಿಯು ಒಂದುಕ್ಷಣಕಾಲವಾದರೂ ತಡೆದದ್ದು! ಅವನೇನು ಹುಡುಗಾಟಕ್ಕಾಗಿ ಆ ವ್ರತವನ್ನು ಹಿಡಿದನೆ? ಮೋಹಕ್ಕೂ ಧರ್ಮಕ್ಕೂ ಅವನ ಮನಸ್ಸಿನಲ್ಲಿ ಎಂಥ ಹೋರಾಟ ನಡೆದಿದೆ! ಈ ಸೊಗಸೆಲ್ಲ ನಾಗಚಂದ್ರನ ಕಾವ್ಯದಲ್ಲಿ ಮಾಯವಾಗಿದೆ.

ರಾವಣನ ದುರಂತ ದೌರ್ಬಲ್ಯವು "ಪ್ರಾಣಪ್ರಿಯಂ ನೆವಮಿಲ್ಲದೆ ಕರ್ಮವಶಮೆ ನೆವಮೆನೆ" ಅಗಲಿಸಿದ "ಕಂದರ್ಪವಿಮೋಹ". ಅದು ಹೊರತು ಅವನಲ್ಲಿ ಇನ್ನಾವ ದೋಷವೂ ಕಂಡುಬರುವುದಿಲ್ಲ. ಪಂಪ ರನ್ನರ ದುರಂತ ದುರ್ಯೋಧನನಂತೆ ಹಿಡಿದ ಪಟ್ಟನ್ನೇ ಹಿಡಿದು 'ಗುರುವೃದ್ಧರ ಪೇಟ್ದ ಹಿತೋಪದೇಶ'ವನ್ನೂ ತಿರಸ್ಕರಿಸಿ ಕೊನೆಯವರೆಗೂ ಛಲವನ್ನೇ ಸಾಧಿಸಿದ ಏಕಗ್ರಾಹಿ ಅವನಲ್ಲ. ಸೀತೆಯನ್ನು ಕದ್ದು ತಂದದ್ದು ಧರ್ಮವೆಂದು ಅವನೆಂದೂ ಸಾಧಿಸಲು ಪ್ರಯತ್ನಿಸಿಲ್ಲ. ಸ್ವಾಭಿಮಾನದಿಂದ "ಸ್ತ್ರೀರತ್ನಕ್ಕಾನಿರೆ ಪೆಱರಾಳೊಡೆಯರ್," "ಪೌಲಸ್ತ್ಯನಂ ಸಮರದೊಳ್ ಮಾನವರ್ ಮಿಱುವರೆ?" ಎಂದು ಸೀತಾಪಹರಣವಾದ ಹೊಸದರಲ್ಲಿ ಅವನು 'ಮುಂದಱಿಯದೆ' ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದರೂ ಬರಬರುತ್ತ ಸಂಗ್ರಾಮರಂಗದಲ್ಲಿ ತನ್ನ ಸಚ್ಚಿನ ಬಂಟರೆಲ್ಲ ಕಳಿತ ಹಣ್ಣುಗಳಂತೆ ಕಳಚಿ ಬೀಳಲು ಅವನ ಅಭಿಮಾನ ಆಶೆಗಳು ಮಾಯವಾಗುತ್ತ ಬಂದುವು. ರಾಮನನ್ನು ಗೆಲ್ಲುವುದು ಅಸಾಧ್ಯವೆಂದು ಅವನಿಗೆ ಕಂಡುಬಂತು. ಈ ಸಮಯದಲ್ಲಿ ಅವನು ಸಂಧಿಮಾಡಿಕೊಳ್ಳುವುದಕ್ಕೂ ಪ್ರಯತ್ನಿಸುವನು. ಆದದ್ದಾಗಲಿ, ಯುದ್ಧವನ್ನು ಕೊನೆಮುಟ್ಟ ಮಾಡಿಯೇಬಿಡಬೇಕೆಂಬ

ಛಲವಿಲ್ಲ. ಈ ಸಂಧಿಯ ಸನ್ನಿವೇಶವನ್ನು ವಿಮಲಸೂರಿಯೂ ಅವನನ್ನನುಸರಿಸಿ ರವಿಷೇಣನೂ ಬಲು ಜಾಣ್ಮೆಯಿಂದ ನಿರೂಪಿಸಿದ್ದಾರೆ. ಹಿಂದೆ ವಿಭೀಷಣನೂ ಮಾರೀಚನೂ ಹೇಳಿದ ಹಿತೋಕ್ತಿಗಳನ್ನು ಕೇಳದ ರಾವಣನು ಈಗ ಮದಾಂಕನೆಂಬ ಮಂತ್ರಿಯ ಮಾತನ್ನು ಕೇಳಬೇಕಾಗಿ ಬರುತ್ತದೆ. ಅವನ ಸ್ಥಿತಿ ಅಷ್ಟು ಇಳಿದುಹೋಗಿದೆ, ಮನಸ್ಸು ಅಷ್ಟು ಕ್ಷುಭಿತವಾಗಿದೆ. ಮಕ್ಕಳೂ ತಮ್ಮನೂ ಶತ್ರುಗಳ ಕೈಗೆ ಬಿದ್ದು ನರಳುತ್ತಿದ್ದಾರೆ. ಅವನ ಶಕ್ತಿಪ್ರಹಾರವು ಲಕ್ಷ್ಮಣನ ಪ್ರಾಣವನ್ನು ಹೀರದೆ ಬಂಜೆಯಾಗಿದೆ. ಸೈನ್ಯಬಲವು ಕುಗ್ಗಿಹೋಗಿದೆ. ಹೇಗಾದರೂ ತನ್ನ ಪ್ರಿಯಬಂಧುಗಳನ್ನು ಶತ್ರುಗಳಿಂದ ಬಿಡಿಸಬೇಕು. ರಾಜ್ಯಹೋದರೂ ಹೋಗಲಿ, ಮಕ್ಕಳೂ ತಮ್ಮನೂ ಬದುಕಿಕೊಳ್ಳಬೇಕು. ಬಂಧುಪ್ರೇಮವು ರಾಜ್ಯದಲ್ಲಿ ವಿರಕ್ತಿಯನ್ನು ಹುಟ್ಟಿಸುತ್ತದೆ. ಇನ್ನು ಸೀತೆಯ ಮಾತೊ? ಕಾಮವ್ಯಾಮೋಹವು ಇನ್ನೂ ಆರಿಲ್ಲ. ಅವನಿಗೆ ಬೇಕಾಗಿದ್ದವರು ಬಂಧುಗಳು, ಆ ಸೀತೆ. ಸೀತೆ ಇನ್ನೂ ತನ್ನ ಅಧೀನಳಾಗಿಯೇ ಇರುವಳಲ್ಲ. ಅವಳನ್ನು ರಾಮನಿಗೆ ಒಪ್ಪಿಸಬೇಕಾದ ಆವಶ್ಯಕತೆಯೇ ಇಲ್ಲ. ರಾಜ್ಯ ಕೊಟ್ಟು ವೈರಿಗಳ ವಶದಿಂದ ನಂಟರನ್ನು ಪಾರುಮಾಡಿಸಿದರೆ ಸಾಕು. ಆ ಮೇಲೆ ನೋಡೋಣ, ಸೀತೆ ದಕ್ಕುವಳೋ ಇಲ್ಲವೋ! ಅವನ ಮನಸ್ಸು ಈ ತರ್ಕದ ಬವಣೆಯಲ್ಲಿದೆ. ಹಿಂದಿನಂತೆ ಛಲಗಾರನಾಗದೆ ಮಂತ್ರಿಯ ಮಾತನ್ನು ನಡಸಿಯೇ ಬಿಡೋಣ ಎಂದು ಸಂಕಲ್ಪ ಮಾಡಿಕೊಳ್ಳುತ್ತಾನೆ. ರಾಮನ ಬಳಿಗೆ ದೂತನನ್ನು ಕಳುಹಿಸಬೇಕು. ಯಾವ ಸಂಧಿ ಸಂದೇಶವನ್ನು ಅವನಿಗೆ ಹೇಳುವುದು? ರಾಮನೆಷ್ಟೇ ಆಗಲಿ ಮನುಷ್ಯ. ಖೇಚರನಾದ ತಾನು ಸೋತವನಂತೆ, ಹೆದರಿದವನಂತೆ, ವಿನಯಪರವಾದ ಮಾತುಗಳನ್ನು ಹೇಳಬಹುದೆ? ಬೇಡ, ಬೇಡ ಎಂದು ಅವನ ಆತ್ಮಗೌರವ ಒಳಗೊಳಗೇ ಗದ್ದಲ ಮಾಡುತ್ತದೆ. ಇದಕ್ಕೆ ಕಿವಿಗೊಟ್ಟು ಅವನು ದರ್ಪಾವಲಂಬಿಯಾಗುವನು. ಸಂಧಿ ನಡೆಯಲಿ, ಹೋಗಲಿ, ಇಲ್ಲಿ ಅದು ಮುಖ್ಯವಲ್ಲ. ರಾವಣನೂ ಒಂದು ಸಲ ಅದಕ್ಕೆ ಮನಸ್ಸು ಮಾಡುವುದು ವಿಶೇಷ ವಿಷಯ. ಈ ಅಪೂರ್ವ ಸಂದರ್ಭವನ್ನು ಕಲ್ಪಿಸಿಕೊಂಡು ವಿಮಲಸೂರಿ ರಾವಣನ ಮನೋಯುದ್ಧವನ್ನು ಬಿಡಿಸಿ ತೋರಿಸಿರುವನು. ನಾಗಚಂದ್ರನಾದರೆ "ಸಂಧಿ ಹೇಗಿದ್ದರೂ ಆಗುವುದಿಲ್ಲ, ಅದನ್ನು ಹೇಳಿದರೂ ಒಂದೇ ಬಿಟ್ಟರೂ ಒಂದೇ" ಎಂದು ಭಾವಿಸಿ

ಕೊಂಡು ಈ ದೃಶ್ಯವನ್ನು ಬಿಟ್ಟಿರುವಂತೆ ಕಾಣುತ್ತದೆ. ಇಲ್ಲಿ ಅವನ ವಿಮರ್ಶೆ ಅವನನ್ನು ತಪ್ಪುದಾರಿಗೆ ಎಳೆದುಬಿಟ್ಟಿದೆ.

ಇವೆಲ್ಲ ಬಿಡಬಾರದಂಥ ಸನ್ನಿವೇಶಗಳು. ರಾವಣನ ಕೊನೆಯ ದಿವಸಗಳಲ್ಲಿ ಮಂಡೋದರಿಯ ಸವತಿಮಾತ್ಸರ್ಯವನ್ನು ತೋರಿಸುವುದಕ್ಕಾಗಿ ಒಂದು ಸಣ್ಣ ಸನ್ನಿವೇಶ ಮೂಲದಲ್ಲಿ ಬಂದಿದೆ. ನಾಗಚಂದ್ರನು ಇದನ್ನು ಬಿಟ್ಟಿದ್ದರೂ ಏನೂ ಬಾಧಕವುಂಟಾಗಿಲ್ಲ. ಮೂಲಕಥೆಗೆ ಇದರಿಂದ ಪ್ರಯೋಜನವೇನೂ ಇಲ್ಲ. ಮಂಡೋದರೀ ಪಾತ್ರ ನಿರೂಪಣೆಗೆ ಇದು ಸ್ವಲ್ಪ ಸಹಾಯ ಮಾಡಬಹುದು. ಆದರೆ ಅವಳ ಘನತೆಯನ್ನು ಹಿರಿದುಮಾಡುವ ಸನ್ನಿವೇಶ ಅಲ್ಲ ಇದು. 'ಪ್ರವರ ಪುರುಷ'ನಾದ ರಾವಣನ ಪಟ್ಟಮಹಿಷಿಯಲ್ಲಿ ಸವತಿಮಾತ್ಸರ್ಯ ದೋಷವೆ! ಅದೂ ಪ್ರಕಟವಾಗುವ ಸಂದರ್ಭ ಎಂಥದು? ರಾವಣನು ದುರ್ಮೋಹದ ಬೇರನ್ನು ತನ್ನ ಮನಸ್ಸಿನಿಂದ ಕಿತ್ತೊಗೆದು ಸೀತೆಯ ವಿಷಯದಲ್ಲಿ ಕರುಣೆ ವೈರಾಗ್ಯಗಳನ್ನು ಹೊಂದಿ 'ವಿಶದ ಯಶಶ್ಚಂದ್ರಿಕೆಗೆ ಕಳಂಕವಾಗದಂತಿರೆ' ಯುದ್ಧ ಮಾಡಬೇಕೆಂದು ರಣಭೂಮಿಗೆ ಇಳಿಯುವ ದಿನದ ಹಿಂದಿನ ರಾತ್ರಿ. ಈಗ ರಾವಣನಿಗೆ ಮಂಡೋದರಿಯೂ ಬೇಡ, ಸೀತೆಯೂ ಬೇಡ. ಇನ್ನು ಅವಳ ಸವತಿಮಾತ್ಸರ್ಯದ ಹುಬ್ಬುಗಂಟಿನ ಬಿನ್ನಾಣ ಅವನಿಗೇಕೆ? ನಾಗಚಂದ್ರನ ಕಾವ್ಯದಲ್ಲಿ ಇದು ಕಾಣಿಸದಿರುವುದು ಉಚಿತವಾಗಿರುವಂತೆ ತೋರುತ್ತದೆ.

ಮೂಲದಲ್ಲಿ ವಿಶದವಾದ ಚಿತ್ರ ಇಲ್ಲದ, ರಾಮಾಯಣದ ಕಥೆಗೆ ಸಂಬಂಧಪಟ್ಟ ಕೆಲವು ದೃಶ್ಯಗಳಿಗೆ ನಾಗಚಂದ್ರನು ತನ್ನ ಕಾವ್ಯದಲ್ಲಿ ಬಣ್ಣ ತುಂಬಿ ಹೆಚ್ಚು ಸುಂದರವಾಗಿ ಮಾಡಿದ್ದಾನೆ. ಇಂಥವುಗಳಲ್ಲಿ ಒಂದನ್ನು ಮಾತ್ರ ಇಲ್ಲಿ ನೋಡಬಹುದು. "ಬಱಸಿಡಿಲ ಬಟಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯ"ನ್ನು ಕಂಡಕೂಡಲೆ ರಾವಣನ ಮನಸ್ಸು ಅವಳಲ್ಲಿ ನಾಟಿ ಹೋಯಿತು. ಅವಳ ಸೌಂದರ್ಯ ಅವನಿಗೆ ಮೃತ್ಯುಸ್ವರೂಪವಾಯಿತು. ಪರವಧೂ ದುರ್ಮೋಹವು ಅವನ ವಿವೇಕವನ್ನು ಮುಸುಕಿತು. ಅವಳು ಯಾರೆಂದು ತಿಳಿದುಕೊಳ್ಳಬೇಕೆಂಬ ಕುತೂಹಲವೂ ಅವಳನ್ನು ರಾಮನಿಂದ ಅಗಲಿಸುವ ಬಗೆ ಹೇಗೆ ಎಂಬ ಪಾಪಚಿಂತನೆಯೂ ಒಂದೇ ಸಲ ಅವನ ಮನದ ಕೊನೆಯಲ್ಲಿ ಮೂಡಿದುವು. ಅದಕ್ಕಾಗಿ ಅವನು ತನ್ನ ಅವಲೋಕಿನೀ ವಿದ್ಯೆಯನ್ನು ಸ್ಮರಿಸು

ತ್ತಾನೆ. ಆ ವಿದ್ಯೆ ತೊತ್ತಿನಂತೆ ಮುಂದೆ ಬಂದು ನಿಂತು ಅಪ್ಪಣೆ ಏನೆಂದು ಕೈಮುಗಿದು ಕೇಳುತ್ತದೆ. ವಿಮಲಸೂರಿಯ ರಾಮಾಯಣದಲ್ಲಿ ಅದು ಸೀತಾ ದೇವಿಯ ಪರಿಚಯವನ್ನು ಮಾತ್ರ ರಾವಣನಿಗೆ ಹೇಳುತ್ತದೆ; ರಾವಣನೇ ಸಿಂಹ ನಾದ ಮಾಡಿ ರಾಮನನ್ನು ಲಕ್ಷ್ಮಣನ ಬಳಿಗೆ ಕಳಿಸುತ್ತಾನೆ. ಈ ದೃಶ್ಯವು ರೂಪರೇಖೆಗಳಿಲ್ಲದ ಅಸ್ಪಷ್ಟ ಚಿತ್ರದಂತಿದೆ. ವ್ಯಾಪಾರ ಮಾಡುವವರೂ ಇಷ್ಟು ಬೇಗನೆ ಮುಗಿಸುವುದಿಲ್ಲ; ಸ್ವಲ್ಪವಾದರೂ ಚೌಕಾಸಿ ಮಾಡುತ್ತಾರೆ. ನಾಗ ಚಂದ್ರನಿಗೆ ಇದು ಸರಿಯಾಗಿಲ್ಲವೆಂದು ಹೊಳೆಯಿತು. ರಾವಣನಿಗೂ ವಿದ್ಯೆಗೂ ನಡೆದ ಸಂವಾದವನ್ನು ಅವನು ಚೆನ್ನಾಗಿ ಬಣ್ಣಿಸಿದ್ದಾನೆ.

ರಾವಣ :—ಈಕೆಯನೀತನಿಂದಗಲ್ಚುವುಪಾಯಮಾವುದು ?

ದೇವತೆ :—(ಭಯಚಕಿತ ಚಿತ್ತೆಯಾಗಿ) ಆರಯ್ಯೆ ವಿರೋಧಂ ಸಾಧಾರಣ ಪುರುಷ ರೊಳಂ ಉಚಿತಮಲ್ತು. ಅಧಿಕಬಲರ್ ಕಾರಣಪುರುಷರ್ ಇವರ್. ನಿಷ್ಕಾ ರಣಂ ಇವರೊಳ್ ವಿರೋಧಮಂ ಮಾಡುವುದೇ ? ಕಾವ ಬೆಸಂ ನಿನ್ನದು ಸಕಲಾವನಿಯಸಧರ್ಮನಿರತರಂ ನಿಯಮಿಸಿ. ನೀನೇ ವಿಷಯಕ್ಕೆಳಗು ವುದುಂ ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ. ಅನ್ನೆಯದಿಂ ನಡೆವ ವರಂ ನೀನ್ ನಿಯಮಿಸುವಯ್ ದಶಾಸ್ಯ. ಪೆಱನಾವಂ ನಿನ್ನಂ ನಿಯಮಿ ಸುವಂ ? ಮುನ್ನೀರ್ ಬೆನ್ನೀರೆನೆ ಬೆರಸಲ್ ಅಣ್ಣಾ ತಣ್ಣೀರೊಳವೇ ? ಇವ ರೊಳ್ ವಿದ್ವೇಷಣಂ ದೂಷಣಂ.

ರಾವಣ :—ಆನೊಂದಂ ಬೆಸಗೊಂಡೊಡೆ ನೀನೊಂದನಿದೇಕೆ ಪೇಲ್ದೆ ? ಪೇೞ್ದುದ ನೇಗೊಳ್. ಏನೆಂದು ಕೀೞು ನುಡಿವಯ್ ? ಮಾನವರಾಂತಪರೆ, ಮರುಳೆ, ಲಂಕಾಪತಿಯಂ !

ದೇವತೆ :—(ಕನಲ್ದು) ಜನಕಜೆಯನುಯ್ಯೆ ದಶರಥತನೂಜರಿಂ ಮರಣಮಾಗ ಲೆಂದಿರ್ದಪುದು. ಈತನ ಕಯ್ಯೞಿವಲ್ತು. ಪುರಾತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ. (ಎಂದು ಚಿಂತಿಸಿ) ಗೆಲಲೆಸಗೆ ರಿಪು ಬಲಂ ಬಲ್ಪಲಮಾ ದೊಡೆ ಸಿಂಹನಾದಮುಂ ಮಾಳ್ಪೆಂ, ಬೆಂಬಲವಾಗಿ ಬರ್ಪುದೆಂದು ಈ ಬಲ ದೇವಂಗಱುಪಿ ವಾಸುದೇವಂ ಪೋದಂ.

ಎಂದು ಹೇಳಿದ ಕೆಲಸವೆಷ್ಟೋ ಅಷ್ಟನ್ನೇ ಮಾಡಬೇಕಾಗಿ ಬರುತ್ತದೆ. ಯಾರು ಎಷ್ಟು ಉಪದೇಶಮಾಡಿದರೂ ಕೇಳದಂಥ ಮೋಹದ ಮಂಕು ರಾವಣನನ್ನು ಕವಿಯುತ್ತದೆ. "ದಿವ್ಯವಚನಂ ಹೃದಯಕ್ಕೆಯ್ದುದಿಲ್ಲ. ಬದಿಯಂ ಮಿಾಱುಗುಮೆ ಪೆಱರ ಪೇಟ್ದುಪದೇಶಂ" ಎಂಬ ಮಾತುಗಳಲ್ಲಿ ರಾವಣನ ಬೆನ್ನಂಟಿದ ವಿಧಿಯ ಮಹಿಮೆಯನ್ನು ನಾಗಚಂದ್ರನು ತೋರಿಸಿದ್ದಾನೆ. ಈ ದೃಶ್ಯದಲ್ಲಿ ಅವನ ಪ್ರತಿಭೆ ಕಿಡಿಗುಟ್ಟಿದೆ.

ಹೀಗೆ ಕೆಲವು ಸಣ್ಣ ಸಣ್ಣ ಮಾರ್ಪಾಟುಗಳನ್ನು ನಾಗಚಂದ್ರನು ಮೂಲ ಕಥೆಯಲ್ಲಿ ಮಾಡಿಕೊಂಡಿದ್ದಾನೆ. ಇವನ್ನು ಬಿಟ್ಟರೆ ವಿಮಲಸೂರಿಯ ಜಾಡನ್ನೇ ಚಾಚೂ ತಪ್ಪದೆ ಅವನು ಹಿಡಿದಿದ್ದಾನೆ; ಅಲ್ಲಲ್ಲಿ ಸ್ವಲ್ಪ ನಿಂತು ಸುತ್ತಲೂ ನೋಡಿ ತಾನು ಕಂಡ ಸೊಗಸನ್ನು ಬಣ್ಣಿಸುತ್ತ ಹೋಗಿದ್ದಾನೆ. ಉತ್ಕೃಷ್ಟ ಕಲೆಯಿಂದ ತುಂಬಿದ ಮಾರ್ಪಾಟುಗಳಾವುವೂ ಅವನ ಕಾವ್ಯದಲ್ಲಿ ಕಂಡುಬರುವುದಿಲ್ಲ. ಮೇಲೆ ತೋರಿಸಿರುವ ಒಂದೆರಡು ಕೊರತೆಗಳನ್ನು ಬಿಟ್ಟರೆ ಅವನ ಸಂಗ್ರಹ ಕಾರ್ಯ ಸಮರ್ಪಕವಾಗಿ ನಡೆದಿದೆ ಎಂದು ಹೇಳಬಹುದು. ಮೂಲ ಜೈನ ರಾಮಾಯಣದ ಸಂಪ್ರದಾಯ ನಾಗಚಂದ್ರನಲ್ಲಿ ಪೂರ್ತಿಯಾಗಿ ಪ್ರತಿಫಲಿಸಿದೆ.

೬. ರವಿಷೇಣನ ಪ್ರಭಾವ

ನಾಗಚಂದ್ರನ ಕಾವ್ಯಪರಿಚಯದಲ್ಲಿ ರವಿಷೇಣನ 'ಪದ್ಮಪುರಾಣ'ವೂ ಸೇರಿತ್ತೆಂದು ಹೇಳಿದೆ. ರವಿಷೇಣನಿಗೂ ವಿಮಲಸೂರಿಯ 'ಪಉಮಚರಿಯ'ವೇ ಮೂಲ. ಪ್ರಾಕೃತ ಭಾಷೆಯಲ್ಲಿದ್ದ ಆ ಕಾವ್ಯವನ್ನು ಅವನು ಸಂಸ್ಕೃತದಲ್ಲಿ ಹೇಳಿದ್ದಾನೆ. ಹಾಗೆ ಹೇಳುವಾಗ ಸಮಯ ಸಿಕ್ಕಿದಾಗಲೆಲ್ಲ ಹಿಗ್ಗಲಿಸಿ ಮೂಲವನ್ನು ದೊಡ್ಡದುಮಾಡಿದ್ದಾನೆ. ಅದರಲ್ಲಿರುವ ಯಾವ ಉಪಾಖ್ಯಾನವನ್ನೂ ಅವನು ಬಿಟ್ಟಿಲ್ಲ. ಅವನ ದೃಷ್ಟಿ ಪುರಾಣಕಾರನ ದೃಷ್ಟಿ. ಅವನಲ್ಲಿ ಆತುರಗಮನ ವಿಲ್ಲ. "ಹೇಗಿದ್ದರೂ ಎಂದಿದ್ದರೂ ಊರನ್ನು ಮುಟ್ಟಲೇಬೇಕು. ಬೇಗಬೇಗನೆ ನಡೆದು ಆಯಾಸಪಡುವುದೇತಕ್ಕೆ ? ಹೋದರಾಯಿತು ನಿಧಾನವಾಗಿ. ಈ ಸಾಲು ಮರದ ನೆರಳು ಎಷ್ಟು ತಂಪಾಗಿದೆ; ಈ ತೊರೆಯ ತಿಳಿನೀರಿನ ರುಚಿ ಎಂಥದು; ಈ ಗುಡ್ಡದ ಮೇಲಿಂದ ಕಾಣುವ ಪ್ರಕೃತಿಯ ರೂಪ ಸೌಂದರ್ಯಗಳು ಏನು

ರಮಣೀಯವಾಗಿವೆ: ಆ ಕಾಡಿನ ಸೌಮ್ಯಭಯಂಕರತೆ ಎಷ್ಟು ತಲ್ಲಣಗೊಳಿಸುತ್ತದೆ. ಇವನ್ನೆಲ್ಲ ಕಣ್ಣು ತುಂಬ ನೋಡದೆ, ಅನುಭವಿಸದೆ, ಆನಂದಪಡದೆ 'ಹೋದ ಪುಟ್ಟ ಬಂದಪುಟ್ಟ' ಎನ್ನುವ ಹಾಗೆ ಊರಿಗೆ ಹೋದರೆ ಬಂದದ್ದೇನು? ಅದೆಂಥ ಪ್ರಯಾಣ!" ಎಂದು ನಿಷ್ಕರ್ಷೆಮಾಡಿಕೊಂಡು ಹೊರಡುವ ಹಾದಿಕಾರನ ದೃಷ್ಟಿ ಅವನದು. ಆದ್ದರಿಂದ ಅವನ ಕಾವ್ಯದಲ್ಲಿ ಆಂಗಿಕ ಸೌಂದರ್ಯ ಹೆಚ್ಚಾಗಿ ಕಂಡುಬರುತ್ತದೆ. ನಾಗಚಂದ್ರನು ಕೊಟ್ಟಿರುವ ಕೆಲವು ದೃಶ್ಯಗಳ ವರ್ಣನೆಗಳು ರವಿಷೇಣನ ಗ್ರಂಥದಲ್ಲಿರುವ ಆ ಆ ದೃಶ್ಯಗಳ ಸಂಕುಚಿತ ಸ್ವರೂಪವೆಂದು ಕಾಣುತ್ತವೆ. ರವಿಷೇಣನ ಪ್ರಭಾವವೆಂಥದೆಂಬುದನ್ನು ಕೆಲವು ಸನ್ನಿವೇಶಗಳಿಂದ ವ್ಯಕ್ತಪಡಿಸಬಹುದು.

೧. ಉಪರಂಭೆಯ ಕಥೆಯನ್ನು ತೆಗೆದುಕೊಳ್ಳೋಣ. ರಾವಣನು ದುರ್ಲಂಘ್ಯಪುರದ ಹತ್ತಿರ ಬೀಡುಬಿಟ್ಟಿರುವಾಗ ಆ ಪಟ್ಟಣದ ರಾಣಿಯಾದ ಉಪರಂಭೆ ಅವನ ಮೇಲೆ ಮೋಹಗೊಂಡು ಅವನ ಸಂಗಸುಖವನ್ನು ಪಡೆಯಬೇಕೆಂಬ ಆಶೆಯಿಂದ ಅವನ ಬಳಿಗೆ ಚಿತ್ರಮಾಲೆ ಎಂಬ ದೂತಿಯನ್ನು ಅಟ್ಟುತ್ತಾಳೆ. ಅವರಿಬ್ಬರಿಗೂ ಆಗ ನಡೆದ ಮಾತುಗಳನ್ನಾಗಲಿ, ದೂತಿ ರಾವಣನ ಬಳಿಗೆ ಹೋದ ವೇಷವನ್ನಾಗಲಿ ವಿಮಲಸೂರಿ ವರ್ಣಿಸಿಲ್ಲ. ರವಿಷೇಣನು ಅವರಿಬ್ಬರಿಗೂ ಏಕಾಂತದಲ್ಲಿ ನಡೆದ ಸಂಭಾಷಣೆಯನ್ನು ಕೊಟ್ಟು, "ಸಖಿ, ಬಾಲ್ಯದಿಂದಲೂ ರಾವಣನು ನನ್ನ ಮನೋಗತನಾಗಿದ್ದಾನೆ. ಲೋಕದಲ್ಲೆಲ್ಲ ಹರಡಿರುವ ಅವನ ಗುಣಗಾನವನ್ನು ಕೇಳಿದ್ದೇನೆ. ನನ್ನ ಅಪ್ರಗಲ್ಭತೆಯಿಂದ ನನಗೆ ಅಪ್ರಿಯ ಸಂಗಮ ಉಂಟಾಯಿತು, ಅದಾದ ಮೇಲಂತೂ ನಾನು ರಾವಣನಲ್ಲಿ ಪರಮ ಪ್ರೀತಿಯನ್ನು ಇಟ್ಟಿದ್ದೇನೆ. ಅವನು ಪ್ರಸನ್ನನಾಗದಿದ್ದರೆ ನನಗೆ ಮರಣವೇ ಶರಣು. ಅಂಥ ನನ್ನ ಮನೋಹರನಾದ ರಾವಣನು ಈಗ ಹತ್ತಿರದಲ್ಲಿಯೇ ಇದ್ದಾನೆ. ಈ ಯೋಗವನ್ನು ಕಳೆದುಕೊಂಡರೆ ಅವನು ನನಗೆ ದುರ್ಲಭನಾಗುತ್ತಾನೆ. ನನ್ನ ಕಾರ್ಯವನ್ನು ನೆರವೇರಿಸುವೆಯಾ"* ಎಂದು

* ಸಖಿ ಬಾಲ್ಯತ ಆರಭ್ಯ ರಾವಣೇ ಮೇ ಮನೋಗತಂ
ಲೋಕಾವಗಾಮಿನಸ್ತಸ್ಯ ಗುಣಾಃಕಾಂತಾ ಮಯಾ ಶ್ರುತಾಃ || ಪ. ಪು. ೧೨-೧೦೭

ಉಪರಂಭೆ ದಾಸಿಯು ಕಾಲಿಗೆ ಬಿದ್ದು ಬೇಡಿಕೊಳ್ಳುವ ಚಿತ್ರವೊಂದನ್ನು ಕೊಡುತ್ತಾನೆ. ನಾಗಚಂದ್ರನು ಇದನ್ನೆಲ್ಲ

ನಳಕೂಬರನ ಕುಲಾಂಗನೆ
ವಿಳಾಸವತಿ ರಾವಣಂಗೆ ಪಲಕಾಲಂ ಮು
ನ್ನೆಳಸಿರ್ಪ ಕಾಮಕಾತರೆ
ಕೆಳದಿಗೆ ತಿಳಿವಂತು ತನ್ನ ತೆಱನಂ ಪೇೞ್ದಳ್

ಎಂಬ ಒಂದು ಕಂದಲ್ಲಿ ಬಹುಮಿತವಾದ ಧ್ವನಿಪೂರ್ಣವಾದ ಮಾತುಗಳಿಂದ ಉಪರಂಭೆಯ ಹೃದಯವನ್ನು ಗ್ರಹಿಸಿ ಇಟ್ಟಿದ್ದಾನೆ. ಇಲ್ಲಿ ಅವನ ಮನಸ್ಸಿನ ಮುಂದೆ ರವಿಷೇಣನು ಬರೆದಿರುವ ಸೊಗಸಾದ ಚಿತ್ರವಿದೆ. ಅಲ್ಲದೆ ಆ ದೂತಿ ರಾವಣನ ಹತ್ತಿರಕ್ಕೆ ಹೋಗುವಾಗ ಹಾಕಿಕೊಂಡ ವೇಷವನ್ನು —

ಸಾಂಭೋ ಜೀಮೂತ ಸಂಕಾಶ ಸೂಕ್ಷ್ಮವಸ್ತ್ರಾವಗುಂಠಿತಾ
ಖಮುತ್ಪ್ಲುತ್ಯ ಕ್ಷಣಾತ್ಪ್ರಾಪ ವಸತಿಂ ರಕ್ಷಸಾಂ ಪ್ರಭೋಃ || ೧೨-೧೧೩

ಎಂಬ ಒಂದು ಪದ್ಯದಲ್ಲಿ ರವಿಷೇಣನು ಕೊಟ್ಟಿದ್ದಾನೆ. ನಾಗಚಂದ್ರನಲ್ಲಿಯೂ

ನೀಲಪಟಚ್ಛದೆ ನಿಶೆಯೊಳ್
ಲೋಲೇಕ್ಷಣೆ ಗಗನಮಾರ್ಗದಿಂ ರಾವಣನಿ
ದ್ರಾಲಯಮಂ ವಿಜಯಶ್ರೀ
ಲೀಲೆಯಿನಾ ಚಿತ್ರಮಾಲೆ ಬಂದೊಳವೊಕ್ಕಳ್

ಎಂಬ ಪದ್ಯದಲ್ಲಿ ಅದೇ ಚಿತ್ರದ ಛಾಯೆಯೇ ಮರುಕೊಳಿಸಿದೆ. ಆದರೂ ನಾಗಚಂದ್ರನ ಸಂಗ್ರಹದಲ್ಲಿ ಈ ಕಥೆ ಹೆಚ್ಚು ನಾಟಕೀಯತೆಯಿಂದ ಮನೋಹರವಾಗಿದೆ.

ಅಪ್ರಗಲ್ಭತಯಾ ಪ್ರಾಪ್ತಾ ಸಾಹಮಪ್ರಿಯಸಂಗಮಂ
ವಹಾಮಿ ಪರಮಪ್ರೀತೇಃ ಪಶ್ಚಾತ್ತಾಪಮನಾರತಂ || ೧೦೮
ಜಾನಾಮಿ ಚ ತಥಾ ನೈತತ್ಪ್ರಶಸ್ಯಮಿತಿ ರೂಪಿಣಿ
ತಥಾಪಿ ಮರಣಂ ಸೋಢುಂ ನಾಸ್ಮಿ ಸಕ್ತಾ ಸುಭಾಷಿತೇ || ೧೦೯
ಸೋಽಯಮಾಸನ್ನದೇಶಸ್ಥೋ ವರ್ತತೇ ಮೇ ಮನೋಹರಃ
ಕಥಂಚಿದಮುನಾ ಯೋಗಂ ಪ್ರಸೀದ ಕುರು ಮೇ ಸಖಿ || ೧೧೦
ಏಷಾ ನಮಾಮಿ ತೇ ಪಾದಾವಿತ್ಯುಕ್ತ್ವಾ ತಾವದುದ್ಯತಾ
ಶಿರೋ ನಮಯಿತುಂ ತಾವತ್ಸಖ್ಯಾ ತತ್ಸಂಭ್ರಮಾದ್ಧೃತಂ || ೧೧೧

೨. ಮೇಘಪುರವೆಂಬ ಒಂದು ಪಟ್ಟಣಕ್ಕೆ ರಾಜನು ಅತೀಂದ್ರನೆಂಬವನು. ಶ್ರೀಕಂಠನು ಅವನ ಮಗ, ದೇವಿಲೆ ಮಗಳು. ಇವಳನ್ನು ರತ್ನಪುರದ ರಾಜನು ತನ್ನ ಮಗನಾದ ಪುಷ್ಪೋತ್ತರನಿಗೆ ತೆಂದುಕೊಳ್ಳಬೇಕೆಂದು ಮನಸ್ಸುಮಾಡಿ ಅತೀಂದ್ರನಿಗೆ ಹೇಳಿಕಳಿಸುವನು. ಆದರೆ ಅವನು ಪುಷ್ಪೋತ್ತರನಿಗೆ ಮಗಳನ್ನು ಕೊಡಲು ಇಷ್ಟವಿಲ್ಲದೆ ಲಂಕಾಪುರದ ರಾಜನಾದ ಧವಳಕೀರ್ತಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇದರಿಂದ ಪುಷ್ಪೋತ್ತರನಿಗೆ ಅತೀಂದ್ರನ ಮೇಲೆ ಮನಸ್ತಾಪವುಂಟಾಗುತ್ತದೆ. ಹೀಗಿರಲು ಒಂದುದಿನ ಶ್ರೀಕಂಠನು ಜಿನಪೂಜೆಗಾಗಿ ಮಂದರ ಪರ್ವತಕ್ಕೆ ವಿಮಾನದಲ್ಲಿ ಹೋಗುತ್ತ ರತ್ನಪುರದ ಉದ್ಯಾನದಲ್ಲಿ ಪುಷ್ಪೋತ್ತರನ ತಂಗಿಯಾದ ಪದ್ಮೋತ್ತರೆಯನ್ನು ಕಂಡು ಮೋಹಗೊಳ್ಳುವನು. ಈ ಸನ್ನಿವೇಶವನ್ನು ವಿಮಲಸೂರಿ ಬಣ್ಣಿಸಿ ಹೇಳಲಿಲ್ಲ. ಸುಮ್ಮನೆ "ಶ್ರೀಕಂಠನು ಕನ್ನೆಯನ್ನು ವರೋದ್ಯಾನದಲ್ಲಿ ನೋಡಿದನು. ಅವಳೂ ಅವನನ್ನು ನೋಡಿದಳು. ರೂಪಕ್ಕೆ ಸೋತಳು. ಇಬ್ಬರಿಗೂ ಕೂಡಲೇ ಅನುರಾಗ ಹುಟ್ಟಿತು. ಅವಳ ಆ ಭಾವವನ್ನು ನೋಡಿ ಶ್ರೀಕಂಠನಿಗೆ ಹರ್ಷಪುಳಕವುಂಟಾಗಿ ವಿಮಾನದಿಂದ ಕೆಳಗಿಳಿದು ಅವಳನ್ನು ಅಪಹರಿಸಿಕೊಂಡು ಆಕಾಶಕ್ಕೆ ಹಾರಿದನು" (೬-೮, ೯). ಎಂದು ಮಾತ್ರ ಹೇಳುತ್ತಾನೆ. ರವಿಷೇಣನು ಈ ದೃಶ್ಯಕ್ಕೆ ಹೊಸ ಕಳೆಯೊಂದನ್ನು ಕೊಟ್ಟಿರುವನು. ಪ್ರಣಯೋದ್ದೀಪನವಾಗುವ ಈ ಆವರಣದಲ್ಲಿ ಸಂಗೀತದ ಸ್ವರ ಮಂತ್ರ ಬೇಡವೆ? ಪುಷ್ಪೋತ್ತರೆಯ ವೀಣಾಗಾನವು ಗಾಳಿಯಲ್ಲಿ ಅಲೆಯಲೆಯಾಗಿ ಹಾದುಬಂದು ಶ್ರೀಕಂಠನ ಮನಸ್ಸನ್ನು ಆಕರ್ಷಿಸುತ್ತದೆ.

> ತಸ್ಮಾನ್ನಿವರ್ತಮಾನೋಽಸೌ ಚೇತಃಶ್ರೋತ್ರಾಪಹಾರಿಣಂ
> ಭೃಂಗಾಣಾಮಿವ ಝುಂಕಾರಮಶೃಣೋದ್ಗೀತ ನಿಸ್ವನಂ || ೬-೧೫
>
> ರಮ್ಯಪ್ರಕ್ವಣಮಿಶ್ರೇಣ ತೇನ ಗೀತಸ್ವನೇನ ಸಃ
> ಧೃತೋ ಋಜು ಗುಣೇನೇವ ಬದ್ಧ್ವಾ ನಿಶ್ಚಲವಿಗ್ರಹಃ || -೧೬

ಎಂದು ರವಿಷೇಣನು ಆ ಗಾನದಿಂದ ಮುಗ್ಧನಾದ ಶ್ರೀಕಂಠನ ಸ್ಥಿತಿಯನ್ನು ವರ್ಣಿಸುತ್ತಾನೆ. ಶ್ರೀಕಂಠನು ಕೆಳಗೆ ನೋಡಿ ಸಂಗೀತದ ಗೃಹಾಂಗಣದಲ್ಲಿದ್ದ ಆ ಕನ್ನೆಯ ಕಣ್ಣು ತಿಳಿದು ಮನಸೋಲುವನು.

ತತಸ್ತಾವಿಂಗಿತಾಭಿಜ್ಞೌ ಭುಜಪಂಜರಮಧ್ಯಗಾಂ
ಕೃತ್ವಾ ನಭಸ್ತಲೇ ಯಾತಃ ಸ್ಪರ್ಶವಿಮೀಲಿತ ಲೋಚನಃ || ೬-೨೦

ಎಂಬ ಪದ್ಯದಲ್ಲಿ ಅವರ ಅನುರಾಗದ ಆನಂದೋನ್ಮಾದವನ್ನು ಅವನು ವರ್ಣಿಸಿದ್ದಾನೆ. ನಾಗಚಂದ್ರನು ರವಿಷೇಣನಿಗಿಂತಲೂ ಹೆಚ್ಚು ನಾದಲೋಲನು. "ಕಮ್ಮನೆ ಕಸ್ತೂರಿಯು ಕಂಪಿನಂತೆ ಕವಿವ" ಆ ವೀಣಾನಾದವನ್ನು

ಜಿತ ಭೃಂಗೀ ಝುಂಕೃತಂ ನಿರ್ಜಿತಮದನ ಧನುರ್ಜ್ಯಾಲತಾ ಟಂಕೃತಂ ತ
ರ್ಜಿತ ವೀಣಾ ಶಿಂಜಿತಂ ಭಂಜಿತ ರತಿರಮಣೀ ರತ್ನಕಾಂಚೀಪ್ರಣಾದಂ
ಶ್ರುತಿಯಂ ತಟ್ಟೈಸೆ ರೋಮೋದ್ಗತಿಯೊಡನೆ ಗತಿಸ್ತಂಭಮಂ ಖೇಚರಾಧೀ
ಶ ತನೂಜಂಗಿತ್ತುದಾ ಕನ್ನಿಕೆಯ ಮಧುರ ಸಪ್ತಸ್ವರೋತ್ಥಾನ ಗಾನಂ

ಎಂದೂ 'ಸ್ವರಮಂತ್ರ ದೇವತಾ ನೂಪುರ ರವ'ವೆಂದೂ ಅವನು ಮೈಮರೆತು ನಾದಲೀನನಾಗಿ ಮನವಾರೆ ಹಾಡಿದ್ದಾನೆ. ಆ ಗಾನವನ್ನು ಕೇಳಿ ಶ್ರೀಕಂಠನು 'ಗೋರಿಯ ಮೃಗದಂತೆ ಎಳಸಿ' ಬಂದು "ನೋಡಲೊಡನಾ ಕುಮಾರಿಯ ಗಾಡಿಗೆ ಕಣ್ಸೋಲ್ತು ಕನ್ನೆಯಂ ಮನಸಿಜನೇಸಾಡಿದನ್" ಎಂದು ಪ್ರಣಯ ಸ್ಯಂದಿಯಾದ ಆ ದೃಶ್ಯವನ್ನು ಬಹಳ ನಯವಾಗಿ ವರ್ಣಿಸಿರುವನು. ಇದನ್ನೂ ರವಿಷೇಣನ ಚಿತ್ರವನ್ನೂ ಒಂದರ ಮಗ್ಗುಲಲ್ಲಿ ಒಂದನ್ನು ಇಟ್ಟು ನೋಡಿದರೆ ಎರಡಕ್ಕೂ ಇರುವ ಹತ್ತಿರದ ಸಂಬಂಧ ತಿಳಿದುಬರುವುದು. ನಾಗಚಂದ್ರನ ಚಿತ್ರ ಭಟ್ಟಿ ಇಳಿಸಿದ ಮಲ್ಲಿಗೆಯ ಕಂಪಿನಂತೆ ಗಮಗಮಿಸುವುದು. ಆದರೆ ಬೇಕೆಂದರೂ ಒಂದೆರಡು ತೊಟ್ಟುಗಳಿಗಿಂತ ಹೆಚ್ಚಾಗಿ ಸಿಕ್ಕುವುದಿಲ್ಲ.

ವಿಮಲಸೂರಿಯ ಕಾವ್ಯದಲ್ಲಾಗಲಿ, ರವಿಷೇಣನ ಪುರಾಣದಲ್ಲಾಗಲಿ ದೊರೆಯದಿರುವ ಕೆಲವು ದೃಶ್ಯ ವಿಸ್ತರಣೆಗಳೂ ಹೊಸ ಸೊಗಸುಗಳೂ 'ಪಂಪ ರಾಮಾಯಣ'ದಲ್ಲಿ ದೊರೆಯುತ್ತವೆ. ಅಲ್ಲಿ ನೀರಸವಾಗಿರುವ ಕೆಲವು ಸನ್ನಿವೇಶಗಳು ನಾಗಚಂದ್ರನ ಪ್ರತಿಭೆಯಿಂದ ನೂರ್ಮಡಿ ರಸಪೂರ್ಣವಾಗಿ ಪರಿಣಮಿಸಿವೆ. ಇಂಥ ಒಂದೆರಡನ್ನು ಇಲ್ಲಿ ಪರಿಶೀಲಿಸಬಹುದು. ಸಗರ ಚಕ್ರವರ್ತಿ ಸಹಸ್ರ ಲೋಚನನ ತಂಗಿಯಾದ ಉತ್ಪಲನೇತ್ರೆಯನ್ನು ಮದುವೆ ಮಾಡಿಕೊಳ್ಳುವ ಸಂದರ್ಭವನ್ನು ತೆಗೆದುಕೊಳ್ಳೋಣ. ಆ ಉತ್ಪಲನೇತ್ರೆಯನ್ನು ತೋಯದವಾಹನ ನೆಂಬ ಬೇರೊಬ್ಬ ಖೇಚರನೂ ಬಯಸಿ ಕೂಸನ್ನು ತನಗೆ ಕೊಡಬೇಕೆಂದು ಆಕೆಯ

ತಂದೆಯನ್ನು ಕೇಳಿದನು. ಆದರೆ ಆಕೆ ಸಗರನಿಗೆ ಪಟ್ಟಮಹಿಷಿಯಾಗುವಳೆಂದು ನೈಮಿತ್ತಿಕರು ಮೊದಲೇ ಹೇಳಿದ್ದರಿಂದ ಅವನು ಅದಕ್ಕೆ ಸಮ್ಮತಿಸದಿರಲು ವಿಮುಖನಾದ ತೋಯದವಾಹನನು ಅವನ ಮೇಲೆ ದಂಡೆತ್ತಿ ನಡೆದು ಅವನ ಪಟ್ಟಣವನ್ನು ಮುತ್ತುವನು. ಮಗನನ್ನೂ ಮಗಳನ್ನೂ ಅವನು ತನ್ನ ವಿದ್ಯಾಬಲದಿಂದ ಪಕ್ಷಿಗಳನ್ನಾಗಿ ಮಾಡಿ ಪಟ್ಟಣದಿಂದ ಹೊರಕ್ಕೆ ಕಳುಹಿಸಿ ತೋಯದವಾಹನನೊಡನೆ ಹೋರಾಡಿ ಮಡಿಯುತ್ತಾನೆ. ಇತ್ತ ಸಹಸ್ರಲೋಚನನೂ ಉತ್ಪಲನೇತ್ರೆಯೂ ಶರಭಾಟವಿ ಎಂಬ ಅರಣ್ಯಕ್ಕೆ ಬಂದು ಅಲ್ಲಿ ವೇತ್ರಾವತೀ ನದೀತೀರದಲ್ಲಿ ನೆಲಸುವರು. ವಿಧಿ ವಶದಿಂದ ಒಂದು ತುಂಟ ಕುದುರೆ ಸಗರ ಚಕ್ರವರ್ತಿಯನ್ನು ಈ ಕಾಡಿಗೇ ಎಳೆದು ತಂದು ಬಿಟ್ಟಿತು. ಸಗರನು ಕಾಡಿನಲ್ಲಿ ಅಲೆಯುತ್ತಾ ಬರುತ್ತಿರಲು ಉತ್ಪಲನೇತ್ರೆಯ ಅಪೂರ್ವ ಸೌಂದರ್ಯವು ಅವನ ಕಣ್ಮನಗಳನ್ನು ಸೆಳೆಯುತ್ತದೆ. ಆ ಮೋಹ ವಿಭ್ರಮವನ್ನಾಗಲಿ, ಅದಕ್ಕೆ ಕಾರಣವಾದ ಆ ರೂಪರಾಶಿಯನ್ನಾಗಲಿ ವಿಮಸೂರಿ ರವಿಷೇಣರು ಹೇಳಿಲ್ಲ. "ಸಗರನಿಗೆ ತನ್ನ ತಂಗಿಯನ್ನು ಸಹಸ್ರಲೋಚನನು ಒಪ್ಪಿಸಿದನು"* ಎಂದು ಮುಗಿಸಿ ಮುಂದೆ ಸಾಗುವರು. ಆಗಂತುಕನೂ ಅಪರಿಚಿತನೂ ಆದ ಸಗರನಿಗೆ ಅವನ ಪೂರ್ವೋತ್ತರಗಳನ್ನು ವಿಚಾರಮಾಡದೆ ಕನ್ಯೆಯನ್ನು ಕೊಡುವುದೂ ಅವನು ಸ್ವೀಕರಿಸುವುದೂ ಅಸ್ವಾಭಾವಿಕವಾಗಿ ಕಾಣುತ್ತವೆ. ಇಂಥ ಸನ್ನಿವೇಶವನ್ನು ಇಷ್ಟು ಬೇಗನೆ ಹಾರಿಸಿ ಬಿಡುವುದು ಚೆನ್ನಾಗಿಲ್ಲವೆಂದು ನಾಗಚಂದ್ರನಿಗೆ ಅತೃಪ್ತಿಯುಂಟಾಗಿರಬೇಕು. ಆದ್ದರಿಂದ ಅವನು ಇದನ್ನು ಉಚಿತ ರೀತಿಯಿಂದ ವಿಸ್ತರಿಸಿ ಬರೆಯಬೇಕಾಯಿತು. ಅವನ ಶಕ್ತಿಯನ್ನು ತೋರಿಸುವುದಕ್ಕೆ ಇಲ್ಲಿ ಅವಕಾಶ ಸಿಕ್ಕಿತು. ಈ ದೃಶ್ಯದ ಪ್ರತಿಯೊಂದು ಭಾಗವನ್ನೂ ನಾಗಚಂದ್ರನು ನಾಜೋಕಾಗಿ ಬಿಡಿಸಿ ತೋರಿಸಿದ್ದಾನೆ.

---

* ತಾವ ಯ ಆಸೇಣ ಹಿಓ, ಚಕ್ಕಹರೊ ಆಣಿಓ ತಮುದ್ದೇಸಂ
ತಸ್ಸ ವಿ ಯ ನಿಯಯ ಭಇಣೀ, ಸಹಸ್ಸನಯಣೇಣ ಸೇ ದಿನ್ನಾ || ಪ.ಚ., ೫-೭೩
ತತಶ್ಚ ಕ್ರಥರೋಽಶ್ವೇನ ಹೃತಸ್ತಂ ದೇಶಮಾಗತಃ
ದಿಷ್ಟ್ಯಾ ಚೋತ್ಪಲಮತ್ಯಾಸೌ ದೃಷ್ಟ್ವಾ ಭ್ರಾತ್ರೇ ನಿವೇದಿತಃ || ಪ.ಪು., ೫-೮೦
ತುಷ್ಟೇನ ತೇನ ಸಾ ತಸ್ಮೈ ದತ್ತಾ ಸಗರಚಕ್ರಿಣೇ | -೮೩ (ಪೂರ್ವಾರ್ಧ)

ಕಾಡಿನಲ್ಲಿ ಅಲೆದಾಡಿ ಆಯಾಸಪಟ್ಟು ಸಿಂಹ ಶರಭಗಳ ಭಯಂಕರ ಕೇಳಿಯನ್ನು ನೋಡಿ ಹೆದರಿದ ಸಗರನ ಕಣ್ಣುಗಳಿಗೆ ಕನ್ನೆಯ ರೂಪವೂ ಅವಳ ಅಣ್ಣನ ಸೌಮ್ಯಾಕಾರವೂ ಹಬ್ಬವನ್ನುಂಟುಮಾಡಿದುವು. ಅವನ ಮನಸ್ಸಿನಲ್ಲಿ ಸಂದೇಹವೂ ಕುತೂಹಲವೂ ಹುಟ್ಟುತ್ತವೆ. ಕನಸೋ ನನಸೋ ಎಂಬ ಭ್ರಮೆ ಅವನನ್ನು ಪೀಡಿಸುತ್ತದೆ. "ನವಶಶಿಲೇಖೆಯುಂ ನವದಿನೇಶನುಂ" ಇಲ್ಲಿಗೆ ಬಂದಂತಿದೆ, ಚೆನ್ನಾಗಿ ನೋಡೋಣ ಎಂದು ಅವನ ಎದೆ ಕಾತರಪಡುವುದು. "ಕುವಲಯಮಾಲೆಯುಂ ನಗುವ ಬಾಲೆಯ ಲೋಲವಿಲೋಚನಾಂಶುಗಳ್ ಸೋಲಿಪ ತಮ್ಮ ಲೀಲೆಯಿಂ"ದ ಅವನ ಚಿತ್ತವನ್ನು ಸೆರೆಹಿಡಿದುವು. ಕತ್ತಲೆ ಮೆತ್ತಿಕೊಂಡಂತಿದ್ದ ಆ ಕಾನಿನೊಳಗೆ "ಜಂಗಮ ದೀಪಮಾಲೆವೊಲ್ ಜಲಜಲಿಪ" ಆ ಕನ್ಯೆಯನ್ನು "ಕಣ್ಬೊಳಪಿಂದಮರ್ದಪ್ಪಿಕೊಳ್ವವೊಲ್" ಅವನ ದೃಷ್ಟಿಗಳು ನಟ್ಟು ನಿಂತುವು. ಆ "ಜಂಗಮ ಕಲ್ಪಲತಾ ವಿಲಾಸ"ದೆದುರಿಗೆ ತಾವರೆಯೇಕೆ ತುಂಬಿಯೇಕೆ! ಸಗರನು ಹೀಗೆ ಪ್ರಣಯವಶನಾಗಿ ಬಹಳ ಹೊತ್ತು ಕನ್ಯೆಯನ್ನೇ ನೋಡುತ್ತಿದ್ದರೆ ಅವಳ ಅಣ್ಣನೇನು ತಿಳಿದುಕೊಳ್ಳುವನೋ ಎಂದು ಅವನ ಕಡೆಗೆ ತಿರುಗುವುದನ್ನು "ಎಳಲತೆಯನುಟಿದು ತಾವರೆಗೆಳಸುವ ಮಱಿದುಂಬಿಯಂದದಿಂದೆಱಗಿದುದಾ ಚಳ ನಯನೆಯ ತನುಲತೆಯಿಂ ತಳರ್ದರಸನ ಕಣ್ ಕುಮಾರ ಮುಖ ಸರಸಿಜದೊಳ್" ಎಂಬ ಪದ್ಯದಲ್ಲಿ ನಾಗಚಂದ್ರನು ಎಷ್ಟು ರಮ್ಯವಾಗಿ ಹೇಳಿದ್ದಾನೆ! ಮುಂದೆ ನೋಡೋಣ, ಸಹಸ್ರಲೋಚನನಿಗೂ ಸಗರನಿಗೂ ಆದ ಮಾತು ಕಥೆಗಳನ್ನು.

ಸಗರ:—(ಅಂತು ನೋಡಿ) ಬಾಲೆ ಶಿರೀಷ ಮಾಲೆವೊಲ್ ಈಕೆ ಕರಂ ಸುಕುಮಾರೆ. ನೀಂ ಕರಂ ಬಾಲನೆ. ಕಾನನಂ ಮನುಜ ಖೇಚರಗೋಚರಮಲ್ತು, ಋಕ್ಷ ಶಾರ್ದೂಲ ಮದೇಭ ಸಿಂಹ ಶರಭಾಕುಲಂ. ಇಲ್ಲಿಗೆ ವರ್ಪ ದುಷ್ಕೃತೋನ್ಮೀಲನಮಾವ ಕಾರಣದಿನಾದುದು. ಅದಂ ತಿಳಿಪು.

ಸಹಸ್ರ:—(ನಿಜವೃತ್ತಾಂತವನ್ನು ಹೇಳಿ) ಈ ನಿನ್ನಾಕೃತಿ ನಿನ್ನ ದುಂದುಭಿಗಭೀರ ಧ್ವಾನಂ ಈ ನಿನ್ನ ನೇತ್ರಾನಂದೋದಯ ಭದ್ರಲಕ್ಷಣಗಣಂ ನೀಂ ಧಾತ್ರೀನಾಥನ್ ಪೆಱನಲ್ಲನ್ ಎಂಬನಿತನ್ ಪೇಟ್ದಪ್ಪುವು. ಈ ಭೀಮಾಟವೀ ದುರ್ಗಮನ್ನಾವಂಬೊಕ್ಕು ತೊಲಲ್ವುದಂ ಬೆಸಸಿಂ.

ಸಗರ:—ಅಯೋಧ್ಯಾಧಿಪತಿಯೆನ್, ಸಗರನೆಂಬೆನ್ (ಎಂದು ತನ್ನ ಬಂದ ತೆಱನಂ ತಿಳಿಪೆ).

ಸಹಸ್ರ:—(ವಿಸ್ಮಯಸ್ತಿಮಿತ ಲೋಚನನಾಗಿ) ಪಗೆ ತೀರ್ವುದು ಬಗೆ ತೀರ್ವುದು ಸಗರನನಾಶ್ರಯಿಸಿಮೆಂದು ಪಿತೃ ಬೆಸಸಿದಂ. ನಿಮಗಂ ಇನಿತು ಅಚ್ಚಿಗ ಮಾಯ್ತೆ?

ಸಗರ:—ಖೇದಂ ಮಾಣ್ಗೆ. ಶುಭೋದಯಂ ಸಮನಿಕುಂ. ಸಂಸಾರಿಗಳ್ಗೆ ಇಂತಿ ದೇನಾದಂ ಚೋದ್ಯಮೆ? ನಚ್ಚಿ ನಿಮ್ಮ ಜನಕಂ ಪೇೞ್ದಂತುಟಂ ಮಾೞ್ಪೆಂ. ಆಹ್ಲಾದಂಬೆತ್ತು ಇರಿಂ.

ಎಂದು ಸಮಾಧಾನಪಡಿಸಿ ಸಹಸ್ರಲೋಚನನನ್ನೂ ಉತ್ಪಲನೇತ್ರೆಯನ್ನೂ ತನ್ನ ಆನೆಯ ಮೇಲೆ ಏರಿಸಿಕೊಂಡು "ಪುರವನಿತಾಜನಂ ಕುಡುವ ಪೂವಿನ ಮಾಲೆಯ"ನ್ನು ಸ್ವೀಕರಿಸುತ್ತ ಅಯೋಧ್ಯೆಗೆ ಬಂದು ಉತ್ಪಲನೇತ್ರೆಯನ್ನು ಮದುವೆಯಾಗುವನು. ಈ ದೃಶ್ಯರಚನೆಯಲ್ಲಿ ಅಭಿವ್ಯಕ್ತವಾಗಿರುವ ರಸಿಕತೆ ನೈಪುಣ್ಯಗಳು ಯಾರಿಗಾದರೂ ಕೀರ್ತಿ ತರುವಂಥವು.

ನಾಗಚಂದ್ರನಿಗೆ ಆಕರವಾದ ಮೂಲಕಾವ್ಯಗಳಲ್ಲಿ ಸಿಕ್ಕದೆ ಇರುವ ಇಂಥ ದೃಶ್ಯಗಳ ಮಾತು ಆಯಿತು. ಇನ್ನು ಅವುಗಳಲ್ಲಿ ಶುಷ್ಕರೀತಿಯಿಂದ ಪ್ರತಿಪಾದಿತ ವಾಗಿರುವ ಕೆಲವು ವಿಷಯಗಳಲ್ಲಿ ನಾಗಚಂದ್ರನು ಜೀವತುಂಬಿಸಿರುವ ರೀತಿ ಯನ್ನು ಸವಿದು ನೋಡಬಹುದು. ಮಾದರಿಗಾಗಿ ಇಂಥ ಒಂದು ಸನ್ನಿವೇಶ ವನ್ನು ತೆಗೆದುಕೊಳ್ಳೋಣ. ಖರನು ರಾವಣನ ತಂಗಿಯಾದ ಚಂದ್ರನಖಿಯನ್ನು ಅಪಹರಿಸಿಕೊಂಡು ಹೋಗಿ ಮದುವೆಮಾಡಿಕೊಳ್ಳುತ್ತಾನೆ. ಆಗ ರಾವಣನು ಲಂಕೆಯಲ್ಲಿರುವುದಿಲ್ಲ. ಕಾರ್ಯಾಂತರದಿಂದ ಬೇರೊಂದೆಡೆಗೆ ಹೋಗಿರುತ್ತಾನೆ. ಅದನ್ನು ಮುಗಿಸಿಕೊಂಡು ಅವನು ಲಂಕೆಗೆ ಹಿಂತಿರುಗಿ ಬರಲು ತನ್ನ ತಂಗಿ ಯನ್ನು ಖರನು ಹೊತ್ತುಕೊಂಡುಹೋದ ಸಮಾಚಾರವನ್ನು ಕೇಳಿ ರುಷ್ಟನಾಗಿ ಚಂದ್ರಹಾಸವನ್ನು ತುಡುಕಿ ಅವನನ್ನು ಕೊಲ್ಲಲು ತೆರಳುವನು. ಆಗ ಮಂಡೋದರಿ ಅವನನ್ನು ತಡೆದು ಕಾಲ ಮೇಲೆ ಬಿದ್ದು, "ಸ್ವಾಮಿ, ಲೋಕಸ್ಥಿತಿಯೇ ಹೀಗೆ. ಕನ್ಯೆಯರು ಯಾವಾಗಲೂ ಹೆರರಿಗೆ ಮೀಸಲು. ಖರನನ್ನು ಕೊಲ್ಲತಕ್ಕದ್ದೇನೋ ಸರಿ; ಆದರೆ ನೋಡು, ನಿನ್ನ ತಂಗಿ ವಿಗತಶೋಭಳಾಗಿ ವಿಧವೆಯಾಗುವಳು"

ಎಂಬುದಾಗಿ ಸಮಾಧಾನಪಡಿಸಿದಳೆಂದು ವಿಮಲಸೂರಿ ರವಿಷೇಣರಿಬ್ಬರ ಕಾವ್ಯ ಗಳಲ್ಲಿಯೂ ಕಂಡು ಬರುತ್ತದೆ. ನಾಗಚಂದ್ರನಲ್ಲಿ ಇದೇ

ಎನಗಿನಿಸಳ್ಕದೆನ್ನನುಜೆಯಂ ಪಿಡಿದುಯ್ದನವಂಗೆ ತಕ್ಕುದಂ
ಜನಿಯಿಪೆನೆಂದು ಗರ್ಜಿಸೆ ದಶಾನನನಾತನ ಕಾಂತೆ ನಿನ್ನ ಮ
ಯ್ದುನನನುರಕ್ತನಾಕೆಗನುರೂಪನಿದಾವುದು ಪೊಲ್ಲಗೆಯ್ದನೀ
ಮುನಿಸವಿವೇಕಮೆಂದು ನುಡಿದಳ್ ಮಯನಂದನೆ ತದ್ದಶಾಸ್ಯನಂ

ಎಂಬ ಪದ್ಯದಲ್ಲಿ ಮನೋಜ್ಞವಾಗಿ ಚಿತ್ರಿತವಾಗಿದೆ. ಇಲ್ಲಿ ಮಂಡೋದರಿಗೆ ರಾವಣನ ಕಾಲ ಮೇಲೆ ಹೊರಳಿ ಬೇಡಿಕೊಳ್ಳಬೇಕಾದ ಅವಸ್ಥೆ ಏನೂ ಬೇಕಾಗಿಲ್ಲ. ಅವಳ ಆ ಮಾತುಗಳ ಹಿಂದೆ ಅವಿತುಕೊಂಡಿರುವ ಬೆಡಗು ಬಿಂಕ ವೈಯಾರಗಳೇ ಸಾಕು ಅವನ ಕೋಪವನ್ನಾರಿಸುವುದಕ್ಕೆ. ಇನ್ನು ಮಂಡೋದರಿ, "ಆತನಂ ಮುಳಿದು ನೀಂ ಕೊಂದು ನಿನ್ನನುಜಾತೆಗೆ ವೈಧವ್ಯ ದೀಕ್ಷೆಯಂ ಕುಡುವುದು ಚದುರಲ್ಲ" ಎಂದು ಹೇಳಿದ ಮೇಲಂತೂ ರಾವಣನ ಕೋಪ ಸ್ನೇಹವಾಗಿ ಪರಿ ಣಮಿಸುತ್ತದೆ. ಒಲಿದ ಸತಿಪತಿಗಳ ಕೋಪತಾಪಗಳು ಕ್ಷಣಭಂಗುರವಾದುವು. ಕವಿ ಇದನ್ನು ಮನಗಂಡು ರಾವಣ ಮಂಡೋದರಿಯರ ಅನ್ಯೋನ್ಯ ಪ್ರೀತಿ ವಿಶ್ವಾಸಗಳನ್ನು ಇಷ್ಟು ಚೆನ್ನಾಗಿ ಹೇಳಿದ್ದಾನೆ.

ನಾಗಚಂದ್ರನು ಎಷ್ಟೇ ಪರಾನುಕರಣ ಮಾಡಿರಲಿ, ಅವನಲ್ಲಿ ಇಂಥ ಸನ್ನಿ ವೇಶಗಳಲ್ಲಿ ಸ್ವೋಪಜ್ಞತೆ ಸಾಕಷ್ಟು ಕಂಡುಬರುತ್ತದೆ. ಆದ್ದರಿಂದ ಅವನು ವೇಷ ಹಾಕಿಕೊಂಡು ಆಟ ಕಟ್ಟಿ ಕುಣಿಯುವ ಕವಿಯಲ್ಲ. ನಿಜವಾಗಿಯೂ 'ಸರಸ್ವತಿ ಕುಡಲ್ ವರಮಂ ಪಡೆದ' ಕವಿ.

೭. ಶೈಲಿ ಮತ್ತು ವ್ಯಕ್ತಿತ್ವ

ಶೈಲಿ ಎಂದರೆ ಏನು? ಎಂಬ ಪ್ರಶ್ನೆಗೆ ಸರಿಯಾದ ಸೂತ್ರಪ್ರಾಯವಾದ ಉತ್ತರವೊಂದನ್ನು ಕೊಡುವುದು ಕಷ್ಟ. ಅದರಲ್ಲಿ ಮಾತಿನ ಮಾಲೆಗೆ ಸಿಲುಕದ ನಿಗೂಢ ತತ್ವವಡಗಿರುವಂತಿದೆ. ಇದೇ ಅದರ ಗುಟ್ಟು ಎಂದು ಬೆರಳಿಟ್ಟು ತೋರಿ ಸುವಂತಿಲ್ಲ. ಅದು ಬರೆವಣಿಗೆಯ ಒಂದು ಲಕ್ಷಣ ಅಥವಾ ಗುಣ ಎಂದು ಕೆಲ ವರ ಅಭಿಪ್ರಾಯ. ಇದರಂತೆ ಶೈಲಿ ಎಂಬುದು ಹೊರಗಡೆ ಅಲಂಕಾರಕ್ಕಾಗಿ

ಹಾಕಿಕೊಳ್ಳುವ ವೇಷ ಭೂಷಣಗಳಿದ್ದ ಹಾಗೆ. "ಶೈಲಿ ಆಲೋಚನೆಗಳ ಉಡುಪು" ಎಂಬ ಸೂತ್ರ ಈ ಮತಕ್ಕೆ ಆಧಾರ. ಇಲ್ಲಿ 'ಆಲೋಚನೆ'ಎಂಬ ಪದಕ್ಕೆ ಇರುವ ಅರ್ಥ ಬಹು ವಿಸ್ತಾರವಾದುದು. ಕವಿಯ ಮನಸ್ಸಿನಲ್ಲಿ ಏಳುವ ಚಿಂತನೆಗಳು, ಭಾವೋದ್ರೇಕಗಳು, ಬಗೆಬಗೆಯ ಅನುಭವಗಳು, ಸಂಕೋಚವಿಕಾಸಗಳು—ಇವೇ ಮೊದಲಾದ ಮಾನಸಿಕ ಪ್ರಪಂಚಕ್ಕೆ ಸಂಬಂಧಪಟ್ಟ ಎಲ್ಲ ವ್ಯಾಪಾರಗಳೂ ಆ ಪದದಿಂದ ನಿರ್ದಿಷ್ಟವಾಗಿವೆ. ಅವನ್ನು ಒಂದು ಮಾತಿನಲ್ಲಿ ಚಿತ್ತವೃತ್ತಿ ಅಥವಾ ಮನೋಧರ್ಮ ಎಂದು ಕರೆಯಬಹುದು. ಎಂದರೆ ಶೈಲಿ ಕವಿಯ ಚಿತ್ತವೃತ್ತಿಯ ಉಡುಪು ಎಂದಾಗುತ್ತದೆ. ಈ ಅಭಿಪ್ರಾಯದಲ್ಲಿ ಬಹುಮಟ್ಟಿಗೆ ನಿಜಾಂಶವಿದ್ದರೂ ಪೂರ್ತಿ ಸಮರ್ಪಕವಾಗಿದೆಯೆಂದು ಕೆಲವರು ಒಪ್ಪುವುದಿಲ್ಲ. ಅವರು ಹೇಳುವಂತೆ ಶೈಲಿ ಚಿತ್ತವೃತ್ತಿಯ ಉಡುಪು ಮಾತ್ರವಲ್ಲ; ಅವೆರಡಕ್ಕೂ ಇರುವ ಸಂಬಂಧ ಇನ್ನೂ ಹೆಚ್ಚು ನಿಕಟವಾದದ್ದು; ಉಡುಪನ್ನು ಧರಿಸಬಹುದು, ತೆಗೆದುಹಾಕಬಹುದು; ಆದರೆ ಶೈಲಿಯನ್ನು ಮನೋಧರ್ಮದಿಂದ ಬೇರ್ಪಡಿಸಲಾಗುವುದಿಲ್ಲ; ಆದ್ದರಿಂದ 'ಶೈಲಿ ಚಿತ್ತವೃತ್ತಿಯ ಚರ್ಮ' ಎಂದು ಅವರ ವಾದ. ಶೈಲಿ ಏನೆಂಬುದರ ವಿವೇಚನೆಯಲ್ಲಿ ಈ ಎರಡನೆಯ ಸೂತ್ರ ಮೊದಲನೆಯ ಸೂತ್ರಕ್ಕಿಂತ ಹೆಚ್ಚು ಮುಂದುವರಿದಿದೆ. ಇನ್ನೂ ಮುಂದೆ ಹೋದರೆ ಶೈಲಿಗೂ ಚಿತ್ತವೃತ್ತಿಗೂ ಇರುವ ದ್ವೈತ ಸಂಬಂಧವು ಮಾಯವಾಗಿ 'ಶೈಲಿಯೇ ವ್ಯಕ್ತಿತ್ವ' ಎಂಬ ಅದ್ವೈತದಲ್ಲಿ ಪರ್ಯವಸಾನವಾಗಿ ಚಿತ್ತವೃತ್ತಿಯೇ ಮನೋಧರ್ಮವೇ ಅಥವಾ ವ್ಯಕ್ತಿತ್ವವೇ ಶೈಲಿ ಎಂಬ ತತ್ತ್ವವು ಹೊರಪಡುತ್ತದೆ. ಇದು ಮೂರನೆಯ ಪಂಥ.

ಈ ಕೊನೆಯ ಸೂತ್ರದಲ್ಲಿ ಮೊದಲ ಎರಡೂ ಅಂತರ್ಗತವಾಗುತ್ತವೆ. ಕಾವ್ಯದಲ್ಲಿ ಆದಷ್ಟು ಅಲಂಕಾರ ಚಮತ್ಕಾರಗಳನ್ನು ತುಂಬಬೇಕೆಂದು ಕವಿಯ ಮನೋಧರ್ಮವಿದ್ದರೆ ಅವನ ಶೈಲಿ ಅಲಂಕಾರಮಯವಾಗುತ್ತದೆ, ಉಕ್ತಿ ವೈಚಿತ್ರ್ಯದಿಂದ ತುಂಬಿಕೊಳ್ಳುತ್ತದೆ. ಅವನ ಮನಸ್ಸು ಆ ರೀತಿ ಕಾವ್ಯಕರ್ಮದಲ್ಲಿ ಪ್ರವರ್ತಿಸುವುದು ಅನಿವಾರ್ಯವಾಗುತ್ತದೆ. ಮನಸ್ಸು ಮಾರ್ಪಟ್ಟ ಹೊರತು ಶೈಲಿ ಮಾರ್ಪಡಲು ಅವಕಾಶವಿಲ್ಲ. ಅದು ಮೂಲಮೂರ್ತಿಯಾದರೆ ಶೈಲಿ ಉತ್ಸವ ವಿಗ್ರಹ; ವಸ್ತುವಾದರೆ ಅದರ ನೆರಳು. ವಸ್ತುವಿಲ್ಲದಿದ್ದರೆ ಕನ್ನಡಿಯಲ್ಲಿ ಅದರ

ಬಿಂಬ ಕಾಣುತ್ತದೆಯೆ? ಹಾಗೆಯೇ ವ್ಯಕ್ತಿವಿಶೇಷವಿಲ್ಲವಾದರೆ ಶೈಲಿಯೂ ಇಲ್ಲ. ಚರ್ಮವಿಲ್ಲದಿದ್ದರೆ ದೇಹ ಉಳಿದೀತೆ? ಆದರೆ ಚರ್ಮವೇ ದೇಹವೇ? ಸಿಪ್ಪೆಯೇ ಸೇಬಿನ ಹಣ್ಣೇ? ಎಂಬ ಸಂಶಯ ಹುಟ್ಟುತ್ತದೆ. ಈ ರೀತಿ ವಿಂಗಡಿಸುವುದು ಸರಿಯಲ್ಲ. ಸಿಪ್ಪೆ ಹಣ್ಣಿನ ಒಂದು ಭಾಗ. ಸೇಬಿನ ಹಣ್ಣು ಎಂದು ಕೇಳಿದ ಕೂಡಲೇ ಸಾಧಾರಣವಾಗಿ ಯಾರಿಗೂ ಸಿಪ್ಪೆ ಇಲ್ಲದ ಆ ಹಣ್ಣಿನ ಕಲ್ಪನೆ ಬರುವುದಿಲ್ಲ. ದೇಹ ಎಂದು ಹೇಳಿದರೆ ಚರ್ಮ ಸುಲಿದ ಶರೀರದ ಕಲ್ಪನೆ ಬರುವುದಿಲ್ಲ. ಆದ್ದರಿಂದ ಹಣ್ಣೆಂದರೂ ದೇಹವೆಂದರೂ ಮನಸ್ಸಿನ ಮುಂದೆ ಬರುವ ಚಿತ್ರದಲ್ಲಿ ಆದರದರ ಮೇಲ್ಮುಸುಕೂ ಸೇರಿಕೊಂಡಿರುತ್ತದೆ. ವ್ಯಕ್ತಿತ್ವವೆಂದು ಹೇಳಿದರೂ ವ್ಯಕ್ತಿಯ ಹೊರಗೂ ಒಳಗೂ ಅದರಲ್ಲಿ ಸಮಾವೇಶವಾಗುತ್ತವೆ. ಶೈಲಿ ವ್ಯಕ್ತಿತ್ವದ ಪಡಿನೆಳಲಾದರೆ ಅದರಲ್ಲಿ ವ್ಯಕ್ತಿಯ ಹೊರಗು ಒಳಗುಗಳು ಪ್ರತಿಫಲಿಸಬೇಕು. ಅವು ಸಮತೂಕದಲ್ಲಿಯೇ ಇರಬೇಕೆಂಬ ನಿಯಮವೇನೂ ಇಲ್ಲ. ಒಳಗಣದು ಹೆಚ್ಚಿರಬಹುದು, ಹೊರಗಣದು ಕಡಮೆ ಇರಬಹುದು. ಅವುಗಳ ಪ್ರಮಾಣದಲ್ಲಿ ವ್ಯತ್ಯಾಸವಿರಬಹುದು, ಅಷ್ಟೆ. ಅಂತೂ ಎರಡೂ ಇದ್ದೇ ಇರುತ್ತವೆ. ಹಣ್ಣು ಎಂಬುದು ನೆನಪಿಗೆ ಬಂದರೆ ಕೊಂಚ ಹೊತ್ತು ಅದರ ಬಣ್ಣ ಕಣ್ಣಮುಂದೆ ಸುಳಿದಾಡಿದರೂ ಅದಕ್ಕಿಂತಲೂ ಹೆಚ್ಚಾಗಿ ಅದರ ರುಚಿ ಬಾಯಲ್ಲಿ ನೀರೂರಿಸುತ್ತದೆ. ತಿರುಳು ಸಿಪ್ಪೆಗಿಂತ ಹೆಚ್ಚು ರುಚಿಯಲ್ಲವೆ? ಚಿತ್ತವೃತ್ತಿಯೂ ಹೊರಗಣ ಥಳುಕಿಗಿಂತ ಹೆಚ್ಚು ಸ್ವರಸವಾದುದು. ಅಂತಶ್ಶೀಲವು ಹೊರಗಣ ಶೀಲಕ್ಕಿಂತ ಹೆಚ್ಚು ಮುಖ್ಯವಾದುದು. ಈ ದೃಷ್ಟಿಯಿಂದ ನೋಡಿದರೆ ಈ ಸೂತ್ರಗಳೆಲ್ಲ ಒಂದಕ್ಕೊಂದು ಪೂರಕವಾಗಿರುವಂತೆ ತೋರುತ್ತವೆ.

ಈ ಅದ್ವೈತಾಭಿಪ್ರಾಯವನ್ನೂ ಒಪ್ಪದ ಬೇರೊಂದು ಪಂಗಡದವರಿದ್ದಾರೆ. ಆ ಸೂತ್ರದಲ್ಲಿ ಅತ್ಯುಕ್ತಿ ಇದೆಯೆಂದು ಕಾಣುತ್ತದೆ. ಅದರಲ್ಲಿ ತಿದ್ದುಪಡಿಮಾಡಿದ ಹೊರತು ಇವರು ಅದನ್ನು ಇರುವಂತೆಯೇ ಅಂಗೀಕರಿಸಲು ಒಪ್ಪರು. ಎಷ್ಟೇ ಆತ್ಮತೃಪ್ತಿಗಾಗಿ ಕವಿ ಕಾವ್ಯವನ್ನು ಹೇಳಲಿ, ಅದನ್ನು ಓದುವವರು ಕೆಲವರಾದರೂ ಇರುತ್ತಾರೆ. ಅದನ್ನು ಬರೆಯುವಾಗ ಕವಿಯ ಮನಸ್ಸು ಬೇರೊಂದು ಕಲಾ ಪ್ರಪಂಚದಲ್ಲಿ ಸಂಚಾರಮಾಡುತ್ತಿದ್ದರೂ ಬರೆದು ಮುಗಿಸಿದ ಮೇಲಂತೂ ಅದು ವಾಚಕರ ಸ್ವತ್ತಾಗುತ್ತದೆ. ತಾನು ಪಟ್ಟ ಆನಂದವನ್ನು ಇತರರಿಗೂ

ನಿವೇದಿಸುವುದು ಕವಿಯ ಕೆಲಸ. ಪಾಠಕರೂ ಅವನ ಕಾವ್ಯವನ್ನು ಓದಿ ತಮ್ಮ ಶಕ್ತಿ ಇರುವಷ್ಟು ಮಟ್ಟಿಗೆ ಅದೇ ಆನಂದವನ್ನು ಅನುಭವಿಸಲು ಪ್ರಯತ್ನಪಡುತ್ತಾರೆ. ಅದೇ ಪ್ರಪಂಚವನ್ನು ತಿರುಗಿ ಸೃಷ್ಟಿಸಿಕೊಳ್ಳಲು ಹವಣಿಸುತ್ತಾರೆ. ಒಂದು ಕಡೆ ಕವಿ, ಇನ್ನೊಂದು ಕಡೆ ವಾಚಕವೃಂದ. ಇಬ್ಬರಿಗೂ ಮಾನಸಿಕ ಸಂಬಂಧವನ್ನು ಕಲ್ಪಿಸಿಕೊಡುವುದು ಕಾವ್ಯ. ಕವಿಯ ಮನಸ್ಸಿನ ಸಾಂದ್ರವಾದ ಪರಿಚಯವು ಓದುಗನಿಗೆ ಉಂಟಾಗುವುದು ಅವನ ಕವನದ ಮೂಲಕ. ಈ ಪರಿಚಯವು ಎಷ್ಟೆಷ್ಟು ನೇರವಾಗಿ, ಸ್ಫುಟವಾಗಿ, ಸರಿಯಾಗಿ ಪಾಠಕನಿಗೆ ಉಂಟಾಗುತ್ತದೋ ಅಷ್ಟಷ್ಟು ಆ ಕಾವ್ಯದ ಶೈಲಿ ಉತ್ಕೃಷ್ಟವಾದದ್ದು. ಇದಾಗಬೇಕಾದರೆ ಅವನ ಚಿತ್ತವೃತ್ತಿಯಲ್ಲಿಯೂ ಇಂಥ ಅಪೂರ್ವ ಗುಣಗಳು ತುಂಬಿರಬೇಕು. ಅವನ ಆ ಮಾನಸಿಕ ಶಕ್ತಿಯಿಂದ ಶೈಲಿ ಹುಟ್ಟುತ್ತದೆ. ಆದ್ದರಿಂದ ಶೈಲಿ ಎಂಬುದು ಈ ಪಂಗಡದ ಅಭಿಪ್ರಾಯದಂತೆ "ವರ್ಣನೀಯವಾದ ಒಂದು ಆಲೋಚನೆಗೆ ಆದರಿಂದ ನಿರೀಕ್ಷಿತವಾದ ಪರಿಣಾಮ ಪೂರ್ತಿಯಾಗಿ ಹೊರಪಡುವಂತೆ ಮಾಡತಕ್ಕ ಸಂದರ್ಭವಿಶೇಷಗಳನ್ನೆಲ್ಲ ಜೋಡಿಸುವುದು."[1] ಇದನ್ನು ಒಪ್ಪಿಕೊಂಡರೆ ಶೈಲ್ಲಿ ಮನಸ್ಸಿನ ಈ 'ಜೋಡಿಸುವ' ಶಕ್ತಿ ಎಂದಾಗುತ್ತದೆ. ಇದು ಒಂದೊಂದು ವ್ಯಕ್ತಿಯಲ್ಲಿ ಒಂದೊಂದು ಬಗೆಯಾಗಿರುತ್ತದೆ. ವ್ಯಕ್ತಿತ್ವವೆಂದೂ ಇದನ್ನು ಕರೆಯಬಹುದು. ಇದನ್ನು ಬೇರೊಬ್ಬನು ಕದಿಯಲಾಗುವುದಿಲ್ಲ. ಅನುಕರಿಸಲಾಗುವುದಿಲ್ಲ. ಬರವಣಿಗೆಯಲ್ಲಿ ಇದು ಅಚ್ಚೊತ್ತಿದಂತೆ ಇಳಿದು ಬಂದರೆ ಅಲ್ಲಿ ಶೈಲಿ ಬರುತ್ತದೆ. ಆದರೆ ಅದು ವ್ಯಕ್ತಿತ್ವವಲ್ಲ, ಅದರ ಪ್ರತಿಬಿಂಬ ಮಾತ್ರ. ಆದ್ದರಿಂದ ಈ ಅಭಿಪ್ರಾಯದಂತೆ "ಶೈಲಿ ವ್ಯಕ್ತಿತ್ವದ—ಚಿತ್ತವೃತ್ತಿ, ಮನೋಧರ್ಮ, ಶೀಲ ಎಂಬುವು ಬೇರೆ ಹೆಸರುಗಳು—ಪ್ರತಿಬಿಂಬ". ಎಂದು ಈಗಿನ ಮಟ್ಟಿಗೆ ತಿಳಿದುಕೊಳ್ಳಬಹುದು.

ಪ್ರತಿಬಿಂಬವನ್ನು ನೋಡಿ ಮೂಲವಸ್ತುವಿನ ರೂಪರೇಖೆಗಳನ್ನು ಹೇಗೆ ತಿಳಿಯಬಹುದೋ ಹಾಗೆಯೇ ಶೈಲಿಯಿಂದಲೂ ಕವಿಯ ಚಿತ್ತವೃತ್ತಿಯ ಪರಿಚಯವನ್ನು ಪಡೆಯಬಹುದು. ವ್ಯಕ್ತಿತ್ವವು ಎಷ್ಟರಮಟ್ಟಿಗೆ ಶೈಲಿಯಲ್ಲಿ

---

[1] 'Style is this: to add to a given thought all the circumstances fitted to produce the whole effect which the thought is intended to produce.' Stendhal. Quoted by J. Middleton Murry: *The Problem of Style*, p. 79.

ಕಾಣಿಸುವುದೆಂದರೆ, ಯಾವುದಾದರೂ ಒಂದು ಪದ್ಯವನ್ನು ನೋಡಿ ಅದು ಇಂಥ ಕವಿಯದೇ ಇರಬೇಕೆಂದು ಸುಮಾರಾಗಿ ಸರಿಯಾಗಿಯೇ ಊಹಿಸಿಕೊಳ್ಳ ಬಹುದು. ಇಂಥ ನಿರ್ದಿಷ್ಟವ್ಯಕ್ತಿತ್ವವುಳ್ಳ ಕವಿಗಳು ಕನ್ನಡ ಸಾಹಿತ್ಯದಲ್ಲಿ ಕೆಲವ ರಿದ್ದಾರೆ. ಪಂಪ, ರನ್ನ, ನಾರಣಪ್ಪ, ಹರಿಹರ ಮುಂತಾದವರಲ್ಲಿ ಅದು ಸುಸ್ಪಷ್ಟ ವಾಗಿ ಗೋಚರಿಸುತ್ತದೆ. ನಾಗಚಂದ್ರನ ಕಾವ್ಯಗಳಲ್ಲಿ ಅವನ ಚಿತ್ತವೃತ್ತಿ ಇಷ್ಟು ನಿಬಿಡವಾಗಿ ಕಾಣಬರುವುದಿಲ್ಲವಾದರೂ ಕೊಂಚ ಕಡಮೆ ಪ್ರಮಾಣದಲ್ಲಿರುವಂತೆ ತೋರುತ್ತದೆ. ಅವನ ಶೈಲಿಯಿಂದ ಅದನ್ನು ಗುರುತುಹಿಡಿಯಬಹುದು. ಶೈಲಿ ಯನ್ನೂ ಶೀಲವನ್ನೂ ಬೇರ್ಪಡಿಸಬಾರದೆಂದು ಹಿಂದೆ ಹೇಳಿದ ಅದ್ವೈತ ಪಕ್ಷದವರು ಗೊಣಗುಟ್ಟಿಕೊಂಡರೂ ಅದಕ್ಕೆ ಗಮನಕೊಡದೆ ಅವನ ಕಾವ್ಯಗಳ ಶೈಲಿಯಿಂದ ಅವನ ಮನೋಧರ್ಮವನ್ನು ಪ್ರತ್ಯೇಕಿಸಿ ಅದರ ಅಂತಸ್ಸತ್ವವನ್ನು ತಿಳಿಯಬಹುದು.

ನಾಗಚಂದ್ರನ ಶೈಲಿಯ ಮುಖ್ಯ ಗುಣ ಅದರ ಅರ್ಥವ್ಯಕ್ತಿ. ಅವನ ಪದ್ಯಗಳ ಅರ್ಥವನ್ನಾಗಲಿ, ಭಾವವನ್ನಾಗಲಿ, ಗ್ರಹಿಸುವುದಕ್ಕೆ ಕ್ಲೇಶಪಡ ಬೇಕಾಗಿಲ್ಲ. ಒಂದು ಸಲ ಓದಿದರೆ ಸಾಕು ಅವನ ಸಂಪೂರ್ಣ ಅಭಿಪ್ರಾಯವು ಋಜುವಾಗಿ ಭ್ರಾಂತಿಗೆ ಅವಕಾಶವೇ ಇಲ್ಲದಂತೆ ಮನಸ್ಸನ್ನು ಮುಟ್ಟುತ್ತದೆ. ಇದೇನು ದೊಡ್ಡಗುಣ ಎಂದು ಕೇಳುವುದು ಸುಲಭ. ಆದರೆ ಕಣ್ಣಿಗೆ ಕಂಡ ವಸ್ತುವನ್ನಾಗಲಿ, ಮನಸ್ಸಿಗೆ ಹೊಳೆದ ಆಲೋಚನೆಯನ್ನಾಗಲಿ ಸ್ವಭಾವ ಸಿದ್ಧವಾಗಿರುವಂತೆ ಬಿಡಿಸಿ ಬಣ್ಣಿಸುವ ಶಕ್ತಿ ಸಾಮಾನ್ಯವಾದದ್ದಲ್ಲ. ಎಲ್ಲರೂ ಇದನ್ನು ಪಡೆದುಕೊಂಡು ಬಂದಿಲ್ಲ. ಅರ್ಥವ್ಯಕ್ತಿಯ ರಮಣೀಯತೆ ನಾಗಚಂದ್ರನ ಕಾವ್ಯಗಳ ತುಂಬ ಎಲ್ಲಿ ನೋಡಿದರಲ್ಲಿ ಕಂಗೊಳಿಸುತ್ತದೆ. ಉದಾಹರಣೆಗಳನ್ನು ಹುಡುಕಿಕೊಂಡು ಹೋಗಬೇಕಾದ ಪ್ರಯಾಸವಿಲ್ಲ. ನೆನಪಿಗೆ ಬಂದ ಕೆಲವನ್ನು ನೋಡಬಹುದು :

ಹಾಹಾ ಜನಕಸುತೇ ವೈ
ದೇಹೀ ವೈದೇಹಿಯೆಂದು ಪುದಿದಿರೆ ಮನಮಂ
ಮೋಹತಮಂ ದೀಪಂ ವಾ
ತಾಹತಿಯಂ ನಂದುವಂತೆ ಮೂರ್ಛೆಗೆ ಸಂದಂ

ತನಗೆ ಕರುಣಾರಸಂ ಸಂ
ಜನಿಯಿಸೆ ಸಾರಣ್ಗೆ ಕರೆದು ಕುಳ್ಳಿರಿಸಿ ಲತಾ
ತನು ಕಣ್ಬನಿಯಂ ತೊಡೆದಳ್
ಜನಕಾತ್ಮಜೆ ಕನ್ನೆ ಕಪಟಿಯೆಂದೆತ್ತಱಿವಳ್

ನಿನಗೆ ರಸವೊಂದೆ ಶಾಂತಮೆ
ಜಿನೇಂದ್ರ ಮನಮಾ ರಸಾಂಬುನಿಧಿಯೊಳಗವಗಾ
ಹನಮಿರ್ದುಂ ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆಮಗರುಹಾ

ಜಳದೇವತೆ ಕೋಡುವ ತಿಳಿ
ಗೊಳದೊಗಿರ್ಪಂತೆ ಶೀಲವತಿ ಸೀತೆ ವಿನಿ
ಶ್ಚಳಮಿರೆ ಮನದೊಳ್ ಜಿನಪತಿ
ಚಳಣಂ ದಳ್ಳುರಿಯ ನಡುವೆ ಕೋಡುತ್ತಿರ್ದಳ್

ಇವಕ್ಕೆ ವ್ಯಾಖ್ಯಾನವೇನೂ ಬೇಕಾಗಿಲ್ಲ. ಕಣ್ಣ ಮುಂದಿರುವ ಕಾಂತಿಗೆ ಕನ್ನಡಿ ಏತಕ್ಕೆ? ಈ ಶೈಲಿಯ ಸರಳತೆ ಅನನುಕರಣೀಯ. ಅದರಲ್ಲಿ ಬಳಸಿಲ್ಲ, ವಕ್ರತೆಯಿಲ್ಲ, ಆಡಂಬರವಿಲ್ಲ. 'ಅರುಹನ ಮೂರ್ತಿಯಂತಿರೆ' ನಿರಾಭರಣ ಸಹಜ ಸೌಂದರ್ಯವಿದೆ. ಯಾರೂ 'ಬಗೆ ಕಿಱಿದು ಮಾತು ಪಿರಿದು' ಎನ್ನುವಹಾಗಿಲ್ಲ. ಮನಸ್ಸಿನ ಅಭಿಪ್ರಾಯವನ್ನು ಮಾತಿನಲ್ಲಿ ಮುಚ್ಚಿಟ್ಟುಹೋದ 'ಗೂಡಾರದ ಕವಿ' ನಾಗಚಂದ್ರನಲ್ಲ. ಅವನ ಅರ್ಥವ್ಯಕ್ತಿ "ವಾಣೀಮಣಿಮಯ ಮುಕುರ." ಇಷ್ಟೇ ಅಲ್ಲ. ಅದಕ್ಕೆ ವಸ್ತು ಸ್ವಭಾವವನ್ನು ಸ್ಪರ್ಶಾನುಮೇಯವಾಗುವಂತೆ, ಮುಷ್ಟಿಗ್ರಾಹ್ಯವಾಗುವಂತೆ ಎದುರಿಗೆ ತಂದು ನಿಲ್ಲಿಸುವ ಶಕ್ತಿಯೂ ಇದೆ.

ಬಳಸಿ ಸುಚಿದಾಡಿ ಕಾಲ್ವಿಡಿ
ದೆಳಸಿ ಕಲಾಲಾಪವೊದವೆ ಜನನಿಯ ಮೊಲೆವಾ
ಲ್ಗಳಸುಂಬ ಶಿಶುಗಳಂತಿರೆ
ಕಳಮೆಯ ಶಾಲ್ದೆನೆಯ ಪಾಲನುಂಡುವು ಗಿಳಿಗಳ್

ಮುಗುಳ ತೊಡಂಬೆ ಗಂಟೊಡೆಯೆ ಮೊಲ್ಲೆಗೆ ಬೆಳ್ಸುಟಿ ಪುಟ್ಟೆ ಪುಟ್ಟೆ ಕೇ
ದಗೆಗಳಸೊರ್ಕು ಚೇತರಿಸೆ ಚಾದಗೆಗಂಚಿರಮಾಗೆ ರಾಗಮಂ
ಚೆಗೆ ಕಿಱಿಮೀಲಿ ಕಣ್ದೆಱೆಯೆ ಸೋಗೆಗೆ ತಣ್ಣಸುಮುಟ್ಟೆ ಬೆಟ್ಟವೇ
ಸಗೆಯು ಬಿಸಿಲ್ಗೆ ತೀಡಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಲಂ

ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ ಚಂದ್ರಮಂಡಲಂ
ಬಾಡಿದ ಮಾಧವೀ ಮಧುರ ಮಂಜರಿಯಂತಿರೆ ತಾರಕಾಳಿ ಸೀ
ರೋಡಿ ಕೞಲ್ದು ಬಿೞ್ದು ಕೞವೂಗಣೆಯಾಗಿರೆ ತಣ್ಣನಪ್ಪೆಲರ್
ತೀಡೆ ತಪೋವನಂಬೊಲತಿಪಾವನಮಾಯ್ತು ವನಂ ಪ್ರಭಾತದೊಳ್

ಮೂರ್ಛೆ ಹೋದ ರಾಮನು ಮೆಲ್ಲಮೆಲ್ಲನೆ ಎಚ್ಚರಗೊಳ್ಳುವ ಚಿತ್ರ ಹೀಗೆ:

ನಸು ಬಿಸುಪೇಱೆ ಮೆಯ್ಮುಗುಳೆ ಕೆತ್ತುವ ತಾಣಮೆ ಕೆತ್ತೆ ಮಂದಮಾ
ದುಸಿರ್ಗಳೆ ನಾಸಿಕಾಮುಕುಳದಿಂದಿನಿಸುಂ ಪೊಱಪೊಣ್ಮಿ ತಳ್ತು ಸಂ
ದಿಸಿದೆನೆ ಬಿರ್ಚೆ ಕಣ್ಮಲರ್ಗಳುಳ್ಳರಲುತ್ತಿರೆ ಜಾನಕೀಯೆನು
ತ್ತುಸಿರ್ದುಸಿರ್ದೆೞ್ದನಾ ರಘುಕುಲಾಂಬರ ಚಂಡಮರೀಚಿ ಮೂರ್ಛೆಯಿಂ

ಈ ಪದಚಿತ್ರಗಳ ಸೊಗಸು (Picturesqueness) ಚಿತ್ತಮೋಹಕವಾದದ್ದು. ಒಂದೊಂದೂ ವರ್ಣಶಿಲ್ಪಿಯ ಚಿತ್ತಾರದಂತೆ ತುಂಬು ಕಳೆಯಿಂದ ರಂಜಿಸುವುದು. ಇವು 'ಪೆಱರಂ ಬಗೆಗೊಳಿಸಲಾಱವು' ಎಂದು ಹೇಳುವ ಧೈರ್ಯ ಯಾರಿಗಾದರೂ ಇದ್ದರೆ "ಶಿಲಾಪ್ರತಿಮೆಯನುರ್ಚುಗುಮೆ ಮದನ ಮೋಹನ ಬಾಣಂ" ಎಂಬ ಅಪವಾದಕ್ಕೆ ಪಕ್ಕಾಗಬೇಕಾಗುವುದು.

ಶೈಲಿಯಲ್ಲಿ ಮೃದುತ್ವ ಲಾಲಿತ್ಯ ಮಾಧುರ್ಯಗಳನ್ನು ಅನುಭವಿಸಿ ಆನಂದ ಪಡಬೇಕಾದರೆ ನಾಗಚಂದ್ರನ ಕಾವ್ಯಾರಾಮದಲ್ಲಿ ಒಂದು ಸಲ ನಡೆದು ನೋಡಬೇಕು. ಇತರ ಕವಿಗಳಲ್ಲಿ ಈ ಗುಣಗಳಿಲ್ಲವೆಂದಲ್ಲ. ರೇಷ್ಮೆಯ ಸೀರೆಯ ಮೇಲೆ ಅಲ್ಲೊಂದು ಇಲ್ಲೊಂದು ಇರುವ ಜರತಾರಿ ಹೂಗಳಂತೆ ಇವು ಅವರ ಕಾವ್ಯಗಳಲ್ಲಿ ಕಂಗೊಳಿಸುತ್ತಿದ್ದರೂ ಮಧುಧಾರೆಯಂತೆ ನಿರಂತರವಾದ ನಾದ ಮಾಧುರ್ಯವು ಮೊದಲಿಂದ ತುದಿಯವರೆಗೂ ಕಂಡುಬರುತ್ತಿರುವುದು ಬಹುಮಟ್ಟಿಗೆ ನಾಗಚಂದ್ರನ ಕಾವ್ಯಗಳಲ್ಲಿ ಮಾತ್ರ. ಅವನ ಆ 'ಶ್ರವಣ ಸುಭಗ'ವಾದ 'ಮೃದು ಪದಬಂಧ'ದ 'ಸರಸ್ವತೀಲಾಸ್ಯ'ದ ಸೊಬಗನ್ನು ಅವನ ಬಾಯಿಂದಲೇ ಕೇಳೋಣ.

ಪುಲ್ಲಶರಂ ಬಸಂತದ ಪುಗಿಲ್ ನೆಱೆದಿಂಗಳ ತಣ್ಪಿಸಿಲ್ ಮುಗುಳ್
ಮಲ್ಲಿಗೆ ಬಂದ ಮಾವಲೆವ ತೆಂಕಣ ಗಾಳಿ ವಿಪಂಚಿಯಿಂಚರಂ
ನಲ್ಲಳ ಲಲ್ಲೆ ಕೋಗಿಲೆಯ ಬಗ್ಗಣಿ ತುಂಬಿಯ ಗೇಯಮೆಂಬಿನಂ
ಬಲ್ಲವರಂ ಮನಂಗೊಳಿಸುಗುಂ ಕೃತಿ ಸತ್ಕೃತಿ ನಾಗಚಂದ್ರನಾ

ಈ ಹೋಲಿಕೆಗಳಲ್ಲಿ ಒಂದೊಂದೂ ಸಾರ್ಥಕವಾದುದು. ಆದರೆ ಅವೆಲ್ಲಕ್ಕಿಂತಲೂ ಹೆಚ್ಚಾಗಿ ಆ 'ವಿಪಂಚಿಯಿಂಚರ'ವು ಅವನ ಶೈಲಿಯ ಹುಟ್ಟುಗುಣ. ಈ ಗಾನ ವನ್ನು ಕೇಳಿ:

ಹಾರಮರೀಚಿ ಮಂಜರಿ ಸುಧಾರಸಧಾರೆ ಸುಧಾಂಶು ಲೇಖೆ ಕ
ರ್ಪೂರ ಶಲಾಕೆ ನೇತ್ರ ಸುಖದಾಯಕವಿಾ ದೊರೆತಲ್ಲವೀಕೆ ಶೃಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣುಱಿದಾರೆ ಮನ್ಮಥಂ

ಅವೆಡೆ ಹಂಸಿಗೀ ನಡೆಯ ಚೆಲ್ವಿನೆ ನೂಪುರದಿಂಚರಂ ಸ್ಮರಂ
ಜೀವೊಡೆದಂದವಾಗೆ ಮೃದು ಪಾದತಳಂಗಳ ಕೆಂಪು ಕೂಡೆ ಕೆಂ
ದಾವರೆವೂಗಳಂ ಕೆದಱುವಂತಿರೆ ಕುಂತಳ ಸೌರಭಕ್ಕೆ ಭೃಂ
ಗಾವಲಿ ಮೇಲೆ ಪೀಲಿದಡೆಯಂತಿರೆ ಬಂದಳದೊಂದು ಲೀಲೆಯಿಂ

ಈ ಸುಮಕೋಮಲವಾದ ಶೈಲಿಯ 'ಮೃದು ಮಂಜುಲನಾದ'ವು ಒಲ್ಲದವ ರನ್ನೂ ತಟ್ಟಿ ತೂಗುವಂತಿದೆ. ನಾಗಚಂದ್ರನು ಸ್ವರಮಂತ್ರಸಿದ್ಧನು.

ಮಾಧುರ್ಯ ಸೌಕುಮಾರ್ಯಗಳನ್ನು ನಾಗಚಂದ್ರನು ತರುವ ಬಗೆಯನ್ನು ನೋಡಬಹುದು. ಅವನ ಪದ್ಯಗಳು ಸಾಧಾರಣವಾಗಿ ದೊಡ್ಡ ದೊಡ್ಡ ಸಮಾಸ ಗಳಿಂದ ಕೂಡಿಲ್ಲ. 'ಘನ ಗರ್ಭಾಶಾವಧೂಪುಂಸವನ,' 'ನೀಲ ಘನ ವಿಶಾಲಾಪ ಘನಂ,' 'ರಾಮಭುಜಪ್ರತಾಪ ತಪನೋದಯ ಶೈಲಂ,' 'ವಿದ್ಯಾನಟೀ ನಾಟ್ಯ ವೇದೀಕಲ್ಪಂ,' 'ಆತಪವಾತವರ್ಷ ವಿಷಕಂಟಕ ಕಾಷ್ಠಶಿಲಾಕೃಶಾನುಶಸ್ತ್ರಾತುರ ಬಾಧೆ' ಎಂಬಿವೇ ಮೊದಲಾದ ಉದ್ದವಾದ ಪದಗಳು ಅಲ್ಲಲ್ಲಿ ಕಂಡು ಬಂದರೂ ಅವುಗಳ ಹಾವಳಿ ಹೆಚ್ಚಾಗಿಲ್ಲ. ಇಂಪಾದ, ಬಿಡಿಬಿಡಿಯಾದ ಪದಪ್ರಯೋಗವೇ ಅಧಿಕವಾಗಿದೆ.

ಇಂದ್ರನುಮಂ ಗೆಲ್ದಿನ್ನನು
ಪೇಂದ್ರಂ ಗೆಲ್ದಪನೆ ಗೆಲ್ದೊಡಂ ಜೀವನಮಾ
ಚಂದ್ರಾರ್ಕಮೆ ವಿಶದಯಶ
ಶ್ಚಂದ್ರಿಕೆಗೆ ಕಳಂಕಮಾಗದಂತಿರೆ ನೆಗೞ್ವಂ

ಬಿದಿ ಬಿದಿಱಿಟ್ಟದಂ ಮಗನೆ ಮುನ್ನ ತವರ್ಮನೆ ನಾಮುಶೇಷದೂ
ದುದು ಪತಿಯುಂ ತಪಕ್ಕೆ ನಡೆದಂ ಸುತ ನೀನುಮಗಲ್ದು ಪೋದೊಡಾ
ವುದು ಗತಿ ಜೀವಿಪಂದಮೆನಗಾವುದು ಪೊರ್ದುವೆನಾರನೆಂದು ಗ
ದ್ಗದರವಮುಣ್ಮೆ ತಂದಳಪರಾಜಿತೆ ಕಣ್ಗೆ ಕದುಷ್ಣ ವಾರಿಯಂ

ಇವುಗಳನ್ನು ಹೇಳುವಾಗ ಉಸಿರು ಕಟ್ಟಿಕೊಳ್ಳುವಂತಿಲ್ಲ. ಉಚ್ಚರಿಸುವುದಕ್ಕೆ ಕಷ್ಟವಾಗದ ಸರಳಾಕ್ಷರಗಳು ತುಂಬಿವೆ. ಇದರಿಂದ ಬರುವ ಮಾಧುರ್ಯ ಸುಕುಮಾರತೆಗಳು ನಾಗಚಂದ್ರನ ಶೈಲಿಯ ಸ್ಥಾಯಿ.

ಇಂಥ ಶೈಲಿ ಹಲವು ಗುಣಗಳಿಂದ ಕೂಡಿದ್ದರೂ ಕೆಲವು ಸಂದರ್ಭಗಳಲ್ಲಿ ಬಹಳ ಸತ್ವಹೀನವಾಗಿ ಸಪ್ಪೆಯಾಗುತ್ತದೆ. ಮೋಹ, ಕರುಣ, ಶೋಕ, ಪಶ್ಚಾತ್ತಾಪ, ವೈರಾಗ್ಯ, ಬೇಸರಿಕೆ, ಚಿಂತೆ, ಲಜ್ಜೆ ಮುಂತಾದ ಸೌಮ್ಯಭಾವಗಳ ನಿರೂಪಣೆಗೆ ನಾಗಚಂದ್ರನ ಶೈಲಿ ಸಹಜವಾಗಿ ಕಂಡುಬಂದರೂ ಕ್ರೋಧ ಮದ ಗರ್ವ ಸಂತ್ರಾಸಗಳಂಥ ಬಗೆಕದಡಿ ಸೊರೆಕೀಳಿಸುವ ಉಗ್ರೋಗ್ರ ಭಾವ ಗಳನ್ನು ಗ್ರಹಿಸಿ ಬಣ್ಣಿಸುವಷ್ಟು ಶಕ್ತಿ ಅದಕ್ಕಿಲ್ಲ. ನಾಗಚಂದ್ರನ ಶಕ್ತಿ ಇಲ್ಲಿ ಅವನ ದೌರ್ಬಲ್ಯವಾಗಿ ಪರಿಣಮಿಸಿದೆ. ವೀರ ರೌದ್ರಭಯಾನಕಗಳನ್ನು ಚಿಮ್ಮಿ ಸುವ ಪದಭಂಡಾರವೇ ಬೇರೆ. ಅದರಲ್ಲಿ ಮಹಾಕಾಳಿಯ ನಾಲಗೆಯ ನಿಜಿಡ ರಕ್ತವರ್ಣದ ಸಾಂದ್ರಲೇಪವಿರಬೇಕು. ದೂರ್ವಾಂಕುರದ ಕೋಮಲ ಹರಿದ್ವರ್ಣ ಅದಕ್ಕೆ ಸಲ್ಲದು. ರಾವಣನ ಕೋಪದ ವರ್ಣನೆ ಇದು :

ಸಿಡಿಮಿಡಿಗೊಂಡು ತನ್ನ ಕುಲುಷೋಗ್ರ ಕೃಶಾನುವೆ ತನ್ನ ದೇಹಮಂ
ಸುಡೆ ನಿಲಲಾಱದುಮ್ಮಳಿಸಿ ಲಕ್ಷ್ಮಣದೇವನ ದಿವ್ಯಬಾಣದಿಂ
ಕಿಡೆ ನಿಜದಿವ್ಯಬಾಣದೆಸಕಂ ಮಸಕಂಗಿಡದಿಂದ್ರವಿದ್ವಿಷಂ
ಪಡೆದನಪಾರಮಂ ತನುಗಳಂ ಬಹುರೂಪಿಣಿಯೆಂಬ ವಿದ್ಯೆಯಿಂ

ಇದರ ಪಕ್ಕದಲ್ಲಿ

ರಸೆಯಂ ಕಾಲಾಗ್ನಿರುದ್ರಂ ಪೊಱಮಡುವವೊಲಂತಾ ಸರೋಮಧ್ಯದಿಂ ಸಾ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟಲ್ಲಿದಂ ಭೀಮನೆಂದೆ
ಣ್ದೆಸೆಯಂ ನೋಡುತ್ತೆ ಮತ್ತದ್ಭುತನಟನಟಿಲಾಲೋಲ ಕೀಲಾಕ್ಷಿವೊಲ್ ದ
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ

ಎಂಬ ದುರ್ಯೋಧನನ ಕ್ರೋಧಾತಿಶಯವನ್ನು ವರ್ಣಿಸುವ ರನ್ನನ ಪದ್ಯವನ್ನಿಟ್ಟು ಹೋಲಿಸೋಣ. ಇಬ್ಬರಲ್ಲಿಯೂ ಈ ಸನ್ನಿವೇಶಗಳು ಸ್ವಲ್ಪ ಹೆಚ್ಚು ಕಡಮೆ ಒಂದೇ ಆಗಿವೆ. ದುರ್ಯೋಧನನು ಎಲ್ಲರನ್ನೂ ಕಳೆದುಕೊಂಡು ಒಂಟಿಗನಾಗಿರುವಂತೆಯೇ ರಾವಣನೂ ಬಾಂಧವರೆಲ್ಲರಿಂದ ಅಗಲಿ ಏಕಾಕಿಯಾಗಿದ್ದಾನೆ; ವೈಶಂಪಾಯನ ಸರೋವರದಲ್ಲಿ ಅಡಗಿದ್ದ ದುರ್ಯೋಧನನು ಪಾಂಡವರ ಕಟೂಕ್ತಿಗಳನ್ನು ಕೇಳಿದಂತೆಯೇ ರಾವಣನು ಬಹುರೂಪಿಣೀ ವಿದ್ಯೆಯನ್ನು ಸಾಧಿಸುವುದಕ್ಕೋಸ್ಕರ ತಪಸ್ಸು ಮಾಡುತ್ತಿದ್ದಾಗ ಶತ್ರುಪಕ್ಷದವರ ಅಸಭ್ಯವಾದ ಮೂದಲಿಕೆಗಳನ್ನೆಲ್ಲ ಕೇಳಬೇಕಾಗಿ ಬರುತ್ತದೆ. ಇಬ್ಬರಿಗೂ ಅವರವರ ದುರಂತ ಜೀವನದ ಕೊನೆಯ ದಿನ. ದುರ್ಯೋಧನನಿಗೆ ಗದಾದಂಡವೊಂದೇ ಉಳಿದಿರುವಂತೆ ರಾವಣನಿಗೆ ಬಹುರೂಪಿಣೀ ವಿದ್ಯೆಯೂ ಚಂದ್ರಹಾಸವೂ ಉಳಿದಿವೆ. ಇಬ್ಬರೂ ಮಲೆತ ಕೇಸರಿಗಳಂತೆ ತಮ್ಮ ತಮ್ಮ ಶತ್ರುನಿಗ್ರಹಕ್ಕಾಗಿ "ಕೈ ತೀರ್ಸಸೆ ಸೈತಿರದೆ" ಆತುರಪಡುತ್ತಿದ್ದಾರೆ. ಅವರ ಕ್ರೋಧಗಳು 'ವಿಲಯಾನಲಸದೃಶ'ವಾಗಿವೆ. ಇಂಥ ಕೋಪದ ಕಲ್ಪನೆ ನಾಗಚಂದ್ರನ ಪದ್ಯದಲ್ಲಿದೆಯೇ? ರನ್ನನ ಪದ್ಯವನ್ನು ಸ್ಮರಿಸಿಕೊಂಡರೆ ಸಾಕು, ನೆತ್ತರು ಕುದಿದುಕ್ಕುತ್ತದೆ. ಇದಕ್ಕೆ ಕಾರಣ: ರನ್ನನ ತೀವ್ರವಾದ ಮಾನಸಿಕ ಅನುಭವ ಮತ್ತು ಅದನ್ನು ಪ್ರತಿಬಿಂಬಿಸುವ "ಪ್ರತಾಪಯುಕ್ತವಾದ ಓಜೋಮಯವಾದ ಶೈಲಿ." ನಾಗಚಂದ್ರನಲ್ಲಿ ಇಷ್ಟು ತೀಕ್ಷ್ಣಾನುಭವವೂ ಇಲ್ಲ, ಇಂಥ ವಿದ್ಯುದ್ವಿಲಸಿತ ಪದಸಮುಚ್ಚಯವೂ ಇಲ್ಲ. ಇರುವ ಅಲ್ಪಾನುಭವದ ಆವಿಷ್ಕರಣವೂ 'ಮೃದುಪದಬಂಧ'ಕ್ಕೆ ಸೆರೆಯಾಗಿ ನೀರಸವಾಗಿದೆ. ಪಾಪ! ನಾಗಚಂದ್ರನೇನು ಮಾಡಿಯಾನು! ಅವನ ಚಿತ್ತವೃತ್ತಿಗೆ ಆ ಕ್ಷಾತ್ರವಿಲ್ಲ. ಇಲ್ಲಿ "ಬಗೆಯಂ ಸುಡಿ ಮುಟ್ಟೆ ನುಡಿಯದು."

ಇನ್ನು ಅಲಂಕಾರಗಳ ವಿಷಯ. ನಾಗಚಂದ್ರನು ಸಾಮಾನ್ಯವಾಗಿ ಬಳಕೆಯಲ್ಲಿರುವ ಅಲಂಕಾರಗಳಿಗೇ ಹೆಚ್ಚು ಪ್ರಾಶಸ್ತ್ಯಕೊಟ್ಟಿದ್ದಾನೆ. ಅಲಂಕಾರ ಗ್ರಂಥಗಳಲ್ಲಿ ಮಾತ್ರ ಕಂಡುಬರುವ ನೂರಾರುಬಗೆಯ ಅಲಂಕಾರಗಳ ತಂಟೆಗೇ ಹೋಗಿಲ್ಲ; ಅನುಚಿತ ಪಾಂಡಿತ್ಯಪ್ರದರ್ಶನಕ್ಕೆ ಕೈ ಹಾಕಿಲ್ಲ. ಅಷ್ಟೇಕೆ! ಶ್ಲೇಷೆಗೂ ಅವನಲ್ಲಿ ಎಡೆಯಿಲ್ಲ. ಒಂದೆರಡು ಕಡೆ ಬಂದರೂ ಅವನೇ ಹೇಳಿಕೊಂಡಿರುವಂತೆ ಅದು 'ಅಕ್ಲಿಷ್ಟ.' ಉಪಮೆ, ರೂಪಕ, ಅರ್ಥಾಂತರನ್ಯಾಸ,

ಯಥಾಸಂಖ್ಯೆ, ಉತ್ಪ್ರೇಕ್ಷೆ ಮುಂತಾದ ಅಲಂಕಾರಗಳಿಗೆ ಮಾತ್ರ ಪುರಸ್ಕಾರ ಸಿಕ್ಕಿದೆ ನಾಗಚಂದ್ರನಲ್ಲಿ. ಇವುಗಳಲ್ಲಿಯೂ ಅರ್ಥಾಂತರನ್ಯಾಸವೆಂದರೆ ಅವನಿಗೆ ಪಂಚಪ್ರಾಣ. 'ಅರ್ಥಾಂತರನ್ಯಾಸಪ್ರಿಯ' ಎಂಬ ಮಾತು ಅವನಿಗೆ ಸಲ್ಲುವುದು. ಅವನಷ್ಟು ಧಾರಾಳವಾಗಿ ಇದನ್ನು ಬಳಸಿಕೊಂಡಿರುವ ಕನ್ನಡ ಕವಿಗಳು ಕಡಮೆ. ಇದರಲ್ಲಿ ಅವನಿಗೇಕೆ ಇಷ್ಟು ಮಮತೆ? ಅವನ ಮನೋಧರ್ಮವೇ ಅದಕ್ಕೆ ಕಾರಣವಿರಬಹುದು. ವಿಶೇಷ ವಿಷಯದಿಂದ ಸಾಮಾನ್ಯ ವಿಷಯಕ್ಕೆ ಬೇಗನೆ ನೆಗೆಯುವ ಪ್ರವೃತ್ತಿ ಅದಕ್ಕೆ ಸ್ವಭಾವಸಿದ್ಧವಾದದ್ದು. 'ಕಿಡಿ ಮಸಿಯಾದವೋಲ್ ವಿಷಯಲೋಭದಿನೆನ್ನರುಮೇಳಿದರಾಗದಿರ್ಪರೇ', 'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ,' 'ವ್ಯಸನಾಭಿಭೂತನಾವನುಮನುರಾಗ ವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ,' 'ಬಿದಿಯಂ ಮೀಱುಗುಮೆ ಪೆಱರ ಪೇಟ್ದುಪದೇಶಂ,' 'ಆತ್ಮ ಸತ್ವಗುಣ ಹಾನಿಯೆ ಸೂಚಿಸದೇ ವಿನಾಶಮಂ.' 'ಬಗೆವರೇ ವಿಷಯಾಸವಮತ್ತರೇನುಮಂ,' 'ನಿಜ ಪುತ್ರವಿಯೋಗಮನಾರೊ ಸೈರಿಪರ್,' 'ದಾರುಣಕರ್ಮಕ್ಕೆ ಕಾಮುಕರ್ ಪೇಸುವರೇ,' 'ಜನ್ಮಾರಣ್ಯದೊಳ್ ಮಿಕ್ಕರನಟಲಿಸದೇ ಮೋಹದಾವಾಗ್ನಿ ದಾಹಂ,' 'ಮೆಚ್ಚಿದಂದದೊಳೆ ದೋಷಮೆ ದುರ್ಬಲಮಾಗದಿರ್ಪುದೇ'—ಎಷ್ಟೊಂದು ಉದಾಹರಣೆಗಳು! ಇವು ಬರುವ ಸಂದರ್ಭಗಳಲ್ಲಿ ಅಲಂಕಾರವಿದೆಯೆಂಬ ಅರಿವೇ ಉಂಟಾಗುವುದಿಲ್ಲ. ಅಷ್ಟು ಸಹಜವಾಗಿ ಅವು ಆ ಸನ್ನಿವೇಶಗಳಿಂದ ಹುಟ್ಟಿ ಬಂದಂತಿವೆ. ಆದರೆ ನಾಗಚಂದ್ರನ ಎಲ್ಲ ಅರ್ಥಾಂತರನ್ಯಾಸಗಳೂ ಈ ಗುಂಪಿಗೆ ಸೇರಿಲ್ಲ. ಅವುಗಳಲ್ಲಿ ಕೆಲವು ಪಾದಪೂರಣಕ್ಕಾಗಿಯೇ ಜನ್ಮವೆತ್ತಿರುವಂತೆ ತೋರುತ್ತವೆ:

> ಅೞಿಪಿ ಪರವಧುಗಧೋಗತಿ
> ಗಿಟಿವುದನಭಿನಯಿಸುವಂತೆ ಸೀತೆಯ ಸಾರ
> ಲ್ಗೆಟಿದಂ ನಭದಿಂ ಖಚರಂ
> ಪಟಿಗಂ ಪಾಪಕ್ಕಮಂಜದವರೇಗೆಯ್ಯರ್

ಇದರಲ್ಲಿರುವ ಅಲಂಕಾರವು ಬಹು ಶುಷ್ಕವಾದುದು, ಕೃತಕವಾದುದು! ಆ ಸನ್ನಿವೇಶದಿಂದ ಒಡಮೂಡಿದಂತೆ ಆ ಅರ್ಥಾಂತರನ್ಯಾಸವು ಕಾಣುವುದಿಲ್ಲ.

ಮೋಹಪರವಶನಾದ ರಾವಣನು ಸೀತಾಪಹರಣಕ್ಕಾಗಿ ಆಕಾಶದಿಂದ ಭೂಮಿಗಿಳಿದನು; 'ಅಧೋಗತಿಗಿಟಿವುದನಭಿನಯಿಸುವಂತೆ' ಎಂಬ ಉಪಮೆ ಮನೋಜ್ಞವಾಗಿದೆ. ಆದರೆ 'ಪಟಿಗಂ ಪಾಪಕ್ಕಮಂಜದವರೇಗೆಯ್ಯರ್' ಎಂಬಲ್ಲಿ ಭಾವೋದ್ರೇಕಗೊಳಿಸುವ ಶಕ್ತಿ ಎಳ್ಳಷ್ಟಾದರೂ ಇಲ್ಲ. ಈ ಪದ್ಯದ ಮೊದಲ ಮೂರು ಪಾದಗಳಲ್ಲಿ ಉಂಟಾಗುವ ಭಾವಜ್ವಾಲೆ ಕೊನೆಯ ಪಾದವನ್ನು ಓದಿದ ಕೂಡಲೆ ಆರಿ ತಣ್ಣಗಾಗುತ್ತದೆ. ಕವಿ ಹೇಳಬೇಕಾದದ್ದೂ ಅಲ್ಲಿಗೆ ಮುಗಿಯುತ್ತದೆ. ನಾಲ್ಕನೆಯ ಪಾದ ತೇಪೆ ಹಾಕಿದ ಹಾಗಿದೆ. ಅರ್ಥಾಂತರನ್ಯಾಸ ಫಲಕಾರಿಯಾಗಬೇಕಾದರೆ ಹಿಂದಿನ ಉದಾಹರಣೆಗಳಲ್ಲಿ ವ್ಯಕ್ತವಾಗಿರುವಂತೆ ಏನಾದರೂ ಭಾವೋದ್ರೇಕಗೊಳಿಸುವ ಶಕ್ತಿ ಇರಬೇಕು. ಅದು ಇಲ್ಲದಿದ್ದರೆ ಅದು ನಿರ್ಜೀವವಾಗುತ್ತದೆ. ನಾಗಚಂದ್ರನಿಗೆ ಇದರ ಮೇಲಿರುವ ವಿಪರೀತವಾದ ಮಮತೆ ಸಮಯ ಸಿಕ್ಕಿದಾಗಲೆಲ್ಲ ಅವನ ಶೈಲಿಯಲ್ಲಿ ಸೇರಿಬರುವುದಕ್ಕೆ ಕಾರಣವಾಗಿದೆ. ಬಹಳ ಅಕ್ಕರೆಯಿಂದ ಸಾಕಿದ ಮಕ್ಕಳು ಅವಿಧೇಯರಾಗಿ ಅನಿಷ್ಟರಾಗುವುದುಂಟು. ಹಾಗೆಯೇ ನಾಗಚಂದ್ರನ ಈ ಅಲಂಕಾರ ಕೆಲವು ಸಮಯಗಳಲ್ಲಿ ಅನಿಷ್ಟವಾಗುತ್ತದೆ. 'ತಕ್ಕಂ ಪತಿಕಾರ್ಯದೆಡೆಯೊಳೋಸರಿಸುವನೇ' 'ಉದಾತ್ತನೊಳ್ ಪುಟ್ಟದಲ್ತೆ ಸೀಲೀರಾಗಂ." 'ವಿಷಯಿ ತನ್ನ ಕೇಡಂ ನೋಡಂ,' 'ಪರಿವಿಡಿಯಂ ತಪ್ಪಲಾರ್ಗಮೇಂ ಬಂದಪುದೇ,' 'ಮುನ್ನಿನ ಭವದನುಬಂಧಮಂ ಕಟಲ್ಚುವರೊಳರೇ,' 'ಪತಿವ್ರತಾ ಗುಣದ ಮಹಿಮೆ ಸಾಧಾರಣಮೇ,' 'ಸನ್ಮಾರ್ಗನಿರತರಂ ಮೆಚ್ಚಿ ಪೊಗಟದಿರ್ಪರುಮೊಳರೇ'—ಇವೇ ಮುಂತಾದ ಅರ್ಥಾಂತರನ್ಯಾಸಗಳು ಖಾಲಿಜಾಗವನ್ನು ಭರ್ತಿಮಾಡುವುದಕ್ಕೆ ಹಾಕಿದುವು. ಅರ್ಥಪುಷ್ಟಿ ಉಂಟಾಗುವುದಿಲ್ಲ, ಭಾವಪರಿಪುಷ್ಟಿ ಮೊದಲೇ ಇಲ್ಲ. ಆ ಸನ್ನಿವೇಶದ ಆ ಅನುಭವ ಪದ್ಯದ ಮೊದಲ ಭಾಗದಲ್ಲಿ ಉಂಟಾಗುತ್ತದೆ. ಅದು ಪೂರ್ತಿಯಾಗುವುದರೊಳಗೆ ಈ ಅಲಂಕಾರ ಬಂದುಬಿಡುತ್ತದೆ. ಓದುವವರ ಮನಸ್ಸು ನೀರಿನಿಂದ ನೆಲಕ್ಕೆ ಬಂದ ಮೀನಿನಂತೆ ಆಗುತ್ತದೆ. ಆ ಸಂದರ್ಭದ ಪೂರ್ಣಾನುಭವಕ್ಕೆ ವಿಚ್ಛೇದ ಉಂಟಾಗುತ್ತದೆ. ಅಲ್ಲದೆ ಇವುಗಳಲ್ಲಿ ವೈವಿಧ್ಯ ಹೆಚ್ಚಾಗಿಲ್ಲ. "ಓಹೋ! ಇನ್ನೊಂದು ಬಂತೋ ಅರ್ಥಾಂತರನ್ಯಾಸ" ಎಂದೆನಿಸುತ್ತದೆ. ಬೇಸರಿಕೆ ಹುಟ್ಟುತ್ತದೆ. ಪದ್ಯಗಳ ಮೊದಲಗತಿಯನ್ನು ನೋಡಿ

ದರೆ ಅದು ಅರ್ಥಾಂತರನ್ಯಾಸದಲ್ಲಿ ಮುಗಿಯಲೇ ಬೇಕೆಂದು ತೋರಿಬಿಡುತ್ತದೆ. ಇವುಗಳಲ್ಲಿ ಓದುಗರ ಮನಸ್ಸನ್ನು ಅಪೇಕ್ಷಿತವಾಗಿ ಆಕ್ರಮಿಸಿ ಸಮ್ಮೋಹ ಗೊಳಿಸುವ ಶಕ್ತಿ ಇಲ್ಲ. ಹೀಗೆ ನಾಗಚಂದ್ರನ ಅರ್ಥಾಂತರನ್ಯಾಸಗಳಲ್ಲಿ ಕೆಲವಕ್ಕೆ ಮಿಂಚಿನ ಸಂಚಲತೆಯಿದೆ; ಕೆಲವಕ್ಕೆ ಮಣ್ಣಿನ ಮಾಂದ್ಯವಿದೆ. ಅಂತು ಅವನಿಗೆ ಇದರಲ್ಲಿ ಪಕ್ಷಪಾತ ಹೆಚ್ಚು. ಇದರಿಂದ ಅವನ ವ್ಯಕ್ತಿತ್ವದ ಒಂದು ಮುಖ ತಿಳಿದುಬರುತ್ತದೆ.

ಉಪಮೆಯಲ್ಲಿಯೂ ನಾಗಚಂದ್ರನಿಗೆ ಸಹಜವಾದ ಒಲವಿದೆ. ಅವನ ಮೃದುಬಂಧದಲ್ಲಿ ಈ ಅಲಂಕಾರಕ್ಕೆ ಸೊಗಸು ಕೊಡುವ ಶಕ್ತಿ ಇದೆ. ಸೀತೆ ಸ್ವಯಂವರ ಮಂಟಪಕ್ಕೆ ಬಂದದ್ದು ಅಲ್ಲಿ ನೆರೆದಿದ್ದ ರಾಜರಿಗೆ "ನನೆಕೊನೆ ಯೇಱುವಂತೆ ವನರಾಜಿ ಮಧುಪ್ರಥಮಪ್ರವೇಶದೊಳ್" ಎಂಬಂತೆ ಆಯಿತು. 'ಕದಡಿದ ಸಲಿಲಂ ತಿಳಿವಂದದೆ,' 'ಬಲೆಗೊಳಗಾದ ಸೋಗೆ ನವಿಲಂತೆ,' 'ಸುಧಾಂಶು ಲೇಖೆಯಿಲ್ಲದ ನಭದಂತೆ,' 'ಪರಹಸ್ತದಿಂ ಮೊಟನಿಡಲ್ ಬರ್ಪಂತೆ ಕಾಳಾಹಿಯಂ,' 'ಸುಟಿಯೊಳಗಣ ಪಱುಗಲಂತೆ, 'ಎಳೆವಾಳೆ ತೆಱಂಬೊಳೆವಂತೆ,' 'ಜಳದೇವತೆ ಕೋಡುವ ತಿಳಿಗೊಳದೊಳಗಿರ್ಪಂತೆ,' 'ನೀಲಮೇಘನಿಕಟ ಪ್ರಸ್ಫಾರ ದಂಭೋಳಿವೋಲ್,' 'ಪರಿಯೆ ಪೆರ್ಚಿದ ಮಂಜು ರಂಜಿಸುವಂತೆ ತಾವರೆ'— ಇವುಗಳಲ್ಲಿ ಒಂದೊಂದಕ್ಕೂ ಕವಿಯ ಸಾದೃಶ್ಯ ಪರಿಶೀಲನ ಶಕ್ತಿ ಉತ್ತಮವಾದ ದ್ದೆಂದು ಸಾರುವ ಯೋಗ್ಯತೆ ಇದೆ. ಇಂಥ ಉಪಮಾನಗಳು ಅವನ ಕಾವ್ಯಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಮಿಕ್ಕ ಅಲಂಕಾರಗಳಲ್ಲಿ ಒಂದನ್ನು ಮಾತ್ರ ಇಲ್ಲಿ ನೋಡಬಹುದು. ಸೀತೆಯನ್ನು ಕಳೆದುಕೊಂಡು ರಾಮನು ಎಲ್ಲೆಲ್ಲಿಯೂ ಹುಡುಕಿ ಅವಳನ್ನು ಕಾಣದೆ

> ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯ ನಿಶ್ವಾಸೆಯಂ
> ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೈದಿಲೇ ಮತ್ತಕೋ
> ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ
> ತಳೆಯಂ ಕೈರವ ನೇತ್ರೆಯಂ ಪಿಕರವ ಪ್ರಖ್ಯಾತೆಯಂ ಸೀತೆಯಂ

ಎಂದು ಶೋಕದ ಸೋನೆಯನ್ನು ಸುರಿಸುವನು. ಈ ಪದ್ಯದಲ್ಲಿನ ಒಂದೊಂದು ಮಾತೂ ಒಂದೊಂದು ನೆನಪಿನ ಭಂಡಾರ. ತಳಿರನ್ನು ನೋಡಿದರೆ ಸೀತೆಯ

ನೆನಪು ; ತಾವರೆಯನ್ನು ನೋಡಿದರೆ ಸೀತೆ. ಸೌಂದರ್ಯ ಸೌಕುಮಾರ್ಯಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲ ಸೀತೆ. ರಾಮನು ಇದನ್ನೆಲ್ಲ ಸ್ಮರಿಸಿಕೊಂಡು ಉನ್ಮತ್ತನಾಗಿ ಶೋಕಪರಿಪ್ಲುತನಾಗುವನು. ಈ ಶೋಕದ ಸಂಪೂರ್ಣ ಆನಂದವು ಉಂಟಾಗುವಾಗ ಸೀತಾರಾಮರ ಕಳೆದ ದಿನಗಳ ಸುಖಮಯ ಜೀವನದ ಆ ಸ್ವರ್ಗೀಯ ಆವರಣದಿಂದ ಅಜ್ಞಾತವಾಗಿ ಹೃದಯ ಎಚ್ಚರಗೊಳ್ಳುತ್ತದೆ. ಇಂಥ ಆವರಣದ 'ಜೋಡಣೆ' ನಾಗಚಂದ್ರನಲ್ಲಿ ಇಲ್ಲಿ ವ್ಯಕ್ತವಾಗಿದೆ. ಇದರ ಪರಿಣಾಮವಾಗಿ ಪದ್ಯವನ್ನು ಹಾಡಿಕೊಳ್ಳುವಾಗ ಆ ಮೃದುವಿಳಂಬನಾದದಲ್ಲಿಯೂ ಆ ಪದಗಳು ಮೇಲಿಂದ ಮೇಲೆ ಕನಲಿಸುವ ನಾನಾ ಬಗೆಯ ಬಣ್ಣದ ನೆನಪುಗಳಲ್ಲಿಯೂ ಆ ಶೋಕರಸಾವೇಶದಲ್ಲಿಯೂ ಮನಸ್ಸು ವಿಲೀನವಾಗಿ ಅಲ್ಲಿ ಅಲಂಕಾರವಿದೆಯೆಂಬ ತಿಳಿವೇ ಉಂಟಾಗುವುದಿಲ್ಲ. ಆ ಯಥಾಸಂಖ್ಯಾಲಂಕಾರ ಇಲ್ಲಿ ಎಲೆಯ ಮರೆಯ ಹೂವಿನಂತಿದೆ ; ಬೆದಕಿ ನೋಡಿದರೆ ಮಾತ್ರ ಸಿಕ್ಕುತ್ತದೆ. ಅಲಂಕಾರಗಳನ್ನು ಉಪಯೋಗಿಸಬೇಕಾದರೆ ಹೀಗೆ ಉಪಯೋಗಿಸಬೇಕು. ಅದು ಬಿಟ್ಟು

> ಕಳಕಂಠಂಗಳ ಬಗ್ಗಣೆ
> ಗಿಳಿಗಳ ಚಪ್ಪರಣೆಯಳಿಗಳಿಂಚರಮೆಸೆಗುಂ
> ತಳಿರ್ಗಳ್ ತನಿವಣ್ಗಳ್ ಸುಮ
> ಕುಳಂಗಳಡಿಕಿಱಿದ ಚೂತಶಾಖಾಂತರದೊಳ್

ಎಂದು ಬರೆಯುವುದು ಸಾಹಿತ್ಯದಲ್ಲಿ ಶಸ್ತ್ರವೈದ್ಯವಾಗುವುದು.

ಹೀಗೆಯೇ ವಿಚಾರ ಮಾಡುತ್ತ ಹೋದರೆ ನಾಗಚಂದ್ರನ ಶೈಲಿಯಲ್ಲಿ ಹಲವು ಸಣ್ಣ ಸಣ್ಣ ಗುಣದೋಷಗಳು ಕಂಡುಬರುತ್ತವೆ. ಅನುಚಿತ ನಿರರ್ಥಕ ಪದಪ್ರಯೋಗಗಳು ಹಲವೆಡೆ ಇವೆ. ಶೈಲಿ ಅನನುಕರಣೀಯವಾದರೂ ಆದಿಪಂಪನ ಬಿಕ್ಕಟ್ಟಾದ ಪದಬಂಧವೂ ಸೂರ್ಯೋದಯ ಸೂರ್ಯಾಸ್ತಮಗಳಿಗೆ ಸಂಬಂಧಿಸಿದ ಅವನ ಉತ್ಪ್ರೇಕ್ಷೆಗಳೂ ನಾಗಚಂದ್ರನಲ್ಲಿ ಹೊಳಲು ಕೊಡುತ್ತಿವೆ. ಆದರೆ ಇವೇನೂ ಅಷ್ಟು ಮುಖ್ಯವಾದುವಲ್ಲ. ಅವನ ವ್ಯಕ್ತಿತ್ವವನ್ನು ಮಾರ್ಪಡಿಸುವಷ್ಟು ಶಕ್ತಿ ಇವಕ್ಕಿಲ್ಲ. ಒಂದೆರಡು ಕಡೆ ಚಿತ್ರಕಲೆಯಲ್ಲಿ ಅವನಿಗಿದ್ದ ಅಭಿರುಚಿಯೂ ವ್ಯಕ್ತವಾಗಿದೆ.

ಇಂಥ ಶೈಲಿಯಿಂದ ಸಂಗ್ರಹವಾಗಿ ಹೇಳಬಹುದಾದರೆ—ಊಹೆ ಎಂಬುದನ್ನು ಮರೆಯಲಾಗದು—ನಾಗಚಂದ್ರನದು ಕೋಮಲವಾದ, ಮೃದುವಾದ, ಸರಳವಾದ ಸ್ಫುಟವಾದ ಮನೋಧರ್ಮ. ಅದರಲ್ಲಿ ಮುಚ್ಚುಮರೆಯಿಲ್ಲ, ಕುಟಿಲತೆಯಿಲ್ಲ. ಪರಮತದ್ವೇಷವಿಲ್ಲದ ಧರ್ಮಾನುರಾಗದಿಂದ ಕೂಡಿದೆ ಅವನ ಮನಸ್ಸು. ಶಾಂತಿಸಂತುಷ್ಟಿಗಳಿಂದ ತುಂಬಿದ ಆ ಚಿತ್ತವೃತ್ತಿಗೆ ವೀರರೌದ್ರ ಭಯಾನಕಗಳ ಅನುಭವ ಕಡಮೆ; ಮಧುರಭಾವಗಳ ಅನುಭವ ಅದಕ್ಕಿಂತ ಹೆಚ್ಚು. ಗಾನಚಿತ್ರ ಕಲೆಗಳಲ್ಲಿ ಒಲವು ಹಿರಿದು. ವಿಶೇಷ ವಿಷಯದಿಂದ ಸಾಮಾನ್ಯದ ಕಡೆಗೆ ಹಾಯುವುದು ಅವನ ಮನಸ್ಸಿನ ಶೀಲ. ರಸಿಕತೆ, ಎಂದರೆ ಬೇರೊಂದು ಪ್ರಪಂಚವನ್ನು ಸೃಷ್ಟಿಸಿ ಅದರಲ್ಲಿ ವಿಹರಿಸುವ ಶಕ್ತಿ, ಅದಕ್ಕೆ ಸ್ವಾಭಾವಿಕವಾದದ್ದು. ಪ್ರಸನ್ನತೆ, ಸ್ನೇಹಪರತೆ, ದಯೆ, ಸಹೃದಯತೆ ಮುಂತಾದ ಸದ್ಗುಣಗಳಿಂದ ಕೂಡಿದ ಆರ್ಯನಂತೆ, ಸಾಧುವಿನಂತೆ ನಾಗಚಂದ್ರನು ಕಾಣುವನು. ಅವನ ಕಾಲದ ಉತ್ತಮ ಸಂಸ್ಕೃತಿಗೆ ಅವನು ಕೈಗನ್ನಡಿಯಾಗಿದ್ದನೆಂದು ಸಂದೇಹವಿಲ್ಲದೆ ಹೇಳಬಹುದು.

೮. ಉಪಸಂಹಾರ

ತಿಣುಕಿದನು ಫಣಿರಾಯ ರಾಮಾ
ಯಣದ ಕವಿಗಳ ಭಾರದಲಿ ತಿಂ
ತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ

ಎಂದು ಕವಿ ಕುಮಾರವ್ಯಾಸನು ತನಗೆ ಸಹಜವಾದ ಕೆಚ್ಚಿನಿಂದ ಹೇಳಿರುವ ಮಾತುಗಳು ಬಹುಮಟ್ಟಿಗೆ ನ್ಯಾಯವಾಗಿರುವಂತೆ ಕಂಡುಬಂದರೂ ನಾಗಚಂದ್ರನ 'ರಾಮಾಯಣ'ಕ್ಕೆ ಅವು ಅನ್ವಯಿಸುವುದಿಲ್ಲ. ರಾಮಾಯಣವೂ ಅದರ ಆಧಾರದಿಂದ ರಚಿತವಾದ ಕಾವ್ಯಗಳೂ ನಾಟಕಗಳೂ ಸಂಸ್ಕೃತ ಪ್ರಾಕೃತ ಸಾಹಿತ್ಯಗಳಲ್ಲಿ ಲೆಕ್ಕವಿಲ್ಲದಷ್ಟಿವೆ. ಭರತಖಂಡದ ದೇಶೀಯ ಭಾಷೆಗಳಲ್ಲಿಯೂ ಇವುಗಳ ಸಂಖ್ಯೆ ಅಪಾರ. ಭಾಸ ಭವಭೂತಿಗಳಂಥ ಅದ್ಭುತ ಪ್ರತಿಭಾಸಂಪನ್ನರಾದ ಕವಿಗಳು ರಾಮಾಯಣದ ಕಥೆಯಲ್ಲಿ ಹಲವು ಮಾರ್ಪಾಟುಗಳನ್ನು ಮಾಡಿಕೊಂಡು ಹೊಸ ಬಗೆಯ ರಸಸ್ಥಾನಗಳನ್ನು ಕಲ್ಪಿಸಿಕೊಂಡಿದ್ದಾರೆ. ಕಲಾದೃಷ್ಟಿಯಿಂದ ಅಂಥವರ ಕೃತಿಗಳು ಅಮರವಾಗಿವೆ. ಅವರ ಮಾನವ ಸ್ವಭಾವದ ಪರಿ

ಜ್ಞಾನವೂ ಅನುಭವವೂ ನಿರೂಪಣೆಯೂ ವರ್ಣನೆಯೂ ಚಿರನೂತನವಾದುವು. ಅವರ ಕಾವ್ಯಗಳು ತೋಡಿದಂತೆಲ್ಲ ನವನವ ರಸವನ್ನುಕ್ಕಿಸುವ ಚಿಲುಮೆಗಳು. ಅವಕ್ಕೆ ಕಾಲದೇಶಗಳ ಎಲ್ಲೆ ಇಲ್ಲ. ಶತಮಾನಗಳು ನರೆತಹಾಗೆಲ್ಲ ಅವರ ಮಾತುಗಳಿಗೆ ಹೊಸ ಹೊಸ ಬಗೆಯ ಅಭಿಪ್ರಾಯವು ಸ್ಫುರಿಸುವುದು. ಉಳಿದ ರಾಮಾಯಣಗಳಲ್ಲಿ ತಮಿಳು ಭಾಷೆಯಲ್ಲಿರುವ 'ಕಂಬ ರಾಮಾಯಣ'ವೂ ಹಿಂದೀ ಭಾಷೆಯಲ್ಲಿರುವ ತುಲಸೀದಾಸನ 'ರಾಮಚರಿತಮಾನಸ'ವೂ ಕೃತ್ತಿವಾಸನ ಬಂಗಾಳಿ 'ರಾಮಾಯಣ'ವೂ ಆಯಾ ದೇಶೀಯರಿಗೆ ಬಹು ಪ್ರಿಯವಾದ ಕಾವ್ಯಗಳು. ಅಲ್ಲಲ್ಲಿ ಕೆಲವು ಮಾರ್ಪಾಟುಗಳಿದ್ದರೂ ಈಚೆಗೆ ಕಲ್ಪಿತವಾದ ಕೆಲವು ಉಪಾಖ್ಯಾನಗಳು ಕಂಡುಬಂದರೂ ಸ್ಥೂಲವಾಗಿ ಹೇಳಬಹುದಾದರೆ ಇವೆಲ್ಲ 'ವಾಲ್ಮೀಕಿರಾಮಾಯಣ'ದ ಮರಿಗಳು. ನೂತನ ದೃಷ್ಟಿಯಾಗಲಿ ಸೃಷ್ಟಿಯಾಗಲಿ ಇವುಗಳಲ್ಲಿ ಇರುವಂತೆ ಕಂಡುಬಂದಿಲ್ಲ. ಮೂಲದ ಸೌಂದರ್ಯವು ಒಂದೊಂದರಲ್ಲಿ ಒಂದೊಂದು ಮಟ್ಟದಲ್ಲಿದೆ. ಅದರೊಡನೆ ಎಲ್ಲ ವಿಷಯದಲ್ಲಿಯೂ ಇವು ಸರಿತೂಗಲಾರವು. ಆದರೂ ಸಾಮಾನ್ಯಜನತೆಯಲ್ಲಿ ರಾಮಾಯಣದ ಪ್ರಭಾವವು ಇನ್ನೂ ಸಜೀವವಾಗಿರುವುದು ದೇಶಭಾಷೆಗಳಲ್ಲಿರುವ ಇಂಥ ರಾಮಾಯಣಗಳಿಂದ. ಜೈನ ರಾಮಾಯಣಗಳಿಗಾದರೆ ಈ ಸೌಭಾಗ್ಯ ಲಭಿಸಲಿಲ್ಲ. ಕೆಲವು ಆಸ್ತಿಕ ಜೈನ ಬಾಂಧವರ ಆದರವೂ ಪುರಸ್ಕಾರವೂ ಇವಕ್ಕೆ ಸಲ್ಲುತ್ತಿರಬಹುದು. ಆದರೆ ಅಂಥವರೆಷ್ಟು ಮಂದಿ? 'ರಾಮಾಯಣದ ಕವಿಗಳ ಭಾರ'ದಿಂದ ಬಾಗಿದ ಮಸ್ತಕವುಳ್ಳ ಜನತೆಗೆ ಜೈನ ರಾಮಾಯಣಗಳ ಕಡೆಗೆ ಕಣ್ಣೆತ್ತಿ ನೋಡುವಷ್ಟು ಬಯಕೆ ಹುಟ್ಟಲಿಲ್ಲವೇನೋ! ಉಂಟಾಗಿದ್ದರೂ ಅವುಗಳಲ್ಲಿ ತುಂಬಿಕೊಂಡಿರುವ ಜನ್ಮಾಂತರದ ಜಟಿಲ ಕಥೆಗಳೂ ವೈದಿಕ ಯಜ್ಞಯಾಗಾದಿಗಳ ಪ್ರತಿಭಟನೆಗಳೂ ಸ್ವಕೀಯ ಧರ್ಮೋಪದೇಶಗಳೂ ಜನರನ್ನು ಹೆದರಿಸಿಬಿಟ್ಟವೇನೊ! ಅಲ್ಲದೆ ಜೈನರೂ ನಾಗಚಂದ್ರನು ಮಾಡಿದಂತೆ ಉದಾರ ಧಾರ್ಮಿಕ ದೃಷ್ಟಿಯಿಂದ ತಮ್ಮ ರಾಮಾಯಣಗಳನ್ನು ಇತರ ದೇಶಭಾಷೆಗಳಿಗೆ ಪರಿವರ್ತನೆ ಮಾಡುವ ಕಾರ್ಯವನ್ನು ಕೈಕೊಳ್ಳಲಿಲ್ಲ. ಇದರಿಂದ ಜನತೆಗೆ ಅವುಗಳ ಇರವೂ ಸೊಬಗೂ ಗೊತ್ತಾಗದೆ, ಅವು ಅವರ ಅನಾದರಕ್ಕೆ ಪಾತ್ರವಾಗಬೇಕಾಯಿತು. ಆದರೆ ಇದು ಅನ್ಯಾಯ. ಜೈನ ರಾಮಾಯಣಗಳಲ್ಲಿ—

ಮುಖ್ಯವಾಗಿ ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದುವುಗಳಲ್ಲಿ—ಬೇರೊಂದು ದೃಷ್ಟಿಕೋನದಿಂದ ಲಬ್ಧವಾದ ಉನ್ನತ ನೂತನ ಕಲೆ ಇದೆ. ಇದರ ಸೌಂದರ್ಯವು ಉಪೇಕ್ಷೆಗೆ ಅರ್ಹವಾದುದಲ್ಲ. "ಕಳೆಯನ್ನು ಕಿತ್ತು ಪೈರನ್ನು ಉಳಿಸಿಕೊಳ್ಳಬೇಕಾಗಿದೆ ಈಗ." 'ಪಂಪರಾಮಾಯಣ'ವು ತಕ್ಕಮಟ್ಟಿಗೆ ಈ ಕೆಲಸವನ್ನು ಸಮರ್ಪಕವಾಗಿ ಮಾಡಿದೆಯೆಂದು ಇದುವರೆಗೆ ಬರೆದಿರುವುದರಿಂದ ಗೊತ್ತಾಗದಿರದು. ಈ ದೃಷ್ಟಿಯಿಂದಲೂ ಭರತಖಂಡದ ಇತರ ದೇಶೀಯ ಸಾಹಿತ್ಯಗಳಲ್ಲಿ ಇಷ್ಟು ಹಳೆಯದಾದ ಇಂಥ ಜೈನರಾಮಾಯಣವು—ಏಕೆ, ವಾಲ್ಮೀಕಿ ಸಂಪ್ರದಾಯಾನುಸಾರವಾದ ರಾಮಾಯಣವು ಕೂಡ—ಬೇರೊಂದಿಲ್ಲದಿರುವುದರಿಂದಲೂ ಅದಕ್ಕೆ ಪ್ರತ್ಯೇಕವಾದ ಒಂದು ಉನ್ನತಸ್ಥಾನವಿದೆ. ಈ ರಾಮಾಯಣವನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ಹೊಸ ಸಂಪ್ರದಾಯವೊಂದನ್ನು ರೂಢಿಗೆ ತಂದ ನಾಗಚಂದ್ರನಿಗೂ ನಮ್ಮ ಸಾಹಿತ್ಯದಲ್ಲಿ ಅಂಥದೇ ಸ್ಥಾನವಿದೆ. ಇದೆಲ್ಲ ತಿಳಿದಿದ್ದರೆ ಕುಮಾರವ್ಯಾಸನು ಆ ಮೊನಚಾದ ಮಾತುಗಳನ್ನು ಹೇಳುವಾಗ ಸ್ವಲ್ಪ ತಡವರಿಸುತ್ತಿದ್ದನೆಂದು ತೋರುತ್ತದೆ.

ನಾಗಚಂದ್ರನದೇನು ಹಿರಿಮೆ? ಸ್ವತಂತ್ರ ಪ್ರತಿಭೆಯಿಂದ ಅವನೇನಾದರೂ ದುರಂತ ರಾವಣನನ್ನು ಸೃಷ್ಟಿಮಾಡಿದನೆ? ಹಿಂದಿನವರು ಬರೆದದ್ದನ್ನೇ ಅವನೂ ಹೇಳಿದ್ದಾನೆ. ಹೋಗಲಿ ಅದನ್ನಾದರೂ ಹೆಚ್ಚು ಉತ್ತಮಗೊಳಿಸಿದ್ದಾನೆಯೇ? ಅದೂ ಇಲ್ಲ, ಅವನಿಂದ ಸಾಹಿತ್ಯಕಲೆಗೆ ಹಿಂದಿಲ್ಲ ಮುಂದಿಲ್ಲವೆಂಬಂತೆ ಸೇವೆ ಏನಾದರೂ ಸಂದಿದೆಯೆ? ಜೀವನದ ನಿಗೂಢ ಸಮಸ್ಯೆಗಳನ್ನೇನಾದರೂ ಬಿಡಿಸಿದ್ದಾನೆಯೇ? ಜನಜೀವನವು ಅವನ ಕಾವ್ಯರಚನೆಯಿಂದ ಉತ್ತಮಗೊಂಡಿತೆ? ಎಂಬಿವೇ ಮುಂತಾದ ಪ್ರಶ್ನೆಗಳು ಹುಟ್ಟುತ್ತವೆ. ಇವುಗಳಲ್ಲಿ ಕೆಲವಕ್ಕೆ ಉತ್ತರವನ್ನು ಕೊಡಬಹುದು. ಒಬ್ಬ ಕವಿಯಲ್ಲಿ ಪ್ರಾಚೀನರ ಪ್ರಭಾವವು ಕಂಡುಬಂದ ಮಾತ್ರಕ್ಕೆ ಅದು ಅವನಿಗೇನೂ ಕುಂದಲ್ಲ. ಮಹಾಕವಿಗಳಿಗೆ ಕೂಡ ತಮ್ಮ ಕಾವ್ಯಪರಿಚಯದ ಪ್ರಭಾವದಿಂದಲೂ ಆವರಣದ ತೋಳ್ಸೆರೆಯಿಂದಲೂ ಬಿಡಿಸಿಕೊಳ್ಳುವುದು ಕಷ್ಟ. ನಾಗಚಂದ್ರನಂಥ ಕವಿಗಳಿಗೆ ಅದು ಅಸಾಧ್ಯ. ಎಂದರೆ ಅವನಿಗೆ ಶಕ್ತಿ ಇರಲಿಲ್ಲವೆಂಬ ಅಭಿಪ್ರಾಯವಲ್ಲ, ಇತ್ತು. ಆದರೆ ಉಚ್ಚತರಗತಿಗೆ ಸೇರದುದಲ್ಲ. ಅವನ ಪ್ರತಿಭೆಗೆ ಸ್ವತಂತ್ರಾವಿಷ್ಕರಣ ಶಕ್ತಿ ಇಲ್ಲ. ಉತ್ತಮ ಕ್ರಿಯಾಶಕ್ತಿಯಿಲ್ಲ. ಕಾವ್ಯಾಭ್ಯಾಸ

ದಿಂದ ಉದ್ದೀಪನಗೊಂಡದ್ದು ಅದು. ಮಂಕಾಗಿ ಮಾಸಿ ಹದಗೆಟ್ಟಿರುವ ಕತ್ತಿ ಸಾಣೆಹಿಡಿಯುವುದರಿಂದ ಕಾವು ಏರಿ ಕಿಡಿ ಚಿಮ್ಮಿ ತೊಳಗಿ ತೀಕ್ಷ್ಣವಾಗುವಂತೆ ಪ್ರಾಚೀನರ ಪ್ರಭಾವದ ಘರ್ಷಣೆಯಿಂದ ಒಂದೆರಡು ಸಲ ಕಿಡಿಗುಟ್ಟಿದ ಪ್ರತಿಭೆ ಅದು. ಇಷ್ಟೇ ಹೊರತು ನವನವ ಸೃಷ್ಟಿ ಚೈತನ್ಯವದಕ್ಕಿಲ್ಲ. ಆದರೆ ಜನತೆಯ ಸ್ಮೃತಿಪಥದಿಂದ ದೂರವಾಗಿದ್ದ ಪ್ರಾಚೀನ ಸುಂದರ ಸೃಷ್ಟಿಯೊಂದನ್ನು ಸ್ವಂತ ಪರಿಶ್ರಮದಿಂದ ಮನಗಂಡು ಆನಂದಹೊಂದಿ ಅದನ್ನು ತಿರುಗಿ ಎಲ್ಲರ ಅನು ಭವಕ್ಕೂ ತಂದುಕೊಡುವ ಕೆಲಸ ಸಾಮಾನ್ಯವಾದದ್ದಲ್ಲ. ನಾಗಚಂದ್ರನು ಅದನ್ನು ಕವಿಸಹಜವಾದ ಆವೇಶದಿಂದ ಮಾಡಿದ್ದಾನೆ. ಅದರಲ್ಲಿ ಸೌಂದರ್ಯೋ ತ್ಕರ್ಷವಿಲ್ಲದಿರಬಹುದು. ತನ್ನ ಶಕ್ತಿಗೆ ನಿಲುಕಿದಷ್ಟನ್ನು ಮುಚ್ಚುಮರೆಯಿಲ್ಲದೆ ಅವನು ಎಲ್ಲರಿಗೂ ನಿವೇದಿಸಿದ್ದಾನೆ. ಹಾಗೆ ಮಾಡುವಾಗ ಕೆಲವು ನೂತನ ರೇಖೆಗಳನ್ನೂ ತನ್ನ ಚಿತ್ರದಲ್ಲಿ ತೋರಿಸಿರುವನು. ಇದರಲ್ಲಿ ಅವನ ಶ್ರೇಷ್ಠತೆ ಅಡಗಿದೆ. ಸ್ವಲ್ಪವಾದರೂ ಸಾಹಿತ್ಯಕಲೆಗೆ ಅವನಿಂದ-ಈ ರೀತಿ ಸೇವೆ ಸಂದಿದೆ. ಜೀವನದ ಸಮಸ್ಯೆಗಳಿಗೆ ತನ್ನದೇ ಆದ ಹೊಸ ಉತ್ತರವನ್ನೇನೂ ಅವನು ಕೊಟ್ಟಿಲ್ಲ. ಹಿಂದಿನವರ ಆಲೋಚನೆಗಳನ್ನೇ ಅವನು ಸಮರ್ಥನೆಮಾಡಿದ್ದಾನೆ; ಅವನ್ನು ಒತ್ತಿಹೇಳಿ ತನ್ನ ಅಭಿಮತವನ್ನೂ ಸೂಚಿಸಿದ್ದಾನೆ. ಇದರಿಂದ ಜನ ಜೀವನಕ್ಕೆ ಪ್ರಯೋಜನವಾಗಿದ್ದರೂ ಆಗಿರಬಹುದು.

ಆದರೆ ಕನ್ನಡ ಸಾಹಿತ್ಯಕ್ಕೇನೋ ನಾಗಚಂದ್ರನಿಂದ ಮಹೋಪಕಾರ ವಾಗಿದೆ. ಅವನ ಕಾಲದವರೆಗೂ ನಮ್ಮ ಸಾಹಿತ್ಯದಲ್ಲಿ ಈಗ ತಿಳಿದಿರುವಷ್ಟು ಮಟ್ಟಿಗೆ 'ಪಂಪರಾಮಾಯಣ'ದಂಥ ಬೇರೊಂದು ಜೈನರಾಮಾಯಣ ಕಾವ್ಯ ವಿರಲಿಲ್ಲ. ದುರಂತ ರಾವಣನ ಪರಿಚಯವೂ ಇರಲಿಲ್ಲ. ಈ ನವ ಸೌಂದರ್ಯದ ಅನುಭವವನ್ನು ಮೊಟ್ಟಮೊದಲು ನಮಗೆ ಮಾಡಿಕೊಟ್ಟ ಕೀರ್ತಿ ನಾಗಚಂದ್ರನಿಗೆ ಸೇರಿದ್ದು. ಅಲ್ಲದೆ ಹೊಸ ಸಂಪ್ರದಾಯವೊಂದನ್ನು ರೂಢಿಗೆ ತಂದು ಇತರ ಕವಿ ಗಳಿಗೆ ಮಾರ್ಗದರ್ಶಕನಾಗುವ ಸುಯೋಗವೂ ಅವನಿಗೆ ದೊರೆಯಿತು. ಆ ರಾಮಾಯಣದ ರಚನೆಯಿಂದ ಕವಿಗಳ ಮತ್ತು ಸಹೃದಯರ ವಿಹಾರಕ್ಕೆ ಯೋಗ್ಯ ವಾದ ಸುಂದರ ಶ್ಯಾಮಲ ನಿಕುಂಜವೊಂದು ಚಿಗುರಿದ ಹಾಗಾಯಿತು. ಅವನ ಕಾಲವಾದ ಮೇಲೆ ಬಂದ ಕೆಲವು ಕವಿಗಳು ಅವನ ಆ ರಾಮಾಯಣವನ್ನೇ ಹಾಡಿ

ಮೆರೆಸಿದರು. ಅವರಲ್ಲಿ ಪ್ರಮುಖನಾದವನು ಕುಮುದೇಂದು ಕವಿ. ಅವನು ತನ್ನ ರಾಮಾಯಣದಲ್ಲಿ ನಾಗಚಂದ್ರನ ಭಾವಗಳನ್ನೂ ನುಡಿಗಳನ್ನೂ ಎಡೆಬಿಡದೆ ಅನುಕರಿಸಿದ್ದಾನೆ.

ರಾಮನೆ ಧರಾಸುತೆಯ ಜೀವಮೆಂಬುದನಱಿದು
ಕಾಮಕಾತರತೆಯಿಂ ದಶಕಂಧರಂ ತೊಱೆದು
ರಾಮನುಮನೀ ಮಹಾಸತಿಯುಮಂ ಪಾಪದಿಂ
ಕಾಮಾಂಧನಾಗಗಲ್ಚಿದೆನಕಟ ಕೋಪದಿಂ
ದುರ್ಯಶಃಪಟಹನಾದಮಾವರಿಸೆ ಲೋಕಮಂ
ಹಿತಮನಱಿಯದೆ ವಿಭೀಷಣಂ ನುಡಿಯೆಯುಂ . . .

ಎಂಬ ರಾವಣನ ಪಶ್ಚಾತ್ತಾಪದ ಅವನ ವರ್ಣನೆ ನಾಗಚಂದ್ರನ ಅದೇ ವರ್ಣನೆಯ ಪ್ರತಿಧ್ವನಿಯಾಗಿದೆ. ಅವನ ಕೃತಿಯೆಲ್ಲ ಹೀಗೆಯೇ ಇದೆ. ಆದರೆ ಅವನು ಷಟ್ಪದಿಯಲ್ಲಿ ಬರೆದು ಹೆಚ್ಚು ಪ್ರಚಾರವಾಗುವ ಹಾಗೆ ಮಾಡಿರ ಬಹುದು. ಚಂದ್ರಸಾಗರವರ್ಣಿಯೂ ದೇವಚಂದ್ರನೂ ದೇವಪ್ಪನೂ ತಮ್ಮ ತಮ್ಮ ರಾಮಾಯಣಗಳಲ್ಲಿ ನಾಗಚಂದ್ರನನ್ನು ಅನುಸರಿಸಿದ್ದಾರೆ. ಅಷ್ಟೇಕೆ, ಉತ್ತಮ ಕಲಾವಿದನಾದ ಜನ್ನಕವಿಯಲ್ಲಿಯೂ ಅಲ್ಲಲ್ಲಿ ನಾಗಚಂದ್ರನ ಪ್ರಭಾವ ಕಂಡುಬರುತ್ತದೆ. ಆದ್ದರಿಂದ ನಾಗಚಂದ್ರನೇನೂ ಪ್ರಾಕೃತ ಸಂಸ್ಕೃತ ಕನ್ನಡ ಕವಿಗಳ ಹೆದ್ದಾರಿಯಲ್ಲಿ ಸಂಚರಿಸಿದ್ದಕ್ಕೋಸ್ಕರ ತಲೆ ತಗ್ಗಿಸಬೇಕಾಗಿಲ್ಲ, ಮುಂದೆ ನೋಡಿ ಹೆಮ್ಮೆಪಡಬೇಕಾಗಿಲ್ಲ. ತಾನು ಹಿಂದಿನವರಿಗೆ ಋಣಿಯೆಂದೂ ಮುಂದಿನವರಿಗೆ ಗಣಿಯೆಂದೂ ತಿಳಿದುಕೊಂಡರೆ ಸಾಕು. ಅವನಲ್ಲಿ ಈ ಅರಿವು ಪೂರ್ಣವಾಗಿದೆ. 'ಅಪ್ರತಿಮಪ್ರಭಾವರಪ್ಪಾದಿ ಕವೀಶ್ವರರ್ ನಡೆದ ಪದ್ಧತಿ'ಯಲ್ಲಿ ಕವಿತ್ವಯಾತ್ರೆಯನ್ನು ಕೈಕೊಂಡವನವನು; 'ಸಜ್ಜನ ಸಂಸ್ತವ'ವನ್ನು ಬಯಸಿದವನವನು. ಅವನಿಗೆ ಅದಕ್ಕೆ ಕೊರತೆಯೇನೂ ಇಲ್ಲ. ಬಾಯಿಬಿಟ್ಟು ಹೊಗಳುವುದೊಂದೇ ಸಂಸ್ತವವಲ್ಲ; ಅನುಕರಣೆಯೂ ಪ್ರಶಂಸೆಯೇ. ಅದೂ ಬೇಕಾದರೆ ಇಗೋ ಇಲ್ಲಿದೆ.—

'ಪೊಳಲೆನೆ ವಿಬುಧರ್ ತುಷ್ಟಿಯ
ನೊಳಕೆಯ್ದು ಮನಃಪ್ರಸಾದಮಂ ಪಡೆವುದಱಿಂ

ಕಳೆಯಂ ಚಂದ್ರಂ ಕವಿತಾ
ಕಳೆಯಂ ಕವಿನಾಗಚಂದ್ರನಾಂತುದೆ ಸಫಲಂ (ಮಧುರ)

ಇದರಲ್ಲಿ ಭಕ್ತಿಯ ಅತಿರೇಕದ ಅತ್ಯುಕ್ತಿ ಸ್ವಲ್ಪವಿದ್ದರೂ ನಾಗಚಂದ್ರನ ಯೋಗ್ಯತೆಗೆ ಇದು ತಕ್ಕ ಪ್ರಶಸ್ತಿ ಎಂಬುದರಲ್ಲಿ ಸಂದೇಹಪಡಬೇಕಾಗಿಲ್ಲ.

ನಾಗಚಂದ್ರನು ತನ್ನನ್ನು 'ಅಭಿನವಪಂಪ' ಎಂದು ಕರೆದುಕೊಂಡಿದ್ದಾನಷ್ಟೆ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ' ಆದ ಆ 'ಗುರು ಹಂಪದೇವನ'ನಲ್ಲಿ ತನಗಿದ್ದ ಭಕ್ತಿ ಗೌರವಗಳನ್ನು ನಮ್ರಶೀಲನಾದ ನಾಗಚಂದ್ರನು ಈ ರೀತಿ ತೋರಿಸಿಕೊಂಡಿರುವನು. ಇದನ್ನು ನೋಡಿದರೆ ಇಬ್ಬರಿಗೂ ಕಾವ್ಯಕರ್ಮದಲ್ಲಿ ಸಾದೃಶ್ಯವಿರಬೇಕೆಂದು ಹೊಳೆಯುವುದು. ಇಬ್ಬರೂ ಸಂಗ್ರಹಕಾರರು. ಪಂಪನು 'ಆದಿಪುರಾಣ ಮಹಾಭಾರತ'ಗಳನ್ನು ಸಂಗ್ರಹಮಾಡಿದ್ದರೆ 'ಅಭಿನವ ಪಂಪ'ನು ಜೈನ ರಾಮಾಯಣವನ್ನು ಸಂಗ್ರಹಿಸಿದನು.* ಸಂಗ್ರಹಕಾರನ ಶೈಲಿಯ ಬಿಗಿಯೂ ಆತುರಗತಿಯೂ ಪಂಪನಲ್ಲಿ ಉದ್ದಕ್ಕೂ ಇವೆ. 'ಅಭಿನವ ಪಂಪ'ನಲ್ಲಿಯೂ ಅಲ್ಲಲ್ಲಿ ಕಂಡುಬರುತ್ತವೆ. ಇಬ್ಬರೂ ಆ ಆ ಕಥೆಗಳ ಪ್ರಮುಖ ಸನ್ನಿವೇಶವೊಂದನ್ನೂ ಬಿಟ್ಟಿಲ್ಲ. ಪಂಪನು ದುರಂತ ದುರ್ಯೋಧನನನ್ನು ಚಿತ್ರಿಸಿದ್ದರೆ 'ಅಭಿನವ ಪಂಪ'ನು ದುರಂತ ರಾವಣನನ್ನು ಕುರಿತು ಹಾಡಿದ್ದಾನೆ.† ಈ ವಸ್ತುವನ್ನು ನಾಗಚಂದ್ರನು ಆರಿಸಿಕೊಂಡದ್ದೂ ಪಂಪನ ಪರೋಕ್ಷಪ್ರೇರಣೆಯಿಂದಲೇ ಎಂದು ಕಾಣುತ್ತದೆ. ಪಂಪನು ತನ್ನ ಕಾಲಕ್ಕೂ ಸಮಗ್ರಸಾಹಿತ್ಯಕ್ಕೂ ಆಚಾರ್ಯಪುರುಷನಾಗಿದ್ದರೆ 'ಅಭಿನವಪಂಪ'ನೂ ತನ್ನ ಕಾಲದ

* ಅವನ 'ಮಲ್ಲಿನಾಥ ಪುರಾಣ'ವು ಸಂಗ್ರಹ ಕಾವ್ಯವಲ್ಲ. ಭವ್ಯಜನಗಳು 'ಕಿಱಿದೀ ಕಥಾಪರಿಸ್ಪಂದಮಿದಂ ನಿಮಿರ್ಚಿ ಕವಿತಾರಸಮಂ ನೆಱೆ ಪೇೞ್ದರಿಲ್ಲ' ಎಂದು ನಾಗಚಂದ್ರನಿಗೆ ಹೇಳಿದ್ದರಿಂದ ಅವನು ಆ ಸಣ್ಣ ದಥೆಯನ್ನು ವಿಸ್ತರಿಸಿ ಬರೆದನು. ಆದರೆ ಇದು ಅಷ್ಟೇನೂ ಮುಖ್ಯವಾದದ್ದಲ್ಲ. ನಾಗಚಂದ್ರನ ಯಶಸ್ಸು ನಿಲ್ಲುವುದು ಅವನ ರಾಮಾಯಣದಿಂದ. ಪ್ರಾಕೃತದಲ್ಲಿರುವ ಹರಿಭದ್ರನ 'ಮಲ್ಲಿನಾಥ ಚರಿತ'ವೂ ವಿನಯಚಂದ್ರಸೂರಿಯ ಸಂಸ್ಕೃತ 'ಮಲ್ಲಿನಾಥ ಚರಿತ'ವೂ ನಾಗಚಂದ್ರನ ಕಾಲವಾದ ಮೇಲೆ ಹುಟ್ಟಿದವು.

† ರಾವಣನ ಪಾತ್ರದ ದುರಂತತೆಯ ಭಾವನೆ ನಾಗಚಂದ್ರನಿಗೆ ಬಂದದ್ದು ವಿಮಲಸೂರಿಯ 'ರಾಯಯಣ'ದಿಂದ. ಹಾಗೆಯೇ ಪಂಪನಿಗೂ ದುರಂತ ದುರ್ಯೋಧನನ ಚಿತ್ರ ಯಾವುದಾದರೂ ಜೈನ ಮಹಾಭಾರತದಿಂದ ಹೊಳೆದುಬಂದಿರಬಹುದೆ?

ಅತ್ಯುತ್ತಮ ಕವಿಯೂ ಸ್ವಲ್ಪಮಟ್ಟಿಗೆ ಅರ್ವಾಚೀನ ಕವಿಗಳಿಗೆ ಆದರ್ಶವ್ಯಕ್ತಿಯೂ ಆಗಿರುವನು. ಈ ಹೋಲಿಕೆ ಇಲ್ಲಿಗೆ ಮುಗಿಯುತ್ತದೆ. ಪಂಪನ ಪ್ರತಿಭೆಯು ಓಟವೂ ಸಮಷ್ಟಿಶಕ್ತಿಯೂ ಸೂಕ್ಷ್ಮದೃಷ್ಟಿಯೂ ಪ್ರಮಾಣಪರಿಜ್ಞಾನವೂ ಗಾಂಭೀರ್ಯವೂ ನಾಗಚಂದ್ರನ ಪಾಲಿಗೆ ಮುಗಿಲಮಲ್ಲಿಗೆ. ಸರಸ್ವತಿಯಿಂದ ಅಂಥ ವರವನ್ನು ಅವನು ಪಡೆಯಲಿಲ್ಲ. ಅಲ್ಲದೆ ಇನ್ನೊಂದು ವಿಷಯದಲ್ಲಿಯೂ ಅವನು ದುರದೃಷ್ಟಶಾಲಿ. ಪಂಪನಿಗೆ ರನ್ನನಂಥ 'ಕವಿಶಿಷ್ಯ'ನೊಬ್ಬನು ದೊರೆತನು. ನಾಗಚಂದ್ರನಿಗಾದರೆ ಸಿಕ್ಕಲಿಲ್ಲ. ರನ್ನನ ಪ್ರತಿಭೆ ತನ್ನ ಅತ್ಯುಚ್ಚ ಅನ್ವೇಷಣದಲ್ಲಿ ಮಾತ್ರ ಪಂಪನ ಪ್ರತಿಭೆಯ ಸಮಗ್ರಶಕ್ತಿಯ ಸಾರವಾಗಿತ್ತಲ್ಲದೆ ಅದಕ್ಕಿಂತಲೂ ಹೆಚ್ಚು ಜಾಜ್ವಲ್ಯಮಾನವಾದುದಾಗಿತ್ತು. ಇದರ ಪ್ರಭಾವದಿಂದ ಪಂಪನ ಮೂಲರೇಖಾವಿಲಸಿತವಾದ ಆ ದುರಂತ ದುರ್ಯೋಧನನ ಚಿತ್ರವು ಸಜೀವವಾದ ಅದ್ಭುತ ಕಲಾಸೃಷ್ಟಿಯಾಗಿ ಪರಿಣಮಿಸಿತು. ನಾಗಚಂದ್ರನಿಗೆ ಇಷ್ಟು ಚೈತನ್ಯವಿಲ್ಲ. ಅವನಿಗೆ ದೊರೆತದ್ದೂ ಅವನ ಕಾವ್ಯದಲ್ಲಿರುವುದೂ ಅತ್ಯುತ್ಕೃಷ್ಟ ಸಾಮಗ್ರಿ. ಅದನ್ನು ಮಥಿಸಿ ಕಲಾಸುಧೆಯನ್ನು ಹೊರಸೂಸುವ ಬೇರೊಬ್ಬ ರನ್ನನಂಥ ಕವಿ ಬರಬೇಕಾಗಿದೆ ಈಗ.

ರಸಮಂ ನಾಲಗೆ ಕವಿತಾ
ರಸಮಂ ಕವಿ ಕುಸುಮರಸಮನಳಿಮಾಳೆ ಸುಧಾ
ರಸಮಂ ಸುರರಕ್ಷಯಸುಖ
ರಸಮಂ ಪರಮಾತ್ಮನಱಿವನುಟಿದವರಱಿಯರ್

ಈ ಸಂಗ್ರಹವನ್ನು ಮಾಡುವಾಗಲೂ ಪೀಠಿಕೆ ಶಬ್ದಕೋಶಾದಿಗಳನ್ನೂ ಸಿದ್ಧಪಡಿಸುವಾಗಲೂ ಪಾಠಪರಿಶೋಧನೆಯಲ್ಲಿಯೂ ಮೊದಲಿಂದ ಕೊನೆಯವರೆಗೂ ಉಚಿತವಾದ ಅನೇಕ ಸಲಹೆಗಳನ್ನು ಕೊಟ್ಟು ಉಪಕಾರಮಾಡಿದ್ದಕ್ಕಾಗಿ ನನಗೆ ಪೂಜ್ಯರಾಗಿಯೂ ವಿದ್ಯಾಗುರುಗಳಾಗಿಯೂ ಇರುವ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಗೆ ನನ್ನ ಭಕ್ತಿಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ಪ್ರಾಕೃತದಲ್ಲಿ ನನಗೆ ಪ್ರಥಮ ಪ್ರವೇಶವನ್ನು ಮಾಡಿಕೊಟ್ಟು ಸಹಾಯಮಾಡಿದ ಆಸ್ಥಾನವಿದ್ವಾನ್ ಶ್ರೀಮಾನ್ ರಾಳ್ಲಪಲ್ಲಿ

ಅನಂತಕೃಷ್ಣಶರ್ಮರವರಿಗೂ ಪರಿಶಿಷ್ಟದಲ್ಲಿ ಕೊಟ್ಟಿರುವ ಪ್ರಾಕೃತಶ್ಲೋಕಗಳ ಕನ್ನಡ ತಾತ್ಪರ್ಯಾನುವಾದವನ್ನು ಸರಿನೋಡಿದ ಡಾ|| ಎ. ಎನ್. ನರಸಿಂಹಯ್ಯ, ಎಂ.ಎ., ಪಿಎಚ್.ಡಿ., ಎಲ್.ಟಿ. ಅವರಿಗೂ ಅಚ್ಚಿನ ಪ್ರತಿಗಳನ್ನು ವಿಶ್ವಾಸದಿಂದ ತಿದ್ದಿಕೊಟ್ಟ ನನ್ನ ಮಿತ್ರರಾದ ಶ್ರೀಮಾನ್ ಟಿ. ಎಸ್. ಶ್ರೀಕಂಠಯ್ಯ, ಎಂ.ಎ., ಅವರಿಗೂ ಕೃತಜ್ಞತೆಯನ್ನು ಸಲ್ಲಿಸುವುದು ನನ್ನ ಸಂತೋಷದ ಕರ್ತವ್ಯ. ಮುದ್ರಣಕಾರ್ಯವನ್ನೆಲ್ಲ ಶೀಘ್ರವಾಗಿಯೂ ಸಮರ್ಪಕವಾಗಿಯೂ ನೆರವೇರಿಸಿದ ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನ ಅಧಿಕಾರಿಗಳ ಸೌಜನ್ಯ ಸ್ಮರಣೀಯವಾಗಿದೆ.

ಡಿ. ಎಲ್. ಎನ್.

ಪರಿಶಿಷ್ಟ

“ ಪಉಮ ಚರಿಯ ”ದಿಂದ ರಾವಣನ ಪಾತ್ರಕ್ಕೆ ಸಂಬಂಧಪಟ್ಟ ಕೆಲವು ಭಾಗಗಳು

1 ಜೋ ತುಜ್ಝ ಪಢಮ ಪುತ್ತೋ, ಹೋಹೀ ಭದ್ದೋ ವಿಸಾಲ ಕಿತ್ತೀಓ
ಚಕ್ಕಹರಸರಿಸವಿಭವೋ, ಸುಚರಿಯಕಮ್ಮಾಣುಭಾವೇಣ ‖ ೭-೮೨
ಪಡಿವಕ್ಖಅಗಣಿಯಭಓ, ಸಿಚ್ಛಂ ರಣಕೇಲಿಕಲಹ ತಲ್ಲಿಚ್ಛೋ
ವರಕೂರಕಮ್ಮಕಾರೀ, ಹೋಹೀ ನತ್ಥೇತ್ಥ ಸಂದೇಹೋ ||—೮೩

. . . .

ಘೂಏಹಿ ದುಂದುಹೀಓ, ಪಹಯಾಓ ವಿವಿಹತೂರಮಾಸಾಓ
ಪಿಉಣಾ ಕಓ ಮಹಂತೋ, ವಿಹಿಣಾಜಮ್ಮೂಸವೋ ರಮ್ಮೋ ‖ ೭—೯೦

2 ಮರಗಯ ಮಊಹಸಾಮೋ, ವಿಯಸಿಯ ವರಕಮಲಸರಿಸಮುಹ [ಸೋಹೋ
ವಿಚ್ಛಿಣ್ಣ ವಿಉಲವಚ್ಛೋ, ಪೀಣಂಸ್ನಯ ದೀಹಬಾಹುಜುಓ || ೧೧-೧೦೪
ಕರಯಲ ಗಿಜ್ಝಮಜ್ಝೋ ಸೀಹಕಡೀ ಹಚ್ಛಿಹಚ್ಚಸರಿಸೋರೂ
ಕುಮ್ಮವರಚಾರುಚರಣೋ, ಬತ್ತಿಸ ಸುಲಕ್ಖಣ ಸಮಗ್ಗೋ ||—೧೦೬
ಸಿರಿವಚ್ಛಭೂಸಿಯಂಗೋ, ಸವ್ವಾಲಂಕಾರಸುಕಯನೇವಚ್ಛೋ
ಇಂದೋ ಇವ ಮಹಿಡ್ಢೀಓ, ದಿಟ್ಠೋ ಲೋಏಣ ದಹವಯಣೋ ||—

3 ದಿಟ್ಟಂ ರಕ್ಖಸವಇಣಾ, ತಂ ಸಯರಾ ಸವ್ವಓ ವಿಲುಪ್ಪಂತಂ [೧೦೭
ಸಿಗ್ಘಂ ದಯಾಲುಏಣಂ, ಸಿವಾರಿಯಂ ಪವರಪುರಿಸೇಣಂ ‖ ೧೯-೩೧
ಮುಕ್ಕೋ ಯ ವರುಣರಾಯಾ . . . . ,

4 ಠಇಊಣ ದೋವಿ ಕಣ್ಣೇ, ರಯಣಾಸವನಂದಣೋ ಭಣಇ ಏವಂ
ವೇಸಾ ಪರಮಹಿಲಾವಿವ, ನ ರೂವಮನ್ನಾ ವಿ ಪತ್ಥೇಮಿ ‖ ೧೨-೪೭
ಇಹಪರಲೋಯವಿರುದ್ಧಂ, ಪರದಾರಂ ವಜ್ಜಿಯವ್ವಯಂ ನಿಚ್ಚಂ
ಉಚ್ಛಿಟ್ಠಭೋಯಣಂ ಪಿ ವ, ನರೇಣ ದಢಸೀಲಜುತ್ತೇಣಂ ||—೪೮

5 ಲಂಕಾಹಿವೇಣ ಭಣಿಯಾ, ಉವರಂಭಾ ಮಹ ತುಮಂ ಗುರೂ ಭದ್ದೇ
ಜೋ ದೇಸಿ ಬಲಸಮಿದ್ಧಂ, ವಿಜ್ಜಂ ಆಸಾಲಿಯಂ ನಾಮಂ ‖೧೨-೬೯
ಉತ್ತಮ ಕುಲ ಸಂಭೂಯಾ, ಜಾಯಾ ವಿಯ ಸುಂದರೀಏ ಗಬ್ಬಮ್ಮಿ
ಕಾಸದ್ಧಯಸ್ಸ ದುಹಿಯಾ, ಸೀಲಂ ರಕ್ಖಂತಿಯಾ ಹೋಹಿ ‖—೭೦
ಅಜ್ಜ ವಿ ತುಜ್ಝ ಪಿಯಯಮೋ, ಜೀವಇ ಭದ್ದೇ ಸುರೂವಲಾಯಣ್ಣೋ
ಏಏಣ ಸಹ ವಿಸಿಟ್ಠೇ, ಭುಂಜಸು ಭೋಏ ಚಿರಂ ಕಾಲಂ ‖—೭೧

6 ಜಂ ಜಾ ವಚ್ಚಇ ದೇಸಂ, ಸೋ ಸೋ ವಿಯ ಸಗ್ಗಸನ್ನಿಹೋ ಹೋಇ
ಧಣಧನ್ನರಯಣಪುಣ್ಣೋ, ದುಬ್ಭಿಕ್ಖಭಯಾಇಪರಿಮುಕ್ಕೋ ‖ ೧೧-೧೦೯
ಪುಣ್ಣೇಣ ಪರಿಗ್ಗಹಿಯಾ ತೇ ದೇಸಾ ಪುವ್ವಜಮ್ಮಸುಕಏಣಂ
ಸಿರಿಕಿತ್ತಿಲಚ್ಛಿನಿಲಓ, ದಹವಯಣೋ ಜೇಸು ಸಂಚರಇ ‖—೧೧೦
ಹರಿಯತಣಸಾಮಲಂಗೀ, ಮಹಿವಿಲಯಾ ಸಲಿಲವಚ್ಛಪರಿಹಾಣೀ
ವರಕುಡಯಕುಸುಮದಂತೀ, ಹಸಇವ್ವ ದಸಾಣಣಾಗಮಣೇ ‖-೧೧೯

7 ನೇಮಿತ್ತಿಏಣ ಸಿಟ್ಠಂ, ಸಾಯರವಿಹಿಣಾ ಉ ರಾವಣಂ ಸಮರೇ
ಜಹದಹರಹಸ್ಸಪುತ್ತೋ, ಮಾರಿಹಿಇ ನ ಏತ್ಥಸಂದೇಹೋ ‖ ೨೩-೧೦
ಜಣಯದುಹಿಯಾನಿಮಿತ್ತಂ . . . .

8 ಅಹಸಹೋಮುಹಂ ನಿಯಂತೋ, ಪೇಚ್ಛಇ ಮೋಹಸ್ಸಕಾರೀಣೀ ಸೀ [ಯಾ
ಸವ್ವಂಗಸುಂದರಂಗೀ ಸುರವಇಮಹಿಲಂ ವ ರೂವೇಣಂ ‖ ೪೪-೩೦
ಮಯಣಾಣಲತವಿಯಂಗೋ, ಏಕ್ಕಮಣೋದಹಮುಹೋ ವಿಚಿನ್ತೇಇ
ಕಿಂ ಮಜ್ಝ ಕೀರಇ ಇಹಂ, ರಜ್ಜೇಣ ಇಮಾಏ ರಹಿಯಸ್ಸ ‖-೩೧
ಪರಿಚಿಂತಿಊಣ ಏವಂ, ತಾಹೇ ಆವಲೋಯಣಾಏ ವಿಜ್ಜಾಏ
ಜಾಣಇತಾಣದಹಮುಹೋ, ನಾಮಂ ಚರಿಯಂಚ ಗೋತ್ತಂ ಚ ‖-೩೨

9 ಸೋತತ್ಥ ವಿಮಾಣತ್ಥೋ, ವಚ್ಚಂತೋ ರಾವಣೋ ಜಣಯಧೂಯಂ
ದಟ್ಠೂ ಮಿಲಾಣವಯಣಂ, ಜಂಪಇ ಮಹುರಾಣಿ ವಯಣಾಣಿ ‖ ೪೬-೧
ಹೋಹಿ ಪಸನ್ನಾ ಸುಂದರಿ, ಮಂ ದಿಟ್ಠೀದೇಹಿ ಸೋಮಸಸಿವಯಣೇ
ಜೇಣಮಯಣಾಣಲೋ ಮೇ, ಪಸಮಇ ತುಹ ಚಕ್ಖುಸಲಿಲೇಣಂ ‖-೨

ಜಇ ದಿಟ್ಠಿಪಸಾಯಂ ಮೇ, ನ ಕುಣಸಿ ವರಕಮಲಪತ್ತದಲನಯಣೇ
ತೋ ಪಹಣಸುತ್ತಿವಂಗಂ, ಇಮೇಣ ಚಲಣಾರವಿಂದೇಣಂ ||—೩

10 ಹಾ ಭಾಣುಯಣ್ಣವಚ್ಛಯ, ನಿಚ್ಚಂಚಿಯ ಮಹ ಹಿಉಜ್ಜಓಸಿ ತುಮಂ
ಕಹ ಬಂಧಣಮ್ಮಿ ಪತ್ತೋ, ವಿಹಿಪರಿಣಾಮೇಣ ಸಂಗಾಮೇ || ೬೩-೨
ಹಾ ಪುತ್ತ ಮೇಹವಾಹಣ, ಇಂದಇ ಸುಕುಮಾಲಕೋಮಲಸರೀರಾ
ಕಹ ವೇರಿಯಾಣ ಮಜ್ಝೇ, ಚಿಟ್ಠಹ ಅಇದುಕ್ಖಿಯಾ ಬದ್ಧಾ ||—೩
ಬದ್ಧಾಣ ಅಸರಣಾಣಂ, ಕಾಲಗಏ ಲಕ್ಖಣೋ ಸಸೋಗತ್ತಾ,
ಮಹ ಪುತ್ತಾಣ ರಿವುಭಡಾ, ನ ಯ ಸಜ್ಜಇ ಕಿಂ ಪಿ ಕಾಹಿಂತಿ ||—೪

11 ಸಾ ಏವ ಉಸ್ಸುಯಮಣಾ, ಸೀಯಾ ಲಂಕಾಹಿವೇಣ ತೋ ಭಣಿಯಾ
ಪಾವೇಣ ಮಏ ಸುಂದರಿ, ಹರಿಯಾ ಛಮ್ಮೇಣ ವಿಲವಂತೀ || ೬೯-೨೨
ಗಹಿಯಂ ವಯಂ ಕಿಸೋಯರಿ, ಅಣಂತವಿರಿಯಸ್ಸ ಪಾಯಮೂಲಮ್ಮಿ
ಅಪಸನ್ನಾ ಪರಮಹಿಲಾ, ನ ಭುಂಜಿಯವ್ವಾ ಮಯೇ ನಿಯಯಂ ||-೨೩
ಸುಮರಂತೇಣ ವಯಂ ತಂ, ನ ಮಏ ರಮಿಯಾ ತುಮಂ ವಿಸಾಲಚ್ಛೀ
ರಮಿಹಾಮಿ ಪುಣೋ ಸುಂದರಿ, ಸಂಪಇ ಆಲಂಬಣಂ ಭೇತ್ತುಂ ||-೨೪
ಪುಪ್ಫವಿಮಾಣಾರೂಢಾ, ಪೇಚ್ಛಸು ಸಯಲಂ ಸಕಾಣಣಂ ಪುಹಇಂ
ಭುಂಜಸು ಉತ್ತಮ ಸೋಕ್ಖಂ, ಮಜ್ಝಪಸಾಏಣ ಸಸಿವಯಣೇ ||-೨೫
ಸುಣಿಊಣ ಇಮಂ ಸೀಯಾ, ಗಗ್ಗರಕಂಠೇಣ ಭಣಇ ದಹವಯಣಂ
ನಿಸುಣೇಹಿ ಮಜ್ಝ ವಯಣಂ, ಜ ಇ ಮೇ ನೇಹಂ ಸಮುವ್ವಹಸಿ ||-೨೬
ಘಣಕೋವವಸಗಏಣ ವಿ, ಪಉಮೋ ಭಾಮಂಡಲೋ ಯ ಸಂಗಾಮೇ
ಏಏ ನ ಘಾಇಯವ್ವಾ, ಲಂಕಾಹಿವ ಅಹಿಮುಹಾವಡಿಯಾ ||—೨೭
ತಾವ ಯ ಜೀವಾಮಿ ಅಹಂ, ಜಾವ ಯ ಏಯಾಣ ಪುರಿಸ ಸೀಹಾಣಂ
ನ ಸುಣೇಮಿ ಮರಣ ಸದ್ದಂ, ಉಚ್ಚಯಣಿಜ್ಜಂ ಅಯಣ್ಣಸುಹಂ ||-೨೮

12 ಸಾ ಜಂಪಿಊಣ ಏವಂ, ಪಡಿಯಾ ಧರಣೀಯಲೇ ಗಯಾ ಮೋಹಂ
ದಿಟ್ಠಾ ಯ ರಾವಣೇಣಂ, ಮರಣಾವತ್ಥಾ ಪಯಲಿಯಂಸೂ ||-೨೯
ವಿಲುಮಾಣಸೋ ಖಣೇಣಂ, ಜಾಓ ಪರಿಚಿಂತಿಉಂ ಸಮಾಢತ್ತೋ
ಕಮ್ಮೋಯ ಏಣಬದ್ಧೋ, ಕೋವಿ ಸಿಣೇಹೊ ಅಹೊ ಗರುಓ ||-೩೦

ದಿದ್ಧಿತ್ತಿ ಗರಹಣಿಜ್ಜಂ, ಪಾವೇಣ ಮಏ ಇಮಂ ಕಯಂ ಕಮ್ಮಂ
ಅನ್ನೋನ್ನ ಪೀಇಪಮುಹಂ, ವಿಓಇಯಂ ಜೇಣಿಮಂ ಮಿಥುಣಂ ||-೩೧
ಸಸಿಪುಂಡರೀಯಧವಲಂ, ನಿಯಯಕುಲಂ ಉತ್ತಮಂ ಕಯಂ ಮಲಿಣಂ
ಪರಮಹಿಲಾ ಏ ಕಏಣಂ, ವಮ್ಮಹಅಣಿಯತ್ತಚಿತ್ತೇಣಂ||—೩೨
ದಿದ್ಧೀ ಅಹೋ ಅಕಜ್ಜಂ, ಮಹಿಲಾ ಜಂ ತತ್ಥ ಪುರಿಸಸೀಹಾಣಂ
ಅವಹಾರಿಊಣ ವಣಾಓ, ಇಹಾಣಿಯಾ ಮಯಣಮೂಢೇಣಂ ||—೩೩
ನರಯಸ್ಸ ಮಹಾವೀಹೀ, ಕಢಿಣಾ ಸಗ್ಗಗ್ಗಲಾ ಅಣಯಭೂವಿಾ
ಸರಿಯ ವ್ವ ಕುಡಿಲಹಿಯಯಾ, ವಜ್ಜೇಯವ್ವಾ ಹವಇ ನಾರೀ ||—೩೪
ಜಾ ಪಢಮದಿಟ್ಟಸಂತೀ, ಅನುಏಣ ವ ಮಜ್ಝ ಫುಸೆಇ ಅಂಗಾಇಂ
ಸಾ ಪರಮಸತ್ತಚಿತ್ತಾ, ಉಚ್ಛಿಯಣಿಜ್ಜಾ ಇಹಂ ಜಾಯಾ||—೩೫
ಜಇ ವಿ ಯ ಇಚ್ಛೇಜ್ಜ ಮಮಂ, ಸಂಪಇ ಏಸಾ ವಿಮುಕ್ಕಸಬ್ಭಾವಾ
ತಹ ವಿ ಯ ನ ಜಾಯಇ ಧಿಈ, ಅವಮಾಣಸುದೂಮಿಯಮಣಸ್ಸ ||—೩೬
ಭಾಯಾ ಮೇ ಆಸಿ ಜಯಾ, ವಿಭೀಸಣೋ ನಿಯಯಮೇವ ಅಣುಕೂಲೋ
ಉವಏಸಪರೋ ತಇಯಾ, ನಮಣೋ ಪೀಇಂ ಸಮಲ್ಲೀಣೋ ||—೩೭
ಬದ್ಧಾಯ ಮಹಾ ಸುಹಡಾ, ಅನ್ನೇ ವಿ ವಿವಾಇಯಾ ಪವರಜೋಹಾ
ಅವಮಾಣಓ ಯ ರಾವೋ, ಸಂಪಇ ಮೇ ಕೇರಿಸೀ ಪೀಈ ||—೩೮
ಜಇ ವಿ ಸಮಪ್ಪೇಮಿ ಅಹಂ, ರಾಮಸ್ಸ ಕಿವಾಏ ಜಣಯನಿವತಣಯಾ
ಲೋಓ ದುಗ್ಗಹಹಿಯಓ, ಅಸತ್ತಿಮಂತಂ ಗಣೇಹೀ ಮೇ ||—೩೯
ಇಹ ಸೀಹಗರುಡಕೇಊ, ಸಂಗಾಮೇ ರಾಮಲಕ್ಖಣೇ ಜಿಣಿಉಂ
ಪರಮವಿಭವೇಣ ಸೀಯಾ, ಪಚ್ಛಾ ತಾಣಂ ಸಮಪ್ಪೇಹಂ ||—೪೦
ನ ಯ ಪೋರುಸಸ್ಸ ಹಾಣೀ, ಏವ ಕಏ ನಿಮ್ಮಲಾ ಯ ಮೇ ಕಿತ್ತೀ
ಹೋಹಇ ಸಮತ್ಥಲೋಏ, ತಮ್ಹಾ ವವಸಾಮಿ ಸಂಗಾಮಂ ||—೪೧

13 ಸೋ ಏವ ಭಣಿಯಮೆತ್ತೋ, ಜಂಪಇ ಲಂಕಾಹಿವೋ ಪರಮರುಟ್ಠೋ
ಲಹು ಗಚ್ಛ ಗಚ್ಛ ಪಾವೇ, ಜತ್ಥ ಮುಹಂ ತೇ ನ ಪೇಚ್ಛಾಮಿ || ೭೦-೩೨

14 ದಟ್ಠೂಣ ಚಕ್ಕಪಾಣಿಂ, ಸೋಮಿತ್ತೀ ರಾವಣೋ ವಿಚಿಂತೇಇ
ತಂ ಸಂಪಇ ಸಂಪನ್ನಂ, ಅಣಂತವಿರಿಏಣ ಜಂ ಭಣಿಯಂ || ೭೩-೫

ಸಾಯರಸಲಿಲಸಮತ್ಥಾ, ಹಿಮಗಿರಿವಿಜ್ಝತ್ಥಲೀ ಪುಹಇ ನಾರೀ
ಆಣಾಪಣಾಮಕಾರೀ, ದಾಸಿವ್ವ ಮಹಂ ಪಸೇ ಆಸಿ ||—೭
ಸೋ ಹಂ ಮಣುಏಣ ಕಹಂ, ಜಿಣಿಊಣಾಲೋಇಓ ದಸಗ್ಗೀವೋ
ವಟ್ಟಇ ಇಮಾ ಅವತ್ಥಾ, ಕಿಂ ನ ಹು ಅಚ್ಛೇರಯಂ ಏಯು ||—೮
ದಿದ್ಧಿತ್ತಿ ರಾಯಲಚ್ಛೀ, ಅದೀಹಪೇಹೀ ಮುಹುತ್ತರಮಣಿಜ್ಜಾ
ಪರಿಚಇಊಣಾಢತ್ತಾ, ಏಕ್ಕಪಏ ದುಜ್ಜಣಸಹಾವಾ ||—೯
ಕಿಂಪಾಗಫಲಸರಿಚ್ಛಾ, ಭೋಗಾ ಪಚ್ಛಾ ಹವಂತಿ ವಿಸಕಡುಯಾ
ಬಹುದುಕ್ಖದೋಗ್ಗಇಕರಾ, ಸಾಹೂಣಂ ಗರಹಿಯಾ ನಿಚ್ಚಂ ||—೧೦
ಭರಹಾಇಮಹಾಪುರಿಸಾ, ಧನ್ನಾ ಜೇ ಉಜ್ಝಿಊಣ ರಾಯಸಿರೀ
ನಿಕ್ಖಂತಾ ಚರಿಯ ತವಂ, ಸಿವಮಯಲಮಣುತ್ತರಂ ಪತ್ತಾ ||—೧೧
ಸೋ ಕಹ ಮೋಹೇಣ ಜಿಓ, ಅಹಯಂ ಸಂಸಾರದೀಹಜಣಏಣಂ
ಕಿಂ ವಾ ಕರೇಮಿ ಇಣ್ಹಿಂ, ಉವಟ್ಠಿಏ ಪಡಿಭಏ ಘೋರೇ ||—೧೨
ಅಇಮಾಣಿಣಸ್ಸ ಏತ್ತೋ, ಲಂಕಾಹಿವಇಸ್ಸ ಅಹಿಮುಹಸ್ಸ ರಣೇ
ಚಕ್ಕೇಣ ತೇಣ ಸಿಗ್ಘಂ, ಭಿನ್ನಂ ವಚ್ಛತ್ಥಲಂ ವಿಉಲಂ || ೭೩-೨೭
ಚಂಡಾಣಿಲೇಣ ಭಗ್ಗೋ, ತಮಾಲಘಣಕಸಿಣಅಲಿಉಲಾವಯವೋ
ಅಂಜಣಗಿರಿ ವ್ವ ಪಡಿಓ, ದಹವಯಣೋ ರಣಮಹೀವಟ್ಟೇ ||—೨೮
ಸುತ್ತೋವ್ವಕುಸುಮಕೇಊ, ನಜ್ಜಇ (ನಿಜ್ಜಿಅ) ದೇವೋವ್ವ ಮಹೀಯಲೇ [ಪಡಿಓ
ರೇಹಇ ಲಂಕಾಹಿವಈ, ಅತ್ಥಗಿರಿತ್ಥೋವ ದಿವಸಯರೋ ||—೨೯

ಗ್ರಂಥಪಾಠ

ಕರ್ಣಾಟಕ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಪಂಪರಾಮಾಯಣ' ವನ್ನಿಟ್ಟುಕೊಂಡು ಈ ಸಂಗ್ರಹ ಕಾವ್ಯವನ್ನು ಸಿದ್ಧಮಾಡಿದೆ. ಅಲ್ಲಿ ಕೊಟ್ಟಿರುವ ಪಾಠಾಂತರಗಳಲ್ಲಿ ಕೆಲವು ಹೆಚ್ಚು ಸಮರ್ಪಕವಾಗಿದ್ದಂತೆ ತೋರಿದ್ದರಿಂದ ಅವುಗಳನ್ನು ಇಲ್ಲಿ ಮೂಲಪಾಠವನ್ನಾಗಿ ಅಂಗೀಕರಿಸಿದೆ. 'ಹಿಂದಿರುಗು' ಎಂಬರ್ಥದಲ್ಲಿ ಬರುವ 'ಮಗಳ್' ಎಂಬ ಶಬ್ದ ಱಾಂತವೆಂದು ಪರಿಗಣಿತವಾಗಿ ಹಾಗೆಯೇ ಸಾಧಾರಣವಾಗಿ ಅಚ್ಚಾಗುತ್ತಿದ್ದರೂ ಱಾಂತವಾದ 'ಮಗುಱ್—ಮಗಿಱ್' (ತಮಿಳು) ಎಂಬುದನ್ನು 'ಸಂತೋಷಪಡು, ನಲಿದಾಡು' ಎಂಬರ್ಥದಲ್ಲಿ ಉಪಯೋಗಿಸಿರುವುದು ಕನ್ನಡದಲ್ಲಿಯೂ ಕಂಡುಬರುವುದರಿಂದ, ಎರಡಕ್ಕೂ ಭೇದವನ್ನು ತೋರಿಸುವುದು ಆವಶ್ಯಕವೆಂದು ಪ್ರಧಾನ ಸಂಪಾದಕರು ಸೂಚಿಸಿದ ಪ್ರಕಾರ, ಇಲ್ಲಿ 'ಹಿಂದಿರುಗು' ಎಂಬರ್ಥದಲ್ಲಿ ಕುಳವನ್ನೇ ಉಪಯೋಗಿಸಿದೆ.

ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್

ಎರಡನೆಯ ಮುದ್ರಣದ ಮುನ್ನುಡಿ

ಈ ಸಂಗ್ರಹದ ಮೊದಲ ಮುದ್ರಣದಲ್ಲಿದ್ದ ಕೆಲವು ಸ್ಖಾಲಿತ್ಯಗಳನ್ನು ಇಲ್ಲಿ ಸರಿಮಾಡಿದೆ. ಕವಿಯ ಕಾಲದ ವಿಚಾರವಾಗಿ ಶ್ರೀಮಾನ್ ಗೋವಿಂದ ಪೈಗಳು ಬರೆದಿರುವ ಲೇಖನಗಳನ್ನು ನೋಡಿ ಅದರ ನಿರ್ಣಯವನ್ನು ಸಮರ್ಥನೆ ಮಾಡಿದೆ ಇಲ್ಲಿ. ಈ ಸಂಗ್ರಹವನ್ನು ಕುರಿತು ಬಂದಿರುವ ವಿಮರ್ಶೆಗಳಲ್ಲಿ ಡಾ|| ಎ. ಎನ್. ಉಪಾಧ್ಯೆ, ಎಂ.ಎ., ಡಿ.ಲಿಟ್., ಅವರ ವಿಮರ್ಶೆಯೂ (Oriental Literary Digest, Vol. I, No. 4, October, 1937) ಶ್ರೀಮಾನ್ ದ. ರಾ. ಬೇಂದ್ರೆ ಅವರ ವಿಮರ್ಶೆಯೂ (ಪ್ರ.ಕ. XIX, ಸಂ. ೧, ಪು. ೯೮-೧೦೨) ಗಮನಾರ್ಹವಾಗಿವೆ. ಇವರಿಬ್ಬರೂ ಕೊಟ್ಟಿರುವ ಕೆಲವು ಸೂಚನೆಗಳನ್ನು ಇಲ್ಲಿ ಕೃತಜ್ಞತೆಯಿಂದ ಅಂಗೀಕರಿಸಿದೆ. ಈ ಮುದ್ರಣದ ಕಾರ್ಯದಲ್ಲಿ ಎಲ್ಲ ರೀತಿಗಳಿಂದಲೂ ನನಗೆ ನೆರವುಕೊಟ್ಟ ನನ್ನ ವಿದ್ಯಾಗುರುಗಳಾದ ಪ್ರೊ|| ಎ. ಆರ್. ಕೃಷ್ಣಶಾಸ್ತ್ರೀ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಡಿ. ಎಲ್. ಎನ್.

ಪಂಪರಾಮಾಯಣ ಸಂಗ್ರಹ

೧. ರಾಮಲಕ್ಷ್ಮಣರ ಜನನಂ

ಶ್ರೀಕೇಳೀನಿಲಯಂ ನಿಜಾಂಘ್ರಿಕಮಲಂ ವಿದ್ಯಾನಟೀ ನಾಟ್ಯವೇ
ದೀಕಲ್ಪಂ ಮುಖಚಂದ್ರಬಿಂಬಮಖಿಲೇಂದ್ರೋತ್ತಂಸ ಮಾಣಿಕ್ಯ ದೀ
ಪಾಕೀರ್ಣಂ ಹರಿಪೀಠಪಾರ್ಶ್ವಮೆನಿಪಂ ಪೂಜಾರ್ಹನಾರ್ಹಂತ್ಯ ಲ
ಕ್ಷ್ಮೀಕಾಂತಂ ಮುನಿಸುವ್ರತಂ ನಮಗೆ ಪೂಟ್ಕಿಷ್ಟಾರ್ಥ ಸಂಸಿದ್ಧಿಯಂ ೧

ಪರಮಬ್ರಹ್ಮ ಶರೀರಪುಷ್ಟಿ ಜನತಾಂತದೃಷ್ಟಿ ಕೈವಲ್ಯ ಬೋ
ಧ ರಮಾ ಮೌಕ್ತಿಕಹಾರಯಷ್ಟಿ ಕವಿತಾವಲ್ಲೀ ಸುಧಾವೃಷ್ಟಿ ಸ
ರ್ವ ರಸೋತ್ಪಾದ ನವೀನಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗಸುಂ
ದರಿ ವಿದ್ಯಾನಟಿ ನಾಟಕಂನಲಿಗೆ ಮತ್ಕಾವ್ಯಸ್ಥಲೀ ರಂಗದೊಳ್ ೨

ಉಪದೇಶಂಗೆಯ್ದು ಕಾವ್ಯಚ್ಛಲದಿನಖಿಲಧರ್ಮಂಗಳಂ ಲೋಕಮಂ ಧ
ರ್ಮಪಥ ಪ್ರಸ್ಥಾನದೊಳ್ ಯೋಜಿಸಿ ಪರಮಪುರಾಣಂಗಳಂ ಪೇೞ್ದು ಕಲ್ಪಾಂ
ತ ಪರೀತ ಖ್ಯಾತಿಯಂ ತಾಳ್ದಿದ ಪರಮಕವಿಜ್ಯೇಷ್ಠರಾದರ್ ತದೀಯಾಂ
ಘ್ರಿಪಯೋಜಂಗಳ್ ಮದೀಯಾಶಯಮಣಿಭವನಕ್ಕಕ್ಕೆ ಪುಷ್ಪೋಪಹಾರಂ ೩

ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತರಾಘವಂ
ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತು ಕಾ
ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತುಪಾ
ದೇಯಮೆನಿಸಿಕ್ಕುಮೇ ವಿಷಯಮೊಪ್ಪದೊಡಾವುದ-ಮೊಪ್ಪಲಾರ್ಕುಮೇ ೪

ವಿಪುಲಾಚಲದೊಳ್ ವೀರಜಿ
ನಪಾರ್ಶ್ವದೊಳ್ ಗೌತಮಂ ಗಣಾಗ್ರಣಿ ಮಗಧಾ
ಧಿಪನಱಿಯೆ ನೆಱಿಯೆ ಪೇೞ್ದುದ
ನ‍ಪೂರ್ವಮೆನೆ ರಾಮಕಥೆಯನಭಿವರ್ಣಿಸುವೆಂ ೫

ನಾಡೊಳ್ ಕೌಶಲದೇಶವೊಂದೆ ಪುರದೊಳ್ ಸಾಕೇತವೊಂದೀಕ್ಷಣ
ಕ್ರೀಡಾವಾಸಮೆನಲ್ ಪುರಂದರನಲಂಪಿಂ ನಾಭಿರಾಜಂಗವಂ
ಮಾಡಿಟ್ಟಂ ಕರುವಿಟ್ಟು ಮನ್ಮಥನೆ ಬಣ್ಣಂಗೆಯ್ದನೆಂದೆಂದೊಡಾ
ನಾಡಂ ಬೀಡುಮನೊಂದೆ ನಾಲಗೆಯೊಳಿನ್ನೇವಣ್ಣಿಪಂ ಬಣ್ಣಿಪಂ ೬

ಜೀಡು ಸುಕೃತಕ್ಕೆ ಚೆಲ್ವಿಂ
ಗಾಡುಂಬೊಲನಾಶ್ರಯಂ ಸುಖಕ್ಕೆನೆ ಪೆಱತೇಂ
ನಾಡಾಡಿಯ ನಾಡಲ್ಲದು
ನಾಡೊಳಗುತ್ಕೃಷ್ಟಮಲ್ತೆ ಕೌಶಲ ದೇಶಂ ೭

ಆ ವಿಷಯ ವಿಲಾಸಿನಿಗೆ ಮಣಿಮಯ ಮುಕುರವೆನಿಸಿ

ಕಣ್ಣೆಮೆಯಿಕ್ಕದಾಱು ಋತುವುಂ ಬನಮಂ ಸಿರಿ ಕೆಯ್ವೊಲಂಗಳಂ
ಕಣ್ಣೆಮೆಯಿಕ್ಕದಲ್ಲಿ ಪಥಿಕರ್ ಗಿಳಿಸೋವಬಲಾ ಜನಂಗಳಂ
ಕಣ್ಣೆಮೆಯಿಕ್ಕದೀಕ್ಷಿಸೆ ಪುರಂ ಸುರಲೋಕಮನೇಕೆ ಱಿಕ್ಕಟಂ
ಕಣ್ಣೆಮೆಯಿಕ್ಕದೆಂದು ನಗುಗುಂ ನಿಜರತ್ನಗೃಹಾಂಶು ಜಾಲದಿಂ ೮

ಅಂತತಿಶಯಮೆನಿಪಯೋಧ್ಯಾಪುರದಧಿಪತಿ

ಮನುಚೂಡಾಮಣಿ ನಾಭಿ ನಾಭಿಸುತನಾದಿಬ್ರಹ್ಮನಾ ಬ್ರಹ್ಮನಂ
ದನನಾರ್ಗಂ ಮಿಗಿಲಾದನಾದಿ ಭರತಂ ಷಟ್ಖಂಡ ಭೂನಾಥನಾ
ಮನುಜೇಂದ್ರಾತ್ಮಜನರ್ಕಕೀರ್ತಿ ನೆಗಟ್ದಂ ತದ್ವಂಶಮತ್ಯಂತ ಪಾ
ವನಮತ್ಯುನ್ನತಮಾಯ್ತು ಸದ್ಗುಣಪತಾಕಾ ವಂಶವೆಂಬನ್ನೆಗಂ ೯

ನೆಲನಂ ಮರ್ಯಾದೆಯಿಂ ಪಾಲಿಸಿ ನಿಯಮಿಸಿ ವರ್ಣಾಶ್ರಮಾಚಾರಮುಂ ದೋ
ಷಲವಂ ಮೆಯ್ವೆರ್ಚದಂತಿಂದ್ರಿಯಸುಖಮೊದವಂ ತೀರ್ಚಿ ಸಾಮ್ರಾಜ್ಯದೊಳ್ ಮು
ನ್ನಲಿದಲ್ಲಿಂದತ್ತಲಾತ್ಯಂತಿಕ ಸುಖಪದಮಂ ಪೆತ್ತ ರಾಜಾಧಿರಾಜರ್
ಪಲರಿಂದಿಕ್ಷ್ವಾಕುವಂಶಂ ಕುಲನದಿಯವೊಲಾಯ್ತವ್ಯವಚ್ಛಿನ್ನರೂಪಂ ೧೦

ಆ ವಂಶದೊಳ್ ವಿನೀತಾಪುರಮನಾಳ್ವನನರಣ್ಯನೆಂಬರಸನಾ ವಸುಧಾ
ವಲ್ಲಭನ ಮನೋವಲ್ಲಭೆ

ಕಡುಚೆಲ್ವಿಂ ರತಿಗೆಗ್ಗಂ
ಪಡೆದು ವಿಲಾಸಕ್ಕೆ ದೇಸಿವಡೆದವನಿಪನೊಳ್
ಪಡೆದು ಪಿರಿಯರಸಿತನಮಂ
ಪಡೆದಳ್ ತನಯರಸನಂತರಥ ದಶರಥರಂ ೧೧

ಆ ಮಹಾದೇವಿಯೊಳಖಿಲ ಪೃಥ್ವೀವಲ್ಲಭಂ ಧರ್ಮಾರ್ಥ ವಿರುದ್ಧಮಾಗ ದಂತು ವಿಷಯಸುಖಮನನುಭವಿಸುತ್ತಿರ್ದೊಂದು ದಿವಸಂ

ಭುವನಸ್ತುತ್ಯಪದಂ ಸಹಸ್ರಕಿರಣಂ ಸ್ವರ್ಭಾನುವಿಂದಂ ಪರಾ
ಭವಮಂ ಪೊರ್ದುವವೊಲ್ ಸಹಸ್ರಕಿರಣಂ ಮಾಹಿಷ್ಮತೀವಲ್ಲಭಂ
ಬವರಂಗೆಯ್ದು ದಶಾನನಂಗೆ ರಣದೊಳ್ ಸೋಲ್ತೇವದಿಂ ಕ್ಷತ್ರಪು
ತ್ರವರೇಣ್ಯಂ ಜಿನದೀಕ್ಷೆಗೊಂಡನನರಣ್ಯಂ ಕೇಳ್ದನಾ ವಾರ್ತೆಯಂ ೧೨

ಅಂತು ಕೇಳ್ದದುವೆ ತನಗೆ ನಿರ್ವೇಗನಿಮಿತ್ತಮಾಗೆ ಅನಂತರಥಂಗೆ

ಪಡೆದೆಂ ನಿನ್ನನ್ನನಂ ರಕ್ಷಿಸಲಖಿಲಧರಾಚಕ್ರಮಂ ಪುತ್ರ ನೀಂ ಬೆ
ಳ್ಗೊಡೆಯಂ ಕಯ್ಕೊಳ್ ಧರಾಭಾರಮನಿಟಿಪೆನಗೆಂದಂಗೆ ದಂತಾಂಶುಜಾಲಂ
ಕುಡಿಮಿಂಚಂ ಬೀಱೆ ಕಯ್ಯಂಮುಗಿದು ನುಡಿದನೇಮಾತೊ ನಿರ್ವಾಣಮಾರ್ಗ
ಕ್ಕೊಡಸಲ್ವೆಂ ನಿಮ್ಮ ಚಿತ್ತಕ್ಕೆಡಱಿದ ನೆಲನಂ ದೇವ ಕಯ್ಕೊಳ್ವನಲ್ಲೆಂ ೧೩

ಎಂದು ತನ್ನೊಡನೆ ತಪಂಬಡಲೊಡಂಬಟ್ಟು ತಱಿಸೆಂದು ನುಡಿವುದು ಮೊಂದುತಿಂಗಳ ಮಗನಪ್ಪ ದಶರಥಂಗೆ ಪಟ್ಟಂಗಟ್ಟಿ ತಾನುಮನಂತರಥನುಂ ತಪಂಬಟ್ಟು

ಅನರಣ್ಯಂ ಮುಕ್ತಿ ಶ್ರೀ
ವನಿತಾ ವರನಾದನಂತನಂತರಥಂ ಚಿ
ತ್ತನಿರೋಧ ದಗ್ಧ ಕರ್ಮೇಂ
ಧನಭಾರನನಂತವೀರ್ಯಕೇವಲಿಯಾದಂ ೧೪

ಇತ್ತಲ್

ಎಳನೇಸಱಂತೆ ಜಗಮಂ
ಬೆಳಗಿದನೆಳದಿಂಗಳಂತೆ ಸಕಳ ಧರಿತ್ರೀ
ತಳಮನೆಱಗಿಸಿದನೆಳವೆಯೊ
ಳಿಳೆ ಬಣ್ಣಿಸೆ ದಶರಥಂ ಭಗೀರಥ ಚರಿತಂ ೧೫

ಓದಿದೊಡೇಸರಗಿಳಿ ಕ
ಲ್ತೋದುವವೊಲ್ ಧರ್ಮಶಾಸ್ತ್ರಮಂ ದಶರಥನಂ
ತೋದಿ ತಿಳಿದವನಿಪತಿ ಮ
ರ್ಯಾದೆಯೊಳೆಸಗುವುದು ಧರ್ಮಪರನೆನೆ ಲೋಕಂ ೧೬

ಮನಮೆಳದಾಗೆ ವೈರಿಗೆ ಮನೀಷಿಜನಂ ಮನಮಾಯೆ ಮಾನಿನೀ
ಜನಮಭಿಮಾನಮುಂ ಮಱಯೆ ಭೂಭುವನ ಸ್ತವನೀಯಮಾದುದಾ
ತನ ಬಲಗಯ್ಯೊಳಿರ್ಪ ಜಯಲಕ್ಷ್ಮಿಗಮಾತನ ಸೋಲ್ಗೊಳಿರ್ಪ ವಾ
ಗ್ವನಿತೆಗಮಾ ಮಹೀಪತಿಗಮಪ್ರತಿಮಂ ಪರಿಪೂರ್ಣ ಯೌವನಂ ೧೭

ಅಂತು ದಶರಥನರನಾಥಂ ನವಯೌವನ ಲಕ್ಷ್ಮಿಯನಪ್ಪುಕಯ್ದು ಅಪರಾಜಿತೆಯುಂ ಸುಮಿತ್ರೆಯುಂ ಸುಪ್ರಭೆಯುಂ ತನಗೆ ಮನೋನಯನ ವಲ್ಲಭೆಯರೆನಿಸೆ

ನೀರೊಳಗಿರ್ದುಂ ಪೊರ್ದದು
ನೀರಂ ನೀರೇಜಮೆಂಬವೋಲಬಲಾ ಶೃಂ
ಗಾರ ರಸಮಗ್ನನಾಗಿಯು
ಮಾರಳವೆನೆ ತಳೆದನರಸನಿಂದ್ರಿಯ ಜಯಮಂ ೧೮

ಕುಳಭೂಭೃತ್ಕೂಟದೊಳ್ ಮಾಣಿಕದೆಳವಿಸಿಲೆಂತಂತೆ ದಿಕ್ಕುಂಭಿ ಕುಂಭ
ಸ್ಥಳದೊಳ್ ಸಿಂದೂರಮೆಂತಂತಮರನದಿಯೊಳಾರಕ್ತ ನೀರೇಜಪತ್ರಾ
ವಳಿಯೆಂತಂತಬ್ಧಿಯೊಳ್ ವಿದ್ರುಮ ಸಮುದಯಮೆಂತಂತೆ ಪರ್ವಿತ್ತು ರಾಗಾ
ವಿಳಮಪ್ಪಂತುರ್ವಿಯೆಲ್ಲಂ ದಶರಥ ವಸುಧಾಧೀಶ ತೇಜಃಪ್ರಕಾಶಂ ೧೯

ಬಾಳ ಬಿಸಿಲಿನನ ತೇಜಮು
ನೇಳಿಸೆ ನೆಲಸಂ ಪಯೋಧಿಪರ್ಯಂತಂ ಬಾ

ಯ್ಕೇಳಿಸಿ ದಶರಥನೊಳ್ಪಂ
ಪಾಳಿಸಿ ಸುಖದಿಂದಮರಸುಗೆಯ್ಯುತ್ತಿರ್ದಂ ೨೦

ಒಂದು ದಿವಸಂ

ನಯನೋತ್ಸಾಹಮನಿತ್ತು ದೇಹರುಚಿಯಿಂದೆಯ್ತಂದನಾಕಾಶ ಗಂ
ಗೆಯ ನೀರ್ಮೂರ್ನಿಸಸೆಂಬಿನಂ ದಶರಥ ಕ್ಷೋಣೀಶನಾಸ್ಥಾನ ಭೂ
ಮಿಯನಾ ನೀರದಮಾರ್ಗದಿಂದಿಳಿದು ಸನ್ಮಾರ್ಗಕ್ಕೆ ಮೆಯ್ಯಾದ್ದರದಂ
ನಯುಮಂ ಸಾರದನಾವ ಕಾಳೆಗದೊಳಂ ಕಣ್ಣಾರದಂ ನಾರದಂ ೨೧

ಬಿಸಸೂತ್ರದ ಕಟಿಸೂತ್ರಂ
ಪೊಸದುಗುಲದ ಕೋವಣಂ ಕಮಂಡುಲು ರಾರಾ
ಜಿಸೆ ದಂಡಪಾಣಿ ಪೊಕ್ಕಂ
ಕಿಸುರಳಿಪಂ ಪಿಸುಣ ಪಸರಿಗಂ ನೃಪಸಭೆಯಂ ೨೨

ಅಂತು ನಾರದಂ ಸಭಾಮಂಡಲಕ್ಕವತರಿಸೆ ಅರ್ಘ್ಯಪಾದ್ಯಮನಿತ್ತು

ಬಂದ ಬರವಾವುದೀ ಬರ
ವಿಂದಂ ಚರಿತಾರ್ಥನಾದೆನಾನೆಲ್ಲಿಂದಂ
ಬಂದಿರೆನೆ ನೃಪತಿ ನಾರದ
ನೆಂದಂ ದಶನಾಂಶು ಕೆದಱೆ ಚಂದ್ರಾತಪಮಂ ೨೩

ಆನೀ ಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣೀಪುರದ ಸೀಮಂಧರ ಸ್ವಾಮಿಗಳ ಪರಿನಿಷ್ಕ್ರಮಣ ಕಲ್ಯಾಣ ವಿಭೂತಿಯಂ ನೋಡಿ ಬಂದೆನೆಂದು ಸಭೆಯಂ ಕಣ್ಸನ್ನೆಯಿಂ ತೊಲಗಿಸಿ ದಶರಥಂಗೆ ಕಟ್ಟೇಕಾಂತದೊಳಿಂತೆಂದಂ

ಲಂಕೆಗೆ ಪೋಗಿ ಶಾಂತಿಜಿನ ಭಕ್ತಿಯೊಳಾಂ ಸ್ಮರದಾನದಂತಿ ವ
ಜ್ರಾಂಕುಶ ದರ್ಶನಸ್ತವನದಿಂ ಚರಿತಾರ್ಥನೆನಾದೆನಾಗಿ ವೀ
ತಾಂಕುಶನಪ್ಪ ರಾವಣನೊಳಂ ನೆರೆದೀ ನುಡಿಗೇಳ್ದು ನಾಡೆಯುಂ
ಶಂಕೆಯೊಳೊಂದಿ ಬಂದೆನಱಿಪಲ್ ಪೆಱತೇಂ ನಿಮಗಾ ಪ್ರಪಂಚಮಂ ೨೪

ಅದೆಂತೆನೆ ವಿಭೀಷಣಂ ಸಾಗರಬುದ್ಧಿವೆಸರ ನೈಮಿತ್ತಿಕನಂ ಬರಿಸಿ ರಾವಣನ ಮರಣ ಕಾರಣಮುಮಂ ಬೆಸಗೊಳ್ವುದುಂ

ಏನುಂ ತೊದಳಿಲ್ಲಿದುವೆ ಶಿ
ಲಾನಿಕ್ಷಿಪ್ತಾಕ್ಷರಂ ವಿಭೀಷಣ ರಣದೊಳ್
ಜಾನಕಿಯ ದೂಸಱಿಂ ಲಂ
ಕಾನಾಥಂ ದಾಶರಥಿಯ ಕೈಯೊಳ್ ಮಡಿಗುಂ ೧೫

ಎನೆ ವಿಭೀಷಣಂ ವಿಷಣ್ಣನಾಗಿ

ಆರಯಲಪರುತ್ಪತ್ತಿಗೆ
ಕಾರಣಮೆನಿಸಿರ್ದ ಜನಕನಂ ದಶರಥನಂ
ಮಾರಣಮಂ ಪೊರ್ದಿಸುವೆಂ
ಕಾರಣವಿಘಟನಮೆ ಕಾರ್ಯವಿಘಟನಮಲ್ತೇ ೧೬

ಎಂದು ತಱಿಸಂದು

ಎನಗಿದಯುಕ್ತಮೆನ್ನ ಬಗೆ ಪಾಪನಿಬಂಧನಮೇವುದೆಂಬಿದಂ
ನೆನೆಯದೆ ತನ್ನ ಸೋದರನೊಳಪ್ಪ ವಿಪತ್ತಿಗಣಂ ವಿಭೀಷಣಂ
ಮನದೊಳಟಲ್ದು ನಿಮ್ಮ ನಟಿಯಲ್ ಬಗೆದಂದನಿದರ್ಕೆ ತಕ್ಕುದಂ
ನೆನೆದಿರಿಮಾನಿದಂ ತಡೆಯದಿನ್ ಜನಕಂಗಱಿಪಲ್ಕೆ ಪೋದಪೆಂ ೧೭

ಎಂದು ನಾರದಂ ಮಿಥಿಳೆಯನೆಯ್ದಿ ಜನಕಂಗಮಾ ಸ್ವರೂಪಮನಱಿಪಿ ಪೋಪುದುಮಿತ್ತಲ್ ದಶರಥನಾ ವಾರ್ತೆಯೆಲ್ಲಮಂ ಸಮುದ್ರಹೃದಯನೆಂಬ ತನ್ನ ಮಂತ್ರಿಮುಖ್ಯಂಗಱಿಪುವುದುಮಾತನಿದರ್ಕೆ ಕಾಲವಂಚನಮೆ ಕಾರ್ಯವೆಂದು ದಶರಥನಂ ಕಟಿಪಿ ಚಿತ್ರಕನುಂ ತಾನುಮಲ್ಲದೆ ಪೆಱರಱಿಯದಂತು ಕರುಪಿಡಿಸಿ ಲಾಕ್ಷಾರಸಾದಿಗಳಿಂ ಸಪ್ತಧಾತುಗಳಂ ಪಡೆದು ವರ್ಣಕ್ರಮಂಗೆಯ್ಯೆ

ಇದು ಭೂಪನ ರೂಪಿದು ಲೆ
ಪ್ಪದ ರೂಪೆನಲೆಂತುಮಱಿಯಲರಿದೆನೆ ಬಗೆಗೊಂ
ಡುದು ನಡೆವ ನುಡಿವ ತೆಱದಿಂ
ಪ್ರದೇಶ ಸೌಷ್ಠವಮದೇಂ ವಿಚಿತ್ರಮೊ ಚಿತ್ರಂ ೧೮

ಅಂತು ಲೆಪ್ಪದರಸನಂ ಕರುಮಾಡದೆರಡನೆಯ ನೆಲೆಯೊಳಿರಿಸಿ ಪರಿಜನಮುಂ ತಾನುಮೋಲಗಿಸುತ್ತಿರೆ

ಜನಕನ ಮಂತ್ರಿಯುಮಿಾ ಕ್ರಮ
ದಿನನುಷ್ಠಿಸಿ ಕಟಿಪೆ ಜನಕನುಂ ದಶರಥನುಂ
ದಿನಕರನುಂ ಹಿಮಕರನುಂ
ಘನಾಘನಾಂತರಿತರಾದರೆನೆ ತಲೆಗರೆದರ್ ೨೯

ಅನ್ನೆಗಮಿತ್ತ ವಿಭೀಷಣಾದೇಶದಿಂ ಬಂದ ತೀಕ್ಷ್ಣಪುರುಷರ್ ಪುರಮಂ ಪೊಕ್ಕು ಕರುಮಾಡಮಂ ಪುಗಲ್ ಪಡೆಯದೆ ತಡೆದಿರ್ಪುದುಂ

ಅಟ್ಟಿದ ಜಟ್ಟಿಗರ್ ತಡೆದುದರ್ಕೆ ಕನಲ್ದು ವಿಭೀಷಣಂ ಮುಗಿ
ಲ್ವಟ್ಟೆಯಿನಟ್ಟಿ ತಿಂಬ ಜನನಂತಿರಯೋಧ್ಯೆಗೆ ಬಂದು ಪೊಕ್ಕು ಪೊಂ
ಬೆಟ್ಟಮೆನಿಪ್ಪ ಪೊನ್ನ ಕರುಮಾಡಮನಂದಿರುಳಲ್ಲಿ ಕಂಡು ಕಣ್
ಮುಟ್ಟಿನೊಳಿರ್ದ ಲೆಪ್ಪದರಸಂ ಕೊಲವೇಟ್ದನಸಾರಚೇತನಂ ೩೦

ಬೆಸನಂ ವಿದ್ಯುದ್ವಿಳಸಿತ
ವೆಸರ ವಿಯಚ್ಚರ ಭಟೋತ್ತಮಂ ಪಡೆದು ಜವಂ
ಮುಸಗಿದನೆನೆ ಕಾಪಿನವರ್
ದೆಸೆಗಿಡೆ ಪೊಕ್ಕಿಱಿದು ಕೊಂದು ತಲೆಯಂ ತಂದಂ ೩೧

ಕೊಲಲೆಂದು ಬಂದು ಲೆಪ್ಪದ
ತಲೆಯಂ ಕೊಂಡುಯ್ದನಾ ವಿಭೀಷಣನಾರುಂ
ಕೊಲಲಾರ್ಪರೆ ಸಾಯದರಂ
ಲಲಾಟದೊಳ್ ವಿಧಿಯ ಬರೆದ ಲಿಪಿ ಜಲಲಿಪಿಯೇ ೩೨

ಅಂತು ತಂದ ತಲೆಯಂ ಕಡಲೊಳೀಡಾಡಿ ಜನಕನುಮನಂತೆ ಮಾಡಿ ಮಗುಳೆ ಲಂಕೆಗೆ ಪೋಗಿ

ಮನದೊಳ್ ತನ್ನ ನೆಗಟ್ತೆಯಂ ನೆನೆದು ಕಷ್ಟಂಗೆಯ್ದೆನಾನೀ ದಶಾ
ನನನಂ ಕೊಲ್ವವನಾವನೀ ಕಡಲನಾವಂ ದಾಂಟುವಂ ಲಂಕೆಗಾ

ವನೊ ಬರ್ಪಂ ಗಡ ಭೂಮಿಗೋಚರನಿದಂ ನೈಮಿತ್ತಿಕಂ ಪೇೞ್ದುದಾ
ತನ ಮಾತಿಂಗವಿಚಾರಿತಂ ನೆಗೞ್ದೆನೆಂದುಬ್ಬೇಗಮಂ ತಾಳ್ದಿದಂ ೩೩

ಜಿನಗೃಹಮಂ ಪ್ರಾಯಶ್ಚಿ
ತ್ತನಿಮಿತ್ತಂ ನಿರತಿಶಯಮೆನಲ್ ಮಾಡಿಸಿದಂ
ತನಗೆ ಕಷಾಯೋದಯದಿಂ
ಜನಿಯಿಸೆ ಪೊಲ್ಲಮೆಯನೊಳ್ಕಿದಂ ಸೈರಿಪನೇ ೩೪

ಅನ್ನೆಗಮಿತ್ತ ದಶರಥನ ಜನಕನ ಪರಿಜನಂ ಲೆಪ್ಪದರಸನಪ್ಪುದನಱಿದು ಸಂತೋಷಂಬಟ್ಟಿರ್ಪುದುಂ ಅತ್ತ ದಶರಥನುಂ ಜನಕನುಂ ರೂಪಪರಾವರ್ತನದಿನನೇಕ ದೇಶಂಗಳಂ ನೋಡುವುದೆ ತಮಗೆ ವಿನೋದಮಾಗೆ ತೊೞಲುತ್ತುಂ ಬಂದು

ಸಕಲರ್ತುಕ ವನದಿಂ ದೀ
ರ್ಘಿಕೆಯಿಂ ಪುಷ್ಕರಿಣಿಯಿಂ ಸರೋವರದಿಂ ಕೌ
ತುಕಮನಸವರ್ ಕಂಡರ್ ಕೌ
ತುಕಮಂಗಳಪುರಮನುರ್ವರಾ ನೂಪುರಮಂ ೩೫

ಲಲನಾರತ್ನದೊಳಂ ಜಯ
ಲಲನಾರತ್ನದೊಳಮಪ್ಪ ತೋಳ್ವೆರಗನನಾ
ಕುಲಮಱಿಪುವಂತೆ ಬಲಗಣ್
ಬಲಗಯ್ ಕೆತ್ತಿದುವು ದಶರಥಂಗೊರ್ಮೊದಲೊಳ್ ೩೬

ಅಂತೆಯೆಯ್ದೆವರ್ಪುದುಮಾ ಪುರದ ಬಹಿರುದ್ಯಾನಪ್ರದೇಶದೊಳ್ ಸ್ವಯಂವರಭೂಮಿ ನಯನಾಭಿರಾಮಮಾದುದಲ್ಲಿ

ನಯನಾಕರ್ಷಣ ವಿದ್ಯೆ ಗಂಡುವರಿಜಂ ಕೈಕೊಂಡುದೋ ಗಂಡಗಾ
ಡಿಯನೀತಂಗೆ ಮನೋಜನೊಪ್ಪಿಸಿದನೋ ಪೇೞೆಂಬಿನಂ ಬಣ್ಣಿಸಲ್
ಬಯಸಲ್ತಕ್ಕ ಬೆಡಂಗು ಕಣ್ಗೊಳಿಸೆ ತನ್ನಂ ಕಂಡಣಂ ಕನ್ನೆಯಾ
ಸೆಯನಾ ರಾಜಕುಮಾರಕರ್ ತೊಱೆವಿನಂ ಪೊಕ್ಕಂ ಸಭಾಸದ್ಮಮಂ ೩೭

ಅಂತು ಪೊಕ್ಕು ತಾನುಂ ಜನಕನುಮೊಂದು ಕಡೆಯ ಪಟ್ಟಕಾಂಚನ ಮಂಚೋಪಾಂತದೊಳ್ ನಿಂದು ನೋಡುತ್ತುಮಿರೆ

ಏಱು ಮಣಿವೆಸದ ಸಿವಿಗೆಯ
ನೇಱಿಸಿ ಕುಡುವಿಲ್ಲನೊಡನೆ ಬರೆ ಕಂದರ್ಪಂ
ನೀಱೆ ಮುಗಿಲ್ವೊರೆಯೊಳ್ ಮೆ
ಯ್ದೋಱುವ ಶಶಿಕಲೆಯ ಗಾಡಿಯಂ ಗೆಲೆವಂದಳ್ ೩೮

ಎಳವೆಱೆ ಪೊನ್ನ ಪುತ್ತಳಿಗೆ ರನ್ನದ ದೀವಿಗೆ ತನ್ನ ಪುಷ್ಪಕೋ
ಮಳ ತನು ಬೇಱೆ ಬೀಱೆ ನಯನೋತ್ಸವಮಂ ನಿಜಲೋಚನಂಗಳು
ತ್ಪಳದಳ ದಾಮಮಂ ಕೆದಱೆ ಕಣ್ಗೆಸೆದಳ್ ನವರತ್ನಮಾಲೆ ಕೆಂ
ದಳದೊಳನಂಗಪಾಶಮೆನೆ ಕೈಕೆ ಮನೋಜನ ಬಯ್ತ್ತ ಬಯ್ಕೆವೋಲ್ ೩೯

ಆ ಸಮಯದೊಳಖಿಳ ರಾಜಕುಲದುಭಯ ವಿಶುದ್ಧಿಯುಮನನ್ವಯ ಪ್ರಸಿದ್ಧಿಯುಮನಱಿಪಿ

ಕಂಚುಕಿ ಪರಿವಿಡಿಯಿಂ ನೃಪ
ಸಂಚಯಮಂ ತೋಱೆ ನಿಂದುದಿಲ್ಲವಳ ತಟಿ
ತ್ಸಂಚಲ ನಯನಯುಗಂ ನಿಜ
ದಿಂ ಚಳಮೊಂದೆಡೆಯೊಳೆಂತುಮೇಂ ನಿಂದಪುದೇ ೪೦

ಆ ನೆರೆದಿರ್ದ ರಾಜಸುತರಂ ಪರಿದೆಯ್ದಿ ಬಟಿಲ್ದು ವಿಶ್ರಮ
ಸ್ಥಾನಮನಾ ಮಹೀಭುಜನ ಮೆಯ್ಸಿರಿಯಂ ಸೆಱೆಗೆಯ್ದು ತತ್ಸರೋ
ಜಾನನೆ ತನ್ನ ಲೋಲನಯನೋತ್ಪಲಮಾಲೆ ನೃಪಂಗೆ ಮಾಲೆಯಂ
ತಾನೊಸೆದಿಕ್ಕಿದಳ್ ನಿಖಿಲ ರಾಜಕುಲಂ ಮನಮಿಕ್ಕುವನ್ನೆಗಂ ೪೧

ಆ ರಾಜನ್ಯಕಮಿರೆ ಕ
ನ್ಯಾರತ್ನಂ ರೂಪುಗರೆದೊಡಂ ನಿಜ ಪುಣ್ಯ
ಪ್ರೇರಣೆಯಿಂ ಕಯ್ಸಾರ್ದ
ತ್ತಾ ರಘುವೀರಂಗೆ ಪುಣ್ಯದೊಳ್ ಪುರುಡುಂಟೇ ೪೨

ಅಂತಾತಂಗೆ ಕನ್ನೆ ಕಯ್ಸಾರ್ವುದುಂ

ಬಾಲಿಕೆ ಮುಗ್ಧೆ ತಕ್ಕುದಱಿಯಳ್ ಪಲರಂ ಪೆಱಗಿಕ್ಕಿ ನೋಡಿದಳ್
ಮಾಲೆಯನಾಕೆಯುಂ ಕಳೆದುಕೊಳ್ವುದು ದೇಸಿಗನಂ ತಗುಳ್ವುದೀ
ಕಾಲವಿಳಂಬಮೇವುದೆನುತುಂ ರಣಬಾಲಕರಾ ಸಮಸ್ತ ಭೂ
ಪಾಲಕ ಬಾಲಕರ್ ಕದನಕೇಳಿಗೆ ಮಚ್ಚರದಿಂದೊಡರ್ಚಿದರ್ ೪೩

ಆನೆ ಕಲಂಕುವಂತೆ ಕೊಳನಂ ಬಿಡದಾನೆ ಕಲಂಕುವೆಂ ಕಱು
ತ್ತೀ ನೆರೆದಾಂತ ರಾಜಕವನೊಂದಿನಿಸಂ ನಡೆ ನೋೞ್ಪುದೆಂದು ಪಂ
ಚಾನನದಂತೆ ಗರ್ಜಿಸಿ ರಘೂದ್ವಹನೇಱಿ ವರೂಥಮುಂ ಘನ
ಜ್ಯಾ ನಿನದಂ ಭಯಂಗೊಳಿಸೆ ಜೇವೊಡೆದಂ ನಿಜ ಚಾಪದಂಡಮುಂ ೪೪

ಅತಿಶಯಮಾಗೆ ತನ್ನ ಮುಖಚಂದ್ರಬಲಂ ಮಣಿಮೇಖಲಾರವಂ
ಶ್ರುತಿಪಥಮಂ ಪೞಂಚೆ ಜಯಡಿಂಡಿಮನಿಸ್ವನದಂತೆ ಮೇಲುದು
ಧ್ಗತ ಜಯಕೇತುವಂ ಮಿಗೆ ಮನೋರಥ ಸಾರಥಿ ಕೈಕೆ ಬಂದು ಭೂ
ಪತಿಯೊಡನೇಱಿದಳ್ ರಥಮನಾ ರಘುವೀರನ ವೀರಲಕ್ಷ್ಮಿವೊಲ್ ೪೫

ಅಗಳಕಾಲ ಜಲಧರಂಗಳಂತೆ ನಿಖಿಲ ನೃಪಸುತರ್ ಸುತ್ತಿಮುತ್ತಿ ಶರ
ವರ್ಷಮುಂ ಕಱೆಯೆ

ತಾಗೆ ಸರಲ್ ಪಾಬಿನ ಪಲ್
ತಾಗಿದವೋಲ್ ಮೂರ್ಛೆವೋಗೆ ಸಾರಥಿ ರಥಮುಂ
ಬೇಗಂ ಚೋದಿಸಿದಳ್ ವಧು
ರಾಗರಸಂ ದಶರಥಂಗೆ ನೆಲೆವೆರ್ಚುವವೋಲ್ ೪೬

ಮಿಾಱಿದೆ ಕೀಱಿದೆ ನೇಣಂ
ತೋಱಿದ ದೆಸೆಗಾಕೆಗಂ ಹಯಕ್ಕಂ ಚಿತ್ತಂ
ಪೋಱಲ್ಲೆನೆ ಪರಿದುದು ಜವ
ನೇಱಿದ ರಥಮಿಂತಿದೆನೆ ರಥಂ ದಶರಥನಾ ೪೭

ಕೆಲರ ವರೂಥಮಂ ಕೆಲರ ವಾಜಿಗಳಂ ಕೆಲರುಗ್ರಬಾಣಮಂ
ಕೆಲರ ಕಿರೀಟಮಂ ಕೆಲರ ಚಾಪಮನಿರ್ಕಡಿಮಾಡಿ ತನ್ನ ದೋ
ರ್ಬಲದ ಪೊಡರ್ಪು ಜೀಯೆನಿಸೆ ಮಾರ್ಪಡೆಯಂ ಕೊಲಲೊಲ್ದನಿಲ್ಲ ಮೆ
ಯ್ಗಲಿ ರಘುವೀರನಾತನ ಶರಾಸನ ವಿದ್ಯೆಗಿದಾವ ವಿಸ್ಮಯಂ ೪೮

ಗಱಿಯಿಂ ನೊಚ್ಚಿದರೆನೆ ಕಂ
ಗಱಿಯಂಬೆಟ್ಟಿ ರಾಜಸುತ ಸಂದೋಹಂ
ಗಱಿ ಸೋಂಕದೆ ಬೆಳ್ಕಿರಲೆಗೆ
ಗಱಿ ಮೂಡಿದ ತೆಱದಿನೋಡಿ ಪೋದತ್ತಾಗಳ್ ೪೯

ಅನಂತರಂ ಕೈಕೆವೆರಸು ದಶರಥನಯೋಧ್ಯೆಗೆ ಜನಕಂ ಮಿಥಿಳೆಗೆ ಪೋಗಿ ಮುನ್ನಿನಂತೆ ಸುಖದಿನರಸುಗೆಯ್ಯುತ್ತಿರ್ದರಿತ್ತಲ್ ದಶರಥನರೇಂದ್ರನೊಂದು ದಿವಸಂ

ಪರಿಮಿತ ಪರಿಜನ ಪರಿವೃತ
ನರಸಂ ಬಗೆದರಸಿ ತೇರನೆಸಗಿದ ಗೆಲವಂ
ತರವೇಱೆ ವೃದ್ಧ ಕಂಚುಕಿ
ತರೆ ಬಂದಳ್ ಕೈಕೆ ಬಳಸಿ ಬರೆ ಸಹಚರಿಯರ್ ೫೦

ಈಕೆ ರಥಮೆಸಗೆ ವೈರಿ ಪ
ತಾಕಿನಿಯಂ ಗೆಲ್ದೆನೀಕೆ ಗೆಯ್ದುಪಕೃತಿಗಾ
ನೀಕೆಯ ಬೇಡಿದುದಂ ನಿ
ರ್ವ್ಯಾಕುಳಮಾಯದೊಡೆ ಮೆಚ್ಚು ಪೊಳ್ಳಾಗಿರದೇ ೫೧

ಎಂದು ಪರಿಜನದ ಮೊಗಮಂ ನೋಡಿ ಕೈಕೆಯಂ ನಿನ್ನ ಮೆಚ್ಚಿದುದಂ ಬೇಡಿಕೊಳ್ಳೆಂಬುದುಂ

ಏನಂ ಬೇಡುವೆನೆಂದ
ಬ್ಜಾನನೆ ಬಗೆ ಬೆದಱೆ ಬಗೆಗೆ ಬಂದೊಡಮೆಯನೊ
ಲ್ದಾನೆರೆದಾಗಳೆ ಕುಡಿಮೆಂ
ದಾ ನೃಪತಿಗೆ ಕೈಕೆ ಬಯ್ಕೆಗೊಟ್ಟಳ್ ಮೆಚ್ಚಂ ೫೨

ಅನಂತರಂ

ಸೆನೆಯಿಸೆ ಪೂವಿನಂಬನಪರಾಜಿತೆ ಕಣ್ಗೆ ಸುಮಿತ್ರೆ ಮೈತ್ರಿಯಂ
ಜನಿಯಿಸೆ ಬೀೞೆ ಸುಪ್ರಭೆ ತನುಪ್ರಭೆಯಂ ಗೆಲೆ ಕೈಕೆ ಕಂತುರಾ
ಜನ ಜಯಲಕ್ಷ್ಮಿಯಂ ನಿಜಕುಲಾಂಗನೆಯರ್ ಪೆಸರ್ವೆತ್ತ ನಾಲ್ವರಿಂ
ಜನಪನ ರಾಜಲೀಲೆ ಗೆಲೆವಂದುದು ಮನ್ಮಥರಾಜ ಲೀಲೆಯಂ ೫೩

ಅಪರಾಜಿತಾ ಮಹಾದೇ
ವಿ ಪತಿವ್ರತೆ ಶೀಲಗುಣಕಳಾ ಪರಿಣತಿಯಿಂ
ನೃಪನ ಮನಂಬಡೆದುಂ ಧ
ರ್ಮಪತ್ನಿಯೆನೆ ಪಡೆದಳಗ್ರಮಹಿಷೀ ಪದಮಂ ೫೪

ಉರ್ವರೆ ಮಣಿಪರ್ವತಮಂ
ಶಾರ್ವರಿ ಪರಿಪೂರ್ಣಚಂದ್ರನಂ ಪಡೆವಂತಂ
ತರ್ವತ್ತಿ ಸರ್ವಲಕ್ಷಣ
ಸರ್ವಗುಣಾನ್ವಿತನೆನಿಪ್ಪ ಸುತನಂ ಪಡೆದಳ್ ೫೫

ನೀರಜಮಾದುದು ಮೇದಿನಿ
ನೀರಜಮೀತನ ಚರಿತ್ರಮೆಂದಱಿಪುವವೋಲ್
ನೀರಚ್ಛಮಾದುದೀ ವಸು
ಧಾ ರಮಣಂ ಸ್ವಚ್ಛಹೃದಯನೆಂದಱಿಪುವವೋಲ್ ೫೬

ಈ ತನಯನೆ ಸಕಲೋತ್ಸವ
ಹೇತು ಜಗತ್ತಾಪಶಮನನೆಂದಱಿಪುವವೋಲ್
ಶೀತಲ ಸಮೀರನೆಸಗಿ
ತ್ತಾತನ ಜಸದಂತೆ ವಿಶದಮಾಯ್ತಾಕಾಶಂ ೫೭

ಜಿನಪೂಜೋತ್ಸವಮಂ ಸುರೇಂದ್ರನಳವಲ್ತೆಂಬನ್ನೆಗಂ ಮಾಡಿ ಬೇ
ಡ್ಪನಿತಂ ಬೇಡ್ಪವರ್ಗಿತ್ತು ಕಲ್ಪಕುಜಮಂ ಕೀೞ್ಮಾಡಿ ಸನ್ಮಾನ ಭಾ
ಜನರಂ ಸಜ್ಜನರಂ ವಿಚಿತ್ರ ವಸನ ಸ್ರಗ್ಭೂಷಣಾಲೇಪದಿಂ
ಜನಪಂ ಮನ್ನಣೆ ಮಾಡಿ ತತ್ತನಯ ಜನ್ಮೋತ್ಸಾಹಮಂ ಮಾಡಿದಂ ೫೮

ದಿವಿಜಕುಜಂಗಳಾರವೆಗಳಾದುವು ಸಿದ್ಧರಸಂ ತಟಾಕಮಾ
ದುವು ಸುರಧೇನು ಪಿಂಡಟಿಯದೊಂದೆಡೆಯೊಳ್ ನೆರೆದಿರ್ದುವೆಂಬಿನಂ
ಭುವನ ಜನಕ್ಕೆ ಬಾಂಧವ ಜನಕ್ಕಖಿಲಾರ್ಥಿಜನಕ್ಕೆ ಹರ್ಷದಿಂ
ದವರಿವರೆನ್ನದಿತ್ತು ವೆಱೆದಂ ಜನಪಂ ಸುತಜಾತಕರ್ಮಮಂ ೫೯

ಅಂತು ಜಾತಕಮಹೋತ್ಸವಮಂ ಮಾಡಿ ದಶಮದಿನದೊಳ್ ಪದ್ಮಾಲಂಕೃತ ವಿಶಾಲ ವಕ್ಷಸ್ಸ್ಥಲನಪ್ಪುದಱಿಂ ಪದ್ಮನುಂ ಸಕಲ ಶುಭಲಕ್ಷಣಾಭಿರಾಮನಪ್ಪುದಱಿಂ ರಾಮಚಂದ್ರನುಮೆಂದಿವು ಮೊದಲಾಗೆ ಪೆಱವುಮನ್ವರ್ಥ ನಾಮಂಗಳನಿಟ್ಟು ಕತಿಪಯ ದಿನಂಗಳೊಳ್

ಕುಲದೊದವಿಂಗೀ ಸತಿಯರೆ
ಕುಲದೇವತೆಯರ್ಕಳೆಂಬ ಬಗೆ ಪುಟ್ಟುವಿನಂ
ತಲೆದೋಱೆ ಗರ್ಭಚಿಹ್ನಂ
ತಲೆದೋಱಿದುದವನಿಪತಿಗೆ ರಾಗೋದ್ರೇಕಂ ೬೦

ಆಗಳವರ್ಗೆ ಪುಂಸವನ ಸೀಮಂತೋನ್ನಯನಾದಿ ಸಕಲ ಮಂಗಳಮಂ ದಶರಥ ನರನಾಥಂ ಮಾಱ್ಪುದುಮನುಕ್ರಮದಿಂ ಸುಮಿತ್ರೆ ಲಕ್ಷ್ಮಣನಂ ಕೈಕೆ ಭರತನಂ ಸುಪ್ರಭೆ ಶತ್ರುಘ್ನನಂ ಪಡೆವುದುಂ

ಪಸರಿಸೆ ಪೂವಲಿಗಳ್ ಬಾ
ಜಿಸೆ ಬದ್ದವಣಂಗಳೊಡನೆ ಮಿಳ್ಳಿಸೆ ಗುಡಿಗಳ್
ದೆಸೆಬಿದ್ದವಾಡೆ ತರುಣಿಯ
ರೊಸಗೆಯ ಮೇಲೊಸಗೆಯಾದುದಂದರಮನೆಯೊಳ್ ೬೧

ಆ ಸಮಯದೊಳ್ ದಶರಥಂ ಸುತಮುಖದರ್ಶನೋತ್ಸುಕಂ ಸುಮಿತ್ರಾದೇವಿಯ ಸೂತಿಕಾಸದನಮಂ ಪೊಕ್ಕು

ಸಿರಿ ಸಿಂಹಕ್ಕಭಿಷೇಕಮಂ ಪಡೆವುದಂ ರತ್ನಾಕರಂ ಸುತ್ತಿದು
ರ್ವರೆಯಂ ಭಾಸುರ ಚಕ್ರಮಂ ಕನಸಿನೊಳ್ ಪೊಂಬೆಟ್ಟವೇಱಿರ್ದುದಂ
ಹರಿಣೀನೇತ್ರೆ ಸುಮಿತ್ರೆ ಕಂಡುದಱಿನಾಳ್ಗುಂ ಬೆಳ್ಳಿವೆಟ್ಟಂಬರಂ
ಭರತಕ್ಷೇತ್ರಮನೆಂದು ಕಣ್ ತಣಿವಿನಂ ಸೌಮಿತ್ರಿಯಂ ನೋಡಿದಂ ೬೨

ಅವನೀವಲ್ಲಭ ತನಯರ್
ನವಶಶಿಕಲೆಯಂತೆ ಪಡೆದು ನಯನೋತ್ಸವಮಂ
ದಿವಸಕ್ರಮದಿಂ ವೃ
ದ್ಧಿವಡೆದರಮರಾವನೀಜಡಗೆಯೆಂಬಿನೆಗಂ ೬೩

ಪರಮಪ್ರೇಮಂ ಜನ್ಮಾಂ
ತರದಿಂದೊಡವಂದುದೆನಿಸಿ ಗೆಡೆ ಬೆಚ್ಚವೊಲ
ಚ್ಚರಿಯಾಗೆ ರಾಮಲಕ್ಷ್ಮೀ
ಧರರೊಳವಾದತ್ತು ಭರತ ಶತ್ರುಘ್ನರೊಳಂ ೬೪

ಅಮಳ್ಗಳಿವರೆಂಬಿನಂ ತಮ
ಗಮಳ್ವೆಸೆರಮರ್ದೆಸೆಯೆ ತಾಯ ತಂದೆಯ ಚಿತ್ತ
ಕ್ಕಮರ್ದಿನ ಮಱೆಯಂ ಕಱೆದರ್
ಕುಮಾರಕರ್ ಮೂರ್ತಿಗೊಂಡ ಪುರುಷಾರ್ಥದವೊಲ್ ೬೫

ಪೊಳೆಯೆ ನಖಾಂಶುಮಂಡಲಫಣಾಮಣಿ ಪಂಚಫಣಾಸಿತಾಹಿಗಳ್
ಬಳೆದಪುವೀಂಟಲೆಂದು ದಶಕಂಠನ ಬಲ್ಲುಸಿರಂ ತದೀಯ ನಿ
ರ್ಮಳತರ ಕೀರ್ತಿ ದುಗ್ಧರಸ ಪಾನಮನೆಂಬಿನೆಗಂ ಪೊದಳ್ದು ಕೋ
ಮಳಿಕೆಯನಾಳ್ದು ನೀಳ್ದು ಬಗೆಗೊಂಡುವು ಕೃಷ್ಣನ ಬಾಹುಶಾಖೆಗಳ್ ೬೬

ಹಾರ ಮರೀಚಿಯಂ ಮರಕತಚ್ಛವಿಯಂ ಗೆಲೆ ದೇಹದೀಪ್ತಿ ನೀ
ಹಾರ ಮರೀಚಿಯಂ ಕುಸುಮಸಾಯಕನಂ ಗೆಲೆ ಗಂಡಗಾಡಿ ಕಂ
ಠೀರವ ನಾದಮಂ ಜಲಧರ ಧ್ವನಿಯಂ ಗೆಲೆ ಬೇಱೆ ಬೇಱೆ ಗಂ
ಭೀರ ರವಂ ಬಲಾಚ್ಯುತರದೇನೆಸೆದಿರ್ದರೊ ರಾಮಲಕ್ಷ್ಮಣರ್ ೬೭

ರಣದೊಳ್ ರಾವಣನಂ ಜವಂಗೆ ಪೊಸತಿಕ್ಕಲ್ ತಾರಶೈಲಕ್ಕೆ ತೆಂ
ಕಣದಂ ಕಂಕಣದಂತೆ ಕಯ್ಗೆ ವರಿಸಲ್ ಭೂಚಕ್ರಮಂ ಚಕ್ರಮಂ
ರಣದೊಳ್ ಸಾಧಿಸಲೆಂದು ಪುಟ್ಟಿದವರೇಂ ಸಾಮಾನ್ಯರೇ ರಾಮ ಲ
ಕ್ಷ್ಮಣರಪ್ರಾಕೃತವಿಕ್ರಮರ್ ತ್ರಿಭುವನ ಪ್ರಖ್ಯಾತ ಕೀರ್ತಿಧ್ವಜರ್ ೬೮

ಅಂತು ರಾಮ ಲಕ್ಷ್ಮಣ ಭರತ ಶತ್ರುಘ್ನರೆಂಬ ನಾಲ್ವರ್ ತನೂಭವರುಂ ನಾಲ್ಕುಂ ರತ್ನಶಿಲಾಸ್ತಂಭಂಗಳಂತೆ ರಘುಕುಲ ಸಮುದ್ಧರಣ ಸಮರ್ಥರಾಗೆ ಪರಿಪೂರ್ಣ ಮನೋರಥನಾಗಿ

ಸುರಧೇನುಸ್ತನಭಾರದಂತೆ ಪುರುಷಾರ್ಥಂ ಮೂರ್ತಿಗೊಂಡಂತೆ ನಾ
ಲ್ವರುಮೊಂದಾಗಿರೆ ನಂದನರ್ ದಶರಥಂ ನಾಲ್ಕುಂ ಸಮುದ್ರಾಂಬರಂ
ಧರೆಯುಂ ಕೂಡೆ ನಿಮಿರ್ಚಿ ನಾಲ್ದೆಸೆಯೊಳಂ ನಾಲ್ಕುಂ ಜಯಸ್ತಂಭಮಂ
ಚರಿತಾರ್ಥರ್ ನಿಲಿಸಲ್ ಸಮರ್ಥರಿವರೆಂದುತ್ಸಾಹಮಂ ತಾಳ್ದಿದಂ ೬೯

೨. ಸೀತಾ ಸ್ವಯಂವರಂ

ಅನ್ನೆಗಮಿತ್ತಲ್ ಮಿಥಿಲಾಪುರಾಧಿನಾಥಂ ಜನಕನ ಮನೋರಥ ಭೂಮಿ ವಿದೇಹಿಗೆ ಪ್ರಭಾಮಂಡಲನೆಂಬಣುಗನುಂ ಸೀತೆಯೆಂಬಣುಗಿಯುಮುದಯಿಸೆ

ಬದ್ದವಣಂ ಬಾಜಿಸೆ ದೆಸೆ
ಬಿದ್ದಂ ಕುಣಿದಾಡೆ ಗಣಿಕೆಯರ್ ಪೂವಲಿಯೊಳ್
ಮುದ್ದಾಡೆ ತುಂಬಿಗಳ್ ಮುಗಿ
ಲುದ್ದಂ ಪರಿದತ್ತು ಹರ್ಷರಸಮಾ ಪುರದೊಳ್ ೧

ಅಂತು ಜಾತಕರ್ಮೋತ್ಸವಮಂ ಮಾಡಿ ದಶಮದಿನದೊಳ್ ಸರ್ವ ಲಕ್ಷಣ ಸಸ್ಯಸಂಪತ್ತಿಗೆ ಸೀತೆಯಪ್ಪುದಱಿಂ ಸೀತೆಯೆಂದು ಪೆಸರನಿಟ್ಟು ಕೊಂಡಾಡಿ ನಡಪುತ್ತುಮಿರೆ ಮದನಮೋಹನ ದೀಪಕಳಿಕೆಯಂತೆಯುಂ ಕಾಮಕಲ್ಪಲತೆಯಂತೆಯುಂ ನಿರಂತರೋಪಚಯಮನಪ್ಪುಕಯ್ದು ಭರತ ಶಾಸ್ತ್ರಾದಿ ಸಕಲಕಲೆಯೊಳತಿಪರಿಣತಿವಡೆದು

ಲೀಳೆಯನಪ್ಪುಕಯ್ದು ಸಯನೋತ್ಸವಮಂ ದಯೆಗೆಯ್ವ ಗಾಡಿಯಿಂ
ದೇಳಿಸಿ ಕಾಮಕಲ್ಪಲತೆಯಂ ಪರಿಪೂರ್ಣ ಕಳಾವಿಳಾಸದಿಂ
ದೇಳಿಸಿ ಚಾರುಚಂದ್ರಕಲೆಯಂ ನೆಲೆವೆರ್ಚಿಸಿದಳ್ ಮರಾಳ ಲೀ
ಲಾಳಸಯಾನೆ ಜಾನಕಿ ವಿದೇಹಿಗೆ ಮೋಹರಸ ಪ್ರವಾಹಮಂ ೨

ಜನಕಂಗೆ ಹರ್ಷದೊದವಂ
ಜನಿಯಿಸಿ ಜಾನಕಿಯ ರೂಪವಿಭವಂ ಮಾಡಿ
ತ್ತನುರೂಪಂ ನೃಪಸುತನಾ
ವನೊ ವರನೀ ವನಿತೆಗೆಂಬ ಮನದುಮ್ಮಳಮಂ ೩

ಅಂತಿರ್ಪಿನಮೊಂದು ದಿವಸಂ ಚರನೊರ್ವಂ ಬಂದು ಅಸಂಖ್ಯಾತರ್ ಕಿರಾತರ್ ನೆರೆದು ಭೂಚಕ್ರಮಂ ಸೂಱೆಗೊಂಡರೆಂದು ಬಿನ್ನವಿಸೆ

ಒಂದೆ ಕುಠಾರದಿಂದಡವಿಯಂ ಕಡಿವಂತಿರೆ ಪೋಡುಗಾಱನೆ
ನ್ನೊಂದೆ ಭುಜಾಸಿಯಿಂ ಶಬರಕೋಟಿಯನಿಕ್ಕಿ ಪಿಶಾಚಕೋಟಿಗಾ
ನಂದಮನಂಟುಮಾಳ್ಪೆನುಱಿದಾನಿದನೇಳಿಸಿದಂದು ದುರ್ಯಶೋ
ದುಂದುಭಿನಾದಮಾವರಿಸದಿರ್ಕುಮೆ ಕೂಡೆ ಜಗಂಗಳೆಲ್ಲಮಂ ೪

ಎಂದು ಪರಿಚ್ಛೇದಿಸಿ ನುಡಿಯೆ

ನಿನಗೆ ಸಹಾಯಂ ದಶರಥ
ಜನನಾಥಂ ತತ್ಸಹಾಯದಿಂ ಲುಬ್ಧಕವಾ
ಹಿನಿಯಂ ಮರ್ದಿಸು ಧುರದೊಳ್
ನಿನಗಂ ತನಗಂ ಜವಂಗಮಿದಿರಾಂಪವರಾರ್ ೫

ಎಂದು ಮಂತ್ರಿಮಂಡಲಂ ಬಿನ್ನವಿಸೆ ಜನಕಂ ದಶರಥನಲ್ಲಿಗೆ ಲೇಖವಾಹಕರನಟ್ಟಿ ಸಮರಸನ್ನದ್ಧನಾಗಿ ಬೇಗಮೊಂದೆರಡು ಪಯಣಮಂ ನಡೆದನಿತ್ತಲ್ ಆ ವೃತ್ತಾಂತಮಂ ತಿಳಿದು ಕದನಮದೋದ್ಧತರ್ ಬಲಾಚ್ಯುತರ್ ಒಂದು ತಂದೆಯ ಪಾದಾರವಿಂದಕ್ಕೆಱಗಿ ದೇವರೀ ಬೆಸನನೆಮಗೆ ದಯೆಗೆಯ್ವುದೆಂದು ಬೇಡಿ ಕೊಂಡು ತಂದೆಯುಂ ಬೀಡ್ಕೊಂಡು ನಿಚ್ಚವಯಣದಿಂದೆಯ್ದೆವರ್ಪುದುಮವರನುಚಿತ ಪ್ರತಿಪತ್ತಿಯಿಂ ಮನ್ನಿಸಿ

ನೆಲಂ ಬೆಸಲೆಯಾದವೊಲ್ ನೆರೆದ ಲುಬ್ಧಕ ವ್ಯೂಹಮಂ
ಗೆಲಲ್ ನೆಱೆದೆನೀಗಳೆಂಬ ಬಲಗರ್ವಮಂ ತಾಳ್ದಿದಂ
ಬಲಾಚ್ಯುತರ ಕೂಟದಿಂ ಜನಕನುಗ್ರವನ್ಯದ್ವಿಪಂ
ಬಲಂಬಡೆದುದೆಂಬಿನಂ ವಿಕಟ ದಂತಕೂಟಂಗಳಿಂ ೬

ಅನಂತರಮುದಾತ್ತರಾಘವನಮೋಘ ಶರಾಸನಾದಿ ವಿವಿಧಾಯುಧ ಸನಾಥನಾಗಿ ರಥಮನೇಱಿ ಲಕ್ಷ್ಮಣಂ ಕಾಲ್ಗಾಪಿನೊಳ್ ನೆರೆದು ಬರೆ ಜನಕ ಕನಕರಿರ್ವರ್ ವಿಜಯಗಜಮನೇಱಿ ಮುಂಗೋಳೊಳ್ ನಡೆಯೆ ನಾಡ ಗಡಿಯ ನೆಯ್ದೆವರ್ಪ ಸಮಯದೊಳ್

ಕರಿಘಂಟಾನಾದಂ ಹಯ
ಖುರಪುಟನಿನದಂ ವರೂಥಚೀತ್ಕಾರಂ ಕಿಂ
ಕರಚಾಪಟಂಕೃತಂ ಭೋ
ರ್ಗರೆವಿನಮಾರ್ದೆತ್ತಿದತ್ತು ವನಚರ ಸೈನ್ಯಂ ೭

ಒದವಿದ ಚಾಪಟಂಕೃತಿ ಭಯಂಕರಮಾಗೆ ವರೂಥಭಾರದಿಂ
ದದಿರೆ ನೆಲಂ ಮನಃಪವನವೇಗದಿನೆಯ್ದಿ ಬಲಂ ಮಹಾಬಲಂ
ಕದನಮದಾವಿಲಂ ಕಱೆಯೆ ಬಲ್ಸರಿಯೆಂಬಿಸಮಂಬನಂಬು ನ
ಟ್ಟುದೆ ನೆಱನಾಗೆ ಕೂಡೆ ಗತಜೀವಿತಮಾಯ್ತು ಕಿರಾತಸಾಧನಂ ೮

ಕಾದಲಿದಿರ್ಚಿ ಕಯ್ದುವಿಡಿಯಲ್ ಬಗೆದರ್ಪುದು ಮೊಗ್ಗೆ ಮಂಜಿನಂ
ತಾದುದು ನಂಜನೆಂಜಲಿಸಿದಂತೆವೊಲಾದುದು ಬೇಗೆ ಪರ್ವಿದಂ
ತಾದುದು ಗಾಳಿಗೊಡ್ಡಿದ ಮುಗಿಲ್ಗೆಣೆಯಾದುದು ಕೂಡೆಯೊಕ್ಕಿದಂ
ತಾದುದು ರಾಮಬಾಣಹತಿಯಿಂದಿದಿರಾದ ವಿರೋಧಿಸಾಧನಂ ೯

ಆಗಳ್ ಜನಕಂ

ಮಾರಣಮಂತ್ರನಾದಮೆನಿಸಿತ್ತು ವಿರೋಧಿಗೆ ಶಾಂತಿಕ ಕ್ರಿಯಾ
ಕಾರಣಮಂತ್ರನಾದಮೆನಿಸಿತ್ತು ಧರಿತ್ರಿಗೆ ಮೃತ್ಯುವಂಚನೋ
ಚ್ಚಾರಣಮಂತ್ರನಾದಮೆನಿಸಿತ್ತೆಮಗಚ್ಚರಿ ನಿನ್ನ ಚಾಪ ಟಂ
ಕಾರ ನಿನಾದಮೊಂದೆ ಪಲವುಂ ತೆಱನಂ ತಳೆದಂದಮಾವುದೋ ೧೦

ಏನಂ ಪ್ರತ್ಯುಪಕಾರಮ
ನಾನೊಡರಿಸುವೆಂ ಕುಮಾರ ಕನ್ನೆಯನಿತ್ತೆಂ
ಮೇನಕೆಯಿಂ ಮಿಗಿಲೆನಿಸಿದ
ಜಾನಕಿಯಂ ಮದನವಶ್ಯಮಣಿದೀಪಿಕೆಯಂ ೧೧

ಎಂದು ನುಡಿದು ರಾಮನುಮಂ ಸೌಮಿತ್ರಿಯುಮಂ ವಿಚಿತ್ರವಸ್ತ್ರ ಭೂಷಣಾದಿಗಳಿಂದರ್ಚಿಸಿ ಕತಿಪಯ ಪ್ರಯಾಣಂಗಳಿಂ ಕಟಿವುವುದುಂ ರಾಮ ಲಕ್ಷ್ಮಣರಯೋಧ್ಯೆಯಂ ಪೊಕ್ಕು ಸುಖದಿನಿರ್ಪುದುಮೊಂದು ದಿವಸಂ ಜನಕಂ ತನುಜೆಯನಿತ್ತಂ ಮನುವಂಶಲಲಾಮನಪ್ಪ ರಾಮಂಗೆಂಬೀ ಜನವಾರ್ತೆಗೇಳ್ದು ತರುಣೀರತ್ನಮನಿಟ್ಟುಕೊಳ್ವ ಸಮಕಟ್ಟಿಂದೆ ಖೇಚರನೊರ್ವಂ ವಿದ್ಯಾಧರಕುಲಕ್ಕೆ ಮೊದಲಿಗರಪ್ಪ ನಮಿವಿನಮಿಗಳ್ಗೆ ನಾಗರಾಜನಿತ್ತ ವಜ್ರಾವರ್ತ ಸಾಗರಾವರ್ತಂಗ ಳೆಂಬ ಉರಿಯಂ ಕಾಱುವ ಕೆಂಡಮಂ ಕಱೆವ ಬಿಲ್ಗಳಂ ತರಿಸಿಕೊಟ್ಟು ವಜ್ರಾ ವರ್ತಮಂ ರಾಮನೇಱಿಸೆ ವೈದೇಹಿಯನೀವುದಾಱದೊಡೆ ಮತ್ಪುತ್ರಂಗೀವು ದೆಂಬುದುಂ ಮಹೀವಲ್ಲಭಂ ರಾಮಸಾಹಸಮಂ ಬಲ್ಲುದಱಿಂದಮಾ ನುಡಿಯನೇ ಗೊಂಡು ಗೃಹಮಹತ್ತರಂಗೆ ಬೆಸಸುವುದುಂ

ಬಹಿರುದ್ಯಾನದ ಕೆಲದೊಳ್
ಬಹುರತ್ನ ಸುವರ್ಣಮಯವೆನಲ್ ನಯನ ಸುಖಾ
ವಹಮಂ ಮಾಡಿಸಿದಂ ಗೃಹ
ಮಹತ್ತರಂ ನಿಮಿಷದಿಂ ಸ್ವಯಂವರ ಗೃಹಮಂ ೧೨

ಆ ಸ್ವಯಂವರ ವಿಹಾರಕ್ಕೆ

ನಾನಾ ವಾಹನಮುಂ ನಾ
ನಾನಕಮುಂ ವಂಶ ವಿಧೃತ ನಾನಾ ಧ್ವಜ ಸಂ
ತಾನಮುಮೆಸೆದಿರೆ ಬಂದರ್
ನಾನಾ ದೇಶಾಧಿನಾಥನಂದನರರೆಬರ್ ೧೩

ಆ ಸಮಯದೊಳ್ ದಶರಥಂ ರಾಮ ಲಕ್ಷ್ಮಣ ಭರತ ಶತ್ರುಘ್ನರ್ ವೆರಸು ಬಂದೊಂದು ಪಳಿಕಿನ ಚೌಪಳಿಗೆಯೊಳ್ ರತ್ನಮುದ್ರಿಕೆಯ ನಾಯಕರತ್ನ ದಂತಿರ್ಪುದುಂ

ಜನಕಜೆ ಪಶ್ಯದೀಪ ಕಲಿಕಾಕೃತಿಯಿಂ ಪುಗೆ ತತ್ಸಭಾನಿಕೇ
ತನ ಕುಸುಮೋಪಹಾರ ಮಣಿರಂಗನಃನಂಗಣಮಂ ನರೇಂದ್ರಸಂ

ದನರ್ಗೆ ಮನೋವಿಕಾರದೊಡನಂಗವಿಕಾರಮದೇಂ ಪೊದಳ್ದುದೋ
ನನೆಕೊನೆಯೇಱುವಂತೆ ವನರಾಜಿ ಮಧುಪ್ರಥಮಪ್ರವೇಶದೊಳ್ ೧೪

ಬಿಸರುಹನೇತ್ರೆಗೆ ಜಾನಕಿ
ಗೆ ಸುಟ್ಟಿತೋಱುತ್ತುಮಱಿಪಿದಳ್ ಪರಿವಿಡಿಯಿಂ
ಪೆಸರ್ಗೊಂಡು ವೃದ್ಧಕಂಚುಕಿ
ಪೆಸರ ನೃಪಾತ್ಮಜರ ವಂಶವೀರ್ಯಶ್ರುತಮಂ ೧೫

ಎಱಗದೆ ಪುತ ಚಂಪಕವನಕ್ಕೆ ಸಮೇರುಮಹೀರುಹಕ್ಕೆ ಬಂ
ದೆಱಗುವ ಚಂಚರೀಕದವೊಲಾಕೆಯ ಕೇಕರಮನ್ಯರಾಜಕ
ಕ್ಕೆಱಗದೆ ರಾಘವಂಗೆಱಗೆ ಕಂಚುಕಿ ಕಣ್ಣಱಿದಾ ಲತಾಂಗಿಗ
ಟ್ಕಱೊಳಭಿವರ್ಣಿಸಲ್ ಬಗೆದಳಾ ಧರಣೀಶಗುಣೈಕದೇಶಮಂ ೧೬

ಪ್ರಾಕೃತನಲ್ಲಸೀ ದಶರಥಾಗ್ರತನೂಭವನೇಕವಾಕ್ಯನಾ
ಶಾ ಕರಿಕರ್ಣ ಚಾಮರಯಶಂ ಚರಮಾಂಗನನಂತವೀರ್ಯನಿ
ಕ್ಷ್ವಾಕು ಕುಲಾಮೃತಾರ್ಣವ ಸುಧಾಕಿರಣಂ ರಣಮೇರು ಲೋಕಲುಂ
ಟಾಕ ನಿದಾಘ ತಾಪಹರ ವರ್ಷಣಮೇಘನುದಾತ್ತರಾಘವಂ ೧೭

ಎಂಬುದುಮಾ ಸಮಯದೊಳ್ ಈ ವಜ್ರಾವರ್ತಕೋದಂಡಮನೇಱಿಸಲ್ ಸಾಲ್ವ ಪ್ರಚಂಡಂ ವರಂ ಜನಕಜೆಗೆ ಬರ್ಪುದೆಂಬೀ ವ್ಯವಸ್ಥೆ ಪಸರಿಸೆ ನಿಜ ಪೀಠಂಗಳಿಂದೆೞ್ದು ನೆರೆದರಸುಮಕ್ಕಳೆಲ್ಲರಾ ಬಿಲ್ಲಂ ಕಂಡು ಬಲ್ಗಂ ಪೊಡೆದಂತೆ ಪೆಡಂಮಗುಳೆ ಬಲಭದ್ರಂ ರಜತಾದ್ರಿ ಬರ್ಪ ತೆಱದಿಂ ಬಂದಾ ವಿಷಮ ಕೋದಂಡಮನೇರಂಡಕಾಂಡಮಂ ಬಗೆವಂತು ಬಗೆದು

ಇರ್ಪೆ ಭರಂಗೆಯ್ದನೆ ಗೊಲೆ
ಗೊರ್ವೊದಲೊತ್ತಿದನಗುರ್ವು ಮೆಯ್ವೆತ್ತುದಸಾ
ಕಾರ್ಮುಕಮಂ ರಘುವೀರನ
ದೋರ್ಮಂಡಲಶಕ್ತಿ ಮನುಜಸಾಧಾರಣಮೇ ೧೮

ಪುಲಕಂ ಜಾನಕಿಗುತ್ಸವಂ ಜನಕರಾಜಂಗುಮ್ಮಳಂ ಖೇಚರಾ
ವಲಿಗುದ್ವೇಗಭರಂ ನರೇಂದ್ರಸುತಸಂದೋಹಕ್ಕೆ ಸಮ್ಮೋಹನಂ
ಲಲನಾಶ್ರೇಣಿಗೆ ವಿಸ್ಮಯಂ ಪುರಜನಕ್ಕಾಕರ್ಷಣಂ ಲೋಚನಾ
ವಲಿಗಾಯ್ತೇಱಿಸಿ ಸೀವಿ ಜೇವೊಡೆಯೆ ವಜ್ರಾವರ್ತಮಂ ರಾಘವಂ ೧೯

ತದನಂತರಂ ಜಾನಕೀದೇವಿ

ಆವೆಡೆ ಹಂಸಿಗೀ ನಡೆಯ ಚೆಲ್ವಿನೆ ನೂಪುರದಿಂಚರಂ ಸ್ಮರಂ
ಜೇವೊಡೆದಂದಮಾಗೆ ಮೃದುಪಾದತಳಂಗಳ ಕೆಂಪು ಕೂಡೆ ಕೆಂ
ದಾವರೆವೂಗಳಂ ಕೆದಱುವಂತಿರೆ ಕುಂತಳಸೌರಭಕ್ಕೆ ಭೃಂ
ಗಾವಳಿ ಮೇಲೆ ಪೀಲಿದಡೆಯಂತಿರೆ ಬಂದಳದೊಂದು ಲೀಲೆಯಿಂ ೨೦

ಅಂತು ಬಂದು ಮಾಲೆಸೂಡೆ

ಅದಟಂ ವಜ್ರಾವರ್ತ
ಕ್ಕೆ ದಿವ್ಯಮೆನಿಸಿದ ಹಲಾಯುಧಂ ಬೆರಸು ಬಲಂ
ಗದೆವೆರಸು ಸಾಗರಾವ
ರ್ತದಿವ್ಯಚಾಪಕ್ಕುಪೇಂದ್ರನಧಿಪತಿಯಾದಂ ೨೧

ಚಂದ್ರಾಸ್ಯೆಯುರಂ ಮನದೊಳು
ಪೇಂದ್ರಂಗೀರೊಂಬದಿಂಬರಂ ನಿರ್ಜಿತ ದೇ
ವೇಂದ್ರಗಣಿಕೆಯುರಸಂಕದ
ಚಂದ್ರಧ್ವಜನಳ್ಕಿ ಕಪ್ಪಮಿಾವವೊಲಿತ್ತಂ ೨೨

ಆಗಳ್

ಅನರಣ್ಯಾಸುತಂ ದಶರಥ
ಜನಪತಿ ಕರಘಟೆಯೊಳಶ್ವದಟದೊಳುಪೇಂದ್ರಂ
ಜನಕ ತನೂಜೆಯುಮಂ
ರಾಮನುಮಂ ಮುಂದಿಟ್ಟು ಮಿಥಿಳೆಗಭಿಮುಖರಾದರ್ ೨೩

ಅಂತು ಪುರಮಂ ಪೊಕ್ಕು ವಿವಾಹಮಂಡಪದೊಳ್ ಜನಕನಭಿಜನಸನಾಭಿ
ಜನ ಸಮನ್ವಿತಂ

ಜಗತೀ ಜಂಗಮ ಕಲ್ಪವೃಕ್ಷಮಿದೆ ಕಯ್ವಂದತ್ತೆನಲ್ ಬಾಹು ಶಾ
ಖಗಳೊಳ್ ಪೊಂಗಳಸಂ ಮಸಂಗೊಳಿಸೆ ಭೂಪಂ ತನ್ನ ಸಂತಾನ ವೃ
ದ್ಧಿಗೆ ಪೊಯ್ನೀರೆಱೆವಂತೆ ಹರ್ಷಪುಲಕಂ ಕಯ್ಗಣ್ಮೆ ಹರ್ಷಾಶ್ರು ಕ
ಯ್ಮಿಗೆ ಕಯ್ನೀರೆಱೆದಂ ಪಳಂಚೆ ದೆಸೆಯಂ ಮಾಂಗಲ್ಯ ತೂರ್ಯಸ್ವನಂ ೨೪

ಅಂತು ಪಾಣಿಗ್ರಹಣಂಗೆಯಿಸುವುದುಂ

ತೆಂಕಣ ಗಾಳಿಯ ಸೋಂಕಿನೊ
ಳಂಕುರಿಸಿದ ಚೂತಲತೆಯವೋಲ್ ಕೆಂದಳಮಂ
ಸೋಂಕೆ ಬಲಕರತಳಂ ಪುಲ
ಕಾಂಕುರವೊಗೆದುವು ಜಾನಕಿಯ ತನುಲತೆಯೊಳ್ ೨೫

ಅಪಮಾನಿಸಿದಂ ಬಾಲಾ
ತಪಮೆಳಸಿದ ಪುಂಡರೀಕ ಷಂಡದ ಸೊಬಗಂ
ಚಪಲಾಕ್ಷಿಯ ಕೋಮಳ ಪಾ
ಣಿಪಲ್ಲವ ಸ್ಪರ್ಶಹರ್ಷದಿಂ ರಘುರಾಮಂ ೨೬

ಅತಿಲಲಿತಾಕೃತಿಯಂ ದಂ
ಪತಿಯಂ ನೋಡಿದುದು ಪುರಜನಂ ನೋಡುವವೋಲ್
ಶತಮುಖನಂ ಶಚಿಯಂ ರತಿ
ಪತಿಯಂ ರತಿಯಂ ಹಿಮಾಂಶುವಂ ರೋಹಿಣಿಯಿಂ ೨೭

ತೊಡವುಗಳೀ ಸರೋಜದಳ ನೇತ್ರೆಯ ಮೆಯ್ವೆಳಗಿಂದುಪಾಶ್ರಯಂ
ಬಡೆದುವು ನೋಟ್ಪರುಮ್ಮಳಿಸುವಂತಿರೆ ರತ್ನವಿಭೂಷಣಂಗಳಿ
ರ್ದೆಡೆಯ ವಿಳಾಸಮಂ ಮಱಸಿದಪ್ಪುವೆನಲ್ ತೊಡವಾಕೆಗೊಪ್ಪಮಂ
ಪಡೆವೆಡೆಗಲ್ಲಮಾ ವಧುಗೆ ಮಂಗಳಕಾರಣಮಲ್ತೆ ಭೂಷಣಂ ೨೮

ಎಂದು ಪುರಜನಂಗಳತಿಕುತೂಹಲದಿನವಲೋಕಿಸುತ್ತಿರ್ಪುದುಮಾ ವಿವಾಹ
ಮಂಗಲ ಮಹೋತ್ಸವ ಮಹಾಮಹಿಮೆಯೊಳ್ ರಾಮಚಂದ್ರಂ ಚಂದ್ರೋ
ದಯದ ಸಮುದ್ರದಂತೆ ಪೆರ್ಚಿವಡೆದು

ಪಡೆದಂ ಶಾಶ್ವತಲಕ್ಷ್ಮಿಯಂ ಪರಹಿತವ್ಯಾಪಾರಮಂ ಪಾಲಿಸಲ್
ಪಡೆದಂ ಪನ್ನಗರಾಜದಿವ್ಯಧನುವಂ ಭೂಚಕ್ರಮಂ ರಕ್ಷಿಸಲ್
ಪಡೆದಂ ದರ್ಪಕರೂಪದರ್ಪಮನದಿರ್ಪಲ್ ಮೂರ್ತಿಯಂ ಕೀರ್ತಿಯಂ
ಪಡೆದಂ ಕೀಲ್ಪಡಿಸಲ್ ಸುಧಾಜಲಧಿಯಂ ಸಾಹಿತ್ಯವಿದ್ಯಾಧರಂ ೨೯

೩. ವನಪ್ರಯಾಣಂ

ಅಂತು ರಾಮಲಕ್ಷ್ಮಣರೊಳುದಿತೋದಿತಮಾದಗಣ್ಯ ಪುಣ್ಯಪ್ರಭಾವಮಂ ಕಂಡು

ಸಿರಿಯಂ ಮೈಮೆಯುಮಾದುವಗ್ರಜರೊಳಾಯ್ತಿಲ್ಲೆನೋಳೆಂಬೀವದಿಂ
ಭರತಂ ಲೋಭರತಂ ವಿಷಾದಭರ ತಂದ್ರೀಭೂತ ಚಿತ್ತಂ ತಪೋ
ಭರ ತೃಷ್ಣಾಪರನಪ್ಪುದಂ ತಿಳಿದು ತದ್ವೃತ್ತಾಂತಮಂ ಕೈಕೆ ವೋ
ಹರಸಂ ಕಯ್ಮಿಗೆ ಕಾದಲಂಗೆ ಪತಿಗಂದಿಂತೆಂದಳೇಕಾಂತದೊಳ್ ೧

ಭರತನ ವದನಾಂಭೋಜಂ
ಕೊರಗಿದುದು ಮನಸ್ಸರೋಜದೊಡನೆತ್ತಾನುಂ
ಪರಿಣಯನೋತ್ಸವ ಚಿಂತಾ
ಭರಮಾತನ ಬಗೆಗೆ ಬಂದುದಾಗಲೆವೇೞ್ಕುಂ ೨

ಎನೆ ಮನದೆ ಕೊಂಡು ಜನಕನುಮಂ ಕನಕನುಮಂ ಬರಿಸಿ

ಅನುಬಂಧ ಪರಂಪರೆಯಂ
ಜನಿಯಿಸಲೆಮಗತ್ತಿಯಾದುದೀವುದು ನಿಜನಂ
ದನೆಯುನನುರೂಪೆಯಂ ಮ
ತ್ತನಯಂಗೆನೆ ದಶರಥಂಗೆ ಕನಕಂ ನುಡಿದಂ ೩

ಮುನ್ನಮೆ ಭರತಂಗೀವೆಂ
ಕನ್ನೆಯನೆಂಬಳಿಪು ಮನದೊಳಿರೆ ಮನದಳಿಪಂ
ಬಿನ್ನವಿಸಲಿರ್ದೆನಾ ಬೆಸ
ನಂ ನಿಮ್ಮಡಿ ಬೆಸಸೆ ಬಯಕೆ ಕೂಡಿದುದೀಗಳ್ ೪

ಎಂದಂದಿನ ದಿನದೊಳೆ ಮೌಹೂರ್ತಿಕ ನಿರೂಪಿತ ಶುಭಮುಹೂರ್ತದೊಳ್

ಇನಿವಿರಿದು ವಿಭವಮಾದುದೆ
ಜನಕತನೂಭವೆಯ ಮದುವೆಯೊಳವೆಂಬಿನೆಗಂ
ಕನಕಪ್ರಭೆಯಂ ಪಡೆಪಿಂ
ಕನಕಂ ಭರತಂಗೆ ಮದುವೆ ಮಾಡಿದನಾಗಳ್ ೫೪

ಅಂತು ವಿವಾಹಮಂಗಳೋತ್ಸವಾನಂತರಂ ಜನಕಂ ರಾಜ್ಯಚಿಹ್ನಮುೞಿಯೆ ಉೞಿದ ವಸ್ತುವಾಹನಾದಿಗಳಂ ಸೀತೆಗೆ ಒೞಿವೞಿಗೊಟ್ಟು ಅಯೋಧ್ಯೆಗೆ ಕೞಿಪುವುದುಂ ದಶರಥಂ ಕತಿಪಯ ಪ್ರಯಾಣಂಗಳಿಂ ವಿನೀತಾನಗರಮಂ ಪೊಕ್ಕಿರಲೊಂದು ದಿವಸಂ ಋಷಿನಿವೇದಕಂ ಸಮಯೋಚಿತ ಸುಮನೋದರ್ಶನಮನಿತ್ತು ದೇವ ನಮ್ಮ ಸರಯೂ ನದೀ ತೀರದ ಮಹೇಂದ್ರೋದ್ಯಾನದೊಳ್ ಮನಃಪರ್ಯಯಜ್ಞಾನಿಗಳಪ್ಪ ಸರ್ವಭೂತಹಿತ ಭಟ್ಟಾರಕರ್ ಮಹರ್ಷಿ ಸಮುದಾಯಂಬೆರಸು ಯೋಗನಿಯೋಗದಿಂದಿರ್ದರೆಂದು ಬಿನ್ನವಿಸೆ ದಶರಥನೃಪಂ ಪರಿಮಿತ ಪರಿಜನಂಬೆರಸು ಆ ಮುನೀಂದ್ರರಿರ್ದ ಮಹೇಂದ್ರೋದ್ಯಾನಕ್ಕೆ ಬಂದು ಬಲಗೊಂಡು ಗುರುಭಕ್ತಿಪೂರ್ವಕಂ ವಂದಿಸಿ ಎನ್ನ ಭವಾವಳಿಯಂ ದಯೆಯಿಂ ನಿಮ್ಮಡಿ ಬೆಸಸಿಮೆಂದು ಕಯ್ಮುಗಿದಿರೆ

ಯತಿಪತಿ ಪೇೞೆ ಕೇಳ್ದು ಭವಸಂತತಿಯಂ ಬಗೆದಾಜವಂಜವ
ಸ್ಥಿತಿಯನನಾದಿಯಂ ಸುಕೃತ ದುಷ್ಕೃತ ಕರ್ಮ ವಿಪಾಕ ಸೌಖ್ಯ ದುಃ
ಸ್ಥಿತಿಗಳನುಂಡು ಊಟಳದ ಗುಂಡಿಗೆಯಂತೆವೊಲಾಡೆನೆಂದು ನಿ
ರ್ವೃತಿ ಸುಖದತ್ತಲಾಟಿಸಿದನೇಂ ರಘುಸೂನು ಮಹಾನುಭಾವನೋ ೬

ಅವಚಱಿದಿನ್ನೆಗಂ ಸವಿದೆನಿಂದ್ರಿಯ ಸೌಖ್ಯಮನಗ್ರನಂದನಂ
ಕವಚಹರಂ ಜಿತಾಹಿತಬಲಂ ಬಲಸನ್ನಿರಲ್ ಮಹಾ ಪರಾ
ಭವಮಿದಱಿಂದಮಾವುದೆನಗೆಂದಿರದುತ್ತರಿಸಲ್ಕೊಡರ್ಚಿದಂ
ಭವಜಲರಾಶಿಯಂ ದಶರಥಂ ಜಿನರೂಪ ವಹಿತ್ರ ಯಾತ್ರೆಯಿಂ ೭

ಆಱಿವೆಣ್ಣಾದೊಡವೊಂದೆರಟ್ಟಿವಸವೊಂದಾಗಿರ್ದವಂ ನಂಟನಂ
ದುೞಿದಂದನ್ಯರನಾಸೆಗೆಯ್ಯುಳವಳಿಂ ನಿವ್ರ್ಯಾಕುಳಂ ಪೊಲ್ಲಿವಳ್

ಪಟಿಗಂಜಳ್ ಭರತಾದಿಗಳ್ ಪಲವುಕಾಲಂ ತನ್ನೊಳೋತಿರ್ದವರ್
ಕಟಿದಂದಾ ಕ್ಷಣದೊಳ್ ಧರಾರಮಣಿ ಮತ್ತೊರ್ವಂಗೆ ಪುರ್ವಿಕ್ಕುವಳ್ ೮

ಸಾವ ಪುಟ್ಟುವ ಭಯಮುಂ ಸಂಸಾರಮುಂ ಸಪ್ತಧಾತುಜಮುಂ ದೇಹಸ್ಥಿತಿಯ
ನಾವ ವಸ್ತುವನುಂಡೊಡಂ ತಣಿಯದ ಕಾಂಕ್ಷೆಯುಂ ಬಗೆದು ತನ್ನೊಳ್
ಏವುದೀ ತೊಡರ್ಪಿನಗಿದೇಕೆಂದು ದಶರಥಂ ಭಾವಿಸಿ ಭಾವಿತಾತ್ಮಂ
ಭಾವಿತಾತ್ಮಸಂ ಪರಮಯೋಗೀಂದ್ರನಂ ಬೀಡ್ಕೊಂಡಯೋಧ್ಯೆಗೆ
ಬಂದನಾಗಳ್ ೯

ಅಂತು ಬಂದೊಡ್ಡೋಲಗಂಗೊಟ್ಟು ದಶರಥ ಮಹೀನಾಥಂ ನಿಜತನೂಭವರಂ ಬರವೇಟ್ಟಿಟ್ಟುವುದುಂ ತದಾಜ್ಞೆಯುಂ ತಲೆಯೊಳಾಂತು ಬಂದು ರಾಘವಂ ಭಕ್ತಿಯಿಂದೆಱಗೆ ಅನಂತರಂ ಲಕ್ಷ್ಮಣ ಭರತ ಶತ್ರುಘ್ನರುಂ ಸರ್ವಾಂಗಪ್ರಣತರಾಗೆ ಅನಂತಸುಖಭೋಗ ಭಾಗಿಗಳಾಗಿಮೆಂದು ಪರಸಿ ಪಾರ್ಶ್ವದೊಳಿಕ್ಕಿದ ಮಣಿಮಯಾಸನಂಗಳೊಳ್ ಕುಳ್ಳಿರಿಸಿ ದಶರಥಂ ರಾಮಚಂದ್ರನಂ ನೋಡಿ

ನೊಸಲೊಳ್ ಕಣ್ಬಡೆದಂತೆ ಪುತ್ರ ಪಡೆದೆಂ ನಿನ್ನಂ ಸ್ಫುರತ್ತೇಜಸಂ
ವಸುಧಾರಾಜ್ಯಮನೊಪ್ಪುಗೊಳ್ ನಿಲಿಸು ನೀನೆನ್ನಂ ತಪೋರಾಜ್ಯದೊಳ್
ಪಸುಗೂಸಿಂಗೆಸಗಿತ್ತು ಮಜ್ಜನಕನೀ ಸಂಪತ್ತಿಯುಂ ಪೂಣ್ದು ಸಾ
ಧಿಸಿದಂ ಸಜ್ಜನತಾ ಶರಣ್ಯನರಣ್ಯಾಂ ಮೋಕ್ಷಸಂಪತ್ತಿಯುಂ ೧೦

ಸುತ ನಮ್ಮನ್ವಯದೊಳ್ ಪುರಾತನ ಜಗದ್ವಿಖ್ಯಾತ ಭೂನಾಥರೀ
ಸ್ಥಿತಿಯಿಂ ರಾಜ್ಯಸುಖಂಗಳೊಳ್ ತಣಿದು ತತ್ವಾಭ್ಯಾಸ ವಿಶ್ರಾಂತ ಜೀ
ವಿತರಾದರ್ ಮಱೆದೀ ಕುಲಕ್ರಮಮನಾನಿಂತಿರ್ದು ಸನ್ಮಾರ್ಗ ಪ
ದ್ಧತಿಯುಂ ಹಾಸ್ಯರಸ ಪ್ರವಾಹಭರದಿಂ ಪ್ರಕ್ಷಾಳಿತಂ ಮಾಡ್ಪನೇ ೧೧

ಎಂಬುದುಂ ರಾಮಚಂದ್ರಂ

ಬಲವದರಾತಿ ಮಂಡಲಮನಂಡಲೆವುದ್ಧತ ಬಾಹುದಂಡದಿಂ
ದಿಳೆಯನಿಳೇಶ ನೀಂ ತಳೆದುದಂ ರಣಬಾಲಕರೆಮ್ಮವಂದಿಗರ್
ತಳೆವರೆ ವಿಶ್ವಲೋಕಮುಮನಶ್ರಮದಿಂ ಪ್ರಬಲ ಪ್ರಭಂಜನಂ
ತಳೆವವೊಲಕ್ಷಮಂ ತಳೆಯಲಾರ್ಕುಮೆ ವೀಜನ ಮಂದಮಾರುತಂ ೧೨

ಎನೆ ದಶರಥಂ ತನಯುನ ವಿನಯುವಚನಮಂ ಮನದೆ ಕೊಂಡು

ತನಯಂಗೊಪ್ಪಿಸಿ ರಾಜ್ಯಮಂ ನಿಯಮದಿಂ ನಿಲ್ವರ್ ತಪೋರಾಜ್ಯದೊಳ್
ಮನುವಂಶಕ್ಷಿತಿನಾಥರೀ ಸ್ಥಿತಿಗೆ ನಿನ್ನಂ ಪ್ರಾರ್ಥಿಸಲ್ವೇಡ ನಂ
ದನ ಸಂಕ್ರಂದನವಂದನೀಯ ಪದದೊಳ್ ನಿಲ್ವೆಂ ತಪೋರಾಜ್ಯದೊಳ್
ನಿನಗಸ್ಮದ್ವಚನಂ ವಿಧೇಯಮದಱಿಂ ಕಯ್ಕೊಳ್ ಧರಾಭಾರಮಂ ೧೩

ತಿಲಕಾಕಾರದಿನಿರ್ಕೆ ನಿನ್ನ ನೊಸಲೊಳ್ ಸಾಮ್ರಾಜ್ಯಪಟ್ಟಂ ಧರಾ
ವಲಯಾಲಂಕೃತಮಕ್ಕೆ ನಿನ್ನ ಭುಜದಂಡಂ ನಿನ್ನ ಮೌಳಿಪ್ರಭಾ
ವಲಿಯಿಂ ಚಿತ್ರಿತಮಕ್ಕೆ ಬೆಳ್ಗೊಡೆ ತಪಶ್ರೀಗಾಂ ಮನಂದಂದೆನೆ
ನ್ನೊಲವಂ ಪಾಲಿಸು ಪಾಟಿಯಲ್ತು ಪಿತೃವಾಕ್ಯೋಲ್ಲಂಘನಂ ರಾಘವಾ ೧೪

ಎಂದಿವು ಮೊದಲಾಗೆ ಪಲತೆಱದಿಂ ಮಱುಮಾತಿಂಗೆಡೆಯಿಲ್ಲದಂತು ನುಡಿ ದೆಂತಾನುಂ ರಾಮನನೊಡಂಬಡಿಸಿ ರಾಜ್ಯಸ್ಥನಪ್ಪಂತು ಮಾಡೆ ಭರತಂ

ಒಡಲಶುಚಿತ್ವಮಂ ಗತಿಚತುಷ್ಟಯದೊಳ್ ದೊರೆಕೊಳ್ವನಿಷ್ಟಮಂ
ಕಿಡುವ ಸುಖಂಗಳಿಂ ತಣಿಯದಾಯುಸಮಂ ತಿಳಿದಿರ್ದುಮೇನೊ ನಿ
ಮ್ಮಡಿ ನಿಮಗಳ್ಕಿ ಬಿನ್ನವಿಸಲಿನ್ನೆವರಂ ಸೆಡೆದಿರ್ದೆನಿನ್ ನೆರಂ
ಬಡೆದೆನಿಳೇಶ ನಿಮ್ಮೊಡನೆ ಸಾಧಿಸುವೆಂ ಪರಮಾರ್ಥ ಸೌಖ್ಯಮಂ ೧೫

ಎಂದು ತಱಿಸಂದು ಬಿನ್ನವಿಸೆ ತತ್ಸಭೆಯೊಳೊರ್ವಳತಿತ್ವರಿತಗತಿಯಿಂ ಬಂದು ರಾಮಂಗೆ ರಾಜ್ಯಮನಿತ್ತು ದಶರಥಂ ಭರತಂಬೆರಸು ತಪೋವನಕ್ಕೆ ಪೋಪುದಂ ನಿವೇದಿಸೆ ಕೈಕೆ ವಿಕಳೆಯಾಗಿ

ಧರೆಯಂ ರಾಮಂಗಿತ್ತಂ
ಗುರುವಾನಳಿಪಿಂದಮಿರ್ದೊಡೆನಗಕ್ಕುಂ ಕಿಂ
ಕರ ಭಾವಮೆಂಬ ಬಗೆಯಿಂ
ಭರತಂಗೊಡರಿಸಿದುದಕ್ಕುಮಿಾ ನಿರ್ವೇಗಂ ೧೬

ಅವನೀಶ್ವರನೊಡನೆ ತನೂ
ಭವಂ ತಪಂಬಟ್ಟೊಡಾಸೆಯಾರೆನಗೆಂದಾ

ಯುವತಿ ಭಯಚಿಕಿತೆ ಚಿಂತಾ
ರ್ಣವಗರ್ತೆಸಿಮಗ್ನೆ ಮಱೆದಳೆಮೆಯಿಕ್ಕುವುದಂ ೧೭

ತಕ್ಕಟಿದೆನಗೆ ಸಪತ್ನಿಯ
ರಿಕ್ಕಂಗೂಟಿಂಗೆ ಬಯಸಿ ಪಾರ್ದಿರ್ಪ ವಿಷಾ
ದಕ್ಕೆ ಗುಱಿಯಪ್ಪ ದುರ್ಯಶ
ಮಕ್ಕುಂ ತನಯುಂ ತಪಕ್ಕೆ ಪಕ್ಕಾಗಲೊಡಂ ೧೮

ಎಂದು ಪಲುಂಬಿ ಪಂಬಲಿಸುತ್ತುಮಾ ಸಮಯದೊಳ್

ತನಗಿನಿಯನಿತ್ತ ಮೆಚ್ಚಂ
ನೆನೆದಳ್ ಮಡಗಿಟ್ಟು ಮಱೆದ ಧನಮಂ ಬಡವಂ
ನೆನೆವಂತೆ ಕಾಂತೆ ಚಿಂತಾ
ಘನಾಂಧಕಾರ ಪ್ರದೀಪ ರೂಪೋಪಮಮಂ ೧೯

ಅಂತು ನೆನೆದು ಮನದೊಳ್ ಗುಡಿಗಟ್ಟಿ ಭರತನಂ ರಾಜ್ಯಮೋಹದೊಳ್ ತೊಡರ್ಚಲೆಂದೊಡರ್ಚಿ

ಕನಕ ವಿಭೂಷಣ ಪ್ರಭೆ ತನುಪ್ರಭೆಯಿಂ ತನಿಗೊರ್ವುಗೊರ್ವೆ ಮೋ
ಹನಮನೊಡರ್ಚಲೆಂದು ಗುಣಹಾನಿಗೆ ಬೆರ್ಚದೆ ಧರ್ಮಹಾನಿಯಂ
ನೆನೆಯದೆ ಪಾತ್ರಸೇವೆ ವೃಥೆಯಾದುದೆಸಲ್ ಮಲಿನಾಂತರಂಗೆ ಟ
ಕ್ಕಿನ ಸೊಡರಂತೆ ಕೈಕೆ ಪುಗುತಂದಳಿಳಾಧಿಪ ರಮ್ಯಹರ್ಮ್ಯಮಂ ೨೦

ಅನುಚಿತಮೆಂಬಿದಂ ಬಗೆಗೆ ತಾರದೆ ದುರ್ಯಶಮಕ್ಕುಮೆಂಬಿದಂ
ನೆನೆಯದೆ ಕೈಕೆ ದೇವರೆನಗೀವುದು ಬಯ್ಕೆಯ ಮೆಚ್ಚನೆಂಬುದುಂ
ಮನುಕುಲದೊಳ್ ತೊದಳ್ನುಡಿ ಪೊದಳ್ಗುಮೆ ಬೆರ್ಚದೆ ಬೇಡಿಕೊಳ್ ತಪೋ
ವನಗಮನಕ್ಕೆ ವಿಘ್ನಕರಮಲ್ಲದುದಂ ಮೃಗಶಾಬ ಲೋಚನೇ ೨೧

ಎನೆ

ವದನ ಸುಧಾಂಶು ಬಿಂಬದ ಕಳಂಕದ ಬಿತ್ತುಗಳಂತೆ ವಕ್ತ್ರಪ
ದ್ಮದ ಮಧುಪಾನಮಂ ಸವಿದು ಸೋರ್ಕಿದ ತುಂಬಿಗಳಂತೆ ನೀಳ್ದುವಾ
ಸುದತಿ ಸಮಗ್ರನಗ್ರಜನಿರಲ್ ಪಟಿಗಂಜದೆ ಪಾಪಭೀರುವಾ
ಗದೆ ಭರತಂಗೆ ರಾಜ್ಯಭರಮಂ ಕುಡವೇಳ್ದ ಮಲೀಮಸೋಕ್ತಿಗಳ್ ೨೨

ದಶರಥನಂ ಕೈಕೆ ಚತು
ರ್ದಶ ವರ್ಷಾವಧಿಯುಸವನಿಯಂ ಬೇಡೆ ಚತು
ರ್ದಶ ಭುವನಾವಧಿಯೆನೆ ದು
ರ್ಯಶಃಪಟಹನಾದಮಾದವೋನೊದವಿದುದೋ ೨೩

ಡೋಲಾಯಮಾನ ಮನನ
ಸ್ತ್ರಾಲಾಪಂ ಗತಮನೋರಥಂ ದಶರಥನಾ
ಬಾಲೆಯ ದನಿ ಕಿವಿವುಗೆ ಘನ
ಮಾಲೆಯ ದನಿಗೇಳ್ದ ಹಂಸನಂತಳವಟಿದಂ ೨೪

ಎರಡಕ್ಕುಂ ನುಡಿ ಮೆಚ್ಚುಗೊಟ್ಟು ಕುಡದಂದೀ ಕೈಕೆಗಾನಿತ್ತೊಡಂ
ಧರೆಯುಂ ಸ್ತ್ರೀಜಿತನಾಗಿ ಕೊಟ್ಟನವನೀಶಂ ರಾಮನಿರ್ದಂದದಿಂ
ಭರತಂಗೆಂಬಪವಾದಮಕ್ಕುಮದಱಿಂದೇನೆಂಬೆನಾನೆಂದು ಮೂ
ಗರವೊಲ್ ಮೌನದೊಳೊಂದಿ ಪಚ್ಚ ಬಗೆಯಿಂದುಮ್ಮಚ್ಚಮಂ ತಾಳ್ದಿದಂ ೨೫

ಅಂತು ದಶರಥ ನರನಾಥಂ ಚಿಂತಾಕ್ರಾಂತನಾಗಿರ್ಪುದುಂ

ಮಜ್ಜನನಿ ನೆಲನನೆನಗ
ಸ್ಮಜ್ಜನಕನನೆಿದಳೆಂದು ನೊಂದಂ ಭರತಂ
ಲಜ್ಜಾನತನಭಿಮಾನದ
ಪಜ್ಜೆಯನೇಂ ತಪ್ಪಿ ಮೆಟ್ಟಲಱಿಗುಮೆ ತಕ್ಕಂ ೨೬

ಇಷ್ಟಮೆನಗಲ್ತು ಪತಿಗಮ
ನಿಷ್ಟಂ ಭಾವಿಸಿದಳಿಲ್ಲ ತನಗಂ ದೃಷ್ಟಾ
ದೃಷ್ಟ ವಿರೋಧಂ ದುರ್ಣಯ
ಚೇಷ್ಟಿತಮಂ ಜನನಿ ಮುಗ್ಧಮತಿ ತಿಳಿದಪಳೇ ೨೭

ಎಂದು ಭರತಂ ವಿಷಾದಭರ ತಂದ್ರೀಭೂತ ಚೇತಸನಾಗಿರ್ಪುದುಂ

ನುಡಿದಳನಿಷ್ಟಮಂ ನುಡಿದಳನ್ನೆಯಮಂ ಪತಿಗಂ ವಿರುದ್ಧಮಂ
ನುಡಿದಳಸೇವ್ಯಮಂ ನುಡಿದಳನ್ವಯರಾಜ್ಯ ವಿನಾಶ ಹೇತುವಂ
ನುಡಿದಳೆನುತ್ತುಮಳ್ಕದೆ ನರೇಂದ್ರ ಸಭಾಜನಮಂದು ಕೈಕೆಯಂ
ನುಡಿದುದು ಮೆಚ್ಚಿದಂದದೊಳೆ ದೋಷಮೆ ದುರ್ಬಲಮಾಗದಿರ್ಕುಮೇ ೨೮

ಮನದಳಿಪಿಲ್ಲದಂಗನೆಯರೊರ್ವರುಮಿಲ್ಲೆನೆ ಕೈಕೆ ಬೇಡಿ ಮೇ
ದಿನಿಯನದೇಕೆ ಮಾಡಿದಳೊ ಮುಗ್ಧೆ ಸಹೋದರರೊಳ್ ವಿಭೇದಮಂ
ತನಗಪವಾದಮಂ ದಶರಥಂಗೆ ವಿಷಾದಮನೀಗಳಾತ್ಮನಂ
ದನನ ಮನಕ್ಕೆ ಖೇದಮನದೊಂದುಚಿತಾಚರಣ ಪ್ರಮಾದಮಂ ೨೯

ಗುಣಹಾನಿಗೆ ಬೆರ್ಚದೆ ಧಾ
ರಿಣಿಯಂ ಪ್ರಣಯದಿನಿಳೇಶನಿತ್ತೊಡಮೇಂ ಲ
ಕ್ಷ್ಮಣನೀಯಲೀಯನೆಂಬುದ
ನೆಣಿಸಳೆ ಜಡಮತಿಗಳಾಗದಿರ್ಪರೆ ಪೆಂಡಿರ್ ೩೦

ಭರತಂ ಲಜ್ಜಾನತಂ ತಾಯ್ ವಿಕಳೆ ದಶರಥಂ ವಿಹ್ವಲಂ ಲಕ್ಷ್ಮಣಂ ಕೋ
ಪರಸಾವೇಶಂ ಸಭಾಮಂಡಲಮಸಕೃದಸದ್ವಾಕ್ಯಮುಕ್ತೋಷ್ಠಮಂತಃ
ಪುರಮಂತಶ್ಶೂನ್ಯಮಿಂತಿರ್ಪುದುಮುಪಚಿತ ಕಾರುಣ್ಯ ದೃಷ್ಟಿಪ್ರಭಾ ನಿ
ರ್ಭರಪೂರಂ ಪಾರಿಜಾತಂ ಕಡಲ ನಡುವೆ ಕಯ್ವಂದವೋಲ್ ರಾಮನಿರ್ದಂ ೩೧

ತಂದೆಯ ನನ್ನಿ ನಿಲ್ವುದು ಮನೋರಥಮಪ್ಪುದು ತಾಯ್ಗೆ ರಾಜ್ಯದೊಳ್
ನಿಂದಪನೆನ್ನ ತಮ್ಮನೊಸೆದಿತ್ತು ಕೃತಾರ್ಥನೆನಪ್ಪೆನೆನ್ನ ಸ
ಯ್ಪಿಂ ದೊರೆಕೊಂಡುದೀ ಪರಮಲಾಭಮೆನುತ್ತುಮುದಾತ್ತ ಚಿತ್ತನಾ
ನಂದಮನಪ್ಪುಕಯ್ದು ಪುಲಕೋದ್ಗಮಮಂ ತಳೆದಂ ಹಲಾಯುಧಂ ೩೨

ಅಸದನುಶಾಸನಂ ಸದವನಂ ನೃಪಲಕ್ಷಣವೊಂದು ಬಾಹುಸಾ
ಹಸಗುಣವೊಂದು ದಾನಗುಣಮಾಯೆರಡುಂ ನಿಮಿರ್ವಂತು ಪೋಗಿ ಸಾ
ಧಿಸುವೆನರಾತಿಮಂಡಲಮನೆನ್ನನುಜಂಗೆನಗಮ್ಮನಿತ್ತುದಂ
ವಸುಧೆಯನೀವೆನೆಂದು ಮನದೊಳ್ ತಳಿಸಂದನುದಾತ್ತರಾಘವಂ ೩೩

ಅಂತು ನಿಶ್ಚಯಿಸಿ ಕೈಕೆಯಿ ಮುಖಮಂ ವಿಲೋಕಿಸಿ ಮುಕುಳಿತಕರನುಂ ವಿಕಸಿತಹೃದಯನುಮಾಗಿ

ಪುಸಿ ಪೊಲಸಲ್ತು ನಾಲಗೆಗೆ ಪಂದೆತನಂ ಮೊಱೆಯಲ್ತು ಕಯ್ಯ ಕೂ
ರಸಿಗೆ ಕುಲಕ್ರಮಂ ರಘುಕುಲಕ್ಕಿದು ದೇವಿಯರ್ಗೆನ್ನ ದೂಸಱಿಂ
ಪುಸಿನುಡಿಯಂ ಮದೀಯಜನಕಂ ನುಡಿದಂದು ಜನಾಪವಾದಮೆ
ಣ್ದೆಸೆಗಮನರ್ಗಳಂ ಪರೆಗುಮಾನದನೇಳಿಸೆ ದೈನ್ಯಮಾಗದೇ ೧೪

ಧರೆಯಂ ತಂದೆಯನ್ನಿಗಿತ್ತು ಧರೆಯಂ ಕಯ್ಕೊಂಡೊಡೆನ್ನೊಳ್ಪ ಬೀ
ಸರಮುಕ್ಕುಂ ಬಗೆ ಕೂಡದಂದು ನಿಮಗಕ್ಕುಂ ಪ್ರಾರ್ಥನಾಭಂಗಮಿ
ಯೆರಡುಂ ದುರ್ಣಯಮೆನ್ನ ಕೀರ್ತಿಗೆ ಕಲಂಬಂ ಮಾಡುಗುಂ ರಾಜ್ಯಮಂ
ಭರತಂಗಟ್ಕಱೊಳಿತ್ತೆನೆನ್ನ ನುಡಿಯಂ ನೀನಿಂತು ನಂಬಂಬಿಕೇ ೧೫

ಎನಗೆ ಬೆಸಸಿದೊಡೆ ಸಾಲದೆ
ಜನನಿಯರೀ ಧರೆಯನೆನ್ನ ತಮ್ಮಂಗಾನೀ
ಯೆನೆ ಬೇಡವೇಟ್ಬುದೇ ಮ
ಜ್ಜನಕನನಿಲ್ಲಿವರಮಿಂತಿದಾವುದು ಗಹನಂ ೧೬

ಎಂದು ತಾಯ ಬಯಕೆಯಂ ತೀರ್ಚೆ ಉದಾತ್ತರಾಘವಂ ತಂದೆಯ ಮುಖಾರವಿಂದಮಂ ನೋಡಿ

ದೇವರೆನಗಿತ್ತೊಡಂ ವಸು
ಧಾವಲಯಮನಾಳ್ವರೆನ್ನ ತಮ್ಮಂದಿರ ಚಿಂ
ತಾವಿಷಯಮಲ್ತು ಭರತಂ
ಗೀವುದು ವಸುಮತಿಯನೆಮ್ಮೊಳಿಡೆಗಟ್ಟುಂಟೇ ೧೭

ಭರತಂ ತಪಕ್ಕೆ ನಡೆಗುಂ
ಧರೆಯೊಳ್ ನಿಲಿಸದೊಡೆ ಸುತನಗಲ್ಕೆಯೊಳಕ್ಕುಂ
ಮರಣಂ ಜನನಿಗೆ ನಿಮಗಂ
ದೊರೆಕೊಳ್ಗುಮದೃಷ್ಟಬಾಧೆವೆರಸಪವಾದಂ ೧೮

ಪಡೆಮಾತೇಂ ಸುತಮೋಹದಿಂ ದಶರಥಂ ಮಾತಾಡಿದಂ ತಪ್ಪಸೆಂ
ದೊಡೆ ದೇವರ್ಗಪವಾದಮಕ್ಕುಮೆಸಗಂ ರಾಮಂ ಗಡಂ ಕೇಳ್ದುಮಾ
ಸುಡಿಯುಂ ರಾಜ್ಯಮನಾಸೆಗೆಯ್ದಸೆನೆ ದೈನ್ಯಂ ಬರ್ಕುಮಿನ್ನಾಸೆಗೆ
ಯ್ದೊಡೆ ನಿಮ್ಮಾಜ್ಞೆಗೆ ತಪ್ಪಿದೆಂ ಸಲಿಸಿನೋರ್ಪಿಂಗೆನ್ನವಾಗ್ವೃತ್ತಿಯುಂ ೩೯

ಪದಿನಾಲ್ಕುಂ ವರ್ಷಮಂ ತಾಯ್ ತನಯನ ತಪಮಂ ಮಾಣಿಸಲ್ ರಾಜ್ಯ [ಮಂ ಬೇ
ಡಿದಳೊಳ್ಪಂ ಮಾಡಿದಳ್ ಸೋದರವಿರಹಿತಮೇಬಾಪ್ತ ಸಾಮ್ರಾಜ್ಯ ಸಂಪ
ತ್ಪದಮಸ್ಮದ್ಬಾಹುವೀರ್ಯ ಪ್ರಕಟದೊಲವಿಂದನ್ನೆಗಂ ದಿಗ್ಜಯೋದ್ಯೋ
ಗದಿನೀಗಳ್ ಪೋಗಿ ಒರ್ಪೆಂ ಭರತನ ನೊಸಲೊಳ್ ನಿಲ್ಕೆ ಸಾಮ್ರಾಜ್ಯಪಟ್ಟಂ ೪೦

ಎಂದು ಬಿನ್ನವಿಸಿದ ರಾಘವನಮೋಘ ವಾಕ್ಯ ಮಾಣಿಕ್ಯ ಕಿರಣ ದಿನಪಸಾರಿತಮೋಹಾಂಧಕಾರನಾಗಿ

ಪರಮಶ್ರೀವಲ್ಲಭಂಗೀ ಚರಮತನುಗಿದೇಬಾಪ್ತ ನಮ್ಮಾವ ರಾಜ್ಯಂ
ಪರಮಾಣುಪ್ರಾಯಮೊಂದಾ ತನಯನ ವಿನಯಕ್ಕಂ ನಯಕ್ಕಂ ಗುಣಕ್ಕಂ
ಚರಿತಕ್ಕಂ ಬೆಕ್ಕಸಂಬಟ್ಟಧಿಪತಿ ತಲೆಯಂ ತೂಗಿದಂ ಸೂಸುವನ್ನಂ
ಸುರಚಾಪಶ್ರೇಣಿಯಂ ಭಾಸುರ ಮಣಿಗಣ ನಾನಾಂಶುಕೂಟಂ ಕಿರೀಟಂ ೪೧

ಆ ಸಮಯದೊಳ್ ಭರತಂ

ಜ್ಯಾಯಸ ರಾಜ್ಯಮನಯ್ಯ ಕ
ನೀಯಸನಪೇಕ್ಷಿಸುವುದುಚಿತಮಲ್ತು ತಪೋರಾ
ಜ್ಯಾಯತ್ತಮೆನ್ನ ಚಿತ್ತಂ
ನ್ಯಾಯಾರ್ಜಿತಮಲ್ಲದೆನಿಪ ಧನಮೇಬಂಡಂ ೪೨

ಎನ್ನೆವರಂ ವೈರಾಗ್ಯಂ
ತನ್ನೊಳ್ ತಲೆದೋಱದನ್ನೆವರಮೊಲವಕ್ಕುಂ
ತನ್ನಂ ತಾನಱಿದ ಬಳಿ
ಕನ್ನರ್ಗಂ ವಿಷಯಸುಖದೊಳೊಲವಾದಪುದೇ ೪೩

ಎನೆ ದಶರಥಂ ಭರತನ ಪರಿಚ್ಛೇದವಮಂ ಮೆಚ್ಚಿ ತನಯ ನಿನಗಿದು ಸಮಯ ಮಲ್ಲದೆಂತೆನೆ

ಪರಮಪುರುಷಾರ್ಥಮಿರ್ದುದು
ಚರಮದೊಳನ್ನೆವರಮುಟಿದ ಪುರುಷಾರ್ಥದೊಳಾ
ಚರಿಸುವುದು ತಕ್ಕುದದಱಿಂ
ಪರಿವಿಡಿಯಂ ತಪ್ಪಲಾರ್ಗಮೇಂ ಬಂದಪುದೇ ೪೪

ಅದಱಿಂ ನಿನಗೆ ನಿಜಾಗ್ರಜನ ವಚನಮೆ ವಿಧೇಯಮೆನೆ ಮಱುವಾತುಗುಡ ಲಱಿಯದೆ ಭರತನಿರೆ ರಾಘವಂ

ನನ್ನಿಗೆ ಬನ್ನಮಾದೊಡಯಶಂ ಪಿರಿದಪ್ಪುದು ತಂದೆಗೆಂಬಿದಂ
ನಿನ್ನ ವಿಯೋಗದಿಂ ಜನನಿಗಪ್ಪುದು ಜೀವವಿಯೋಗಮೆಂಬಿದಂ
ನಿನ್ನ ನೆಗಪ್ತೆಗಂ ಮಹಿಮೆಗಂ ಪಿತೃವಾಕ್ಯಮೆ ಕೃತ್ಯಮೆಂಬಿದಂ
ನಿನ್ನೊಳೆ ನೀನೆ ಭಾವಿಸುವುದೇಳಿಸಲಪ್ಪುದಿದಾಗದೆಂಬಿದಂ ೪೫

ಕ್ರಮಪರಿಪಾಲನಾರ್ಥಮೆನಗಿತ್ತನಿಳಾಧಿಪನಿತ್ತೆನೆನ್ನ ರಾ
ಜ್ಯಮನಧಿರಾಜ ಸತ್ಯಪರಿಪಾಲನೆಗಾನ್ ನಿನಗಂತಱಿಂದದ
ಕ್ರಮಮಣಮಲ್ತು ನೀನ್ ತಳೆವುದೊರ್ಮನದಿಂ ಯುವರಾಜ ರಾಜ್ಯಭಾ
ರಮನಧಿರಾಜವಾಕ್ಯಮೆನಗಂ ನಿನಗಂ ಕರಣೀಯಮಲ್ಲಮೇ ೪೬

ಎಂದನುಜನಂ ರಾಜ್ಯದೊಳ್ ನಿಲ್ವಂತೆಂತಾನುಮೊಡಂಬಡಿಸೆ ವಿಸ್ಮಯಂ ಬಟ್ಟು

ಏದೊರೆಯರ್ ಮಹಾಪುರುಷರಾದ್ಯರಿದಂ ಪಿಡಿದೊರ್ವರೊರ್ವರೊಳ್
ಕಾದಿದರೋಡಿದರ್ ಮಡಿದರಲ್ಲದೆ ತಂದೆಯ ನನ್ನಿಗಿತ್ತರಾರ್
ಮೇದಿನಿಯಂ ಜರತ್ತೃಣಮನೀವವೊಲೆಂದು ಕಡಂಗಿ ಬಣ್ಣಿಸಿ
ತ್ತಾದರದಿಂ ಮಹೀಭುಜಸಭಾವಲಯಂ ಬಲಭದ್ರರಾಮನಂ ೪೭

ಎಂಬ ಸಭಾಜನದ ಸ್ತವನಕ್ಕಂ ಭರತಂ ಕ್ರಮಂದಪ್ಪಿ ಸಾಕೇತ ಸಾಮ್ರಾಜ್ಯ ಮನೊಡಂಬಟ್ಟುದರ್ಕಂ ಕಟ್ಟುಕಡೆದು

ಕಾರಾಗಾರದೊಳಿಂದ್ರನಂ ಸೆಱೆಯಿಡಲ್ ಗೋತ್ರಾದ್ರಿಯಂ ಚಾಳಿಸಲ್
ತಾರಾಮಂಡಲಮಂ ನೆಲಕ್ಕೆ ನೆಲನಂ ವ್ಯೋಮಕ್ಕೆ ಪಕ್ಕಾಗಿಸಲ್
ಪಾರಾವಾರದ ನೀರಸೀಂಟಲಖಿಲಾಶಾದಂತಿ ದಂತಂಗಳಂ
ಬೇರಿಂದಂ ಕಿೞಲಂದದೇಂ ಬಗೆದನೋ ರಕ್ತೇಕ್ಷಣಂ ಲಕ್ಷ್ಮಣಂ ೪೮

ಭರತಾವನಿಯಂ ಕೊಟ್ಟಂ
ಭರತಂಗೆ ರಘುಪ್ರವೀರನಯ್ಯನ ನುಡಿಯಂ
ಪರಿಪಾಲಿಸಲೆನ್ನುಗ್ಗಮೆ ಪೇೞ್
ಧರೆಯಂ ಬೆಳ್ಮಾಡಿ ಕೊಂಡರೆನ್ನುಗ್ಗಂ ಲೋಕಂ ೪೯

ಕ್ರಮಮನತಿಕ್ರಮಿಸಿ ಪರಾ
ಕ್ರಮಮಿಲ್ಲೆಂದಿಳಿಕೆಗೆಯ್ದು ಭರತಂಗಿತ್ತಂ
ದಮಿತಾರಿ ದಶರಥಂ ರಾ
ಜ್ಯಮನೆನ್ನುಗ್ಗಂ ರಾಮನಿತ್ತನೆನ್ನುಗ್ಗಮೆ ಲೋಕಂ ೫೦

ಸಮಗಕ್ಕಂ ನಿಸ್ಸಹಾಯಂ ಬಹುವಿಧದಿಸಪಾಯಂ ಸುಖೋಪಾಯಮಕ್ಕುಂ
ತಮಗೇಕಾಯತ್ತಮಕ್ಕುಂ ಪ್ರಜೆ ಪರಿಜನವೆಂದಬ್ಬೆ ಕೌಟಿಲ್ಯದಿಂ ರಾ
ಜ್ಯಮನೀರೇೞಬ್ಧಮಂ ಬೇಡಿದಳೞಿಯದೆ ನೀಮಿತ್ತೊಡಂ ವಿಕ್ಕರಂ ಮ
ಟ್ಟಮಿರಲ್ ಪೇೞಗುಮೇರಾಘವ ಕೊಡೆನೆಟಿಲೊಳ್ ಸಾಗರಾವರ್ತ ಚಾಪಂ ೫೧

ಎಂದು ಪೊಡೆವ ಸಿಡಿಲಂತೆ ಗರ್ಜಿಸಿ

ರೋಮಾಂಚದೊಡನೆ ಸಭೆಗೆ ಮ
ನೋಮುದಮುಪ್ಪಂತು ನುಡಿಯೆ ಲಕ್ಷ್ಮಣದೇವಂ
ರಾಮಂ ಪರಾರ್ಥಚರಿತ
ಪ್ರೇಮಂ ಕಣ್ಜರ್ವುಜರ್ವಿ ನೋಡಿದನಾಗಳ್ ೫೨

ಪಿರಿಯಣ್ಣನ ಜರ್ವಿಂಗೋ
ಸರಿಸಿದುದಲ್ಲದೊಡೆ ಶಾರ್ಙ್ಗಪಾಣಿಯ ಮುನಿಸುಂ
ಹರನುರಿಗಣ್ಣುಂ ಲೋಕಮ
ನರೆಗಳಿಗೆಗೆ ಬೂದಿಮಾೞ್ಪುದೊಂದಚ್ಚರಿಯೇ ೫೩

ಅನಂತರಂ

ತಲೆಯೊಳ್ ನಿಮ್ಮಾಜ್ಞೆಯಂ ರನ್ನದ ತಳೆದೊಡವಂ ಪೊತ್ತುನೀಮಿತ್ತಬಾಹಾ
ಬಲದಿಂ ಬೆಂಕೊಂಡಖಂಡಪ್ರಭರನಹಿತರಂ ಸಾಧಿಪೆಂ ವಿದ್ವಿಷನ್ಮಂ
ಡಲಮಂ ಬೀಳ್ಕೊಂಡೆನೆಂದಯ್ಯನ ಚರಣಯುಗಕ್ಕರ್ಘ್ಯಪಾದ್ಯಂಗಳಂ ನಿ
ಸ್ತುಲ ಮೌಳಿಸ್ಥೂಲ ಮುಕ್ತಾಫಲ ರುಚಿ ಜಲದಿಂ ರಾಮನುದ್ದಾಮನಿತ್ತಂ ೫೪

ಅಂತು ವಿನತ ಮಸ್ತಕನಾಗಿ ಸಭೆಯಿನೆೞ್ದು ಪೋಗೆ ಲಕ್ಷ್ಮಣನುಮೊಡನೆ ಪೋಗಿ

ಅನುಜಂ ಸಭೆಯಿನಗಲ್ದ
ಣ್ಣನ ಬೞಿಯಂ ಸಲ್ವ ಸಮಯದೊಳ್ ಬೇಗಂ ಲೋ
ಚನದ ಬೞಿಸಲ್ವ ಮನಮಂ
ತನುವಿನ ಬೞಿಸಲ್ವ ನೆೞಲನಿನಿಸಿಳಿಕೆಯ್ದಂ ೫೫

ಒಡನೆ ದಶರಥನ ಕಣ್ಗಳ್
ನಡೆದುವು ಕಣ್ಣೊಡನೆ ತಳರ್ದು ನಿಲ್ಲದೆ ಮನಮುಂ
ನಡೆದುದದಱೊಡನೆ ನಿಡುಸುಯ್
ನಡೆದುದು ಸುಯ್ಯೊಡನೆ ನೃಪತಿ ಮೂರ್ಛೆಗೆ ಸಂದಂ ೫೬

ಅಂತು ಪತಿ ಮೂರ್ಛಾಭರಪರವಶನಾಗಿರ್ಪುದುಂ ಕೈಕೆ ಲಜ್ಜಾನತೆ ತಾನುಮಾಸ್ಥಾನದಿಂದೆೞ್ದು ಪೋಪುದುಂ

ಕ್ರಮದೊಡೆಯಂಗೆ ತಂದೆ ಧರೆಯಂ ಕುಡಲೆಂದಿರೆ ದೈವಯೋಗದಿಂ
ಸಮನಿಸಿದತ್ತು ಪುಣ್ಯಪುರುಷಂಗಮರಣ್ಯನಿವಾಸಮೆಂದು ಖೇ
ದಮನೊಳಕೊಂಡು ಗದ್ಗದರವಂ ನತದೀನಮುಖಂ ಪ್ರಲಾಪ ಸಂ
ಭ್ರಮಮುದಿತಾಶ್ರು ಶೋಕರಸಭಾಜನಮಾದುದು ತತ್ಸಭಾಜನಂ ೫೭

ಅನ್ನೆಗಮಾ ವೃತ್ತಾಂತಮೆಲ್ಲಮಂ ಸುಮಿತ್ರೆ ಕೇಳ್ದಪರಾಜಿತಾಮಹಾದೇವಿಯಲ್ಲಿಗೆ ಬಂದು

ಎರೆದಳ್ ಗಡ ಕೈಕೆ ವಸುಂ
ಧರೆಯಂ ಭರತಂಗೆ ರಾಮನಿತ್ತಂ ಗಡಿದೇಂ
ದೊರೆಕೊಳ್ಗುಮೆ ಕರ್ಣ ಪರಂ
ಪರೆಯಿಂ ಕೇಳ್ದುದನೆ ನಿನಗೆ ಪೇೞಲ್ ಬಂದೆಂ ೫೮

ಎಂಬುದುಮಪರಾಜಿತೆ ಭಯಚಕಿತಚಿತ್ತೆಯಾಗಿ

ಎರೆವನ್ನಳೆ ಕೈಕೆ ವಸುಂ
ಧರೆಯಂ ತೃಣವಾಗೆ ಒಗೆದು ಕುಡುವನ್ನನೆ ಮಂ
ದರ ಧೈರ್ಯಂ ರಾಮಂ ನುಡಿ
ದೊರೆಕೊಳ್ಗುಂ ದೈವ ಘಟನೆಯಿಂದಾಗದುದೇಂ ೫೯

ಎಂದವರ್ ತಮ್ಮೊಳುಮ್ಮಳಿಸಿ ನುಡಿಯುತ್ತಿರ್ಪುದುಂ ರಾಮಲಕ್ಷ್ಮಣರ ರಮನೆಯಂ ಪೊಕ್ಕು ಜನನೀಯುಗಳಪದಪಯೋಜಕ್ಕೆ ವಿನತರಾಗಿ ಸಮುಚಿತಾಸನದೊಳಿರ್ದು ಲಕ್ಷ್ಮಣದೇವಂ ಶ್ರೀರಾಮದೇವನ ಪರಾರ್ಥವೃತ್ತಿಯಂ ಬಿನ್ನವಿಸೆ ಕೇಳ್ದು ಅಪರಾಜಿತಾ ಮಹಾದೇವಿ ಶೋಕಾನಲದಂದಹ್ಯಮಾನ ಮಾನಸೆ

ಬಿದಿ ಬಿದಱಿಟ್ಟಿದಂ ಮಗನೆ ಮುನ್ನ ತನರ್ಮನೆ ನಾಮಶೇಷಮಾ
ದುದು ಪತಿಯುಂ ತಪಕ್ಕೆ ನಡೆವಂ ಸುತ ನೀನುಮಗಲ್ದು ಪೋದೊಡಾ
ವುದು ಗತಿ ಜೀವಿಪಂದಮೆನಗಾವುದು ಪೊರ್ದುವೆನಾರನೆಂದು ಗ
ದ್ಗದರವಮುಣ್ಮೆ ತಂದಳಪರಾಜಿತೆ ಕಣ್ಗೆ ಕದುಷ್ಣ ವಾರಿಯಂ ೬೦

ಕ್ರಮಮಂ ನೋಡದೆ ನಂಟರಂ ತೊಱೆದು ನಾಡಂ ಬಿಟ್ಟು ಸಪ್ತಾಂಗ ರಾ
ಜ್ಯಮನೀಡಾಡಿ ಸಪತ್ನನಂ ನಿಲಿಸಿ ಸಿಂಹಾಸಂದಿಯೊಳ್ ತಾಯ್ಗೆ ದುಃ
ಖಮನುತ್ಪಾದಿಸಿ ಪೋಪುದಾವುದುಚಿತಂ ಪಿಂತಿರ್ಪುದಿಲ್ಲುಯ್ವುದೆ
ಮ್ಮುಮನೆಂದಂಬಿಕೆ ಮೆಯ್ಯನೊಕ್ಕು ವಿಗಳದ್ಬಾಷ್ಪಾಂಬುವಿಂ ತೇಂಕಿದಳ್ ೬೧

ಅಂತು ಶೋಕವಿಕಳೆಯಾದ ಕೌಶಲ್ಯೆಗೆ ಸೌಮಿತ್ರಿ

ಕಲಿಯುಂ ಚಾಗಿಯುಮಿನ್ನರಾರ್ ಮನುಕುಲರ್ ಮುನ್ನಾದರೆಂಬನ್ನೆಗಂ
ನೆಲನುಂ ನೇಸಱುಮುಳ್ಳಿನಂ ನಿಲಿಸಿದಂ ತಕ್ಕೂರ್ವಿಯಂ ಪೆರ್ಮೆಯಂ
ಕುಲನಿಸ್ತಾರಕನೇಕ ಕುಂಡಲನದರ್ಕಾನಂದಮುಂ ತಾಳ್ದದಾ
ಕುಲಮಂ ತಾಳ್ದುವುದೇ ಮದಗ್ರಜನೊಳಾದೀ ಪೌರುಷಂ ಶೋಚ್ಯಮೇ ೬೨

ಪಂಬಲಿಸಲ್ಕೆ ಬೇಡ ಪೆಱತೇನ್ ಭರತಂ ಭವದೀಯ ದಿವ್ಯ ಪಾ
ದಾಂಬುಜ ಸೇವೆಗೆಮ್ಮಳವಿಗಗ್ಗಳನಲ್ಲದೊಡಂ ಸಮಸ್ತ ಲೋ
ಕಾಂಬಿಕೆ ನಿಮ್ಮೊಳಾದಿಸುವೆಸಕ್ಕೆ ಸುಮಿತ್ರೆಯೆ ಸಾಲ್ವಳಗ್ರಜಂ
ಗಾನ್ ಬೆಸಕಯ್ವೆನಿನ್ ತೊಲಗಿಸಿಂ ಮನದೊಳ್ ನಿಮಗಾದ ಖೇದಮಂ ೬೩

ಎಂದು ಬಿನ್ನವಿಸೆ ಅವಧಾರಿಸಿ ಕೌಶಲ್ಯೆ ನಂದನನಂ ನೋಡಿ

ಸುಚರಿತೆ ಸೀತೆ ನಿನ್ನೊಡನೆ ಬರ್ಪವಳಿರ್ಪವಳಲ್ಲಳಿರ್ಪುದೇ
ಸುಚಿತಮೆ ಪೇೞಿವೀಕೆಗೊಡನುಯ್ವುದೆನಲ್ ರಘುರಾಮನಂಬಿಕಾ
ವಚನಮನಾತ್ಮಚಿತ್ತದೊಳೊಡಂಬಡುವೆತ್ತದನಂತೆ ಗೆಯ್ವೆನೆಂ
ದಚಲಿತನಾನತಂ ಪದನಖಾಂಶುಗಳಿಂ ತಳೆದಂ ಲಲಾಮಮಂ ೬೪

ಆಗಳ್ ಲಕ್ಷ್ಮಣಂ ಮಣಿಕೀರಿಟಕಿರಣದಿಂ ಅಪರಾಜಿತಾ ಮಹಾದೇವಿಯ ಸುಮಿತ್ರಾದೇವಿಯ ಪದನಖಮಯೂಖಮಂ ಕೊರ್ವಿಸೆ ಸಾರ್ವಭೌಮನಾಗೆಂದು ಪರಸಿ

ಶಯನಕ್ಲೇಶದೊಳನ್ನ ಪಾನ ಗಮನಾಯಾಸಂಗಳೊಳ್ ನಿನ್ನ ಸೇ
ದೆಯುಮಂ ನೋಡದತಿಪ್ರಯತ್ನ ಪರಿಚರ್ಯಾರಂಭದಿಂ ಪುತ್ರ ಸೀ
ತೆಯುಮಂ ರಾಮನುಮಂ ಸಮಾಹಿತ ಮನರ್ಮಾಡೆಂದು ಸಂಪ್ರೀತಿಯಿಂ
ಪ್ರಿಯದಿಂ ಪ್ರಾರ್ಥಿಸಿದಳ್ ಗುಣಪ್ರಿಯೆ ಸುಮಿತ್ರಾದೇವಿ ಸೌಮಿತ್ರಿಯಂ ೬೫

ಅಂತು ರಾಮಲಕ್ಷ್ಮಣರಂಬಿಕೆಯ ಚರಣಾಂಬುಜಂಗಳಂ ಬೀಱ್ಕೊಂಡರಮನೆಯಿಂ ಪೊಱಮಟ್ಟು ಪಾದಮಾರ್ಗದಿಂ ವಿಪಣಿಮಾರ್ಗದೊಳಗನೆ ವೈದೇಹಿ ವೆರಸು ಬರ್ಪ ಸಮಯದೊಳ್ ಕೌವರೆಗೊಂಡು ಪರಿತಂದು ನೋೞ್ಪ ಪುರಜನಂಗಳ್

ಆಸೆಯ ಮೇಲೆ ಬೆಳ್ಗೊಡೆಯನೆತ್ತಿಸಿ ಚಾಮರಮಿಕ್ಕೆ ಚಾರು ಚಂ
ದ್ರಾನನೆಯರ್ಕಳಿರ್ಕೆಲದ ಪೆರ್ವಿಡಿಯೊಳ್ ನೆಲಸಿರ್ದು ಸುತ್ತಲುಂ
ದಾನಗಜಂ ಘನಾಘನದವೊಲ್ ಬರೆ ಬಾಱದೆ ಪಾದಮಾರ್ಗದಿಂ
ಜಾನಕಿಯುಂ ಬಲಾಚ್ಯುತರುಮೇಳಿದರಂದದೆ ಬರ್ಪುದಾಪ್ರದೋ ೬೬

ಮಂಗಲರತ್ನವೇದಿಕೆಯೊಳೋಲಗಸಾಲೆಯೊಳಿಂದುಕಾಂತ ರಾ
ಜಾಂಗಣದೊಳ್ ಗೃಹೋಪವನದೊಳ್ ಗೃಹದೀರ್ಘಿಕೆಯೊಳ್ ವಿಲಾಸ ಗೇ
ಹಂಗಳೊಳಂಚೆವಿಂಡಿನೊಡನಾಡುವ ಜಾನಕಿ ಪಾದಮಾರ್ಗದಿಂ
ದಂಗಡಿವೀದಿಯೊಳ್ ಪತಿಯ ಪಿಂತನೆ ಮೆಯ್ಗರೆದೆತ್ತ ಪೋದಪಳ್ ೬೭

ಎಂದು ನುಡಿವ ನುಡಿಗಳನಾಲಿಸುತ್ತುಂ ಪೋಗೆವೋಗೆ ನೇಸಱ್ ಪಡುವ್ರದುಮಾ ಸಮಯದೊಳುಮ್ಮಳಿಸಿ ತಮ್ಮಲ್ಲಿಗೆ ವಂದ ಜನನಿಯರೊಳ್ ವಿನಯಮಂ ನುಡಿದು ಸಂತೋಷಂಬಡಿಸಿ ಮಗುಳ್ದರಮನೆಗೆ ಕಟಿಪಿ ಜಿನಮಂದಿರಕ್ಕೆ ವಂದು ಮೂಱು ಸೂೞ್ ಬಲಗೊಂಡು ಜಗತ್ತ್ರಯ ಪ್ರಭುವಿಂಗಭಿಮುಖರಾಗಿ

ಜಯ ಜಿತವೃಜಿನ ಜಿನೇಶ್ವರ
ದಯಾನದೀಪುಳಿನರಾಜಹಂಸ ಭವಾಂಭೋ
ಧಿಯ ತಡಿಯನೆಯ್ದಿಸೆಮ್ಮಂ
ನಯ ನಿಕ್ಷೇಪ ಪ್ರಮಾಣಪಾತ್ರದಿನರುಹಾ ೬೮

ನೀವಾಳವೆಂದು ಕೆಲಬರ್
ಪಾವಂ ಪಿಡಿವಂತೆ ದೇವ ನೀನಲ್ಲದರಂ
ದೇವರಿವರೆಂದು ಪಿಡಿದಿ
ನ್ನೇವಿಧಿ ವಟ್ಟಪರೊ ಮೋಹಮೂರ್ಛೆಯಿನರುಹಾ ೬೯

ನಿನಗೆ ರಸವೊಂದೆ ಶಾಂತಮೆ
ಜಿನೇಂದ್ರ ಮನಮಾ ರಸಾಂಬುನಿಧಿಯೊಳಗವಗಾ
ಹನಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆಮಗರುಹಾ ೭೦

ಮಣಿಭೂಷಣಾಭರದಿಂ
ಕಿಣಮಪ್ಪುದದೇಕೆ ನಿನ್ನ ನಿರ್ಮಲ ಗುಣ ಭೂ
ಷಣಮಂ ದಯೆಗೆಯ್ ಪಡೆವೆಂ
ಪ್ರಣಯಮನಪವರ್ಗಲಕ್ಷ್ಮಿಗದಱಿಂದರುಹಾ ೭೧

ಸಿಂಗದ ಮಾರ್ದನಿ ಮದ ಮಾ
ತಂಗಮನಳಱಿಸುವವೋಲ್ ನಿಜ ಪ್ರತಿಬಿಂಬಂ
ಪಿಂಗದೆ ಮನದೊಳ್ ನಿಂದಿರೆ
ಪಿಂಗಿಸುವುದು ಜನನ ಮರಣ ದುಃಖಮನರುಹಾ ೭೨

ಮೆಚ್ಚಿ ಗಡ ಮುಳಿಯೆ ಬಡ ಬಗೆ
ಬೆಚ್ಚಿರೆ ಬೇಱಾಗೆ ನಿನ್ನ ಪದದೊಳ್ ಮನುಜಂ
ಗುಚ್ಚಗತಿ ನೀಚಗತಿವಡೆ
ವಚ್ಚರಿ ಕಣ್ದೆಱೆವ ತೆಱನನಱಿಪೆಮಗರುಹಾ ೭೩

ಜ್ಯಾಯಂಗೆ ನೀನೆ ವಲಮಾ
ದೇಯಂ ನೀನಲ್ಲದನ್ಯ ವಸ್ತುಗಳೆಲ್ಲಂ
ಹೇಯಂಗಳೆಂಬ ತತ್ತ್ವೋ
ಪಾಯಮನೆಮಗೀವುದೇವೆವುಟಿದುವನರುಹಾ ೭೪

ನಿತ್ಯಸುಖಮಾತ್ಮರೂಪಮ
ನಿತ್ಯಸುಖಂ ಮೋಹರೂಪಮೆಂಬ ವಿವೇಕಂ
ಸತ್ಯ ಸ್ವರೂಪಮುದಱೊಳ
ಗತ್ಯಂತಾನುಭವ ವಿಭವಮಕ್ಕೆಮಗರುಹಾ ೭೫

ಎಂದು ದರ್ಶನಸ್ತುತಿಗೆಯ್ದು ಜಿನಮುಖದರ್ಶನದಿಂ ಹರ್ಷಚಿತ್ತರಾಗಿ ನಿದ್ರಾಮುದ್ರಿತಲೋಚನರ್ ನಡುವಿರುಳೆಟ್ದು ಪರಮಜಿನಪತಿಯಂ ಬೀಳ್ಕೊಂಡು ಬಿಲ್ಲುಮನಂಬುಮಂ ಕೊಂಡು ಸೀತೆ ನಡುವೆ ಬರೆ ಪೊಱಲ ನಡುವಣ ಕ್ಷುಲ್ಲಕ ದ್ವಾರದಿಂ ಪೊಱಮಟ್ಟು ದಕ್ಷಿಣಾಭಿಮುಖರಾಗಿ ಪೋಗುತ್ತುಂ ಎಡೆಯೆಡೆಯ

ಗ್ರಾಮ ನಗರಂಗಳಂ ನೋಡುತ್ತುಂ ಕಟಿದು ಗಂಭೀರ ತರಂಗಿಣಿಯನೆಯ್ದೆ ವಂದಲ್ಲಿ ನಿಂದು ಸಾಮಂತಾದಿಗಳನೆಂತಾನುಮೊಡಂಬಡಿಸಿ ನಿಲಿಸಿ ತೋಱೆಯಂ ಯಾನ ಪಾತ್ರದಿಂ ದಾಂಟಿ ಪೋಪುದುಂ ರಾಮಲಕ್ಷ್ಮಣರಗಲ್ಕೆಗೆ ಸೈರಿಸಲಾಱದೆ ಕೆಲಂಬರದುವೆ ನಿರ್ವೇಗ ಕಾರಣಮಾಗೆ ತನ್ನದೀತೀರದ ಜಿನಾಗಾರದೊಳ್ ದೀಕ್ಷೆಗೊಂಡಲ್ಲಿಯೆ ನಿಂದರ್ ಕೆಲಬರ್ ವ್ರತವಿಶೇಷಂಗಳಂ ಕಯ್ಕೊಂಡು ಸಾಕೇತಪುರಕ್ಕೆ ವಂದರದೆಲ್ಲಮಂ ದಶರಥನರನಾಥಂ ಕೇಳ್ದು

ಸಡೆದನೆ ತನ್ನ ಬಂಧುಗಳಲ್ಕೆಗೆ ಪುತ್ರ ಕಳತ್ರ ಮೋಹದೊಳ್
ತೊಡರ್ದನೆ ಪಟ್ಟಬಂಧಮನೊಡರ್ಚಿದನೇ ಭರತಂಗೆ ರಾಘವಾ
ಸಡೆಯೆ ವನಕ್ಕದಂ ಮಱೆದುಮೇಂ ಬೆಸಗೊಂಡನೆ ದೀಕ್ಷೆಗೊಂಡನಾ
ಗಡೆ ವಿಭು ಸರ್ವಭೂತಹಿತದಿವ್ಯಮುನೀಂದ್ರರ ಪಾದಪಾರ್ಶ್ವದೊಳ್ ೭೬

೪. ಸೀತಾಪಹರಣಂ

ಅಂತು ದಶರಥಂ ದಶಧರ್ಮನಿರತನಪ್ಪುದುಂ ಭರತಂ ರಾಜ್ಯಸುಖ ವಿಮುಖನಾದನಾಗಳದಂ ಕೈಕೆ ಕೇಳ್ದು ತನಗತ್ಯಂತಶೋಕಾವೇಗಮಾಗೆ

ಪತಿ ದೀಕ್ಷೆಗೊಂಡನಪರಾ
ಜಿತೆಗಿನಿವಿರಿದಾಯ್ತು ದುಃಖಭಾರಂ ಧರೆಯಂ
ಸುತನುಮಿಳಿಕಯ್ದನೀ ದು
ಷ್ಕೃತಮಂ ಸ್ತ್ರೀತ್ವದ ಜಡತ್ವದಿಂದೊಡರಿಸಿದಂ ೧

ಎಂದು ತನ್ನಂ ತಾನೆ ನಿಂದಿಸಿಕೊಂಡು ಭರತನಂ ಬರಿಸಿ ಮಗನೆ ನಿನ್ನ ರಾಜ್ಯಂ ರಾಮಲಕ್ಷ್ಮಣರಿಲ್ಲದೊಪ್ಪಲಱಿಯದವರ ಜನನಿಯರುಮವರ ವಿಯೋಗ ವಿಷಾದ ವೇಗದಿಂ ವಿಗತ ಜೀವಿತೆಯರಪ್ಪರದು ಕಾರಣದಿಂ ಬೇಗಮೆಯ್ದೆವೋಗಿ ಪೋಗಲೀಯದೆ ನಿಲಿಸಾನುಂ ನಿನ್ನ ಪಿಂದನೆ ಬಂದಪೆನೆಂಬುದುಮಂತೆ ಗೆಯ್ವೆನೆಂದು ರಾಘವನಂ ಕಟಿಪಿ ಬಂದ ಸಾಮಂತರ್ವೆರಸು ತೊಱೆಯಂ ಪಾಯ್ದು ಪೋಗಿ ಮುಂದೆ ಕಱಿಂಗಿ ಕಟ್ಟಿಲಿಸಿದ ಕಾನನದ ಬಟ್ಟೆಯೊಳ್ ಜಾನಕಿಯ ಗಮನ

ಪರಿಶ್ರಮಮನಾಱಿಸುತಿರ್ದ ರಘುವೀರನಂ ಮುಟ್ಟೆವಂದು ವಾಹನದಿನಿೞಿದು ಕಾಲ
ಮೇಲೆ ಕವಿದು ಬಿೞ್ದು

ಪುದಿಯೆ ತಮಂ ಮನಮಂ ಮೋ
ಹದವಾಗ್ನಿಯ ಧೂಮದಂತೆ ಕರಣಬಲ ಪ್ರಾ
ಣದ ಚೇಷ್ಟೆಗೆಟ್ಟು ಭರತಂ
ಪದಾಸತಂ ವಿಕಲನಾಗಿ ಮೂರ್ಛೆಗೆ ಸಂದಂ ೭

ಅಂತು ಮೂರ್ಛಿತನಾಗಿ ಕಿಱಿದಾನುಂ ಬೇಗದಿನೆಂತಾನುಮೆೞ್ಚೆತ್ತು ಸೀತೆಗಂ
ಲಕ್ಷ್ಮಣಂಗಂ ತುಱಿಲ್ಗೆಯ್ದು ರಾಮಚಂದ್ರನಂ ನೋಡಿ

ಅಕ್ರಮದಿನೞಿಪಿ ವಸುಧಾ
ಚಕ್ರಮನಾನಾಸೆಗೆಯ್ಯೆ ದುರ್ಯಶಮಾಶಾ
ಚಕ್ರಾವಧಿಯಕ್ಕುಂ ದೋ
ರ್ವಿಕ್ರಮಧನ ನಿಮ್ಮ ಮನದೊಳವಧರಿಪುದಿದಂ ೩

ಅನಯದಿನಪ್ಪ ಸಂಪದದಿನಿಲ್ಲಮೆ ನಾಡೆಯುಮಿಂಬುಮೆತ್ತುದೆಂ
ತೆನೆ ಪಟಿವನ್ನರಿಲ್ಲ ಧನಮಿಲ್ಲದರಂ ದುರಿತಾನುಬಂಧಮಿ
ಲ್ಲನಯದಿನಪ್ಪುದೀಯೆರಡುಮೆಂಬುದನಿಂಬಱಿದೀಮವೆಂಬಿರೆಂ
ತೆನಗಧಿರಾಜ ರಾಜ್ಯಮನಪೂಜ್ಯಮನಕ್ರಮದಿಂದಮಪ್ಪುದಂ ೪

ಎಂದು ಬಿನ್ನವಿಸುವನ್ನೆಗಂ ಕೈಕೆಯುಂ ನೂರ್ವರ್ ಸಾಮಂತರೊಡನೆ
ಬರೆ ಕಂಡು

ಇದಿರೆೞ್ದು ಪರಿದು ಕೈಕೆಯ
ಪದಾಂಬುಜಕ್ಕೆಱಗೆ ರಾಘವಂ ಹರ್ಷದ ಭಾ
ರದಿನುಮ್ಮಳವಾ ಸತಿಗಾ
ದುದು ಮನದೊಳ್ ನೆನೆದು ತನ್ನ ಗೆಯ್ದನ್ನೆಯಮಂ ೫

ಅಂತು ವಿನಯವಿನಮಿತನಾಗಿರ್ದ ಮಗನಂ ತೆಗೆದು ತೞ್ಕೈಸಿ ಪಲತೆಱದಿಂ
ಪ್ರಲಾಪಂಗೆಯ್ದವಿವೇಕದಿನೆನ್ನ ಗೆಯ್ದ ದುರ್ವಿಲಸಿತಕ್ಕೆ ಸೈರಿಸಿ ಮಗನೆ ರಾಜ್ಯಮಂ

ಕಯ್ಕೊಳ್ವುದು ನಿನ್ನ ತಮ್ಮಂದಿರ್ ನಿನಗೆ ಬೆಸಕಯ್ದು ಬಾಳ್ವರದನುದಾಸೀನಂ ಗೆಯ್ಯದೆ ಮಗುಳೆ ಬಿಜಯಂಗೆಯ್ಯೆಂಬುದುಮಂಬಿಕೆಗೆ ರಾಮಂ

ಅಕಲಂಕಚರಿತ್ರಂ ಕ್ಷ
ತ್ರಕುಲೋದ್ಗತನೆರಡನುಸಿರ್ದೊಡೈಹಿಕವಾಮು
ತ್ರಿಕಮಂತಿಗುಂ ಕೇವಲಮಂ
ಬಿಕೆ ಪಾತಕಮನ್ಯತದಿಂದಮಗ್ಗಳಮುಂಟೇ ೬

ಮತ್ತಮಯ್ಯನ ನನ್ನಿಗೆ ಬನ್ನಮಂ ಪಡೆದು ನಿಮ್ಮೊಳಾದ ವಿನಯಮನ ತಿಕ್ರಮಿಸಿ ತಮ್ಮನ ಕಯ್ಯ ರಾಜ್ಯಮಂ ಕೊಂಡೊಡೆನ್ನ ನುಡಿ ಕಿತ್ತಡಮಕ್ಕುಂ ಮಗುಳೆ ನುಡಿಯದಿರಿಮೆಂದು ಭರತನುಮನಾನ್ ಕುಡೆ ಪಡೆದ ರಾಜ್ಯಂ ನಿನಗ ಕ್ರಮುಮಣಮಲ್ತು ವಕ್ರಂ ಬಂದೊಡೆಮ್ಮಾಜ್ಞೆಗೆ ತಪ್ಪಿದೆಯೆಂದು ನಿಲೆನುಡಿದು ಸಾಮ್ರಾಜ್ಯಪಟ್ಟಮುಂ ಕಟ್ಟಿ ವಿನಯಮಂ ಮುಂದಿಟ್ಟು

ಈಕ್ಷಿಸುವನ್ನೆಗಂ ಭುವನವಲ್ಲಭ ನಿಮ್ಮ ಪದಾರವಿಂದಮಂ
ರಕ್ಷಿಸುವೆಂ ಧರಾವಲಯಮಂ ಭವದಾಜ್ಞೆಗೆ ಬೆರ್ಚಿ ಮನ್ಮನ
ಸ್ಸಾಕ್ಷಿಕಮಾನಪೇಕ್ಷಿಸುವೆನಲ್ತುಪಭೋಗಮನೆಂದು ಪೂಣ್ದನೇ
ನಕ್ಷತಧೈರ್ಯನೋ ಭರತನೊಲ್ವನೆ ಲೋಭರತಪ್ರಪಂಚಮಂ ೭

ಅಂತು ಪ್ರತಿಜ್ಞಾರೂಢನಾದ ಭರತನುಮಂ ಜನನಿಯುಮನುಚಿತ ಪ್ರತಿ ಪತ್ತಿಯಿಂ ಮನ್ನಿಸಿ ಪೊಲ್ಗೆ ಕಟಿಪೆ ರಾಮಲಕ್ಷ್ಮಣರ್ ಸೀತಾಸಮೇತಂ ಪಯಣಂಬೋಗಿ ಚಿತ್ರಕೂಟಾಚಲೇಂದ್ರಮಂ ಬಲಡೊಳಿಕ್ಕಿ ವಿಪಿನದೊಳಗನೆ ನಡೆಯೆ ನಡೆಯೆ

ನೆಲನಿಲ್ಲಿಂದಿತ್ತಲಿಲ್ಲೆಂಬಿನಮಿನಿತೆ ದಿಶಾಘಾಟಮೆಂಬನ್ನೆಗಂ ಕ
ಟ್ಟಿಲೆ ಚಂದ್ರಾದಿತ್ಯತೇಜಕ್ಕದಿರದಿದಿರನೊಡ್ಡಿರ್ದುದೆಂಬನ್ನೆಗಂ ಕ
ಟ್ಟಲಿಸುತ್ತಿರ್ದತ್ತು ಕಾಡಾನೆಯ ಕದುಪುಗಳಿಂ ಸಿಂಹಸಂಘಾತದಿಂ ಪೆ
ರ್ವಲಿಪಿಂಡಿಂ ಕಣ್ಗಗುರ್ವಂ ಪಡೆದು ಕುಲನಗಸ್ಪರ್ಧಿ ವಿಂಧ್ಯಾಚಲೇಂದ್ರಂ ಲ

ಆ ನಗಮಂ ದಾಂಟಿ ಪೋಗಿ ಪೆರ್ವಟ್ಟೆವಿಡಿದು ನಡೆಯುತ್ತುಂ

ಮೂಲಸಟಾಳಿಯಿಂದಮುರಗಾಲಯಮಂ ಬಹುಶಾಖೆಯಿಂದಮಿಂ
ದ್ರಾಲಯಮಂ ಪಳಂಚಿ ತಮಮಂ ಸೆಱೆಗೆಯ್ದು ಹಿಮಕ್ಕೆ ಕೊಂಬುಗೊ
ಟ್ಟಾಲಮನಗ್ರಪಲ್ಲವ ಕರಾಗ್ರ ನಿರುದ್ಧ ಮರುತ್ತರಂಗಿಣೀ
ಕೂಲಮನೆಯ್ದಿದರ್ ವಿಜಿತ ಚಂಡಮರೀಚಿ ಮರೀಚಿಜಾಲಮಂ ೯

ಆ ವಟನಿವಾಸಿಯಪ್ಪಿಭಕರ್ಣದೇವನವರ ಪುಣ್ಯಪ್ರಭಾವಕ್ಕೆ ಬೆಗಡುಗೊಂಡೋಡಿಪೋಗಿ ವಿಂಧ್ಯಾಟವಿಯೊಳಿರ್ಪ ಯಕ್ಷರಾಜಂ ಕ್ರೀಡಾಪೂತನೆಂಬಂಗೆ ಚಂಡಕೋದಂಡಧರರಿರ್ವರೆನ್ನಾವಾಸಮಂ ಕಯ್ಕೊಂಡೊಡಾಸವರ ದೇಹದೀಪ್ತಿಗಲ್ಲಿ ನಿಲಲಳ್ಕಿ ನಿಮಗಱಿಪಲ್ ಬಂದೆನೆಂಬುದುಮವಧಿಯಿಸವರೀಕಾಲದ ಬಲದೇವವಾಸುದೇವರೆಂಬುದುಮನವರ ಬಂದ ತೆಱನುಮನಱಿದವರ್ಗೆ ಸತ್ಕಾರಮನೊಡರ್ಚೆ ರಾಮಂಗಮೂಲ್ಯ ಮುಕ್ತಾದಾಮಮುಮಂ ಲಕ್ಷ್ಮಣಂಗೆ ಮಣಿಕುಂಡಲಮುಮಂ ಸೀತಾದೇವಿಗೆ ಚೂಡಾರತ್ನಮುಮಂ ವೀಣಾರತ್ನಮುಮನೋಲಗಿಸಿ ವಿಷಮಮಾದೆಡೆಗೆನ್ನಂ ನೆನೆವುದೆಂದು ವಿನಯಮಂ ನುಡಿದು ಕಿಱಿದೆಡೆಯಂ ಕಟಿಪಿ ಬೀಳ್ಕೊಂಡು ಬಂದು ಯಕ್ಷಂ ನಿಜನಿವಾಸಕ್ಕೆ ಪೋದನಿತ್ತಲಾ ರಾಮಲಕ್ಷ್ಮಣರ್ ನಿಚ್ಚಪಯಣಂಗಳಿಂ ತೆಂಕಮೊಗದೆ ಬಂದು ಪೆರ್ವಟುವಂ ಪೊಕ್ಕು ಕರ್ಣರವೆಯೆಂಬ ತೊಱೆಯಂ ಪಾಯ್ದು ಅದಱ ತೆಂಕಣ ತಡಿಯೊಳೊಂದು ರಮ್ಯಪ್ರದೇಶದೊಳ್ ವಿಶ್ರಮಿಸಿರ್ಪುದುಮಲ್ಲಿಗೆ ಸುಗುಪ್ತಿಗುಪ್ತರೆಂಬ ಗಗನಚಾರಣರವನೀತಲಕ್ಕವತರಿಸಿ ಮಾಸೋಪವಾಸದ ಪಾರಣೆಯೊಳ್ ಕಾಂತಾರಚರ್ಯೆಗೆ ಬರ್ಪುದುಮವರಂ ದೂರದೊಳ್ ಕಂಡು ಅರ್ಚಿಸಿ ವಿಧಿಪೂರ್ವಕಂ ನಿರವದ್ಯಾಹಾರಮಂ ಕುಡುವುದುಮವರ್ ಸಂಯಮ ಸಂರಕ್ಷಣಾರ್ಥಮಪ್ಪ ಕಾಯಸ್ಥಿತಿಯಂ ನಿರ್ವರ್ತಿಸಿ ಕಯ್ಯೆತ್ತಿಕೊಂಡಕ್ಷಯದಾನಮೆಂಬುದುಂ

ಏನೆಸೆದುದೊ ರೈವೃಷ್ಟಿ ಹಿ
ಮಾನಿಲನಳಿಮಿಳಿತ ಕುಸುಮವರ್ಷಂ ಸುರಭೇ
ರೀ ನಿನದಂ ದಿವಿಜರಹೋ
ದಾನಸ್ತುತಿ ನೆಗಡೆ ನೆಗಟ್ದ ಪಂಚಾಶ್ಚರ್ಯಂ. ೧೦

ಅಗಳವರ ತಪಸ್ಸಾಮರ್ಥ್ಯಕ್ಕೆ ರಾಮಾದಿಗಳ್ ರೋಮಾಂಚಕಂಚುಕಿತ

ದೇಹರಾಗಿ ಧರ್ಮಕಥಾಶ್ರವಣಪ್ರಸಂಗದೊಳಿರ್ಪುದುಂ ಅವರಿದಿರೊಳಿರ್ದ ವಿಶಾಲ ಸಾಲದ್ರುಮ ಶಾಖಾರೂಢನಾಗಿರ್ದು

ಪೋದ ಭವಪ್ರಪಂಚದಱಿತಂ ಮುನಿದರ್ಶನ ಮಾತ್ರದಿಂ ಮನ
ಕ್ಕಾದೊಡೆ ಪಾಪ ಸಂಚಯಮನಿನ್ನ ಪವರ್ತಿಪೆನೆಂದು ಬಂದು ಪಾ
ದೋದಕದೊಳ್ ಪೊರಳ್ದು ಕನಕಪ್ರಭೆವೆತ್ತು ಪಡೋಪಕಂಠ ಲ
ಗ್ನೋದರ ಮಸ್ತಕಂ ವಿನತಮಿರ್ದುದು ಪರ್ದುಪಶಾಂತ ಚೇತಸಂ ೧೧

ಅದಂ ಕಂಡು

ಎನಗಿದು ಕಂದನೆಂದು ಗಳಕಂದಳದೊಳ್ ಚರಣ ದ್ವಯಂಗಳೊಳ್
ಜನಕಜೆ ಕಂಠಿಕಾವಲಯಮುಮಂ ಮಣಿನೂಪುರಮುಂ ತೊಡರ್ಚೆ ಮಂ
ಡನದ ಮಯೂಖಲೇಖೆ ಜಡೆಗೊಂಡು ಮಡಲ್ತು ಕವಲ್ತುಲರ್ಚೆ ದೃ
ಗ್ವಸರುಹಮುಂ ಜಟಾಯುವೆಸರಾದುದದರ್ಕೆ ರಘುಪ್ರವೀರರಿಂ ೧೨

ಮಱುದಿವಸಂ ರಾಮಲಕ್ಷ್ಮಣರ್ ದಂಡಕಾರಣ್ಯದೊಳಗನೆ ನಡೆದು ಕ್ರೌಂಚ ನದಿಯನುತ್ತರಿಸಿ ಸೀತೆ ಬಳಲ್ದಳೆಂದು ವಿಶ್ರಮಿಸಿರ್ಪುದುಂ ಆ ನದಿಯ ಸಮೀಪದ ದಂಡಕಗಿರಿಯ ಗುಹಾಗೇಹದೊಳೊಂದು ಯೋಜನದೆಂಟನೆಯ ಭಾಗಂ ಖಾತಮಾದಲ್ಲಿ ಪಾತಾಳಲಂಕೆಯೆಂಬ ಪುರಮಿರ್ಪುದದನಾಳ್ವಂ ಖರನೆಂಬನಾತನರಸಿ ರಾವಣನ ತಂಗೆ ಚಂದ್ರನಖಿಯೆಂಬಳವರ್ಗೆ ಶಂಭುಕನುಂ ಸುಂದರನುಮೆಂಬರ್ ತನಯರವರಲ್ಲಿ ಪಿರಿಯ ಮಗಂ ಪನ್ನೆರಡು ವರ್ಷಂ ಸೂರ್ಯಹಾಸಾಸಿಯಂ ಸಾಧಿಸುತ್ತಿರ್ಪುದುಮಾತಂಗಾ ಬಾಳನಿತ್ತು ಬೆಸಕಯ್ವಲೆಂದು ಬಂದ ಯಕ್ಷಾಮರ ಸಹಸ್ರಮಾ ಖಡ್ಗರತ್ನಮನವನಿರ್ದ ಬಿದಿರ ಪೊದಱ ಮೊದಲೊಳಿರಿಸಿ ಸಮೇರು ಮಂದಾರ ಸುಮನೋಮಂಜರಿಯಿನರ್ಚಿಸುತ್ತಿರ್ಪುದುಮಿತ್ತ ಲಕ್ಷ್ಮಣಂ ವನ ವಿಲಾಸ ನಿರೀಕ್ಷಣ ಕುತೂಹಲನಾಗಿ

ಸುೞಿವೆಡೆಗೆ ಖಡ್ಗಸಿದ್ಧಿಗೆ
ಒಱೆಯುಟ್ಟಿದ ಪುಣ್ಯದೇವತಾ ದೂತನವೋಲ್
ಸುೞಿಗಾಳಿಯೊಡನೆ ಹರ್ಷದ
ಮುಱೆ ಬರೆ ಬಂದತ್ತದೊಂದು ದಿವ್ಯಾಮೋದಂ ೧೩

ತನಿಗಂಪಿನ ಬಟಿವಟಿಯಿಂ
ಜನಾರ್ದನಂ ಭೃಂಗದಂತೆ ಸುಮನೋರಾಗಂ
ಜನಿಯಿಸೆ ತಮಾಲ ಪಲ್ಲವ
ತನುರುಚಿ ಪೆರ್ಚಿದಿರ ಪೊದಱನಂದೆಯ್ತಂದಂ ೧೪

ಅಂತು ಬಂದು ಬಿದಿರ ಪೊದಱ ಮೊದಲೊಳರ್ಚಿಸಿರ್ದ ಸೂರ್ಯ ಹಾಸಾಸಿಗೆ ಕಯ್ಯಂ ನೀಡುವುದುಂ

ಜಯಲಕ್ಷ್ಮಿಯ ನಯನೋತ್ಪಲ
ಮಯೂಖಮೆನೆ ತಾನೆ ಬಂದು ಕರಕಿಸಲಯ ಕಾಂ
ತಿಯಿನೇಂ ರಾಗಂಬೆತ್ತುದೊ
ಜಯಾಸಿ ಪೊಗರಿಳಿಸೆ ಕಿಸುರ ಮಸಿಯಕ್ಕರಮಂ ೧೫

ಆ ಕರವಾಳ ಕೂರ್ಪಂ ನೋಡಲೆಂದು

ಬಾಯ್ದಾರೆ ನಿಲೆ ಕುಮಾರಂ
ಪೊಯ್ದೊಡೆ ಕಯ್ಯಳವಿದಾರ ಕಯ್ಯಳವಿಯೆನಲ್
ನೆಯ್ದಿಲ ಕಾವಿನ ಪೊದೆಯುಂ
ಪೊಯ್ದಂತೊರ್ವೊದಲೆ ಪಱಿದುದಾ ವಂಶವನಂ ೧೬

ಆ ವಂಶವನದೊಡನೆ

ತಲೆ ಪಱಿದು ಪಾಱೆ ಪಾಱುವ
ತಲೆವರಮೆಡೆವಱಿಯದಟ್ಟೆಯಿಂದುಣ್ಮುವಸೃ
ಗ್ಜಲಧಾರೆ ನಾಳಮೆನೆ ಪಂ
ದಲೆ ಪೋಲ್ತುದು ನಭದೊಳಲರ್ದ ಕೆಂದಾವರೆಯಂ ೧೭

ಅದಂ ಕಂಡು ನಿರಪರಾಧನಂ ಕೊಂದೆನೆಂದು ಮನದೊಳ್ ಲಕ್ಷ್ಮಣಂ ಕಟ್ಟುಕಡೆದು

ವೇಧಸ್ಸಂಕಲ್ಪಂ ದು
ರ್ಬೋಧಮಿವಂ ನಿಟ್ಟೆಯಿಂ ನಿರೋಧಿಸಿ ತನುವಂ

ಸಾಧಿಸಿದೊಡೀ ಕೃಪಾಣಮೆ
ಬಾಧಾಕರಮಾಯ್ತುಜಾಕೃಪಾಣೀಯದವೋಲ್ ೧೮

ಎಂದು ಕಾರುಣ್ಯಪರನಾಗಿ ನಿಜಾಗ್ರಜನ ಸಮೀಪಕ್ಕೆ ಬಂದು ಕರವಾಳ ವೃತ್ತಾಂತಮಂ ವಿದಿತಂ ಮಾಡುವುದುಮಿತ್ತಲ್ ಚಂದ್ರನಖಿ

ವಿವಿಧಾರ್ಚನೆವೆರಸು ತನೂ
ಭವನಿಂದು ಕೃಪಾಣ ಸಿದ್ಧಿವಡೆದಪನೆಂಬು
ತ್ಸವದಿಂದುಳ್ಕಾಪಾತಮ
ನವಳಂಗಪ್ರಭೆಯಿನಿಳಿಸಿ ನಭದಿಂದಿೞಿದಳ್ ೧೯

ತನಯನ ತಲೆಯೊಂದೆಸೆಯೊಳ್
ತನುವೊಂದೆಸೆಯೊಳ್ ಸಿಡಿಲ್ದು ಕೆಡೆದಿರೆ ಕಂಡಾ
ವನಿತೆ ಭಯರಸದಿನೆರ್ದೆ ಪೌ
ವನೆ ಪಾಱೆ ವಿಷಾದವಹ್ನಿಗಿಂಧನಮಾದಳ್ ೨೦

ಖರನಂದನನಂ ದಶಕಂ
ಧರನಳಿಯನನೆನ್ನ ಶಂಭುಕುವರನನಾರ್ ಕೊಂ
ದರೆನುತ್ತೆ ಮೋದಿಕೊಂಡಳ್
ಕರದಿಂದಡಿಗಡಿಗೆ ಚಂದ್ರನಖಿ ತೆಳ್ಪಸಿಱಂ ೨೧

ತನ್ನಂ ದಂಡಿಸಿ ಬಾಳಂ
ಪನ್ನೆರಡಬ್ದಕ್ಕೆ ಪಡೆದ ಬಾಲಕನಂ ಕೊಂ
ದೆನ್ನೊಳಿಡಱಿದನ ಬೇರೊಳ್
ಬೆನ್ನೀರಂ ಪೊಯ್ವೆನೆಂದು ಬೇಗದಿನೆಟ್ಟಳ್ ೨೨

ಒಡನೊಡನೆ ಶೋಕರಸಮುಂ
ಕಡುಮುಳಿಸುಂ ತಿಣ್ಣಮಾಗೆ ಖೇಚರ ಮೊೞಗಂ
ಸಿಡಿಲಂ ಕೆದಱುವ ಕಲ್ಪದ
ಕಡೆಗಾಲದ ಕೆಂಡವಡೆಯ ಮುಗಿಲವೊಲಿರ್ದಳ್ ೨೩

ಅಂತು ಮುಳಿದೆಬ್ದು ಪಜ್ಜೆವಿಡಿದು ನಡೆದು ರಾಮಲಕ್ಷ್ಮಣರಂ ಕಂಡು

ಬಗೆವವರಾರಿದಂ ಖಚರಕಾಮಿನಿ ಪುತ್ರವಿಯೋಗ ವೇಗಮಂ
ಬಗೆಯದೆ ಕಂದನಂ ಬಱಿದೆ ಕೊಂದವನಂ ಕೊಲಲೆಂದು ಪೊಣ್ದುದಂ
ಬಗೆಯದೆ ನೋಡಿ ಲಕ್ಷ್ಮಣನ ಗಾಡಿಗೆ ಸೋಲ್ತೊಡಗೂಡುವಾಸೆಯಂ
ಬಗೆದಳದಂತೆ ದಲ್ ಬಗೆವರೇ ವಿಷಯಾಸವಮತ್ತರೇನುಮಂ ೨೪

ರೂಪಪರಾವರ್ತನವಿ
ದ್ಯಾಪರಿಣತಿಯಿಂ ವಿಯಚ್ಚರಾಂಗನೆ ಕನ್ಯಾ
ರೂಪಮನೇಂ ತಳೆದಳೊ ತಾ
ರಾಪತಿ ತಾರುಣ್ಯಲಕ್ಷ್ಮಿಯಂ ತಾಳ್ದಿದವೊಲ್ ೨೫

ನನೆಗಣೆಯಧಿದೇವತೆಯೆಂ
ಬಿನೆಗಂ ಸಾರ್ತಂದು ಕೃತಕ ಶೋಕ ರಸಾಲಂ
ಬಿನಿ ನೆಯ್ದಿಲೆಸಜೊಳಮರ್ದಿನ
ಪನಿ ಬಂದಪುದೆನಿಸಿ ಕಣ್ಣ ನೀರಂ ತಂದಳ್ ೨೬

ತನಗೆ ಕರುಣಾರಸಂ ಸಂ
ಜನಿಯಿಸೆ ಸಾರಣ್ಗೆ ಕರೆದು ಕುಳ್ಳಿರಿಸಿ ಲತಾ
ತನು ಕಣ್ಬನಿಯಂ ತೊಡೆದಳ್
ಜನಕಾತ್ಮಜೆ ಕನ್ನೆ ಕಪಟಿಯೆಂದೆತ್ತಱಿವಳ್ ೨೭

ಬಿಸಿಲುಂ ಬೆಳ್ದಿಂಗಳುಂ ಗಾಳಿಯುಮೊಳಪುಗದತ್ಯುಗ್ರಸತ್ವಂಗಳಿಂದ
ವಿಸುವೀ ದುರ್ವಾರಕಾಂತಾರಮನಬಲೆಯೆ ನಿಶ್ಶಂಕೆಯಿಂದೆಂತುಪೊಕ್ಕಯ್
ಬಿಸವಂದಂ ಕನ್ನೆ ನಿನ್ನಂದಮನೆಮಗಱಿಪೆಂದಾಜಿರಂಗಪ್ರಚಂಡಂ
ಬೆಸಗೊಂಡಂ ಬೀಱೆ ದಂತದ್ಯುತಿ ಶರದದ ಬೆಳ್ದಿಂಗಳಂ ರಾಮಚಂದ್ರಂ ೨೮

ಆಗಳಾ ಕೃತಕಿ ಕೃತಾಂತನೆನ್ನ ಮಾತಾಪಿತೃಗಳನೊರ್ಮೊದಲೊಳ್ ಮುಱಿದುಯ್ಯೆ ನಿಸ್ಸಹಾಯವೃತ್ತಿಯಿಂ ನಿತ್ತರಿಸಲಾಱದಾನುಮೆನ್ನಂ ಪರಿಚ್ಛೇದಿಸಿ ಪಡುವಂ ಪೊಕ್ಕು ಸಾವೆನೆಂದು ಬರುತ್ತುಂ ನಿಮ್ಮನೆನ್ನ ಪುಣ್ಯೋ

ದಯದಿಂ ಕಂಡೆನೆನ್ನನಿರ್ವರೊಳೊರ್ವರ್ ಗಂಧರ್ವ ವಿವಾಹವಿಧಿಯಿಂ ಕಯ್ಕೊಳ್ವುದೆನೆ ಜನಕಜೆ ರಾಮಲಕ್ಷ್ಮಣರ ಮೊಗಮಂ ನೋಡಿ ಮುಗುಳ್ನಗೆ ನಗುವುದುಮದರ್ಕೆ ಸಿಗ್ಗಾಗಿ ಮನದೊಳುಮ್ಮಳಿಸಿ

ಅವಳಿವರ್ಗೆ ತಕ್ಕುದಂ ಮಾ
ಡುವೆನೆಂಬಾಗ್ರಹದಿನವರ ಕಣ್ಬೊಲಂ ದಾಂ
ಟುವಿನಂ ನಡೆದು ತಟಿಲ್ಲತೆ
ಯವೊಲಾಕಾಶಕ್ಕೆ ನೆಗೆದು ಪಾಱಿದಳಾಗಳ್ ೨೯

ಪರಿದ ಕಚಮುಂ ಕಣ್ಣಿಂ ಕಯ್ಗ್ಗಣ್ಮುವಶ್ರು ಜಲಂಗಳುಂ
ಬೆರಸು ಬಸಿಱಿಂ ತಿಣ್ಣಂ ಮೋದುತ್ತುಮಾತ್ಮಜ ಶೋಕದಿಂ
ಖರನ ಚರಣೋಪಾಂತಕ್ಷೋಣೀ ಪ್ರದೇಶದೊಳಾ ತನೂ
ದರಿ ತನುವನಂದೊಕ್ಕಳ್ ಹಾಹಾ ರವಂ ನೆಗೞ್ವನ್ನೆಗಂ ೩೦

ಅಂತು ಶೋಕವಿಕಲೆಯಾದ ಚಂದ್ರನಖಿಯಂ ಕಂಡು ಖರನಿದೇನೆಂದು ಬೆಸಗೊಳ್ವುದುಂ

ಬಗೆಗಿಂದುಮ್ಮಳಮಾಗೆ ತಲ್ಲಟಿಸಿ ಬಾಳಂ ಸಾಧಿಸುತ್ತಿರ್ದ ಪೆ
ರ್ಮಗನಂ ನೋಡುವೆನೆಂದು ಪೋಗಿ ತಲೆ ಬೇಱಾಗಟ್ಟೆ ಬೇಱಾಗೆ ಧಾ
ತ್ರಿಗೆ ಬಿಟ್ಟಿರ್ದೊಡೆ ಕಂಡು ಭೋಂಕನೆರ್ದೆ ಬಾಳಂ ಬೀಸಿದಂತಾಗೆ ಮೂ
ರ್ಛೆಗೆ ಸಂದೆಂ ಸುಡೆ ಸುತ್ತಿ ಶೋಕದಹನಂ ಜ್ವಾಲಾಸಹಸ್ರಂಗಳಿಂ ೩೧

ಚೇತರಿಸಿ ತನಯುನಂ ಕೊಂ
ದಾತನ ಬಟಿವಿಡಿದು ಪೋಗಿ ಬಾಳಂ ಕೊಳಲೆಂ
ದಾತನ ಮೇಲ್ವಾಯ್ದೊಡೆ ಪಡೆ
ಮಾತೇಂ ಪರಿಭವಿಸಿ ಕಳೆದನುದ್ಧತನೆನ್ನಂ ೩೨

ನಿನಗೆ ಸತಿಯಾಗಿಯುಂ ತ್ರಿಭು
ವನವಿಜಯಿ ದಶಾಸ್ಯನೊಡನೆವುಟ್ಟಿಯುಮಾದ
ತ್ತೆನಗೆ ಪರಿಭವಮೆನಲ್ ಮು
ನ್ನಿನ ಜನ್ಮದ ಕರ್ಮಬಂಧಮಂ ಮೀಱುವರಾರ್ ೩೩

ಎನಲೊಡಂ ಶ್ರವಣವಿವರದೊಳ್ ತಪ್ತಾಯಸಮಂ ಪೊಯ್ದಂತೆ ದಾರಕ ವಿದಾರಣಮುಂ ದಾರಪರಾಭವಮುಂ ತನಗಟಿಲನೊದವಿಸೆ

ಇವೆ ಕೋಪಾಲನ ಧೂಮಲೇಖೆಯೆನೆ ಪುರ್ವುರ್ವೆಟ್ಟು ಜರ್ವಲ್ ತಗು
ಳ್ದುವು ಕಣ್ಗಳ್ ಪೊಱಿವಾಯ್ದು ಕೋಪಶಿಖಿ ಪೊಣ್ಮಿತ್ತೆಂಬಿನಂ ಕೆಂಕಮಾ
ದುವು ಕೋಪಾನಲತಾಪದಿಂ ರಣರಸಂ ದಳ್ಳೆಂದು ಕಾಯ್ದುಕ್ಕುವಂ
ತೆವೊಲಾಗಳ್ ಬೆಮರ್ಗಳ್ ಕಪೋಲತಟದೊಳ್ತಳ್ಪೊಯ್ದುವಾದೈತ್ಯನಾ ೩೪

ತಡೆವುದು ಪಾಟಿಯೆ ಸುತನಂ
ಮಡಿಪಿದನಂ ಸತಿಗೆ ಭಂಗಮಂ ಮಾಡಿದನಂ
ಕಡುಕಯ್ದು ಕಾದಿ ರಣದೊಳ್
ಪೆಡತಲೆಯಂ ಮೆಟ್ಟಿ ಕಿಟ್ತುಕೊಳ್ವೆಂ ತಲೆಯಂ ೩೫

ಎಂದು ಗರ್ಜಿಸಿ ಕರವಾಳ್ಗೆ ಕಯ್ಯಂ ನೀಡುವುದುಂ ಮಂತ್ರಿಮಂಡಲಂ ಪಾರ್ಕೊಂಡು

ಸಾಧಾರಣರಲ್ಲರ್ ವಿ
ದ್ಯಾಧರವಲ್ಲಭ ವಿಚಾರಿಸವರುನ್ನತಿಯಂ
ಸಾಧಿಸದೆ ಸೂರ್ಯಹಾಸಂ
ಸಾಧನವಾಯ್ತೆಂದೊಡೇನವರ್ ಮಾನವರೇ ೩೬

ಅದಱಿನವರನೇಳಿಸದೆ ಸಕಲಸಾಮಂತರಂ ಬರಿಸಿ ಸಮರಸನ್ನದ್ಧನಾಗಿ ನಡೆವುದೆ ನಯಮದೆಂತೆನೆ ಸಕಲಚಕ್ರವರ್ತಿಗಳುಮರ್ಧ ಚಕ್ರವರ್ತಿಗಳುಂ ಮನುಷ್ಯರಾಗಿಯುಮೇಕಾಂಗದೊಳಜೇಯರೆಂಬುದು ಸುಪ್ರಸಿದ್ಧಮೆಂದು ಬಿನ್ನವಿಸೆ ಮನದೆಕೊಂಡಾ ಸ್ವರೂಪಮಂ ದಶಕಂಧರಂಗೆ ಬಿನ್ನಪಂಗೆಯ್ವುದೆಂದು ದೂತರನಟ್ಟಿ ಅಸಂಖ್ಯಾತ ಸಾಮಂತ ಸೇನೆವೆರಸು ಖರದೂಷಣರ್ ಗಾಳಿಗಿದಿರಂ ನಡೆವ ಮುಗಿಲೊಡ್ಡಿನಂತೆ ಗಗನವೀಧಿವಿಡಿದು ರಾಮಲಕ್ಷ್ಮಣರನಱಿಸಿ ಬರ್ಪ ಸಮಯದೊಳ್ ಸಮುದ್ರಘೋಷಮನಜನಿಸುವ ಪಟುಪಟಹ ಶಂಖ ಕಾಹಳಾರವಂ ಭೋರೆನೆ ಕೇಳ್ದಿದೇನೆಂದು ಸೀತೆ ಬೆರ್ಚಿ ಬಾರಿಸಿ ರಘುತನೂಭವಂ ತನ್ನ

ಶರಾಸನಕ್ಕೆ ಮೆಲ್ಲಗೆ ಕಯ್ಯನುಯ್ಯೆ ಲಕ್ಷ್ಮಣಂ ದೇವರ್ ಜಿಲ್ವಿಡಿವಂತು ಬಲ್ವಡೆಯೆ ಮೆಯ್ವೆರ್ಚೆ ಮೇಲೆತ್ತಿ ಬಂದೀ ವಿದ್ಯಾಧರ ಸೈನ್ಯಮಂ ನಿಮಿಷದಿಂ ಪರ್ದಿಂಗೆ ಬಿರ್ದಿಕ್ಕುವೆಂ ಎಂದು ಬೆಸಸಂ ಪಡೆದು ಮದೀಯಮಾತೆಯುಂ ಸೀತಾದೇವಿಯು ನಪಾಯಬಹುಳಮಪ್ಪ ಗಹನದೊಳಗಗಲದಿರ್ಪುದೆತ್ತಾನುಮೆನಗೆ ಧುರಂ ದುರ್ಧರ ಮಾಗೆ ಸಿಂಹನಾದಂಗೆಯ್ಯೆ ಬರ್ಪುದೆಂದು ವಿನಯವಚನಮಂ ನುಡಿದು ಬೀಡ್ಕೊಂಡು ಬಿಲ್ಲನೇಱಿಸಿ ಜೇವೊಡೆದು ವಿಯಚ್ಚರಸೇನೆಗದಿರದಿದಿರಂ ನಡೆದು ಪೊಕ್ಕಿನೆ

ಮೊನೆಯಂಬಲ್ಲಿವು ನಂಜಿನಂಬುಗಳೆನಲ್ ಕೂರಂಬು ಮಾಱಾಂತರಂ
ಮನದಿಂ ಬೇಗದಿನುರ್ಚೆ ಪೋಗೆ ಪೆಣನಂ ಸಾಲಿಟ್ಟವೋಲಾಗೆ ಮೇ
ದಿನಿಯೊಳ್ ಖೇಚರಸೇನೆ ಬೀಡೆ ಬಯಲಾದತ್ತಾಗಸಂ ಕೃಷ್ಣನಂಜಿನ
ಕೃಷ್ಣಾಹಿಯ ಕೋಳ್ಗೆ ಬೆರ್ಚದಿದಿರೊಳ್ ಮೆಯ್ವಾರ್ಚೆ ಬಾಳ್ವನ್ನರಾರ್ ೩೭

ಸಿಡಿಲ ಕಡುಗಾಯ್ಪು ಸಿಂಗದ
ಪೊಡರ್ಪು ಭೈರವನ ಬಲ್ಪು ಮಾರಿಯ ಮುಸಕಂ
ಕಡೆಗಾಲದ ಜವನೆಟ್ಟುರ
ಮೊಡರಿಸೆ ಲಕ್ಷ್ಮಣನಡುರ್ತು ಕಾದುತ್ತಿರ್ದಂ ೩೮

ಅನ್ನೆಗಮತ್ತ ರಾವಣಂ ಖರದೂಷಣರಟ್ಟಿದ ಸುದ್ದಿಯಂ ಕೇಳ್ದು ಸಂವರ್ತ ಸಮಯದ ಸಮುದ್ರದಂತೆ ಕದಡಿ

ನಿಯಮದಿನಿರ್ದನಂ ನಿರಪರಾಧನನನ್ನೆಯದಿಂದಮೆನ್ನ ತಂ
ಗೆಯ ಮಗನಂ ವಿದಾರಿಸಿದನಂ ತಱಿದಾತನ ಮೆಯ್ಯ ರಕ್ತವಾ
ರಿಯುನೆಱೆದಾಱಿಪೆಂ ಖರನ ಶೋಕಕೃಶಾನುವನೆಂದು ಕಾಯ್ದು ದು
ರ್ಜಯನಸುರಾಧಿಪಂ ಜಡಿದನಾಸುರಮಂ ನಿಜಚಂದ್ರಹಾಸಮಂ ೩೯

ಒದವಿದ ಕೋಪವಹ್ನಿಯುರಿಯುಂ ಪೊಗೆಯುಂ ನೆಗೆವಂತೆ ಪದ್ಮರಾ
ಗದ ಹರಿನೀಲದುನ್ಮುಖ ವಿಭೂಷಣ ರಶ್ಮಿ ಪಗಂಡುಗೊಳ್ವಿನಂ
ಕದನಮದೋದ್ಧತಂ ಖಚರನಾಯಕರಂ ಬರವೇಟ್ಟು ಸಿಂಹಪೀ
ಠದಿನಿರದೆಟ್ಟನಸ್ತಮಿತ ಪುಣ್ಯದಶಾನನನಾ ದಶಾನನಂ ೪೦

ಸೆಡೆಯೆ ಹಿಮಪ್ರಭಂ ನಿಜಯಶಃಪ್ರಭೆಯಿಂದಿನನಂಶುಮಾಲೆ ಕೀ
ೞ್ಪಡೆ ಬಲಗಯ್ಯ ಬಾಳ ಪೊಳೆಪಿಂ ಕಡುಗೆಟ್ಟಲೆ ದೇಹದೀಪ್ತಿಯಿಂ
ದೊಡರಿಸೆ ರಾಹು ತನ್ನ ಹರಿನೀಲ ವಿಮಾನಮನೇಱುವಂತಿರಾ
ಗಡೆ ಕಡುಕಯ್ದು ಪುಷ್ಪಕವಿಮಾನಮನೇಱಿದನಿಂದ್ರವಿದ್ವಿಷಂ ೪೧

ಪ್ರತಿಕೂಲಾನಿಲನಿಂ ಪತಾಕೆ ಮಗುಳೆಂಬಂತಾಗೆ ಕಯ್ಸನ್ನೆಯಿಂ
ಶ್ರುತಿಯಂ ಸಾರ್ತರೆ ಪೋಪುದಲ್ತು ನಯಮೆಂಬಂತಾಗಿ ಘಂಟಾ ರಣ
ತ್ಕೃತಿ ಸಾರ್ತಂದುದು ಪುಣ್ಯದೇವತೆಯ ಕಣ್ಣೀರೆಂಬಿನಂ ಮೇಘಸಂ
ಹತಿಯಿಂದಲ್ಲುಗೆ ಮುತ್ತು ಪುಷ್ಪಕ ವಿಮಾನಂ ದಂಡಕಾರಣ್ಯಮಂ ೪೨

ಆ ಸಮಯದೊಳ್ ದಶಾಸ್ಯನೊಂದು ತಣ್ಬುಟಿಲ ತಾಣದೊಳ್ ಬಱಸಿಡಿಲ ಬಟಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ೪೩

ತಳತಳಿಸಿ ಪೊಳೆಯೆ ಸೀತೆಯ
ಚಳನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆಳವಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾ ಕ್ಷಣದೊಳ್ ೪೪

ಹಾರಮರೀಚಿಮಂಜರಿ ಸುಧಾರಸಧಾರೆ ಸುಧಾಂಶು ಲೇಖೆ ಕ
ರ್ಪೂರ ಶಲಾಕೆ ನೇತ್ರಸುಖದಾಯಕಮೀ ದೊರೆತಲ್ಲಮಾಕೆ ಶೃಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣಱಿದಾರೆ ಮನ್ಮಥಂ ೪೫

ಪಲರುಂ ವಿದ್ಯಾಧರ ಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತ
ನ್ಮೊಲವಿಂ ಮೇಲ್ವಾಯ್ದೊಡಂ ಮುನ್ ಬಗೆಯದ ಬಗೆಯೇನಾದುದೆಂದುದ್ದ
ತಂಮೂ
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬಸಂಬಟ್ಟುವನ್ನಂ
ಪಲಕಾಲಕ್ಕೇಸುವೆತ್ತಂ ದಶಮುಖನೆನುತುಂ ಮನ್ಮಥಂ ಮಾಣದೆಚ್ಚಂ ೪೬

ನಡೆ ನಡುಕೋಲ್‌ವರಂ ದಶಮುಖಂ ಮನಮಂ ಸುಮನಶ್ಶಿಲೀಮುಖಂ
ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇ
ರ್ಪಡುಗಿಡೆ ಸತ್ಯಶೌಚಗುಣಸಂಪದಮೇಳಿದನಾದನೆನ್ನರುಂ
ಕಿಡಿ ಮಸಿಯಾದವೊಲ್ ವಿಷಯಲೋಭದಿನೇಳಿದರಾಗದಿರ್ಪರೇ ೪೭

ವಿಹಿತಾಚಾರಮನನ್ವಯಾಗತ ಗುಣಪ್ರಖ್ಯಾತಿಯಂ ದುಷ್ಟನಿ
ಗ್ರಹ ಶಿಷ್ಟಪ್ರತಿಪಾಲನಕ್ಷಮತೆಯಂ ಕಯ್ಗಾಯ್ದುದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ೪೮

ಅವಿವೇಕಿ ದಶಮುಖಂ ದೃ
ಷ್ಟಿ ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕಯ್ ನೀ
ಡುವ ಗಾಂಪನಂತೆ ರಘುವೀ
ರ ವಧೂ ಜನಕಜೆಗೆ ಮನದೊಳಳಿಪಂ ತಂದಂ ೪೯

ಪರವಧುಗಾಸೆಗೆಯ್ವಧಿಕ ಪಾತಕಮೊಂದು ರಘುಪ್ರವೀರನೊಳ್
ಧುರದೊಳಿದಿರ್ಚಿದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ
ಸ್ಮರಿಸಿದನಾತ್ಮಸತ್ವಗುಣಹಾನಿಯೆ ಸೂಚಿಸದೇ ವಿನಾಶಮಂ ೫೦

ಅಂತು ನೆನೆಯಲೊಡಮವಲೋಕಿನೀವಿದ್ಯೆ ಬಂದು ಬೆಸನಾವುದೆನೆ ದಶಮುಖ ನಿವರಾರೆಂಬುದುಮಯೋಧ್ಯಾಸಿಂಹಾಸನಕ್ಕಧಿಪತಿಯುಮಿಕ್ಷ್ವಾಕುವಂಶಸಂಭವನುಮಪ್ಪನರಣ್ಯತನೂಭವಂ ದಶರಥನರನಾಥಂ ತದಪತ್ಯರಿವರ್ ಈ ಕಾಲದ

VIJAYA EVENING COLLEGE LIBRARY
BANGALORE-4.

ಬಲದೇವ ವಾಸುದೇವರ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪರತ್ನಂಗಳನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್ ಮಹಾಬಲ ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾ ಪುರವರೇಶ್ವರನಪ್ಪ ಹರಿವಂಶದ ಜನಕನ ತನೂಭವೆ ರಥನೂಪುರ ಚಕ್ರವಾಳ ಪುರಮನಾಳ್ವ ಚಂಡಬಲನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬುದುಮಿಾಕೆಯನೀತನಿಂದಗಲ್ಚುವ ಪಾಯಮಾವುದೆನೆ ದೇವತೆ ಚಕಿತ ಚಿತ್ತೆಯಾಗಿ

ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕಬಲರ್
ಕಾರಣಪುರುಷರಿವರ್ ನಿ
ಷ್ಕಾರಣಮಿವರೊಳ್ ವಿರೋಧಮಂ ಮಾಡುವುದೇ ೫೧

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮನಿರತರಂ ನಿಯಮಿಸಿ ನೀ
ನೀ ವಿಷಯಕ್ಕೆಱಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ ೫೨

ಅನ್ನೆಯದಿಂ ನಡೆವವರಂ
ನೀನ್ ನಿಯಮಿಸುವೈ ದಶಾಸ್ಯ ಪೆಱನಾವಂ ನಿ
ನ್ನನ್ ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ ೫೩

ಪದಿನಾಲ್ಸಾಸಿರ ಮುಖ್ಯನಾಯಕರಸಂಖ್ಯಾತಂ ಬಲಂ ಖೇದದಿಂ
ದಿದಿರಾದರ್ ಖರದೂಷಣರ್ ಬಗೆದನಿಲ್ಲತ್ತಲ್ ಭರಂಗೆಯ್ದು ಕಾ
ದಿದಪಂ ಲಕ್ಷ್ಮಣನಿತ್ತಲೀಕೆಯೊಡನೀತಂ ವೀತಶಂಕಂ ವಿನೋ
ದದೊಳಿರ್ದಂ ರಘುವೀರನಿನ್ನರಿವರೊಳ್ ವಿದ್ವೇಷಣಂ ದೂಷಣಂ ೫೪

ಎಂದು ತೆಱೆಯೆ ನುಡಿದುದರ್ಕೆ ಕಡುಮುಳಿದು

ಮದನಯಶಃಪಟಹ ಧ್ವನಿ
ಪುದಿಯೆ ವಿಯಚ್ಚರನ ಕರ್ಣಮಂ ಹೃದಯಕ್ಕೆ
ಯ್ದಿದುದಿಲ್ಲ ದಿವ್ಯವಚನಂ
ಬಿದಿಯಂ ಮಿಱುಗುವೆ ಪೆಱರ ಪೇೞ್ದುಪದೇಶಂ ೫೫

ಆನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೇೞ್ದೆ ಪೇೞ್ದುದನೇಗೊಳ್
ಏನೆಂದು ಕೇಳ್ಱಿ ನುಡಿವಯ್
ಮಾನವರಾಂತಪರೆ ಮರುಳೆ ಲಂಕಾಪತಿಯಂ ೫೬

ಎಂಬುದುಂ ವಿದ್ಯಾದೇವತೆ ಕನಲ್ದು

ಜನಕಜೆಯನುಯ್ದೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ
ತನ ಕಯ್ಯೊಳವಲ್ತು ಪುರಾ
ತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ ೫೭

ಗೆಲಲೆನಗೆ ರಿಪುಬಲಂ ಬ
ಲ್ವಲಮಾದೊಡೆ ಸಿಂಹನಾದಮಂ ಮಾೞ್ಪೆಂ ಬೆಂ
ಬಲಮಾಗಿ ಬರ್ಪುದೆಂದೀ
ಬಲದೇವಂಗಱಿಪಿ ವಾಸುದೇವಂ ಪೋದಂ ೫೮

ಎಂದು ರಾವಣಂಗೆ ಪೇೞ್ವುದುಮವಂ ರಣಕ್ಷೋಣಿಗೆ ಪೋಗಿ ಲಕ್ಷ್ಮಣಂ ಕೇಳದಂತು ವೈಕುರ್ವಣ ಶಕ್ತಿಯಿಂ ಸಿಂಹನಾದಂಗೆಯ್ಯೆನೆ ವಿದ್ಯಾದೇವತೆ ಪೋಗಿ ಅಂತೆಗೆಯ್ವುದುಮಾ ಧ್ವನಿಯಂ ಕೇಳ್ದು

ಧುರದೊಳ್ ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂಗೆಟ್ಟು ಸಿಂ
ಹರವಂದೋಱಿದನಾಹವಂ ವಿಷಮಮೆಂಬೀ ವಿಸ್ಮಯಂ ಚಿತ್ತದೊಳ್
ದೊರೆಕೊಂಡತ್ತು ರಘೂದ್ವಹಂಗಮುಟಿದಂದೆಂತಕ್ಕುಮೋ ಜಾನಕೀ
ಹರಣಂ ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ ೫೯

ಕಾಪಂ ಪೇೞ್ದು ಜಟಾಯುವ
ಸೋಪಳಸಿರವೇೞ್ದು ವೈರಿಬಲಮುಂ ತವಿಸಲ್
ಪೋಪಂತಿರೆ ದಂಡಧರಂ
ಚಾಪಧರಂ ಬಲನವಂಧ್ಯ ಕೋಪಂ ಪೋದಂ ೬೦

ಅನ್ನೆಗಮಿತ್ತಲ್

ಅೞಿಪಿ ಪರವಧುಗಧೋಗತಿ
ಗಿೞಿವುದನಭಿನಯಿಸುವಂತೆ ಸೀತೆಯ ಸಾರ
ಣ್ಗೆೞಿದಂ ನಭದಿಂ ಖಚರಂ
ಪೞಿಗಂ ಪಾಪಕ್ಕಮಂಜದವರೇಗೆಯ್ಯರ್ ೬೧

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುೞುವಂ ಕಡಂಗಿ ಕಾೞೋರಗನಂ
ಕೂಸು ಪಿಡಿವಂತೆ ಪಿಡಿದಾ
ಸಾಸಿಗನವಿವೇಕಿ ಸೀತೆಯುಂ ದಶಕಂಠಂ ೬೨

ಅಂತು ಪಿಡಿದು ನಿಜವಿಮಾನದೊಳಿಟ್ಟು

ದಶಮುಖನುನ್ಮುಖನಳಿಪಿಂ
ಶಶಿಮುಖಿಯಂ ಜನಕಸುತೆಯನಾವರಿಸೆ ಚತು
ರ್ದಶಭುವನಮನಪವಾದಂ
ಶಶಿಕಲೆಯಂ ಸೈಂಹಿಕೇಯನುಯ್ವಂತುಯ್ದಂ ೬೩

ಆಗಳದಂ ಕಂಡು ಜಟಾಯು ಕೋಪಾಲನ ವಿಸ್ಫುಲಿಂಗದಂತಾರಕ್ತಂಗಳಾದ ಕಣ್ಗಳಿಂ ನುಂಗುವಂತೆ ನೋಡಿ

ಪತಿ ಕಾಪುವೇೞ್ದು ಪೋದಂ
ಸತಿಯಂ ಕಳ್ದುಯ್ದಪಂ ಖಳಂ ಮಾರ್ಕೊಂಡು
ದ್ಧತನಂ ಮದೀಯ ತುಂಡಾ
ಹತಿಯಿಂ ಶತಖಂಡಮಾಗೆ ಮಾೞ್ಪೆನೆನುತ್ತುಂ ೬೪

ಖರನಖರಂಗಳಿಂ ನಿಶಿತಚಂಚುಗಳಿಂದಿಱಿಯಲ್ ಕಱುತ್ತು ಸಾ
ರ್ತರೆ ನಸುನಕ್ಕು ಪೊಯ್ಯೆ ಕರದಿಂ ಗಮನೋತ್ಸುಕನಿಂದ್ರವೈರಿ ತ
ನ್ನೆರಡುಮೆಱಂಕೆಗಳ್ ಮುಱಿದಿಳಾತಳದೊಳ್ ಕೆಡೆದತ್ತು ವಜ್ರದಿಂ
ಸುರಪತಿ ಪೊಯ್ಯೆ ಬೆಟ್ಟು ಕೆಡೆದಂತೆ ಜಟಾಯು ನಭೋವಿಭಾಗದಿಂ ೬೫

ಮನಮೆಳದಾಗೆ ಮಸ್ಸೆ ಮಿಗೆ ತಳ್ತಿಮೆಯಿಂ ಕರೆಗಣ್ಮೆ ಸೂಸೆ ಕ
ಣ್ಬನಿ ಗಳಕಂದಳಂ ಬಿಗಿಯೆ ಗದ್ಗದ ನಿಸ್ವನಮುಣ್ಮೆ ಹಾರವಂ
ಜನಿಯಿಸೆ ಸೀತೆ ಭೀತೆ ದೆಸೆಗೆಟ್ಟೆರ್ದೆಗೆಟ್ಟಱೆ ಪೊಣ್ಮೆದತ್ತು ಮಾ
ರ್ದನಿ ದೆಸೆಯೊಳ್ ದಿಗಂಗನೆಯರುಂ ಬಿಡದಂದೊಡನಟ್ಟುವಾಡ್ಕೆಯಿಂ ೬೬

ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ಚೆ ಶೋಕವಾ
ತಂಕಮೊಡರ್ಚೆ ಪುಷ್ಪಕವಿಮಾನದ ರತ್ನ ವಿಚಿತ್ರ ಪುತ್ರಿಕಾ
ಸಂಕುಲಮೞ್ತೊಡೞ್ತುವು ಬೆಮರ್ತೊಡೆ ಕೂಡೆ ಬೆಮರ್ತುವಾಗಳಾ
ಲಂಕೆಯ ಸೂಡನುನ್ನತಿಯ ಕೇಡನವಂಗೆ ನಿವೇದಿಪಂತೆವೋಲ್ ೬೭

ಬಲೆಗೊಳಗಾದ ಸೋಗೆನವಿಲಂತೆ ಭಯಾಕುಲೆ ತನ್ನ ಚಿತ್ತದೊಳ್
ನೆಲಸಿದ ರಾಮನಂ ಬಯಸಿ ನೋಡಲಪೇಕ್ಷಿಸಿ ಬಾಹ್ಯ ದರ್ಶನ
ಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ ನಸುಮುಚ್ಚೆವೋಗಿ ತ
ಣ್ಣೆಲರಲೆಪಿಂದೆ ಮೂರ್ಛೆದಿಳಿದಳ್ ಮಗುಳ್ದುಂ ಪೊಱಪೊಣ್ಮೆ ಹಾರವಂ ೬೮

ಕ್ರೂರಾತ್ಮಂ ವಂಚಕನವಿ
ಚಾರಿ ದುರಾಚಾರಿ ಬಗೆಯದುಯ್ದಪನೆನ್ನಂ
ಹಾ ರಾಮಾ ಹಾ ರಾಮಾ
ಬಾರಿಪರಾರೆಂದು ಸೀತೆ ಶೋಕಂಗೆಯ್ದಳ್ ೬೯

ಅಂತು ಶೋಕಂಗೆಯ್ವ ಸೀತೆಯಂ ದಶಾಸ್ಯನನಂತವೀರ್ಯಕೇವಲಿಗಳ ಚರಣೋಪಾಂತದೊಳ್ ಕಯ್ಕೊಂಡ ಪರಾಂಗನಾ ವಿರತಿ ವ್ರತದ ಭಂಗಮುಂ ಬಗೆಯದುಯ್ದನ್ನೆಗಮಿತ್ತಲ್

ದೇವೇಂದ್ರನ ವಜ್ರಮನೆ
ನ್ನೀ ವಜ್ರಾವರ್ತಚಾಪಮಂ ಏಱುವನಿ
ನ್ನಾವನೆನುತ್ತುಂ ಸಂಗ್ರಾ
ಮಾವನಿಗನುಜನ ಕೆಲಕ್ಕೆ ರಾಮಂ ಬಂದಂ ೭೦

ಅಂತು ಬರ್ಪುದುಂ ಲಕ್ಷ್ಮಣನಪಾಯಬಹುಳಮಪ್ಪ ಗಹನದೊಳ್ ದೇವ ಸೀತಾದೇವಿಯನಗಲ್ದೇಕೆ ಬಿಜಯಂಗೆಯ್ದಿರೆಂಬುದುಂ ನಿನ್ನ ಸಿಂಹನಾದಮಂ ಕೇಳ್ದು ಬಂದೆನೆನೆ ಭವದೀಯ ಪ್ರಸಾದದಿನೆನಗೆ ಬಲ್ಲಿಲಮಪ್ಪ ಬವರಮಿಲ್ಲ ದಾವನಾನುಮೊರ್ವಂ ಮಾಯಾವಿಯ ಮಾಟಮಕ್ಕುಮದುಕಾರಣಂ ಬೇಗಂ ಬಿಜಯಂಗೆಯ್ವುದಾನೀ ಬವರಮಂ ತೀರ್ಚಿ ನಿಮ್ಮ ಬೆನ್ನನೆ ಬಂದಪ್ಪೆನೆಂದು ಬಿನ್ನವಿಸೆ

ತೋಱಿದನಿಲ್ಲ ಸಿಂಹರವಮಂ ಗಡ ಲಕ್ಷ್ಮಣನೆನ್ನ ಚಿತ್ತದೊಳ್
ತೋಱಿದುದಿಲ್ಲ ಬಿಟ್ಟು ಬರಲಾಗದು ಸೀತೆಯನೆಂಬ ನಿರ್ಣಯಂ
ಬೇಱೆ ಕಡಂಗಿ ಕೆತ್ತಿದಪುದೆನ್ನೆಡಗಣ್ ತಡವಿಲ್ಲದಚ್ಚಿಗಂ
ತೋಱದೆ ಮಾಣದಿಂತಿದೆನುತುಂ ಮಗುಳ್ದಂ ಮನುವಂಶಮಂಡನಂ ೭೧

ಅಂತು ಬಂದು ಲತಾಭವನದೊಳ್ ಮನೋವಲ್ಲಭೆಯಂ ಕಾಣದೆ ಶಿಖಿ ಮುಖಕ್ಕೆ ವಂದ ಪಾದರಸದಂತೆ ನಿಜ ನಿಸರ್ಗ ಧೈರ್ಯಗುಣಮದೃಶ್ಯಮಾಗೆ

ಹಾ ಹಾ ಜನಕಸುತೇ ವೈ
ದೇಹೀ ವೈದೇಹಿಯೆಂದು ಪುದಿದಿರೆ ಮನಮಂ
ಮೋಹತಮಂ ದೀಪಂ ವಾ
ತಾಹತಿಯಿಂ ನಂದುವಂತೆ ಮೂರ್ಛೆಗೆ ಸಂದಂ ೭೨

ನಸು ಬಿಸುಪೇಱೆ ಮೆಯ್ ಮಗುಳೆ ಕೆತ್ತುವ ತಾಣಮೆ ಕೆತ್ತೆ ಮಂದಮಾ
ದುಸಿರ್ಗಳೆ ನಾಸಿಕಾಮುಕುಲದಿಂದಿನಿಸುಂ ಪೊಱಪೊಣ್ಮೆ ತಳ್ತು ಸಂ
ದಿಸಿದೆಮೆ ಬಿರ್ಚೆ ಕಣ್ಮಲರ್ಗಳುಳ್ಳಲರುತ್ತಿರೆ ಜಾನಕೀಯೆನು
ತ್ತುಸಿರ್ದುಸಿರ್ದೆಟ್ದನಾ ರಘುಕುಲಾಂಬರ ಚಂಡ ಮರೀಚಿ ಮೂರ್ಛೆಯಿಂ ೭೩

ಅಂತೆೞ್ಚತ್ತುಂ ಸುತ್ತಲುಂ ತೊೞಲ್ದಱಸುತ್ತುಮಡವಿಯೊಳಗನೆ ಬರುತ್ತುಮಿರ್ಪನಾಗಳೊಂದೆಡೆಯೊಳಸುವಿಯೋಗಸಂಕಟದಿಂ ಸರಂಗೆಯ್ವ ಜಟಾಯುವಂ ಕಂಡು ಸೀತಾಹರಣಮಿದರ್ಕೆ ಮರಣನಿಮಿತ್ತಮಾದುದೆಂದುಬ್ಬೆಗಂಬಟ್ಟು ಸಂಸಾರ ವಿಷಮ ವಿಷಾಪಹಾರಮಂ ಪಂಚನಮಸ್ಕಾರಮನದರ್ಕೆ ಪೇೞ್ದು ಪರ ಗತಿಯುನೆಯ್ದಿಸಿ ವೈದೇಹಿಯನಾ ವನಾಂತರದೊಳೆಲ್ಲಿಯುಮಱಸಿ ಕಾಣದೆ

ಕಳಹಂಸಾಲಸಯಾನೆಯುಂ ಮೃಗಮದಾಮೋದಾಸ್ಯ ನಿಶ್ವಾಸೆಯುಂ
ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತ ಕೋ
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ ೭೪

ಕಳರುತಿ ಮತ್ತ ಕೋಕಿಲಮನೀಕ್ಷಣಮುತ್ಪಲಮಂ ವಿನೀಲ ಕುಂ
ತಳಮಳಿಮಾಲೆಯುಂ ಕಚಭರಂ ನವಿಲಂ ನಡೆ ಹಂಸಿಯುಂ ತಳಂ
ತಳಿರ್ಗಳನಾನನಂ ಕಮಲಮಂ ಸಳಿತೋಳ್ ಲತೆಯಂ ಲತಾಂತ ಕೋ
ಮಳೆ ಮಱುಗೊಂಡು ಮೆಯ್ಗರೆದು ಕಾಡುವ ಕಾರಣಮೇನೊ ಜಾನಕೀ ೭೫

ಎಂದು

ಎನಿತಾನುಂ ತೆಱದಿಂ ಪಲುಂಬಿ ಪಲವಾಡುತ್ತುಂ ಮನಸ್ತಾಪದಿಂ
ತನು ಸಂತಾಪಮನಪ್ಪುಕಯ್ಯೆ ಬೞಲುತ್ತುಂ ಕಂತುಸಂತಾಪದಿಂ
ದೊನಲುತ್ತುಂ ಕನಲುತ್ತುಮಂದವಿರಳ ಪ್ರಸ್ಯಂದಿ ಬಾಷ್ಪೋದಕಾ
ನನನಾ ಕಾನನದೊಳ್ ತೊೞಲ್ದು ರಘುರಾಮಂ ಸೇದೆವಟ್ಟಿರ್ದನಂ ೭೬

ಅನ್ನೆಗಮಿತ್ತಲ್ ರಾಮಾನುಜಂ ಖರದೂಷಣರಂ ಸೂರ್ಯಹಾಸಾಸಿಯಿಂ ತಲೆ ಪಾಱಿ ಬೀೞೆ ಪೊಯ್ದು ಗೆಲ್ಲಂಗೊಂಡು ವಿರಾಧಿತನೆಂಬ ಖೇಚರನಂ ಪಾತಾಳಲಂಕೆಗಧಿಪತಿಮಾಡಿ ಬರುತ್ತುಂ

ಮದಜಲ ಧಾರೆಯಿಲ್ಲದ ದಿಶಾಗಜದಂತೆ ಸುಧಾಂಶು ಲೇಖೆಯಿ
ಲ್ಲದ ನಭದಂತೆ ಕಲ್ಪಲತೆಯಿಲ್ಲದ ನಂದನದಂತೆ ವೇಲೆಯಿ
ಲ್ಲದ ಕಡಲಂತೆ ಕೇಸರಿಣಿಯಿಲ್ಲದ ಕೇಸರಿಯಂತೆ ಸೀತೆಯಿ
ಲ್ಲದ ರಘುವಂಶ ರಾಮನಿರೆ ನೋಡಿದನಾಕುಲನಾಗಿ ಲಕ್ಷ್ಮಣಂ ೭೭

ಅಂತು ಮನದೊಳಲ್ಲಾಡುತ್ತುಮೆಯ್ದೆವಂದು ಮದಂಬಿಕೆಯುಂ ಕಂಡೆ ನಿಲ್ಲೆತ್ತಲಿರ್ದಪಳೆಂಬದುಮಾನ್ ನಿನ್ನಲ್ಲಿಗೆ ಬಂದ ಪಿಂದೆ ಸಿಂಹ ಶರಭಾದಿ ರೌದ್ರ ವನಚರಂಗಳುಯ್ದುವೆಂದಱಿಯೆನಾವನಾನುಮೊರ್ವಂ ಮಾಯಾವಿ ಕಳ್ದುಯ್ದನೆಂದಱಿಯೆನಿನ್ನೆ ವರಮರಣ್ಯದೊಳ್ ತೊಟಲ್ದೆಲ್ಲಿಯುಮಱಸಿ ಕಂಡೆನಿಲ್ಲೆಂದು ನೊಂದು ನುಡಿವನ್ನೆಗಮಿದಿರಾಗಿ ಬರ್ಪ ಬಲಮಂ ಕಂಡಿದಾರಬಲಮೆನೆ ಲಕ್ಷ್ಮೀಧರ ಸಿದು ವಿರಾಧಿತನೆಂಬ ವಿದ್ಯಾಧರಂ ಧುರದೊಳೆನಗೆ ಸಹಾಯನಾಗಿ ಪಾಟಿಯಂ ಪಾಳಿಸಿದನೀಗಳ್ ದೇವ ನಿಜಚರಣ ಸೇವಾಸಕ್ತ ಚಿತ್ತನಾಗಿ ಬರುತಿರ್ದಪನಾತನ ಬಲಮೆಂದಱಿಪುವನ್ನೆಗಮೆಯ್ದೆವಂದು ರಾಘವನ ಪಾದೋಪಾಂತದೊಳ್ ಮೆಯ್ಯನಿಕ್ಕೆ ಲಕ್ಷ್ಮೀಧರಂ ಜಗನ್ಮಾತೆಯಂ ಸೀತಾದೇವಿಯನಾವನಾನುಂ ಕಳ್ದುಯ್ದು ಕಾನನದೊಳಗಿರ್ದಪನಾ ದೆಸೆಗಗ್ರಜಂ ವ್ಯಗ್ರನಾಗಿರ್ದಪನೆನೆ ವಿರಾಧಿತಂ ಮತ್ಕುಲಾಗತಮುಂ ನಿಸರ್ಗ ದುರ್ಗಮುಮಪ್ಪ ಪಾತಾಳಲಂಕಾಪುರದೊಳಿರ್ದು ಸೀತಾದೇವಿಯರ ಅಣ್ಣನಪ್ಪ ಪ್ರಭಾಮಂಡಲನಂ ಬರಿಸಿ ಇದರ್ಕೆ ತಕ್ಕುದಂ ನೆಗೞಲಕ್ಕುಮದರ್ಕಾನೆ ಸಾಲ್ವೆನಲ್ಲಿಗೆ ಬಿಜಯಂಗೆಯ್ವುದೆಂದು ರಾಮಲಕ್ಷ್ಮಣರಂ ರಥಮನೇಱಿಸಿಕೊಂಡು ಚತುರಂಗಬಲಸಹಿತಂ ಮಹಾ ವಿಭೂತಿಯಿಂ ಪಾತಾಳ ಲಂಕಾಪುರಮಂ ಪೊಕ್ಕನನ್ನೆಗಮಿತ್ತಲಸುರನಾಗಸದೊಳರ್ಣವದ ಮೇಗೆ ಮನೋವೇಗದಿಂ ಪೋಗುತ್ತುಮಿರೆ

ಖೇದಂ ಕಯ್ಗುಟಿವಾಗೆ ದಿಗ್ವಿವರಮುಂ ಹಾಹಾರವಂ ತೀವೆ ಬಾ
ಷ್ಪೋದ ಸ್ವೇದ ಜಲಂಗಳಿಂ ಕರಗಿ ನೀರಾಗೊಕ್ಕುವಂತಾಗೆ ಮೆಯ್
ವೋದುತ್ತುಂ ಬಸಿಱಿಂ ಪರಾಂಗನೆಯನೆನ್ನಂ ಕಳ್ದುಕೊಂಡೀ ಖಳಂ
ಪೋದಪ್ಪಂ ಶರಣಪ್ಪುದಾರ್ಪರೆನುತುಂ ವೈದೇಹಿ ಪುಯ್ಯಲ್ಚಿದಳ್ ೭೮

ಧರಣೀ ರಕ್ಷಣ ದಕ್ಷ ದಕ್ಷಿಣ ಭುಜಂ ಲಕ್ಷ್ಮೀಧರಂ ಮೆಯ್ದುನಂ
ಹರಿವಂಶಂ ಜನಕಂ ಮದೀಯ ಜನಕಂ ವೀರಂ ಪ್ರಭಾಮಂಡಲಂ
ಪಿರಿಯಣ್ಣಂ ರಘುರಾಮನಂಗನೆಯೆನೆನ್ನಂ ಸೀತೆಯಂ ಪಾತಕಂ
ದೊರೆಗೆಟ್ಟುಯ್ದಪನೇವೆನೆಂದು ಸತಿ ಹಾಹಾಕ್ರಂದನಂ ಮಾಡಿದಳ್ ೭೯

ಆ ರವಮನರ್ಕಜಟಿಯ ಮಗನಪ್ಪ ರತ್ನಜಟಿ ಕೇಳ್ದು ಬದ್ಧಭ್ರುಕುಟಿ ದಶಾಸನ ವಿಮಾನಕ್ಕಡ್ಡಂ ಬಂದು

ಪರಿಹರಿಸಿ ಪಾಟಿಯಂ ಭೂ
ಚರ ಖೇಚರ ಚಕ್ರವರ್ತಿ ರಾವಣ ನೀನೀ
ಪರವಧುಗಳಿಪುವುದುಮಿಹಂ
ಪರಮಟಿಗುಂ ನಿನ್ನ ಮಹಿಮೆಗಿದು ನಡೆವಳಿಯೇ ೮೦

ಎಂದು

ಮೂದಲಿಸಿ ಮುಟ್ಟೆವರ್ಪುದು
ಮಾ ದಾನವನರ್ಕಜಟಿಯನಣ್ಪಂಗವನೊಳ್
ಕಾದದೆ ಕರುಣಿಸಿ ವಿದ್ಯಾ
ಚ್ಛೇದಂಗೆಯ್ದಂ ನಿರಂಕುಶಂ ದಶಕಂಠಂ ೮೧

ಅಂಬರದಿನಾತ್ಮವಿದ್ಯಾ
ಡಂಬರಮಸ್ತಮಿಸೆ ಬಿಟ್ದು ಮೂರ್ಛಾಪನ್ನಂ
ಕಂಬುದ್ವೀಪದೊಳಳವಟಿ
ದಂಬರಚರನೆಱಕೆ ಮುಱಿದ ಪಕ್ಕಿವೊಲಿರ್ದಂ ೮೨

ಬಗೆ ಸಂಭೋಗಸುಖಕ್ಕೆ ಕಾತರಿಸೆ ಕಣ್ಗಳ್ ಕೀಱಿ ಸರ್ವಾಂಗಮಂ
ತೆಗೆದಾಲಿಂಗಿಸೆ ಮಾತುಗಳ್ ಮದನರಾಗೋನ್ಮಾದಮಂ ಬೀಱೆ ಬಾ
ಹುಗಳಾಲಿಂಗನ ಲಾಲಸಂಗಳೆನೆ ಧೈರ್ಯಂಗೆಟ್ಟು ಮೇಲ್ವಾಯ್ವ ಚೇ
ಷ್ಟೆಗೆ ಪೌಲಸ್ತ್ಯನುಮೊತ್ತುಗೊಟ್ಟನೆನಲಾರಂ ದರ್ಪಕಂ ದಂಡಿಸಂ ೮೩

ಆಗಳವನಳಿಪಿನಟಿಗೆಯ್ತುಕ್ಕೆ ಸೀತೆ ಸೈರಿಸದೆ ನೀನೆನ್ನಂ ಸೋಂಕಿದೊಡೆ ನಾಲಗೆ ಗಿಟ್ಟು ಸಾವೆನೆಂದು ಪರಿಚ್ಛೇದಿಸಿ ನುಡಿಯೆ ದಶಾಸ್ಯಂ ಮಹಾಸತಿಯ ಶೀಲದಳವನಱಿಯನಪ್ಪುದಱಿನನಂತವೀರ್ಯಕೇವಲಿಗಳಿತ್ತ ಪರವಧೂವಿರತಿವ್ರತ ಪರಿಪಾಲನಮೆನಗರಿದಾದುದೆನೆ ನಿಸರ್ಗರಾಗಿಗಳಪ್ಪ ಪೆಂಡಿರ ಪರಿಣಾಮಮೆಲ್ಲಿವರಂ ನಡೆದಪ್ಪುದೀಕೆಯನೊಡಂಬಡಿಸುವುದಾವ ಗಹನಮೆಂದು ತನ್ನಂ ತಾನೆ ಸಂತಯಿಸುತ್ತುಂ ಪೋಪ ಸಮಯದೊಳ್

ಅನಶನಮುಂ ಕಯ್ಕೊಂಡಳ್
ಮನದೊಳ್ ಸತಿ ಪತಿಯ ಕುಶಲವಾರ್ತೆಯನಾನ್ ಕೇ
ಳ್ದಿನಮುಣ್ಣೆನೆಂದು ನೃಪಮಾ
ನಿನಿಯರ್ ಸಜ್ಜನಿಕೆಗಿಂತು ನೋಂತರುಮೊಳರೇ ೮೪

ಅಂತು ರಾವಣಂ ಲಂಕೆಯನೆಯ್ದೆವಂದು ಗೀರ್ವಾಣರಮಣಮೆಂಬ ನಿಜ ವಿನೋದವನಮಂ ಪೊಕ್ಕು ಅಲ್ಲಿಯ ವಿಚಿತ್ರಮಣಿಮಯ ಗೇಹದೊಳ್ ವೈದೇಹಿಯನಿರಿಸಿ ತಾನುಂ ತನ್ನ ರಮನೆಯ ಕರುಮಾಡಮಂ ಪೊಕ್ಕಿರ್ಪುದುಂ ಖರ ದೂಷಣರ ಮರಣವಾರ್ತೆಯಂ ಚಂದ್ರನಖಿ ಕೇಳ್ದು ಮಹಾ ಶೋಕಂಗೆಯ್ವುದು ಮಾಕೆಗೆ ಸಂಸಾರ ಸ್ವರೂಪಮಂ ತಿಳಿಪಿ ಖರದೂಷಣರಂ ಕೊಂದನನಮೋಘಂ ಕೊಲ್ವೆನೆಂದಷ್ಕೆಯಂ ಬಾರಿಸಿ ಭಗವದರ್ಹದ್ಭವನಂಗಳೊಳ್ ಮಹಾಪೂಜೆಗಳಂ ಮಾಡಿಸಿ ರಾಜಭವನಕ್ಕೆ ಬಂದು ಶಯ್ಯಾಸದನಮಂ ಪೊಕ್ಕು

ತಡೆವುದು ತಕ್ಕುದಲ್ತು ಖರದೂಷಣರಂ ಕಡುಕಯ್ದು ಕೊಂದನಂ
ಮಡಿಪುವೆನೆಂಬ ತಕ್ಕಟಿದು ಸೀತೆಯನೇತೆಱದಿಂದಮೆಂತೊಡಂ
ಬಡಿಸುವೆನೆಂತು ಮೇಳಿಸುವೆನೆಂತು ಮದೀಯ ಮನೋಜತಾಪಮಂ
ಕಿಡಿಸುವೆನೆಂದು ಪಂಬಲಿಸಿದಂ ಪಲವಂ ಮನದೊಳ್ ದಶಾನನಂ ೮೫

ಏತಱ ಸೋಂಕುಮಾವುದಱ ಗಾಡಿಯುಮೊಂದಱ ಕಂಪುಮೆನ್ನರೊ
ಳ್ವಾತುಮದೆಂತುಟಪ್ಪ ರಸಮುಂ ತನಗೆಂತುಮಸಹ್ಯಮಾಗೆ ಹೃ
ಜ್ಜಾತನ ಮಾಯೆ ಮೋಹಿಸುವುದುಂ ಬಗೆಯಂ ವಿಗತಾನ್ಯಚಿಂತನಾ
ಸೀತೆಯ ಚಿಂತೆಯಿಂ ದಶಮುಖಂ ಮರವಾನಸನಂತೆ ತೋಱಿದಂ ೮೬

ಅಂತು ಚಿಂತಾಕ್ರಾಂತನಾದ ನಿಜಮನೋವಲ್ಲಭನಂ ಮಂಡೋದರಿ ಕಂಡು

ಖರನ ವಿಪತ್ತಿಯೊಳ್ ವಿಕಲನಾದನೆ ಗೆತ್ತಿನಿತೇಕೆ ಪೆಂಡಿರಂ
ತಿರೆ ಬಹುಶೋಕಮಿಾ ತೆಱದಿನಿರ್ದೊಡೆ ಗಂಡಗುಣಕ್ಕೆ ನಾಡೆಯುಂ
ಪರಿಭವಮೆಂದಳೆತ್ತಲಱಿವಳ್ ಗಗನೇಚರ ಚಕ್ರಿ ಜಾನಕೀ
ವಿರಹ ಕೃಶಾನು ಸುತ್ತಿ ಸುಡೆ ಚಿತ್ತಮನಾಕುಲನಾದನೆಂಬಿದಂ ೮೭

ಎನೆ ದಶಗ್ರೀವನೆನ್ನ ಬೇವಸಕ್ಕಿದು ನಿಮಿತ್ತಮಲ್ತು ನಿನಗೆನ್ನ ತೆಱನನಱಿಯಲಾಗದೆಂದು

ಬೆಂಡಾಗೆ ಮನಂ ಮೌನಂ
ಗೊಂಡಿರೆ ವಲ್ಲಭನ ಮನಮನಱಿವಾಗ್ರಹದಿಂ
ಮಂಡೋದರಿ ಮಾಣದೆ ಬೆಸ
ಗೊಂಡಳ್ ಕೌತುಕಮಿದೇನ್ ನಿಮಿತ್ತಮೆನುತ್ತುಂ ೮೮

ಅಂತು ಬೆಸಗೊಳ್ವುದುಂ ಮಱುಮಾತುಗುಡದೆ ಲಜ್ಜಾರಸನಿಮಗ್ನಾನನಂ ದಶಾನನನಿರೆ

ಗಂಡುಡೆಯುಟ್ಟು ಕಯ್ದುವಿಡಿದುಮ್ಮಳಮಂ ನಿನಗುಂಟುಮಾಳ್ಪ ಬ
ಲ್ಗಂಡಿನ ದೇವ ಮಾನವ ವಿಯಚ್ಚರರೊರ್ವರುಮಿಲ್ಲ ನಿನ್ನ ದೋ
ರ್ಮಂಡಲಮೀ ತ್ರಿಖಂಡಮುಮನಾಕ್ರಮಿಸಿತ್ತಿದು ಪುಷ್ಪಕಾಂಡ ಕೋ
ದಂಡನ ಗೊಡ್ಡಮುರ್ಚಿದುವೆ ತೋಱುವೆಯಾತನ ಪೂವಿನಂಬುಗಳ್ ೮೯

ಸ್ಮರನಂ ಮೆಚ್ಚದ ನಿನ್ನೀ
ಪರಿಜಂ ಕಡೆಗಣಿಸಿ ನಿನಗಮಿನಿತಚ್ಚಿಗಮಂ
ತರಲಾರ್ತ ನೀಱೆ ಲೆಪ್ಪದ
ಬರೆಪದ ಕಂಡರಣೆವೆಸದ ಪೆಣ್ಣಕ್ಕುಮವಳ್ ೯೦

ಎಂದಱಿದುಮಱಿಯದಂತೆ ತೆಱೆಯೆ ನುಡಿಯೆ ಮನದೆ ಕೊಂಡು ಮಂಡೋದರಿಯ ಮೊಗಮಂ ನೋಡಿ

ಅಱಿಪುವ ವಾರ್ತೆಯಲ್ತು ನಿನಗೆನ್ನ ನೆಗಳ್ತೆಯ ವಾರ್ತೆ ನೀನೆ ಮು
ನ್ನಱಿದ ಬಟಿಕ್ಕದಂ ನಿನಗೆ ವಂಚಿಸಲಾಗದು ತಂದೆನಿಂದು ವ:ಂ
ದಱಿಯದೆ ಸೀತೆಯಂ ಮದನನಾಕೆಯ ದೂಸಱಿನೆನ್ನ ನೆಚ್ಚಪಂ
ನೆಱಗೊಳೆ ಪೂವಿನಂಬಲಗಿನಂಬುಗಳೆಂಬಿನಮಂಬುಜಾನನೇ ೯೧

ಎನೆ ದಶಾನನನ ದಶಾವಸ್ಥೆಯಂ ಕಂಡು ಮಂಡೋದರಿ ಭಯಂಗೊಂಡು

ಅಚಿರಪ್ರಭೆಯುಂ ಪೆಂಡಿರ
ಚಿತ್ತಮುಂ ಕ್ಷಣದಿನಗ್ಗಳಂ ನಿಲ್ಕುಮೆ ಪೇೞ್
ಖಚರೇಂದ್ರ ನಿಜಾಕೃತಿ ಚಿ
ತ್ರಚಮತ್ಕೃತಿ ಕಂಡಿದರ್ಕೆ ಸೋಲದರೊಳರೇ ೯೨

ಎಂದು ಸಂತಸಂಬಡೆ ನುಡಿದಾಕೆಯನೊಡಂಬಡಿಸಲಾನೆ ಸಾಲ್ವೆನೆಂದು ಸಮಸ್ತಾಂತಃಪುರ ಸೀಮಂತಿನಿಯರ್ ವೆರಸು ಸೀತೆಯ ಸಮೀಪಕ್ಕೆ ವಂದು ವಿಲಾಸದಿಂ ಕುಳ್ಳಿರ್ದು ಜಾನಕಿಯಂ ನೋಡಿ

ಪಂಕಜಸಂಭವಂ ನಿನಗೆ ಪಾಸಟಿಯಲ್ಲದ ರಾಘವಂಗೆ ನಿ
ನ್ನಂ ಕುಡೆ ಕಂಡು ಸೈರಿಸದೆ ಚಿತ್ತಭವಂ ದಶಕಂಧರಂಗೆ ಕೊ
ಟ್ಟಂ ಕಡುನೀಱೆ ನಿನ್ನನನುರೂಪವರಂಗೊಡಗೂಡಿ ಲೀಲೆಯಿಂ
ಲಂಕೆಯನಾಳ್ದು ತಾಳ್ದರಸಿವಟ್ಟಮನಾತ್ಮ ಲಲಾಟ ಪಟ್ಟದೊಳ್ ೯೩

ಈ ನವಯೌವನೋದಯಮನೀ ನಯನೋತ್ಸವಮಪ್ಪ ರೂಪಿನು
ದ್ದಾನಿಯನೀ ತನುಚ್ಛವಿಯನೇವೊಗೞ್ದಪ್ಪುದೊ ಸೋಲ್ತು ಬಂದೊಡಂ
ಮೇನಕೆ ಬಾೞ್ತಗೆಯ್ಯದ ದಶಾನನನುಂ ಬಸದಾದನೆಂದೊಡಾರ್
ಜಾನಕಿ ನಿನ್ನವೋಲುಟಿದ ಮಾನಿನಿಯರ್ ಕಡುಗಾಡಿಕಾರ್ತಿಯರ್ ೯೪

ಇಸುವೆಸಕಯ್ಸು ಖೇಚರ ಪುರಂಧ್ರಿಯರಂ ಭರತ ತ್ರಿಖಂಡದೊಳ್
ಪಸರಿಸು ನಿನ್ನ ಗೋಸಣೆಯನಾಣೆಯನೀ ಖಚರೇಂದ್ರ ವಕ್ಷದೊಳ್
ವಸಿಯಿಸು ಲಕ್ಷ್ಮಿವೊಲ್ ವಿಜಯಲಕ್ಷ್ಮಿವೊಲಾತನ ತೋಳ ತಟ್ಟಿನೊಳ್
ಪೊಸಯಿಸು ನಲ್ಮೆಯಂ ದಿವಸಲಕ್ಷ್ಮಿಯನೇಕೆಯೊ ಬಂಜೆ ಮಾಡುವಯ್ ೯೫

ಎನೆ ಜಾನಕಿ ಮಂಡೋದರಿಗೆ ಮನದೊಳೆ ಕನಲ್ದು

ಇದು ಮತ್ತೋನ್ಮತ್ತಜಲ್ಪಂ ಕುಲವಧುವರ ಮಾತಲ್ತು ನಿಮ್ಮೊಂದಿಗರ್ ವಂ
ಶಧ ಕೇಡಂ ನೋಡದೊಳ್ಪಂ ಬಗೆಯದೆ ಪಟಿಗಂ ಪಾತಕಕ್ಕಂ ಭಯಂಗೊ
ಳ್ಳದೆ ಪೇೞರ್ ಪೊಲ್ಲಮಾತಂ ನುಡಿವಿರಿದು ಮನಂನೋಟ್ಪ ಸಂಕಲ್ಪಜಲ್ಪಂ
ಮದಧೀಶಂರಾಮಚಂದ್ರಂ ಪೊಱಗೆನೆ ಪೆಱರೇವಾತೊ ಜಾತಾನುಜಾತರ್ ೯೬

ತನಗೆ ಪತಿವ್ರತಮಿಲ್ಲದ
ವನಿತೆ ಕುಲಸ್ತ್ರೀಯೆ ಭಿನ್ನಭಾಜನಮಿಂತ
ಪ್ಪನುಚಿತಮಂ ಹರಿವಂಶದ
ವನಿತೆಯರೊಳ್ ನುಡಿಯಲಕ್ಕುಮೇ ನಿಮ್ಮನ್ನರ್ ೯೭

ಎಂದು ಬಿಡೆ ನುಡಿವುದುಮಾ ಸಮಯದೊಳ್

ಜಡಿಯುತ್ತುಂ ಚಂದ್ರಹಾಸಾಸಿಯನೆಳಸೆ ತದಾಸ್ಥಾನಮಂ ದಿವ್ಯಗಂಧಂ
ಕುಡುಮಿಂಚಂ ಬೀಱೆ ವಜ್ರಾಭರಣ ಕಿರಣಮಿಂದ್ರಂಗೆ ಸೌಂದರ್ಯದಿಂ ನೂ
ರ್ಮಡಿ ಮೇಲೆಂಬನ್ನಗಂ ಭೋಂಕನೆ ಜನಕಸುತಾಲೋಕನೋತ್ಕಂಠ ಚಿತ್ತಂ
ನಡೆತಂದಂ ದಾನವೇಂದ್ರಂ ಸುರತರುಸುಮನೋಮಂಜರೀ ಕರ್ಣಪೂರಂ ೯೮

ಅಂತು ಬರಲೊಡಂ

ಪರಿನೀರೊಳಗಣ ನೆೞಲಂ
ತಿರೆ ತನ್ನಂ ನೋಡಿ ನಡುಗೆ ಜಾನಕಿ ದಶಕಂ
ಧರನಂಜಲೆನುತ್ತಂತಃ
ಪುರಮಂ ಕಣ್ಸನ್ನೆಯಿಂದಮಲ್ಲಿಂ ಕಳೆದಂ ೯೯

ಅನಂತರಂ ಜಾನಕೀವದನವಿನ್ಯಸ್ತ ವಿಲೋಚನಂ

ಆನೆಯ ಮೇಲೆ ಬೆಳ್ಗೊಡೆಯ ತಣ್ಣೆೞಲೊಳ್ ನೆಲಸಿರ್ದಲೇ ಸರೋ
ಜಾನನೆ ಪೆಂಡವಾಸದ ವಿಲಾಸಿನಿಯರ್ ಬರೆ ನಿನ್ನ ಸುತ್ತಲುಂ
ಜಾನಕಿ ನೋಡ ಸಿನ್ನ ನಗೆಗಣ್ ಪರಿತುಷ್ಟಿಯನಪ್ಪುಕಯ್ಯೆ ಲಂ
ಕಾನಗರೀ ಬಹಿಃಪುರ ನಮೇರು ವಿಲಾಸ ವನಂಗಳೇೞುಮಂ ೧೦೦

ಕುಲನದಿಯಂ ಕುಲಾದ್ರಿಶಿಖರಂಗಳ ದಿವ್ಯಸರೋವರಂಗಳಂ
ಮಲಯ ಗಿರೀಂದ್ರ ಸಾನು ವನಮಂ ಲವಣಾರ್ಣವ ವಜ್ರವೇದಿಕಾ
ವಿಪಿನಮುಂ ವಿಲೋಚನ ಪಥಾತಿಥಿಮಾಡು ವಿಯದ್ವಿಲಾಸಿನೀ
ತಿಲಕಮೆನಿಪ್ಪ ಪುಷ್ಪಕವಿಮಾನಮನೆನ್ನೊಡನೇಱು ಜಾನಕೀ ೧೦೧

ಎನ್ನೊಳ್ ಪೋರ್ದುಡಿದಿಂದ್ರ ಸಿಂಧುರದ ಕೋಡಿಂದಾದ ಪಲ್ಯಂಕದೊಳ್
ಮುನ್ನಂ ಪದ್ಮಜನಂಚೆಯಂ ತಱಿದು ತುಪ್ಪುಳ್ಗೊಂಡು ದಿಕ್ಪಾಲಕರ್
ಬೆನ್ನಿತ್ತಿಕ್ಕಿದ ಚೇಲದಿಂ ಸಮೆದ ಕೇಳೀ ತಲ್ಪದೊಳ್ ನಿದ್ರೆಗೆಯ್
ನಿನ್ನಂ ನಿದ್ರೆಯಿಸೆಟ್ಟುವನ್ನಮಮರೀಮಾಂಗಲ್ಯ ಗೀತ ಸ್ವನಂ ೧೦೨

ಅಸಿರತ್ನಂ ಚಕ್ರರತ್ನಂ ನವನಿಧಿ ಪಲವುಂ ವಿದ್ಯೆ ಕಯ್ಸಾರ್ದುವುಳ್ಳಂ
ಜಿಸಿದೆಂ ದಿಕ್ಪಾಲರಂ ಕಟ್ಟಿದೆನುಱದಿದಿರಾದಿಂದ್ರನಂ ಲೀಲೆಯಿಂ ಚಾ
ಳಿಸಿದೆಂ ಕೈಲಾಸಮುಂ ದಕ್ಷಿಣ ಭರತ ಧರಾಚಕ್ರಮುಂ ಚಕ್ರದಿಂ ಸಾ
ಧಿಸಿದೆಂಪೌಲಸ್ತ್ಯನಂ ಮಾಱುವರೆ ಸಮರದೊಳ್ ಮಾನವರ್ ಮಾನನೇತ್ರೇ ೧೦೩

ಎಂದು

ಅನುನಯ ಶತಂಗಳಂ ನುಡಿ
ದನುವಶೆ ಮಾಡಲ್ ವಿಯಚ್ಚರೇಂದ್ರನುಮೇನಾ
ರ್ತನೆ ಜನಕಜೆಯಂ ಗಗನಮು
ನನುಲೇಪಂಗೆಯ್ದೊಡಲ್ಲಿ ಮಸಿ ಪತ್ತುಗುಮೇ ೧೦೪

ಅಂತಾ ದುರಾತ್ಮನ ದುರುಕ್ತಿಗೆ ಜನಕಸುತೆ ಕಡುಮುಳಿದು ಮುನಿಸಂ ಪೊಗಕ್ಕೆ ತಾರದೆ

ನುಡಿಯಲ್ ತಕ್ಕುದೆ ಪಾಟಿದಪ್ಪಿ ಪಟಿಗಂ ಪಾಪಕ್ಕಮುಳ್ಳಕ್ಕದೀ
ನುಡಿಯಂ ಚೀ ಪರದಾರಮನ್ಯಶಯನ ಸ್ಥಾನಂ ಪೆಱರ್ ಮಿಂದ ನೀರ್
ಮುಡಿದುತ್ಫುಲ್ಲ ಕದಂಬಕಂ ತೊಡೆದ ಕಾಶ್ಮೀರಾಂಗರಾಗಾದಿಕಂ
ಮಡಗೂಟ್ ಬೀಟುಡೆ ಬಾಯ ತಂಬುಲಮಿವಸ್ಪೃಶ್ಯಂಗಳೇನಲ್ಲಮೇ ೧೦೫

ಗುಣಹಾನಿಯಿಂದಧೋಗತಿ
ಗುಣದಿಂ ಸ್ವರ್ಗಾಪವರ್ಗ ಸುಖಮುಕ್ಕುಮೆನಲ್
ಗುಣಹೀನನ ಸಿರಿಯಿಂದಂ
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೇ ೧೦೬

ಅಱುನೀರಾಗಿರೆ ತಾಯ್ಮ ಬಲ್ವರೆಗಮಿಾ ವಾರಾಶಿಯಂ ತುಳ್ಕಲುಂ
ತಿಱುಕಲ್ಲಾಡಲುಮಿಾ ತ್ರಿಕೂಟ ಗಿರಿಯಂ ತತ್ಸೂರ್ಯಹಾಸಾಸಿಯಿಂ
ದಿಱುದಪ್ಪ್ಕಾಡಿಸಲುಂ ದ್ವಿಷನ್ನೃಪರನೇಕಾಕ್ಷೌಹಿಣೀ ಸೇನೆಯಂ
ನೆಱೆವಂ ದೋರ್ಬಲ ದೃಪ್ತನಪ್ರತಿಹತಂ ರಾಮಾನುಜಂ ಲಕ್ಷ್ಮಣಂ ೧೦೭

ಆಹವ ದೋಹಳಂ ಮಸುಳೆ ಮತ್ಪತಿಯಿಂದನುಗಲ್ಚಿ ತಂದೆ ವೈ
ದೇಹಿಯನೆನ್ನ ಸುಕ್ಕೆವದಿನಲ್ಲದೊಡೇಂ ದಶಕಂಠ ರಾಮ ಬಾ
ಣಾಹತಿಯಿಂ ನಭಂಬರೆಗಮುಂಜಿರಿವಿಟ್ಟು ಮಡಲ್ತ ವಿದ್ವಿಷ
ಲ್ಲೋಹಿತದಿಂದಕಾಂಡ ಲಯಕಾಲದ ಸಂಜೆ ಮುಗಿಲ್ಗಳಾಗವೇ ೧೦೮

ಎಂದು ಮಱುಮಾತಿಂಗೆಡೆಯಿಲ್ಲದಂತು

ಬಿಡೆ ನುಡಿಯೆ ಸೀತೆ ಮುಳಿಸಿನ
ಪಡೆಮಾತಂತಿರ್ಕೆ ರಾವಣಂಗೊಲವು ಪದಿ
ರ್ಮಡಿಸಿತ್ತಪ್ರಾಪ್ತಿ ರಸಂ
ಬಡೆಗುಂ ವೈಷಯಿಕಸುಖದೊಳಿದು ವಿಸ್ಮಯಮೇ ೧೦೯

ನಯದಿಂದಮಿಾ ಸರೋರುಹ
ನಯನೆಯನಳವಡಿಸಲಾರ್ತೆನಿಲ್ಲಳವಡಿಪೆಂ
ಭಯದಿಂದಮೆಂದು ವಿದ್ಯಾ
ದಯಿತಂ ಪಡೆದಂ ವಿಕುರ್ವಣಾ ವೈಭವಮಂ ೧೧೦

ಆ ಸಮಯದೊಳ್ ನೇಸಱ್ ಪಡಲೊಡಂ

ತೋರರವೆಣಂಗಳಂ ತಳೆದು ಭೂತಗಣಂ ಕುಣಿದಾಡುವಂತಿರಲ್
ಕ್ರೂರ ಮೃಗಂಗಳವ್ವಳಿಸಿ ಗರ್ಜಿಸಿ ನುಂಗಲೊಡರ್ಚುವಂತು ಭೋ
ರ್ಭೋರೆನೆ ರಕ್ತವೃಷ್ಟಿ ಕಱೆವಂತು ಸಿಡಿಲ್ ಪೊಡೆವಂತು ಸುತ್ತಲುಂ
ವಾರಿಧಿ ಮೇರೆದಪ್ಪಿ ಕವಿವಂತು ಬಿಗುರ್ವಿಸಿದಂ ದಶಾನನಂ ೧೧೧

ಬಗೆಯೊಳ್ ಜೈನಪದಂ ನಾ
ಲಗೆಯೊಳ್ ಪಂಚಪದಮುಗಲದಿರೆ ರನ್ನದ ದೀ
ವಿಗೆ ಪರುಷ ಪವನ ಹತಿಯಂ
ಬಗೆಯದವೊಲ್ ಸೀತೆ ಬಗೆದಳಿಲ್ಲುಪಹತಿಯಂ ೧೧೨

ಅನ್ನೆಗಮಿತ್ತ ಕನ್ನೆಮಾಡದ ಮಱೆಯೊಳಿರ್ದು ಸೀತೆ ಶೋಕಂಗೆಯ್ವ ಸರಮಂ ವಿಭೀಷಣಂ ಕೇಳ್ದು ಪುರುಷ ವಿರಹದಿನತಿಪ್ರಲಾಪಂ ಗೆಯ್ವರಾರೆಂಬುದುಮಾ ಮಾತಂ ಕೇಳ್ದು ಸೀತೆ

ತನಗಿದಿರಾದ ಮಾರ್ವಲಮನೊರ್ವನೆ ಲಕ್ಷ್ಮಣನಾಂತು ಕಾವೆ ತ
ಮ್ಮನ ರಣಮಂ ನಿರೀಕ್ಷಿಸಲಪೇಕ್ಷಿಸಿ ಪೋಗೆ ಪರೋಕ್ಷದೊಳ್ ದಶಾ
ನನನೆಱೆತಂದನಾನ್ ಜನಕನಂದನೆಯೆನ್ ರಘುವೀರನಪ್ಪ ರಾ
ಮನ ವಧು ಸೀತೆಯೆನ್ ಪತಿವಿಯೋಗ ಕೃಶಾನು ಸುಡಲ್ಕೆ ಬೆಂದಪೆಂ ೧೧೩

ಎನೆ ವಿಭೀಷಣಂ ನೈಮಿತ್ತಿಕಾದೇಶಮಂ ನೆನೆದು ಭಯಚಕಿತಚಿತ್ತನಾಗಿ

ಪರ ಪರಿಗೃಹೀತೆಗಳಿಪಂ
ತರೆ ಪುರುಷಂ ಪುರುಷಧರ್ಮಮಟಿಗುಂ ಪಟಿಗುಂ
ಧರೆ ದುರ್ಗತಿ ಸಮನಿಸುಗುಂ
ಪರಿಹರಿಸುವುದಾರುಮುದಱಿಸೀ ದುರ್ನಯಮಂ ೧೧೪

ಎಂದು ಬಿನ್ನವಿಸೆ ಮಾರೀಚನುಮದನೆ ನುಡಿಯೆ

ಸ್ತ್ರೀರತ್ನಕ್ಕಾನಿರೆ ಪೆಱ
ರಾರೊಡೆಯರ್ ಮಿಱುವನ್ನರಾರೆನ್ನೀ ದು
ರ್ವಾರ ಭುಜಬಲಮನೆಂದವಿ
ಚಾರಿ ದಶಗ್ರೀವನವರನೇಳಿಸಿ ನುಡಿದಂ ೧೧೫

ಅಂತು ನುಡಿದು ರಾಮಸೀಮಂತಿನಿಯಂ ಪ್ರಮದಮದಿರಾಪ್ರಮತ್ತಂ ಪ್ರಮದವನದೊಳ್ ಸೆಱೆಗೆಯ್ದು ವಿರಹ ವಿಕಲನಾಗಿರ್ದಂ

ಕುಲಮದಮೊಂದು ರೂಪಮದಮೊಂದು ವಯೋಮದಮೊಂದು ತನ್ನ ದೋ
ರ್ಬಲಮದಮೊಂದು ಜಾತಿಮದಮೊಂದು ಕಲಾಮದಮೊಂದು ದೇವತಾ
ಬಲಮದಮೊಂದು ರಾಜ್ಯಮದಮೊಂದಿನಿತಲ್ಲದೆ ಬೇಱೆ ರಾಗಮು
ಗ್ಗಲಿಸಿದ ದೋಷದೃಷ್ಟಿ ವಿಷಯಾತುರರೇನ್ ಗತ ಮುಂದುಗಾಣ್ಬರೇ ೧೧೬

೫. ರಾವಣ ದಿಗ್ವಿಜಯ ವರ್ಣನಂ

ಅನ್ನೆಗಮಿತ್ತಲ್

ಖರದೂಷಣರಿಂ ಪಗೆಯುಂ
ಪರಿಭವಮುಂ ತೀರ್ಗುಮವರ್ಗೆ ಪೇೞ್ವೆನೆನುತ್ತುಂ
ಬರುತುಂ ಕಾನನದೊಳ್ ವಾ
ನರಚಿಹ್ನಂ ಕಂಡನೊಂದು ರಣಮಂಡಲಮಂ ೧

ಚತುರಂಗ ಸೇನೆಯುಂ ಜವ
ನತಿಕಾಂಕ್ಷೆಯಿನುಂಡು ಕಾಱಿದಂತಿರ್ದ ರಣ
ಕ್ಷಿತಿತಲಮಂ ಕಂಡಂ ನಿಜ
ಸತೀವಿಯೋಗಾರ್ತಚೇತಸಂ ಸುಗ್ರೀವಂ ೨

ಕಂಡಿದೇನೆಂದು ಬೆಸಗೊಳ್ವುದುಮದನಱಿವನೊರ್ವಂ ಬಲಾಚ್ಯುತರ್ ಬಂದು

ಶಂಬುಕನಂ ಕೊಂದಸಿರ
ತ್ನಂ ಬಡೆದರ್ ಚಂದ್ರನಖಿಯ ಪುಯ್ಯಲ್ಗತ್ಯಾ
ಡಂಬರದಿನೆತ್ತಿ ಬಂದುದ
ನಂಬರಚರಬಲಮನೊಂದೆ ಮೆಯ್ಯೊಳ್ ಕೊಂದರ್ ೩

ಖರ ದೂಷಣರಂ ಕೊಂದರ್
ವಿರಾಧಿತಂಗವನ ಪೂರ್ವವೃತ್ತಿಯನಿತ್ತರ್
ಸೆರಗಿಲ್ಲದವರ್ ಕಾರಣ
ಪುರುಷರ್ ಪಾತಾಳಲಂಕೆಯೊಳ್ ಬಂದಿರ್ದರ್ ೪

ಎನೆ ಮನದೆ ಕೊಂಡು ಈ ಮಹಾನುಭಾವರಪ್ಪ ರಾಮಲಕ್ಷ್ಮಣರಿಸೆನ್ನ ಪಗೆಯುಂ ಬಗೆಯುಂ ತೀರ್ಗುಮೆಂದು ಪುರಮಂ ಪುಗುವ ಸಮಯದೊಳ್ ಲಕ್ಷ್ಮಣನೀತನಾರ್ಗೆನೆ ವಿರಾಧಿತಂ ಕಿಷ್ಕಿಂಧ ನಗರಾಧಿನಾಥನುಂ ಕಪಿಧ್ವಜ ಕುಲಧ್ವಜನುಂ ಸೂರ್ಯಂಜಯ ಪ್ರಿಯತನೂಜನುಂ ವಾಲಿಭಟ್ಟಾರಕರಿಂ ನೇರ್ಗಿಱಿಯನುಮಂಗದನ ಜನಕನುಮಪ್ಪ ಸುಗ್ರೀವಂ ನಿಮ್ಮನೋಲಗಿಸಲ್ ಬಂದನೆಂದು ಬಿನ್ನವಿಸುವನ್ನೆಗಂ ಬಂದು ರಾಮ ಲಕ್ಷ್ಮಣರ ಚರಣಕಮಲಕ್ಕೆಱಗಿ ನಿಯಮಿತಾಸನದೊಳಿರ್ಪುದುಮುದಾತ್ತ ರಾಘವಂ

ಕುಶಲಮೆ ನಿಮಗೆನೆ ನಿಜ ಪದ
ಕುಶೇಶಯಕ್ಕೆಱಗುವಂತು ಸಯ್ಪಾಯ್ತೆನಗಿನ್
ಕುಶಲಮೆ ನರೇಂದ್ರ ಪೆಱರಿಂ
ಕುಶಲಂ ದ್ವಿಷದುಪಹತಂಗೆ ಸಮನಿಸಿದಪುದೇ ೫

ಎಂಬುದುಂ ಲಕ್ಷ್ಮೀಧರನೇನಿಮಿತ್ತಂ ಬಂದರೆನೆ ಜಾಂಬವಂ

ಸುಗ್ರೀವನ ಕುಲವಧು ಕಂ
ಬುಗ್ರೀವೆ ಸುತಾರೆಯೆಂಬಳಾ ಸತಿಯೊಳ್ ತೊ
ಟ್ಟಾಗ್ರಹದಿಂದರಮನೆಯುಂ
ಸುಗ್ರೀವನ ರೂಪುಗೊಂಡು ಖಳನೊಳವೊಕ್ಕಂ ೬

ಬಂದಚ್ಚಿನೊಳೊತ್ತಿದ ತೆಱ
ದಿಂದಿರ್ದೊಡಮವನ ಗೆಯ್ತಮಂ ಕಂಡು ಲತಾ
ಸುಂದರಿ ಮಾಯಾವಿಯ ರೂ
ಪೆಂದಱಿದಳ್ ಸತಿಯ ಸಯ್ಪನದನೇವೇಳ್ವೆಂ ೭

ಆ ಸಮಯದೊಳುದ್ಯಾನದಿ
ನೀ ಸುಗ್ರೀವಂ ಸ್ವಕೀಯ ಭವನಕ್ಕೆಟ್ಟಿಂ
ದಾ ಸುಗ್ರೀವನ ಗೊಡ್ಡ
ಕ್ಕಾಸುರಮೆನೆ ಮಸಗಿ ಕಾದಲುದ್ಯತನಾದಂ ೮

ಅಪನುಂ ಬವರಕ್ಕೊಡರಿಸಿ
ದವಸರದೊಳ್ ದಿಟದ ಪುಸಿಯ ಸುಗ್ರೀವರ ಭೇ
ದವನಱಿಯದೆ ಬಾರಿಸಿದರ್
ಬವರಮನಾಪ್ತ ಪ್ರಧಾನ ಸೇನಾಮುಖ್ಯರ್ ೯

ಹನುಮಂ ಮಾಯಾ ಸುಗ್ರೀ
ವನನಿಕ್ಕುವೆನೆಂದು ಬಂದು ಭಾವಿಸಿ ಸುಗ್ರೀ
ವನದಾವನೆಂದುಮಱಿಯದೆ
ಮುನಿದಿಱಿಯದೆ ಮಗುೞೆ ಪೋದನೇೞಿದನಾದಂ ೧೦

ಅಂತಾತಂ ಪೋಪುದುಂ ನಿಮ್ಮ ದೋರ್ವಲದಗುರ್ವುಮನವ್ಯವಹಿತ ಪರಹಿತವ್ಯಸನಮುಮಂ ಕೇಳ್ದು ಸುತಾರಾವಿರಹದಿಂ ನಿಮ್ಮ ಚರಣಮೆ ಶರಣೆಂದು ಬಂದನೆಂಬುದುಂ ರಾಘವಂ

ಎಮ್ಮೊಂದಿಗನೀತನ ಮನ
ದುಮ್ಮಳಮಂ ಕಳೆವುದೆಂದು ಕಾರುಣ್ಯಪರಂ
ತಮ್ಮಂಗೆ ನುಡಿದನರ್ಥಿಗ
ಳಮ್ಮನ್ನಿಸುವಟ್ಟಿ ರಾಘವಂಗೆ ನಿಸರ್ಗಂ ೧೧

ಎನೆ ರಾಮಚಂದ್ರನನುಗ್ರಹಕ್ಕೆ ಸಮಾಹಿತಚಿತ್ತನಾಗಿ ವಿರಾಧಿತನ ಮೊಗಮಂ ನೋಡಿ

ವಿರಹವ್ಯಾಕುಲರಂತೆ ದೇವರುಸಿದರ್ೀ ವೃತ್ತಾಂತಮೇನೆಂದ ವಾ
ನರಚಿಹ್ನಂಗೆ ವಿರಾಧಿತಂ ತಿೞಿಪಿದಂ ಕಾಂತಾರದೊಳ್ ಜಾನಕೀ
ಹರಣಂ ವಂಚನೆಯಿಂದಮಾದ ತೆಱನಂ ಸಂಗ್ರಾಮಮಾದಂದಮಂ
ಖರನುಂ ದೂಷಣನುಂ ಜನಾರ್ದನನ ಕಯ್ಯೊಳ್ ಕಾದಿ ಸತ್ತಂದಮಂ ೧೨

ಆರುಯ್ದ ರೆಂದುಮಱಿಯದೆ
ನಾರಾಯಣನಿರ್ದನಱಿದೊಡುಯ್ದನ ಕರುೞಿಂ
ವೀರಶ್ರೀಗೆ ಭುಜಾಸಿಯ
ಧಾರಾಗೃಹದಲ್ಲಿ ತೋರಣಂಗಟ್ಟದಿರಂ ೧೩

ಎನೆ ಸುಗ್ರೀವನವಸರಂಬಡೆದು ಸಪ್ತದಿವಸಕ್ಕೆ ದೇವಿಯರ ಸುದ್ದಿಯಂ ತರ್ಪೆನೆಂದತಿ ಪ್ರತಿಜ್ಞೆಗೆಯ್ದು ಬಿನ್ನವಿಸೆ ಮೆಚ್ಚಿ ನಿಚ್ಚವಯಣದಿಂ ಬಲನುಮಚ್ಯುತನುಂ ವಿರಾಧಿತನುಂ ಬೆರಸು ಕಿಷ್ಕಿಂಧಪುರಮನೆಯ್ದಿ ದೂತನನಟ್ಟುವುದುಂ ಕೃತಕ ಸುಗ್ರೀವನಿದಿರೆತ್ತಿ ಬರೆ ರಘುವೀರಂ ನಸುನಕ್ಕು

ತೆಗೆದಂಬಂ ದೊಣೆಯಿಂ ತೊಡರ್ಚಿ ತಿರುವಾಯೊಳ್ ಕರ್ಣಮೂಲಂಬರಂ
ತೆಗೆದೇಸಾಡೆ ಬಲಂ ಜಿತಾಹಿತಬಲಂ ತತ್ಸಾಯಕಂ ದೈವಿಕಂ
ತೆಗೆದತ್ತಾತನ ತೋಳೊಳಿರ್ದ ವಿಜಯಶ್ರೀಕಾಂತೆಯಂ ಪ್ರಾಣವಾ
ಯುಗಳಂ ಮೆಯ್ದೆಗೆವಂತು ವಾನರ ಪತಾಕ ಸ್ವಾಂತ ಚಿಂತಾಜ್ವರಂ ೧೪

ಆಗಳ್ ಕಪಿಧ್ವಜಂ

ದೇವರ್ ಬಿಜಯಂಗೆಯ್ದು ಮ
ದಾವಸಥಕ್ಕೆನಗೆ ರಾಗಮಂ ಕೇಸಡಿ ಕೆಂ
ದಾವರೆವೂವಿಂದೀವುದು
ಸೇವಾಪದವಿಯೊಳೆ ನಿಲಿಪುದೆಮ್ಮನ್ವಯಮಂ ೧೫

ಎಂದು ಕನಾವೃತದೊಳಿರ್ದ ತನುಜೆಯರಂ

ವನಧಿಗೆ ಕುಲಾಚಲಂ ವಾ
ಹಿನಿಗಳನೀವಂತೆ ಮೀನನಯನದ ನಿಜನಂ
ದನೆಯರನಿತ್ತಂ ರಘುನಂ
ದನಂಗೆ ರಾಜೀವಮುಖಿಯರಂ ಸುಗ್ರೀವಂ ೧೬

ನಸುಸೋಂಕಿಂ ಬಾಲೆಯರಂ
ಬಸದಾಗಿಸಿ ನೆನೆದು ಸೀತೆಯಂ ರಾಮಂ ದೂ
ರಿಸಿದಂ ಚಂದ್ರಿಕೆಯಂ ಸೇ
ವಿಸಿದ ಚಕೋರಕ್ಕೆ ಬಾಡ್ತೆಯೇ ತುಹಿನಕಣಂ ೧೭

ಇತ್ತ ಸುಗ್ರೀವಂ ಪ್ರತಿಜ್ಞೆಯಂ ಸ್ಮರಿಯಿಸಿ

ಚಂಡಬಲಂ ಬಲಾಚ್ಯುತರ ಸೀತೆಯ ಸುದ್ದಿಯನಟ್ಟೆ ಮುನ್ ಪ್ರಭಾ
ಮಂಡಲನಲ್ಲಿಗಂಬಿಕೆಯ ಸುದ್ದಿಗೆ ಸಾಧಿತ ವಿಶ್ವವಿದ್ಯರಂ
ತಂಡದಿನಟ್ಟೆ ಗುಪ್ತಚರರಂ ಕೆಲರಂ ತಱಿಸಂದು ತಾನುಮಾ
ಖಂಡಲದಿಙ್ಮುಖಂ ಕತಿಪಯಾನುಚರಂ ತಳರ್ದಂ ವಿಯಚ್ಚರಂ ೧೮

ಅಂತು ಗದಾಯುಧ ಹಲಾಯುಧರಂ ಬೀಳ್ಕೊಂಡು ಮನಃಪವನ ವೇಗದಿಂ ಪೋಗುತ್ತುಂ ಗಿರಿಶಿಖರಾವನಿಯೊಳ್ ರತ್ನಜಟಿಯುಂ ಕಂಡು ಆತನಂ ಸುಗ್ರೀವನೆಯ್ದೆವಂದು ನಿನಗಿನಿವಿರಿದವಸ್ಥಾಂತರಮೇಕಾದುದೆಂದು ಬೆಸಗೊಂಡೊಡದಂ ಸವಿಸ್ತರಮಱಿಯೆ ಪೇೞೆ ಕೇಳ್ದು

ವಾನರಚಿಹ್ನಂ ತನ್ನಭಿ
ಮಾನಂ ನಿಂದತ್ತು ಪೂಣ್ಕೆ ಸಂದತ್ತೆನಗೆಂ
ದೇನೊಸೆದನೊ ದಶವದನಂ
ಜಾನಕಿಯುಂ ಲಂಕೆಗುಯ್ದನೆಂದಱಿಪಲೊಡಂ ೧೯

ಇಡಿದಿರೆ ಸೀತಾವಿರಹದ
ಕಡುಗಟ್ಟಲೆ ದಾಶರಥಿಯ ಮಾನಸದೊಳದಂ
ಕಿಡಿಸುವ ಬಗೆಯಿಂ ರತ್ನದ
ಸೊಡರಂ ತರ್ಪಂತೆ ರತ್ನಜಟಿಯುಂ ತಂದಂ ೨೦

ಅಂತು ತಂದು ಕಾಣಿಸುವುದುಂ ರತ್ನಜಟಿ ಕಯ್ಗಳಂ ಮುಗಿದು

ಕಾಮಾಂಧಂ ಕಳ್ದುಕೊಂಡುಯ್ದಪನಿದುವೆ ಪದಂ ತೋರ್ಪುದಣ್ಮುಳ್ಳವರ್ ಸಂ
ಗ್ರಾಮಾವಷ್ಟಂಭಮಂ ಹಾ ಜನಕ ಜನಕ ಹಾ ಲಕ್ಷ್ಮಣಾ ಲಕ್ಷ್ಮಣಾ ಹಾ
ರಾಮಾ ರಾಮಾಯೆನುತ್ತುಂ ಜನಕಜೆ ಬಸಿಱಿಂ ಮೋದಿ ಪುಯ್ಯಲ್ಚೆ ಕೇಳ್ದಾ
ನಾಮಕ್ಕಾನೆಯ್ದಿದೆಂ ರಾವಣನೊಳಿಱಿವ ತಕ್ಕಿಂದಮಣ್ಮಣ್ಮೆನುತ್ತುಂ ೨೧

ಅಂತು ಮೊದಲಿಸಿ ಮುಟ್ಟೆವರ್ಪುದುಂ ಮದೀಯ ಜನಕನೊಳಾದನುಬಂಧಂ ಕಾರಣಮಾಗೆನ್ನೊಳಿಱಿಯದೆ ವಿದ್ಯಾಚ್ಛೇದನಂ ಗೆಯ್ದು ರಾವಣಂ ಸೀತೆಯುಂ ಲಂಕೆಗುಯ್ದನೆಂದು ಬಿನ್ನವಿಸೆ ರಣಲಂಪಟಂ ಜನಾರ್ದನಂ

ಲೆಂಕೆಯನೊಕ್ಕಲಿಕ್ಕುವವೊಲಳ್ಕುಱೆ ಲಂಕೆಯನೊಕ್ಕಲಿಕ್ಕಿ ಕೀ
ಲ್ವೆಂ ಕಡುಪಿಂ ತ್ರಿಕೂಟ ಗಿರಿಯಂ ದಶಕಂಠನ ಕಂಠನಾಳಮಂ
ಘೋಂಕೆನಲೆಚ್ಚು ಪಾಯ್ವ ಬಿಸುನೆತ್ತರ ಸೇಕದಿನೆನ್ನ ತೋಳ ತೀ
ಸಂ ಕಳೆವೆಂ ವಿಳಂಬಿಸಿದೊಡೆನ್ನ ನೆಗಟ್ತೆಗೆ ಬನ್ನಮಾಗದೇ ೨೨

ಎಂದು ತಱಸಂದು ನುಡಿಯೆ

ಜೈನಾಗಮ ಕೋವಿದನಂ ಜಾಂ
ಬೂನದಸಂ ಮಧುರನಿನದನಂ ಬೆಸಗೊಂಡಂ
ದಾನವನ ವಂಶಮಂ ಲಂ
ಕಾ ನಗರದ ತೆಱನನತ್ಯುದಾತ್ತಂ ರಘುಜಂ ೨೩

ವಿಪುಲಮತಿ ಸಕಲವಿದ್ಯಾ
ನಿಪುಣಂ ಗಣಧರ ನಿರೂಪಿತ ಕ್ರಮದಿಂ ದೈ
ತ್ಯಪತಿಪ್ರಪಂಚಮಂ ಶ್ರವ
ಣ ಪಥಾತಿಥಿ ಮಾಡಲಾಗಳುದ್ಯತನಾದಂ ೨೪

ಅದೆಂತೆಂದೊಡೆ

ಪಲವುಂ ದ್ವೀಪಂಗಳ್ ಕ
ಣ್ಮಲರಂ ಸೆಱೆಗೆಯ್ವು ಕಿನ್ನರಾದ್ಯಷ್ಟ ಮರು
ತ್ಕುಲ ನಿಲಯಂಗಳ್ ದಕ್ಷಿಣ
ಜಲಧಿಯೊಳಿರ್ಪುವು ನಿಕಾಮ ಕಮನೀಯಂಗಳ್ ೨೫

ಆ ದ್ವೀಪಂಗಳೊಳಗೆ ರಾಕ್ಷಸದ್ವೀಪಮೆಂಬುದು ಸಪ್ತಶತಯೋಜನ ಪ್ರಮಿತ ಮದಱ ನಡುವೆ ರಂಜಿಪ ತ್ರಿಕೂಟಾಚಲದ ಶಿಖರಮಂಡಲದೊಳ್

ತ್ರಿಂಶದ್ಯೋಜನ ವಿಸ್ತಾ
ರಂ ಶರದಂಬುಧರ ಧವಲಹಾರಂ ಮಣಿಹ
ರ್ಮ್ಯಾಂಶು ಸ್ಥಗಿತ ವಿಯಚ್ಚ
ಕ್ರಂ ಶೋಭಾಜನ್ಮಭೂಮಿ ಲಂಕಾನಗರಂ ೨೬

ಆ ನಿರಾತಂಕಮಪ್ಪ ಲಂಕೆಯೊಳ್ ಸುಖದಿನರಸುಗೆಯ್ಯೆಂದು ಭೀಮನೆಂಬ ರಾಕ್ಷಸಕುಲಾಧಿಪಂ ಭವಾಂತರ ಸ್ನೇಹದಿಂ ರಥನೂಪುರ ಚಕ್ರವಾಳಪುರದ ರಾಜಕುಮಾರಂ ತೋಯದವಾಹನನಂ ತನ್ನ ಪೊಱಲ್ಗುಯ್ದು ರಾಜ್ಯಾಭಿಷೇಕಂಗೆಯ್ದು ರಾಕ್ಷಸವಿದ್ಯೆ ಮೊದಲಾಗೆ ಪಲವುಂ ವಿದ್ಯೆಗಳುಮಂ ನವಮುಖಾಭರಣ ಪ್ರಮುಖಾನೇಕ ದಿವ್ಯಾಭರಣಂಗಳುಮಂ ನವನಿಧಿವೆರಸು ಪಾತಾಳಲಂಕೆಯುಮನಿತ್ತು ನಿನಗೆ ರಾಕ್ಷಸ ಕುಲಮೆ ಕುಲಮಕ್ಕೆಂದು ನಿಯಮಿಸಿ ನಿಜಪರಿಗ್ರಹಂಬೆರಸು ದ್ವೀಪಾಂತರಕ್ಕೆ ಪೋದನಿತ್ತ ತೋಯದವಾಹನಂ ನಿಜಪರಿಜನಂ ಬೆರಸು ಲಂಕೆಯೊಳರಸುಗೆಯ್ಯುತ್ತುಂ ಕೆಲವು ಕಾಲದಿಂ ವೈರಾಗ್ಯಪರನಾಗಿ ನಿಜಾಗ್ರತನಯನಪ್ಪ ಮಹಾರಾಕ್ಷಸಂಗೆ ರಾಜ್ಯಮನಿತ್ತು ದೀಕ್ಷೆಗೊಂಡು ಮೋಕ್ಷಕ್ಕೆ ಪೋಪುದುಮಿತ್ತಲಾ ಸಂತಾನದೊಳನೇಕರರಸುಗಳತಿಕ್ರಾಂತರಪ್ಪುದುಂ

ಪಾತಾಳ ಲಂಕೆಯೊಳ್ ಸಂ
ಪ್ರೀತಿ ಪೊದಳ್ದಿರೆ ಸುಮಾಲಿ ಖೇಚರಪತಿಗಂ
ಪ್ರೀತಿಮತಿಗಂ ಜಗದ್ವಿ
ಖ್ಯಾತಂ ರತ್ನಶ್ರವಂ ತನೂಭವನಾದಂ ೨೭

ಆತನತಿಪ್ರಖ್ಯಾತನಾಗಿ ಪುಷ್ಪೋತ್ತರಮೆಂಬ ಗಹನದೊಳ್ ವಿದ್ಯೆಗಳಂ ಸಾಧಿಸಿ ಸಿದ್ಧಪರಮೇಷ್ಠಿಗಳಂ ಸ್ತುತಿಯಿಸುತಿರ್ಪ ಸಮಯದೊಳ್ ಕೌತುಕ ಮಂಗಳ ಪುರಮನಾಳ್ವ ವ್ಯೋಮಭಾನುವೆಂಬ ವ್ಯೋಮಚರಂ ನಿಜತನೂಜೆ ಕೈಕಸಿಯೆಂಬ ಕನ್ಯಾರತ್ನಮಂ ಕುಡುವುದುಮಲ್ಲಿಯೆ ವಿದ್ಯೆಯಿಂ ಪುಷ್ಪೋತ್ತರಮೆಂಬ ಪೊಱಲಂ ಮಾಡಿಸಿ ಪಿತೃಮಾತೃಗಳಂ ಬರಿಸಿ ಶುಭದಿನ ಮುಹೂರ್ತದೊಳಾಕೆಯುಂ ಮದುವೆನಿಂದು ನಿರಂತರೋತ್ಸವದಿನಿರ್ಪುದುಂ ಗರ್ಭಂ ಬಳೆಯೆ

ಭರತ ತ್ರಿಖಂಡ ಮಂಡಲ
ಪರಿರಕ್ಷಣದಕ್ಷನೀ ತನೂಭವನೆಂಬೀ
ಪರಮೋತ್ಸವಮಂ ಪೇಳ್ವಂ
ತಿರೆ ಪುರದೊಳ್ ಕುಸುಮವೃಷ್ಟಿ ಕಱೆದುದು ನಿಚ್ಚಂ ೨೮

ಇಂತು ನವಮಾಸಂ ನೆಱೆಯೆ ಕೈಕಸಿ ಕೂಸಂ ಪೆತ್ತು ದಶಮದಿನದೊಳ್ ಭೀಮನೆಂಬ ರಾಕ್ಷಸಂ ಕೊಟ್ಟ ನವಮುಖ ರತ್ನಭೂಷಣದ ಮಾಣಿಕಂಗಳೊಳಾತನ ಮುಖಂ ಪ್ರತಿಬಿಂಬಿಸೆ ದಶಮುಖನೆಂಬ ಪೆಸರನಿಟ್ಟು ಮತ್ತಂ ಭಾನುಕರ್ಣನುಂ ಚಂದ್ರನಖಿಯುಂ ವಿಭೀಷಣನುಮೆಂಬ ಮಕ್ಕಳನನುಕ್ರಮದಿಂ ಪೆತ್ತೊಡವರ್ ಬಳೆದು ಶೈಶವಮನತಿಕ್ರಮಿಸಿ ಪ್ರಭುಮಂತ್ರೋತ್ಸಾಹಶಕ್ತಿತ್ರಯಮೆ ಮೂರ್ತಿಗೊಂಡಂತೆ ಮೂವರುಮಖಿಲಶಾಸ್ತ್ರ ಪಾರಾವಾರ ಪಾರಗರೊಂದು ದಿವಸಮಾಸ್ಥಾಯಿಕಾ ಮಧ್ಯ ನಾಯಕರತ್ನಂಗಳಂತಿರ್ದ ಸಮಯದೊಳ್

ಶ್ರವಣಾನಂದಮನುಂಟುಮಾಡೆ ಮಣಿಘಂಟಾ ನಿಸ್ವನಂ ಕೇತು ಪ
ಲ್ಲವ ಹಸ್ತಾಭಿನಯಂಗಳಂ ಮಣಿವಿಮಾನ ಶ್ರೇಣಿಗಳ್ ಬೀಱೆ ವೈ
ಶ್ರವಣಂ ಕಾಮನ ಬಿಲ್ಗಳಂ ಕೆದಱೆ ಭೂಷಾಪಂಚರತ್ನಾಂಶುಗಳ್
ದಿವಿಜೇಂದ್ರಂ ಖಚರೇಂದ್ರನಲ್ಲನೆನೆ ಪೋಗುತ್ತಿರ್ದನಾಕಾಶದೊಳ್ ೨೯

ಅಂತಾತಂ ತೃಣೀಕೃತ ತ್ರಿಭುವನನಾಗಿ ಪೋಗುತ್ತಿರ್ಪುದುಂ ದಶಗ್ರೀವನುದ್ಗ್ರೀವನಾಗಿ ಈತನೆತ್ತಣಾತನೆಂಬುದುಂ ಕೈಕಸಿ ಈತನೆಮ್ಮಕ್ಕನ ಮಗಂ ವೈಶ್ರವಣನೆಂಬನುಭಯಶ್ರೇಣಿಗರಸನಪ್ಪಿಂದ್ರನೆಂಬ ವಿದ್ಯಾಧರ ಚಕ್ರವರ್ತಿ ನಿಮ್ಮ ಪಿರಿಯ ಮುತ್ತಮ್ಮನಪ್ಪ ಮಾಲಿಯಂ ಕೊಂದು ನಮ್ಮನ್ವಯದಿಂ ಬಂದ ಲಂಕೆಯಂ ಕೊಟ್ಟೊಡೀತನದನಾಳುತ್ತಿರ್ಪನಾಮುಮಿಾತಂಗೆ ಭೀತರಾಗಿರ್ಪೆವೆಂದು ದುಃಖಂಗೆಯ್ಯೆ ವಿಭೀಷಣಂ ಬಾರಿಸಿ ನಿಮ್ಮ ಪಗೆಯಂ ಬಗೆದಂತೆ ತೀರ್ಚಿ ದಶವದನಂ ನಿಮಗೆ ಸಂತೋಷಮಂ ಮಾಡಲಾರ್ಕುಮನ್ನೆಗಂ ನಮ್ಮ ಕುಲಕ್ಕೆ ತಕ್ಕ ವಿದ್ಯೆಗಳಂ ಸಾಧಿಸುವೆವೆಂದು ತಾಯ್ಗೆ ಬಿನ್ನವಿಸಿ

ಆ ಸಾಹಸಿಕರ್ ತತ್ತ್ವಾ
ಭ್ಯಾಸಮನೊಡರಿಸುವ ಮುನಿಯವೋಲ್ ಪೂರ್ವ್ವನ್ಯ
ವ್ಯಾಸಂಗಂ ಕಿಡೆ ಪಲ್ಯಂ
ಕಾಸನದೊಳ್ ಮೂವರುಂ ಯಥಾಕ್ರಮಮಿರ್ದರ್ ೩೦

ಅಂತು ವಿದ್ಯೆಗಳಂ ಸಾಧಿಸಿ ಸಿದ್ಧವಿದ್ಯರ್ ಪಂಚಪರಮೇಷ್ಠಿಗಳಂ ಪೂಜಿಸಿ ದಿನ್ ಬಱಿಯಂ

ಅವಿಷ್ಕೃತ ನಿಯಮಮಂ ತ್ರಿದಿ
ನಾವಧಿಯೊಳಗಣ್ಯ ಪುಣ್ಯ ನಿಲಯಂ ವಿದ್ವಿ
ಡ್ಜೀವಾಕರ್ಷಣ ಪಟುವಂ
ರಾವಣನುಗ್ರಾಸಿರತ್ನಮಂ ಸಾಧಿಸಿದಂ ೩೧

ಅಂತು ಚಂದ್ರಹಾಸಮಂ ಸಾಧಿಸಿ ವಿದ್ಯೆಯಿಂ ಸ್ವಯಂಪ್ರಭವೆಂಬ ಪೊೞಲಂ ಮಾಡಿ ನಿಜಪರಿಜನಂ ಬೆರಸು ಬಂಧುಜನಮಂ ಬರಿಸಿ

ಪಲವುಂ ವಿದ್ಯೆಯೊಳಂ ಭುಜ
ಬಲದೊಳಮಿಾ ದೊರೆಯರಾರುಮಿಲ್ಲೆನಿಸಿ ಸುಹೃ
ತ್ಕುಲಮಂ ಪಾಲಿಸುವಸುಹೃ
ತ್ಕುಲಮಂ ಸಾಧಿಸುವ ಮನದಳುರ್ಕೆಯಿನಿರ್ದಂ ೩೨

ಅಂತಿರ್ಪುದುಮಿತ್ತ ಸುರಸಂಗೀತಕ ಪುರಪ್ರಧಾನಂ ಮಯಂ ತನ್ನ ಮಗಳಪ್ಪ ಮಂಡೋದರಿಯುಂ ನೈಮಿತ್ತಿಕಾದೇಶದಿಂ ವಿಮಾನಮನೇಱಿಸಿಕೊಂಡು ಸ್ವಯಂಪ್ರಭನಗರಕ್ಕೆ ವಂದು ದಶವದನಂಗೆ ಮಹಾ ವಿಭೂತಿಯಿಂ ಮದುವೆಯಂ ಮಾಟ್ಪುದುಮನಂತರಂ ಮಯಮಾರೀಚಾದಿಗಳಂ ಮನ್ನಿಸಿ ಕಟಿಪಿ ತನ್ನ ವಿದ್ಯೆಗಳಂ ವಿಗುರ್ವಿಸಿ ನೋಡಿ ಹರ್ಷದೊಳ್ ಕೂಡಿ ಭೌಮ ವಿಹಾರಕ್ಕೆ ಪೋಗುತ್ತುಂ ಮೇಘಶೃಂಗವೆಂಬ ನಗನಿತಂಬದಂಬುಜಷಂಡ ಮಧ್ಯದೊಳ್ ಪದ್ಮೆ ವಿದ್ಯುತ್ಪ್ರಭೆ ಅಶೋಕಲತೆ ಮೊದಲಾದಱುಸಾಸಿರ್ವರ್ ಕನ್ನೆಯರ್ ನೀರಾಟಮನಾಡುವುದಂ ಕಂಡು ಮನಂಗೊಂಡಾಕೆಗಳಂ ಗಾಂಧರ್ವವಿವಾಹದಿಂ ಸ್ವೀಕರಿಸಲ್ ಬಗೆವುದುಂ ಕನ್ನೆಯರಿನಾ ವಾರ್ತೆಯಸವರಯ್ಯನಪ್ಪ ಸುರಸುಂದರಂ ಕೇಳ್ದು ಮೇಲೆತ್ತಿ ಬರ್ಪುದುಂ ಕಾದಿ ನಾಗಪಾಶದಿಂ ಕಟ್ಟಿ ಕೊಲಲೊಲ್ಲದೆ ಕಳೆದುದರ್ಕೆ ಮೆಚ್ಚಿ

ಅನಿಬರ್ ಕನ್ನೆಯರುಮನಾ
ಜನಪತಿ ಪರಿಣಯನ ವಿಭವದಿಂದೀಯೆ ದಶಾ
ನನನೊಸೆದು ಮದುವೆನಿಂದಾ
ತ್ಮನಗರಮಂ ಬಂದು ಪೊಕ್ಕನತ್ಯುತ್ಸವದಿಂ ೩೩

ಅಂತು ಸ್ವಯಂಪ್ರಭ ನಗರಕ್ಕೆ ವಂದು ಕುಂಭಪುರದ ಮಹೋದರಂಗಂ ಸುರೂಪೆಗಂ ಪುಟ್ಟಿದ ವಿದ್ಯುದ್ವೇಗೆಯಂ ಭಾನುಕರ್ಣಂಗೆ ಮದುವೆಮಾಳ್ಪುದು ಮಾತನಾಕೆಗತಿಸ್ನೇಹಿತನಾಗಿ ಕುಂಭಪುರದ ಮಾತುಗಳನಾಗಳುಂ ಮೆಚ್ಚಿ ಕೇಳುತ್ತುಮಿರ್ದೊಡಾತಂಗೆ ಕುಂಭಕರ್ಣಾಭಿಧಾನಮಾಯ್ತು ಮತ್ತಂ ಜ್ಯೋತಿಃ ಪ್ರಭ ಪುರಮನಾಳ್ವ ಶುದ್ಧಕಮಲಂಗಮಾನಂದಮಾಲೆಗಂ ಪುಟ್ಟಿದ ರಾಜೀವಸರಸೆ ಯೆಂಬ ಕನ್ಯೆಯಂ ವಿಭೀಷಣಂಗೆ ಮದುವೆಮಾಡಿ ಸುಖದಿಸಿರೆ

ಮಂಡೋದರಿ ಪಡೆದಳ್ ಮು
ನ್ನಿಂದಗಿಯಂ ಒಟಿಕೆ ಮೇಘವಾಹನನಂ ಶ
ತ್ರುಂದಮರನಮಿತ ಬಲರಂ
ನಂದನರಂ ಖೇಚರಾನ್ವಯಾನಂದನರಂ ೩೪

ಅವರಾಶಾದಂತಿಗೆ ನಿ
ಗ್ಗವಂಗಳಾದಂತೆ ತನಗೆ ನೆರವಾಗೆ ಮಹೋ
ತ್ಸವಮನದೇಂ ತಳೆದನೊ ಖಚ
ರವಲ್ಲಭಂ ಕಳೆಯುಲೆಂದು ಕುಲಪರಿಭವಮಂ ೩೫

ಲಂಕೆಯನನ್ವಯಾಗತಮನೆಮ್ಮ ಪಿತಾಮಹನಪ್ಪ ಮಾಲಿಯಂ
ಮುಂ ಕಡುಕಯ್ದು ಕೊಂಡೆಪೆದು ಕೊಂಡನನಿಕ್ಕದೊಡೆನ್ನ ಬಾಹುವೀ
ರ್ಯಂ ಕಡುನೊಚ್ಚಿತಕ್ಕುಮೆನುತುಂ ಮನದುಮ್ಮಳದಿಂ ಕನಲ್ದು ವೀ
ತಾಂಕುಶನೆತ್ತಿದಂ ಮುಳಿದು ಲಂಕೆಗನೂನಬಲಂ ದಶಾನನಂ ೩೬

ಅದಂ ಕೇಳ್ದು ತಾನುಮಿದಿರೆತ್ತಿ ಕಾದುತ್ತುಂ

ಮುನಿಸಿಂದಿಸೆ ವೈಶ್ರವಣಂ
ದನುಜನದಂ ಕಡಿದು ಕಳೆದು ನಿಶಿತಾಸ್ತ್ರದಿನಾ
ತನ ತಲೆಯುಮನಿರ್ಬಗಿಯ
ಪ್ಪಿನಮೆಚ್ಚಂ ಮೂರ್ಛೆವೋಗಿ ಬೀೞ್ವಿರ್ಪಿನೆಗಂ ೩೭

ಅಂತು ಮೂರ್ಛೆವೋದನಂ ವಿಯಚ್ಚರಾನುಚರರ್ ವಿಮಾನದೊಳಿಟ್ಟು ವಿಜಯಾರ್ಧನಗಕ್ಕುಯ್ವುದುಮಾತನ ಪುಷ್ಪಕ ವಿಮಾನಮಂ ಕಳೆದುಕೊಂಡು ಜಯಪತಾಕೆಯನೆತ್ತಿಸಿ ದಕ್ಷಿಣಸಮುದ್ರವೇಳಾ ನಿವಾಸಿಗಳಪ್ಪ ಇಂದ್ರನ ಸಾಮಂತರೆಲ್ಲರುಮಂ ಬಾಯ್ಕೇಳಿಸಿ

ಬಡಗಣ ದೆಸೆಯಂ ಸಾಧಿಸ
ಲೊಡರಿಸಿ ಭೂಚರ ವಿಯಚ್ಚರೇಶ್ವರರಂ ತ
ನ್ನಡಿಗೆಱಗಿಸಿ ದಶಕಂಠಂ
ಪಡೆದಂ ದೆಸೆವೆಣ್ಗೆ ಕೀರ್ತಿಮಣಿಕಂಠಿಕೆಯಂ ೩೮

ಅಂತು ನಿಖಿಲ ರಾಜಕಮನದಿರ್ಪಿ ಕಪ್ಪಂಗೊಂಡು ಕೈಲಾಸನಗದ ಕಾನನದೊಳ್ ಭದ್ರಗಜಮಂ ಕಂಡು ಮನದೆ ಕೊಂಡೆನಗೆ ಪಟ್ಟವರ್ಧನಮಾಗಲಿದುವೆ ತಕ್ಕುದೆಂದು ಮುನ್ನಮಿಂದ್ರಂಗಂ ಪಿಡಿಯಲೀಯದತಿವರ್ತಿಯಂ ದಾನವ ಚಕ್ರವರ್ತಿ ವಿದ್ಯೆಯಿನಶ್ರಮದೊಳೆ ಪಿಡಿದಾ ಮಹಾಗಜಮಂ ತ್ರಿಜಗದ್ಭೂಷಣ ನಾಮಧೇಯಂ ಮಾಡಿ ಬೀಡಿಂಗೆ ಮಗುಳೆ ವಂದು ಕಿಷ್ಕಿಂಧಪುರದ ಯಮ ರಾಜನಂ ಗೆಲ್ದು ಆ ಪುರಮಂ ಯಕ್ಷಜ ಸೂರ್ಯಜರ್ಗೆ ಕೊಟ್ಟು ನಿಜಾನ್ವಯಾಗತಮಪ್ಪ ಲಂಕೆಯಂ ಮಾತಾಪಿತೃಪಿತಾಮಹ ಸಹಿತಂ ಪುಷ್ಪಕ ವಿಮಾನಾರೂಢನತಿಶಯವಿಭೂತಿಯಿಂ ಪೊಕ್ಕು ಸುಖದಿಂದಿರೆ ಕೆಲವು ದಿವಸಕ್ಕೆ

ನಿರುಪಮಚರಿತ್ರ ಸೂರ್ಯಜ
ನರಸಿಯೆನಿಪ್ಪಿಂದುಮಾಲೆ ಪೆತ್ತಳ್ ಲೋಕೋ
ತ್ತರರೆನಿಪ ವಾಲಿಸುಗ್ರೀ
ವರುಮಂ ಶ್ರೀಪ್ರಭೆಯುಮಂ ಯಥಾಕ್ರಮದಿಂದಂ ೩೯

ಅಂತು ಕೆಲವು ಕಾಲಂ ಪೋಪುದುಂ ವಾಲಿಸುಗ್ರೀವರನಧಿರಾಜ ಯುವರಾಜ ಪದವಿಯೊಳ್ ನಿಲಿಸಿ ಸೂರ್ಯಜಂ ಪಿಹಿತಾಸ್ರವ ಭಟ್ಟಾರಕರ ಸಮಕ್ಷದೊಳ್ ದೀಕ್ಷೆಯಂ ಕೈಕೊಂಡು ಮೋಕ್ಷಕ್ಕೆ ಪೋದನಿತ್ತಲ್

ಪರಿಣಯನ ನಿಮಿತ್ತಂ ದಶ
ಶಿರನತ್ತಲ್ ಪೋಗೆ ತೆಱಪುವಾರ್ದಿರ್ದದಟಂ
ಖರನಿರದುಯ್ದಂ ಲಂಕಾ
ಪುರದಿಂದಂ ಚಂದ್ರನಖಿಯನಂಬುಜ ಮುಖಿಯಂ ೪೦

ಅಂತು ಕಳ್ದುಯ್ದು ದಶಾನನಂಗಾನತನಲ್ಲದ ಚಂದ್ರೋದರನಂ ಯಮೋದರಮಂ ಪುಗಿಸಿ ಪಾತಾಳಲಂಕೆಯಂ ಸ್ವೀಕರಿಸಿ ಸುಖದಿನಿರೆ ಇತ್ತ ದಶಾನನಂ ಮದುವೆನಿಂದು ಮಗುಳ್ದುವಂದು

ಎನಗಿನಿಸಳ್ಕದೆನ್ನನುಜೆಯಂ ಪಿಡಿದುಯ್ದನವಂಗೆ ತಕ್ಕುದಂ
ಜನಿಯಿಪೆನೆಂದು ಗರ್ಜಿಸೆ ದಶಾನನನಾತನ ಕಾಂತೆ ನಿನ್ನ ಮೆ
ಯ್ದುನನಸುರಕ್ತನಾಕೆಗನುರೂಪನಿದಾವುದು ಪೊಲ್ಲಗೆಯ್ದನೀ
ಮುನಿಸವಿವೇಕಮೆಂದು ನುಡಿದಳ್ ಮಯನಂದನೆ ತದ್ದಶಾಸ್ಯನಂ ೪೧

ಅಲ್ಲದೆಯುಂ ನಿನಗೆ ವಿಧೇಯನಲ್ಲದ ಚಂದ್ರೋದರನಂ ಕೊಂದು ನಿಷ್ಕಂಟಕಂ ಮಾಡಿದನಾತನಂ ಮುಳಿದು ನೀಂ ಕೊಂದು ನಿನ್ನನುಜಾತೆಗೆ ವೈಧವ್ಯದೀಕ್ಷೆಯಂ ಕುಡುವುದು ಚದುರಲ್ಲೆಂದು ಕಲುಷಮಂ ಕಳೆದಳಿತ್ತ ಚಂದ್ರೋದರನ ಪತ್ನಿಯುಮಂತರ್ವತ್ನಿಯುಮಪ್ಪನುರಾಧೆ ಪರಿಜನಂ ಬೆರಸು ಪೋಗಿ ನವಮಾಸಂ ತೀವೆ ಕೂಸುವೆತ್ತೀತಂ ಗರ್ಭದೊಳಿರೆ ಪಗೆವರಿಂ ಸೇದೆವಟ್ಟೆನೆಂದಾತಂಗೆ ವಿರಾಧಿತನೆಂದು ಪೆಸರನಿಡುವುದುಮಾತನನುಕ್ರಮದಿಂ ಬಳೆದು ಪಗೆಯಂ ಸಾಧಿಸುವುಪಾಯಮಂ ಬಗೆಯುತ್ತಿರ್ಪಿನಮಿತ್ತಲ್

ಮಾನಧನಂ ವಿವೇಕನಿಧಿ ವಾಲಿ ಜಿನಾಗಮಕೋವಿದಂ ಪೆಱಂ
ಗಾನತನಾಗೆ ದರ್ಶನವಿಶುದ್ಧಿಗೆ ದೂಷಣಮಕ್ಕುಮಂತಱಿಂ
ಜೈನಪದಕ್ಕೆ ಜೈನಮುನಿಗಲ್ಲದೆ ಕಯ್ಮುಗಿಯೆಂ ದಲೆಂದು ಧ
ರ್ಮಾನುಗನಪ್ರಮತ್ತಚರಿತಪ್ರಿಯನಾದನಿದೇನುದಾತ್ತನೋ ೪೨

ಅನಂತವೀರ್ಯನುಂ ಚರಮದೇಹಧಾರಿಯುಮವಕ್ರವಿಕ್ರಮನುಮಪ್ಪ ವಾಲಿ ನಿಯಮಸ್ಥನಾಗಿ ಸುಖದಿನಿರ್ಪುದುಮೊಂದು ದಿವಸಮಾತನನುಜೆಯಂ ಶ್ರೀ

ಪ್ರಭೆಯಂ ಬೇಡಿ ದಶಮುಖಂ ಓಲೆಯನಟ್ಟುವುದುಮದಂ ತಿಳಿದು ವಾಲಿ ಮಂತ್ರಶಾಲೆಯಂ ಸುಗ್ರೀವಂಬೆರಸು ಪೊಕ್ಕು ಮಂತ್ರಿಮಂಡಲಮುಮನಾಪ್ತ ಪರಿಜನಮುಮಂ ಬರಿಸಿ

ತಗದೆನಗುನ್ಮಾರ್ಗಿಗೆ ಕೂ
ಸುಗುಡಲ್ ದಶಕಂಧರಂ ಮದಾಂಧಂ ಧರ್ಮಾ
ನುಗನಲ್ಲನನುಜೆಯಂ ಕುಡೆ
ತೆಗಟಿಹದೊಳ್ ಪರದೊಳೆನಗೆ ಪಾತಕಮಕ್ಕುಂ ೪೩

ಕುಡೆ ಕೂಸನುದ್ಧತಂಗಾಂ
ಪೊಡೆವಡುವನಿತಕ್ಕುಮಾದೊಡೆನ್ನ ಚರಿತ್ರಂ
ಕಿಡುಗುಂ ವ್ರತಮುಂ ಕಯ್ಕೊಂ
ಡೆಡೆಯೊಳ್ ಬಿಟ್ಟವನೆ ಭಿನ್ನಭಾಜನನಲ್ತೇ ೪೪

ಅದಱಿಂದಾತಂಗಾನೀ
ಯದೆ ಕೂಸಂ ಕಾಳೆಗಕ್ಕೆ ಮೆಯ್ದುರೆ ಪಲ ಕಾ
ಲದ ರಾಕ್ಷಸವಾನರವಂ
ಶದ ನಣ್ಪಿನ್ನಿಂದಮಱಿದುದೆಂಬುದು ಲೋಕಂ ೪೫

ಅದಱಿಂ ಪಾಪಕ್ಕಂ ಪಟಿಗಮೆಡೆಗುಡದ ತಪಮನಪ್ಪುಕಯ್ಕೊಂಡೆನ್ನ ಕುಲಮುಂ ಛಲಮುಂ ವ್ರತಮುಂ ಕಿಡದೆ ನಡೆಗುಮೆಂದು ತಱಿಸಂದು ಸುಗ್ರೀವಂಗೆ ರಾಜ್ಯಮಂ ಕೊಟ್ಟು ಪರಿಜನಕ್ಕೆ ನಿಶ್ಶಲ್ಯನಾಗಿ ತೊಱೆದು ತಪಂಬಟ್ಟು ಋದ್ಧಿಪ್ರಾಪ್ತನಾದಂ

ಸುಗ್ರೀವನುಮಿತ್ತಲ್ ಖಚ
ರಾಗ್ರಣಿ ತನ್ನನುಜೆಯುಂ ನಯೋಪಾಯಂ ಪಾ
ಣಿಗ್ರಹಣಸಹಿತಮಿತ್ತು ದ
ಶಗ್ರೀವಂಗಾತ್ಮಪದವಿಯೊಳ್ ಸುಖಮಿರ್ದಂ ೪೬

ಅಂತು ದಶವದನಂ ಶ್ರೀಪ್ರಭೆಯಂ ಮದುವೆನಿಂದು ಮತ್ತೊರ್ಮೆ ನಿತ್ಯಾಲೋಕಪುರದಿಂ ಮಗುಳ್ದು ಬರ್ಪ ಸಮಯದೊಳ್ ಕೈಲಾಸನಗದೊಳಿರ್ದ ಮಹಾಮುನಿಯ ಮೇಲೆ ವಿಮಾನಂ ನಡೆಯದೆ ನಿಲ್ವುದುಂ ವಿಸ್ಮಿತಮನನಿದೇನೆಂದು ನಿಂದವಲೋಕಿನೀವಿದ್ಯೆಯಿಂ ವಾಲಿದೇವನಪ್ಪುದನಱಿದಿನ್ನುಮೆನ್ನ ಮೇಲಣ ಮುನಿಸನುಟಿಯದೆ ವಿಮಾನಮುಂ ಸ್ತಂಭಿಸಿದೊಡೇನಾದುದೀ ನಗಂಬೆರಸೀಗಳ್ ಕಿೞ್ತುಯ್ದು ಸಮುದ್ರದೊಳಿಕ್ಕುವೆನೆಂದು ಪುಷ್ಪಕ ವಿಮಾನದಿಂದವನೀತಳಕ್ಕವತರಿಸಿ ಘನಾಪಘನಮುಮಂ ಬಹುಬಾಹುಗಳುಮಂ ವಿಕುರ್ವಿಸಿ ರಸಾತಲಕ್ಕಿೞಿದು ಧನದಾಚಲದಧಃಸ್ಥಲಮನೆಯ್ದಿ

ಸಾಸಿರ ವಿದ್ಯೆಗಳ್ ವೆರಸು ತೋಳ್ಗಳ ತೆರ್ಕೆಗಳಿಂದಳುರ್ಕೆವೆ
ತ್ತಾತ್ತ ಸುರವೈರಿ ಬೆಳ್ಮುಗಿಲನೆತ್ತುವ ಘೋರ ಸಮೀರನಂತೆ ಕೈ
ಲಾಸಮನೆತ್ತೆ ಕಾವ ಬಗೆಯಿಂ ಬಹುರತ್ನಮಯಂಗಳಂ ಜಿನಾ
ವಾಸಮನಂದು ವಾಲಿಮುನಿಪುಂಗಸುಂಗುಟದಿಂದವೊತ್ತಿದಂ ೪೭

ಅಂತು ಮೆಲ್ಲನೊತ್ತೆ ಪುಯ್ಯಲಿಡುವ ಸರಮಂ ಕೇಳ್ದು

ಪರಿಜನಸಹಿತಂ ಮಂಡೋ
ದರಿ ಬಂದು ಮುನೀಂದ್ರ ರಕ್ಷಿಸೆಂದೆಱಗುವುದುಂ
ಚರಣಾಂಗುಷ್ಠಮನೊಯ್ಯನೆ
ಕರುಣಾರಸಸಹಿತನೆತ್ತಿದಂ ಮುನಿಮಹಿತಂ ೪೮

ಆಗಳಾ ಪುಯ್ಯಲ್ವ ರವಮೇ ಕಾರಣಮಾಗೆ ದಶಮುಖಂಗಂದಿಂದಿತ್ತ ರಾವಣನೆಂಬ ಪೆಸರಾಯ್ತನಂತರಮಾತಂ ವಾಲಿಭಟ್ಟಾರಕರಂ ಪೂಜಿಸಿ ಪೊಡೆವಟ್ಟು ತನ್ನ ಪೊಲ್ಲಮೆಯುಂ ಕ್ಷಮೆಗೊಂಡು ಕಳೆದು

ಕೆಲದ ಜಿನೇಶ್ವರಾವಸಥಮುಂ ಬಲಗೊಂಡೊಳಪೊಕ್ಕು ದೇವನಂ
ವಿಲಸಿತ ರತ್ನರಾಶಿಗಳಿನರ್ಚಿಸಿ ಬಾಜಿಸಿದಂ ಲಯತ್ರಯಂ
ಸುಲಲಿತಮಾಗೆ ವಸ್ತುಗುಣರೂಪ ಜಿನಸ್ತವನಾಂಕ ಮಾಲೆಯಂ
ಪಲತೆಱದಿಂ ರಸಂ ಬಡೆಯೆ ರಾವಣಹಸ್ತದಿನಂದು ರಾವಣಂ ೪೯

ಅಂತು ನಿರ್ಭರ ಭಕ್ತಿಯಿಂ ಬಾಜಿಪಾಗಳ್

ಆಸನಕಂಪಮಾಗೆ ಫಣಿಪಂ ಫಣಿಲೋಕದಿನಂದು ಬಂದು ಕೈ
ಲಾಸನಗಕ್ಕೆ ರಾವಣನ ದೇವರೊಳಾದತಿಭಕ್ತಿ ಹರ್ಷಮಂ
ಮಾಸರಮುಂಟುಮಾಡೆ ತನಗಿತ್ತನಿದಿರ್ಚಲೊಡಂ ಸಮಸ್ತ ದೇ
ವಾಸುರ ಮುಖ್ಯನಾಯಕರ್ಗೆ ಜೀವವಿಮುಕ್ತಿಯನೀವ ಶಕ್ತಿಯಂ ೫೦

ಅಂತು ಪಡೆದು ರಾವಣಂ ಸಂಧ್ಯಕಾ ಸುವೇಲಾದಿ ದ್ವೀಪಂಗಳನಾಳ್ವ ಮಹಾಬಲವಿಜ್ಞಾನಧರರಂ ಬಾಯ್ಕೇಳಿಸಿ ಕುಂಭಕರ್ಣವಿಭೀಷಣರುಮಿಂದಗಿ ಮೇಘವಾಹನರುಂ ಖರಮರೀಚಿ ಸುಗ್ರೀವಾಂಗದ ಮರ್ಕಟಧ್ವಜ ಪ್ರಮುಖ ನಿಖಿಲ ವಿದ್ಯಾಧರ ಪರಮೇಶ್ವರರುಂ ಬಳಸಿ ಬರೆ ಉತ್ತರಾಭಿಮುಖಮಿಂದ್ರನ ಮೇಲೆ ನಿಚ್ಚಪಯಣದಿಂ ಬರುತ್ತುಂ ರೈವತನದೀತೀರದೊಳ್ ಬೀಡಂ ಬಿಟ್ಟು ತೊಱೆಯ ಸೈಕತಸ್ಥಳದೊಳ್ ರತ್ನಮಂಟಪಮನೆತ್ತಿಸಿ ಸಿಂಹಾಸನದ ಮೇಲೆ ಮಣಿಮಯ ಜಿನಪ್ರತಿಮೆಯಂ ನಿಲಿಸಿ ಪೂಜಿಸುವ ಸಮಯದೊಳ್

ತೀವಿ ಬರೆ ಭೋಂಕನಾ ನದಿ
ರಾವಣನತಿಸಂಭ್ರಮಾಕುಲಂ ನೆಗೆದು ನಭ
ಕ್ಕಾವುದು ಕಾರಣದಿಂದೀ
ರೈವತ ನದಿ ಬಂದುದೆಂದು ವಿಸ್ಮಿತನಾದಂ ೫೧

ಆಗ ಕಾಲಮಲ್ಲದ ಕಾಲದೊಳೀ ತೊಱೆ ಬಂದ ಕಾರಣಮನಾರಯ್ವುದೆಂದು ದೂತನನಟ್ಟುವುದುಮಾತನದೆಲ್ಲಮನಱಿದು ಬಂದು ಮಾಹಿಷ್ಮತೀಪುರಾಧೀಶ್ವರಂ ಸಹಸ್ರಬಾಹುವೀ ತೊಱೆಯಂ ಜಂತ್ರಂಗಳಿಂ ಕಟ್ಟಿ ನಿಜಾಂತಃಪುರಸಹಿತಂ ನೀರಾಟವಾಡಿ ಜಂತ್ರಂಗಳಂ ಕಳೆಯೆ ಪೊನಲ್ ಕವಿತಂದುದೆಂದು ಬಿನ್ನವಿಸೆ

ತ್ರಿಜಗದ್ಭೂಷಣ ಮಾದ್ಯ
ದ್ಗಜಮಂ ಮುಳಿದೇಱಿ ರಾವಣಂ ನಡೆದಸಹ್ಯ
ದ್ಧ್ವಜಿನಿಯನಿಱಿದೋಡಿಸಿ ರಿಪು ಸಾ
ಮಜದೊಡನೆ ಸಹಸ್ರಬಾಹುವಂ ಸೆಱೆಗೆಯ್ದಂ ೫೨

ಅಂತಾತನಂ ಸೆಱೆಗೆಯ್ದು ನಿಜ ವಿಜಯಶಿಬಿರಕ್ಕೆ ತರ್ಪುದುಮಲ್ಲಿಗಾತನ ತಂದೆವಿರಪ್ಪ ಶತಬಾಹುಗಳೆಂಬ ಜಂಘಚಾರಣರ್ ಧರ್ಮವಾತ್ಸಲ್ಯದಿಂ ಬರ್ಪುದುಂ ದಶಮುಖನಿದಿರೆಟ್ಟು ಭಕ್ತಿಭರದಿಂ ವಂದಿಸಿ ಮಣಿಮಯಾಸನದೊಳಿರಿಸಿ ಕಯ್ಗಳಂ ಮುಗಿದು ಬೆಸನಾವುದೆಂಬುದುಂ ನೀನ್ ಸೆಱೆಗೆಯ್ದ ಸಹಸ್ರಬಾಹುವಂ ಬಿಡುವುದೆನೆ ಮಹಾಪ್ರಸಾದಮೆಂದಾತನಂ ಬರಿಸುವ್ರದುಮಾತಂ ಬಂದು ದಿವ್ಯಮುನಿಗೆ ಪೊಡೆವಟ್ಟು ಕುಳ್ಳಿರ್ಪುದುಂ ಕರಗ್ರಹಣ ಪುರಸ್ಸರಂ ವಿನಯ ವಚನಂಗಳಂ ನುಡಿದು ನಿನ್ನ ರಾಜ್ಯದೊಳ್ ನಿಲ್ವುದೆನೆ ನಾನ್ ತಪೋರಾಜ್ಯಮನಲ್ಲದೆ ರಾಜ್ಯಮನೊಲ್ಲೆ ನೆಂದು ದೀಕ್ಷೆಯಂ ಕಯ್ಕೊಂಡನಿತ್ತಲ್ ಖೇಚರವಿಭು ವಿಜಯಯಾತ್ರೆಗೆ ತಳರ್ದು ನಿಖಿಲ ರಾಜಕಮನೊತ್ತಿ ಕಪ್ಪಂಗೊಳುತ್ತುಂ ಧರ್ಮಮುಂ ಪ್ರತಿಪಾಲಿಸುತ್ತುಂ ಬರುತ್ತುಮಿರೆ ರಾಜಪುರಮನಾಳ್ವ ಮರುತ್ತೆಂಬರಸಂ ಜೀವನಧೆಗೆಯ್ವ ಜನ್ನಮ ನೊಡರ್ಚೆ ಪೆಱರಾರ್ಗಂ ಪೊಡೆವಡದೆ ಪಲವುಂ ಪ್ರಾಣಿಗಳಂ ಕೊಂದಪ್ಪನೆಂದಲ್ಲಿಗೆ ಬಂದು ಯಾಗನಿಮಿತ್ತಂ ಯೂಪಸ್ತಂಭಂಗಳೊಳ್ ಕಟ್ಟಿ ಪಸುಗಳಂ ಗೋಟಿಡೆ ಕೊಂದು ಬೇಳ್ವುದಂ ಕಂಡು ಕೊಂಡಂಗಳನೊಡೆದು ಶಾಲೆಗಳಂ ಕೆಡಪಿ ಯೂಪ ಸ್ತಂಭಂಗಳಂ ಕಡಿದು ಸಕಲ ಋತ್ವಿಜರಂ ಬಡಿದು ಕೊಲಲಿರ್ಪ ಸಮಯದೊಳ್ ಮರುತ್ತೆಂಬರಸನತಿಸಂಭ್ರಮದಿಂ ಪರಿತಂದು ರಾವಣನ ಕಾಲಮೇಲೆ ಬಿಟ್ಟು ಕ್ಷಮೆಗೊಂಡು

ಕನಕಪ್ರಭೆಯಂ ನಿರ್ಜಿತ
ಕನಕ ಪ್ರಭೆಯಂ ಮರುನ್ನರೇಂದ್ರಂ ನಿಜನಂ
ದನೆಯಂ ಖಚರಕುಲಾನಂ
ದನನೆನಿಪ ದಶಾನನಂಗೆ ನಲ್ಮೆಯಿನಿತ್ತಂ ೨೨೩.

ಅಂತು ಮದುವೆನಿಂದು ದಶವದನಂ ಮಹಾಬಲಸಹಿತನಾಗಿ ಪದಿನೆಂಟು ವರ್ಷಕ್ಕೆ ವಿನೀತಾಖಂಡಮಂ ಬಾಯ್ಕೇಳಿಸಿ ಕೈಲಾಸನಗದ ನಿತಂಬದೊಳ್ ಬೀಡುವಿಟ್ಟಿರ್ಪುದುಮಿತ್ತಲ್ .

ಪರಿರಕ್ಷಿಸಿ ದೇವೇಂದ್ರನ
ಶರಧಿ ಶರಾಸನ ತನುತ್ರತತಿಯಂ ನಳಕೂ

ಬರ ದಿಕ್ಪತಿ ದುರ್ಧರ ಭುಜ
ಪರಿಘಂ ದುರ್ಲಂಘ್ಯಪುರದೊಳತಿಬಲನಿರ್ದಂ ೫೪

ಆತಂ ರಾವಣಂ ಮೇಲೆತ್ತಿ ಬರ್ಪುದಂ ನಮ್ಮರಸಂಗಱಿಪೆಂದಟ್ಟಿದ ದೂತ ವಚನದಿನಿಂದ್ರನಱಿದು ಏವಂ ರಾವಣನ್ ಎತ್ತಿ ಬಂದು ಬಲಿದಿರ್ಕೆ ಎಂದು ದೋರ್ವಲಗರ್ವದಿಂ ಬಗೆದನಿಲ್ಲಿತ್ತ ನಳಕೂಬರಂ ಯೋಜನಾಂತರದೊಳಿರ್ದರಂ ನುಂಗುವಂತಪ್ಪ ಬೇತಾಳಯಂತ್ರಂಗಳಿಂ ದೂರದೇಶದೊಳಿರ್ದರ್ಬಟ್ಟಿ ತಿಂಬಂತೆ ಫೂತ್ಕಾರಮುಖರಂಗಳಪ್ಪ ಮಹೋರಗಂಗಳನತಿದೂರದೊಳಟ್ಟಿ ಸುಡುವ ಕೇಸುರಿಯ ಪ್ರಾಕಾರಂಗಳಿಂ ಮತ್ತಮೆನಿತಾನುಂ ತೆಱದುಪದ್ರವಹೇತುಗಳಪ್ಪ ರೌದ್ರಮೃಗಂಗಳಿಂ ತುಱುಗಿ ವಜ್ರಸಾಲಮೆಂಬ ಕೋಂಟೆಯುಂ ವಿಗುರ್ವಿಸಿ ಪೊೞಲ್ಗೆ ದುರ್ಲಂಘ್ಯಪುರಮೆಂಬ ಪೆಸರನನ್ವರ್ಥಂಮಾಡಿ ಪೊಡರ್ಪುಗಿಡದಿರ್ಪುದುಂ

ಅದಱ ತೆಱನಱಿಯದಱಿಯೆಂ
ದುದಾತ್ತಬಲಸಂ ಪ್ರಹಸ್ತನಂ ಪೇೞ್ವುದುಮಂ
ತದನಱಿದು ಬಂದವಂ ದಶ
ವದಸಂಗಾದ್ಯಂತಮಡಱಿಗುರ್ವಂ ಪೇೞ್ದಂ ೫೫

ಅಂತು ಪೇೞ್ದು ನಮ್ಮ ಪಡೆಗಲ್ಲಿಯು ಜಂತ್ರಂಗಳಿಂದುಪದ್ರವಮಾಗದಂತು ತೊಲಗಿ ಬಿಟ್ಟು ಬೞಿಕ್ಕದಂ ಕೊಳ್ವ ತೆಱನಂ ಬಗೆವುದೆಂಬುದುಂ ದಶವದಸನಾ ನುಡಿಯನವಕರ್ಣಿಸಿ ಕೋಂಟೆಯಂ ಕೊಳ್ವುಪಾಯಮನೆ ಬಗೆಯುತ್ತುಮಿರ್ಪುದುಮಿತ್ತಲ್

ನಳಕೂಬರನ ಕುಲಾಂಗನೆ
ವಿಳಾಸವತಿ ರಾವಣಂಗೆ ಪಲಕಾಲಂ ಮು
ನ್ನೆಳಸಿರ್ಪ ಕಾಮಕಾತರೆ
ಕೆಳದಿಗೆ ತಿಳಿವಂತು ತನ್ನ ತೆಱನಂ ಪೇೞ್ದಳ್ ೫೬

ಅಂತು ವಿದ್ಯಾಧರ ಪರಮೇಶ್ವರಿ ಚಿತ್ರಮಾಲೆಗೆ ನಿಜಾಭಿಪ್ರಾಯಮಂ ಕಲಿಸಿ ರಾವಣನಲ್ಲಿಗಟ್ಟುವುದುಂ

ನೀಲ ಪಟಚ್ಛದೆ ನಿಶೆಯೊಳ್
ಲೋಲೇಕ್ಷಣೆ ಗಗನಮಾರ್ಗದಿಂ ರಾವಣನಿ
ರ್ದಾಲಯಮಂ ವಿಜಯಶ್ರೀ
ಲೀಲೆಯಿನಾ ಚಿತ್ರಮಾಲೆ ಬಂದೊಳಪೊಕ್ಕಳ್ ೫೭

ಅಂತು ಪೊಕ್ಕು ರಾವಣನ ಕೆಲಕ್ಕೆ ವಂದು

ಉಪರಂಭೆಯೆಂಬಳೆಮ್ಮರ
ಸಿ ಪೋಲಿಪೊಡೆ ರಂಭೆಗಗ್ಗಳಂ ಚೆಲ್ವಿಂದಾ
ರುಪಮೆಗೆ ಪೆಱರೆನಿಪಳ್ ಪೀ
ನ ಪಯೋಧರೆ ನಿನ್ನ ಸಾರ್ಕೆಗಟ್ಟಿದಳೆನ್ನಂ ೫೮

ಪಲವು ದಿನಂ ನಿನ್ನೊಳ್ ತೊ
ಟ್ಟೊಲವಿಂದಾ ಚೆನ್ನೆ ನಿನ್ನನನವರತಂ ಪಂ
ಬಲಿಸುತ್ತುಂ ಚಿತ್ತೋದ್ಭವ
ನಲರಂಬುಗಳುರ್ಚೆ ನಾಡೆ ಪಾಡಱಿದಿರ್ದಳ್ ೫೯

ಏವೊಗಳ್ವೆನತನುವಿದ್ಯಾ
ದೇವತೆ ನಿರತಿಶಯಮೆನಿಪ ರೂಪಿಂ ವಿದ್ಯಾ
ದೇವತೆ ಸಾಮರ್ಥ್ಯದಿನೆನಿ
ಪಾ ವಧು ಬರೆ ದೇವ ನಿನಗೆ ತೀರದುದುಂಟೇ ೬೦

ಎನೆ ದಶಾನನಂ ಪೞಿಯುಂ ಪಾಪಮುಮಪ್ಪ ದುಶ್ಚರಿತ್ರಮನೇವೆಸೆಂದು ಮನದೊಳೆ ನಿಶ್ಚಯಿಸಿ ವಿಭೀಷಣನಂ ಬರಿಸಿ ರಹಸ್ಯದೊಳದನಱಿಪುವುದುಮಾತಂ ವಿದ್ಯಾಪ್ರಾಕಾರಮಂ ಕಿಡಿಸುವಂತುಟಂ ಪ್ರತಿವಿದ್ಯೆಯನಾಕೆಯುಂ ಬರಿಸಿ ಪುಸಿದು ನಂಬಿಸಿ ಕಲ್ತುಕೊಳ್ವುದೆನೆ ರಾವಣನಾ ದೂದವಿಗೆ ನಿನ್ನ ನುಡಿಗೊಡಂಬಟ್ಟೆನಾಕೆಯಂ ತಾಯೆಂದು ವಕ್ರೋಕ್ತಿಯಿಂ ನುಡಿವುದುಮಾ ಕ್ಷಣದೊಳೆ ಪೋಗಿ ಬೇಗಂ ತರ್ಪುದುಮುಪರಂಭೆಗೆ ಪುಸಿನಣ್ಪಿದೋಱಿ ನಿನಗಮೆನಗಂ ದುರ್ಲಂಘ್ಯಪುರದೊಳ್ ಕೂಟಮಪ್ಪಂತು ಮಾಡೆನೆ ಮನದೆ ಕೊಂಡಂತೆಗೆಯ್ವೆನೆಂದು ಸಾಲ ವಿದ್ಯಾಭೇದಿನಿಯುಂ

ಪ್ರತಿವಿದ್ಯೆಯನಾಕೆ ಕುಲ
ಕ್ಷತಿಯುಂ ಪತಿಗಪ್ಪ ಹಾಸಿಯುಂ ಬಗೆಯದೆ ದು
ರ್ಮತಿ ಕೊಟ್ಟಳದೆನ್ನರುಮಂ
ಮತಿಗಿಡಿಪುದು ಚೋದ್ಯಮಲ್ತು ಮದನೋನ್ಮಾದಂ ೬೧

ಅಂತಾಕೆಯ ಕಯ್ಯೊಳಾ ವಿದ್ಯೆಯುಂ ಕೊಂಡು ಕಟಿಪಿ ಮಱುದೆವಸಂ ಸಾಲವಿದ್ಯೆಯಂ ಪ್ರತಿವಿದ್ಯೆಯಿಂ ಕಿಡಿಸಿ ದುರ್ಲಂಘ್ಯಪುರಮಂ ರಾವಣಂ ಮುತ್ತುವುದುಂ

ಸೆರಗಂ ಬೆರಗಂ ಬಗೆಯದೆ
ಪುರಮಂ ಪೊಱಮಟ್ಟು ಕಾದುವಾಗಳ್ ನಳಕೂ
ಬರನಂ ವಿಭೀಷಣಂ ಮದ
ಕರಿಯಂ ಮೃಗವೈರಿ ಪಿಡಿವ ತೆಱದಿಂ ಪಿಡಿದಂ ೬೨

ಆ ಸಮಯದೊಳ್

ದನುಜಾಧೀಶ್ವರನ ಪುರಾ
ತನ ಪುಣ್ಯದ ಫಲದಿನಾಯುಧಾಗಾರದೊಳೇಂ
ಜನಿಯಿಸಿದುದೊ ವಿದ್ವಿಷ್ಟಾ
ವನಿಪಾಲ ಪ್ರಳಯಕಾಲಚಕ್ರಂ ಚಕ್ರಂ ೬೩

ಅಂತು ಸುದರ್ಶನಚಕ್ರಂ ಪುಟ್ಟುವುದುಂ ರಾವಣಂ ಮಹೋತ್ಸವದಿಂ ಚಕ್ರಪೂಜೆಯಂ ಮಾಡಿ ರಹಸ್ಯದಿಂದಾಕೆಯಂ ಕರೆದು ನೀನ್ ವಿಶುದ್ಧಕುಲದ ಕುಶಧ್ವಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮಂ ಬಗೆದು ಶೀಲಪರಿಪಾಲನಂ ಮಾೞ್ಪುದಂತಲ್ಲದೆಯುಂ ನೀನೆನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾದೆ ಪೆಱತೇನುಮಂ ಬಗೆಯದೆ ನಳಕೂಬರನೊಳ್ ಕೂಡಿ ಸುಖಮಿರೆಂದಾಕೆಯ ದುಷ್ಪರಿಣಾಮಮಂ ಪತ್ತುವಿಡಿಸಿ

ನಳಕೂಬರನುಮನಾಕ್ಷಣ
ದೊಳೆ ಬರಿಸಿ ನಿಜಾಗ್ರತನಯನಿಂದಗಿಯಿಂದ

ಗ್ಗಳವೆನೆ ಮನ್ನಿಸಿ ಭಯಮಂ
ಕಳೆದಿತ್ತಂ ಭೃತ್ಯಪದವಿಯುಂ ದಶವದನಂ ೬೪

ಅಂತಾತಂ ಬೆರಸು ವಿಜಯಾರ್ಧನಗಕ್ಕೆತ್ತೆ ಇಂದ್ರಂ ಕೇಳ್ದು ಸಮರಸನ್ನಾಹ ಭೇರಿಯುಂ ಪೊಯಿಸಿ ರಣಭೂಮಿಯೊಳ್ ಬಲಿದೊಡ್ಡಿ ನಿಲ್ವುದುಂ ರಾವಣಂ ನಿಜವಾರಣದಿನಿಂದ್ರನೈರಾವಣದ ಮೇಲೆ ಪಾಯ್ದು ಮುಂದಣಾಧೋರಣನಂ ಚರಣಪ್ರಹಾರದಿಂ ಸೆಲಕಿಕ್ಕಿ ಮಾತಂಗದ ಮೇಲೆ ಪಾಯ್ವ ಸಿಂಹದಂತಿಂದ್ರನ ಮೇಲೆ ಪಾಯ್ದವಸಂ ಮೇಲುಂದಱ ಸೆಱಂಗಿನೊಳಡಸಿ ಕಟ್ಟಿ ಕೊಲ್ವನಲ್ಲೆನ್ ಅಂಜದಿರೆಂದಭಯಮನಿತ್ತು ನಿಜಸಿಂಧುರಕ್ಕೆ ಮಗುಳ್ದುಯ್ದನಾ ಸಮಯ ದೊಳಿಂದ್ರನ ಮಗನಪ್ಪ ಜಯಂತನನಿಂದ್ರಜಿತ್ಕುಮಾರಂ ಬಾಡ್ದಲೆದಂದೀಯೆ ರಾವಣನಭಯಘೋಷಣೆಯಂ ಮಾಡಿಸಿ ಮಹಾವಿಭವದಿಂ ಬಂದು ಲಂಕೆಯಂ ಪೊಕ್ಕು ಸುಖದಿನಿರೆ

ಪರಿಜನಮುಮುಪಾಯನಮುಂ
ಬೆರಸು ಸಹಸ್ರಾರನಾತ್ಮತನಯನ ಮೋಹಂ
ತರೆ ತನ್ನಂ ಬಂದು ದಶ
ಶಿರನಲ್ಲಿಗೆ ಮುಂದುಗಾಣ್ಬನೇ ಮೋಹಾಂಧಂ ೬೫

ಅಂತು ಬಂದು ಲಂಕಾಪುರಮಂ ಪುಗುವುದುಮುಚಿತ ಪ್ರತಿಪತ್ತಿಯಿಂ ಕಾಣಿಸಿಕೊಂಡು ಸಹಸ್ರಾರನಂ ನಿಜಜನಕನಿಂದಧಿಕವಾಗೆ ಮನ್ನಿಸಿ ಮಣಿ ಮಯಾಸನದೊಳಿರಿಸಿ ವಿನಯವಿನಮಿತಂ ಬೆಸನಾವುದೆನೆ ಸಹಸ್ರಾರಂ

ನಿನಗೆಡೆಱದಿಂದ್ರನಂ ಗೆ
ಲ್ದು ನಿನ್ನ ಭುಜಬಲದ ಮಹಿಮೆಯಂ ಬೀಱದೆ ಜೀ
ಯೆನಿಸಾತನ ಸೆಱೆಯಂ ಬಿ
ಟ್ಟು ನಿನ್ನ ತಕ್ಕೂರ್ಮೆ ಬಣ್ಣಿಸಲ್ ಬಾರದೆನಲ್ ೬೬

ಎನೆ ದಶಾಸನಂ ಮಹಾಪ್ರಸಾದಮಂತೆಗೆಯ್ವೆನೆಂದಿಂದ್ರನಂ ಬರಿಸಿ ನಿಷ್ಕಪಾಯಂ ನಿನ್ನ ರಾಜ್ಯದೊಳ್ ಸುಖಮಿರೆಂದು ಕಳಿಪುವುದುಂ ರಾವಣಂಗೆ

ನಿಶ್ಶಲ್ಯನಾಗಿ ತನ್ನ ಪೊೞಲ್ಗೆ ವಂದು ಇಂದುವೆಂಬ ತನ್ನ ಪಿರಿಯ ಮಗಂಗೆ ರಾಜ್ಯಮಂ ಕೊಟ್ಟು ತನ್ನ ಮಗನಪ್ಪ ಜಯಂತನುಂ ತನ್ನ ಲೋಕಪಾಲರುಂ ಬೆರಸು ದೀಕ್ಷೆಗೊಂಡು ಮೋಕ್ಷಕ್ಕೆ ಪೋದನಿತ್ತಲ್ ವಿಯಚ್ಚರೇಂದ್ರಂ ವರುಣನ ಮೇಲೆ ನಡೆಯಲೆಂದು ಸಮಸ್ತ ಸಾಮಂತರಂ ಬರಿಸಿ ಹನುಮರ ದ್ವೀಪಕ್ಕೆ ದೂತನನಟ್ಟುವುದುಮಾತಂ ಬಂದು ಪ್ರತಿಸೂರ್ಯನುಮಂ ಪವನಂಜಯನುಮಂ ಕಂಡು ನಿಜಾಗಮನವೃತ್ತಾಂತಮನಱಿಪುವುದುಂ ಪವನಂಜಯನಾಂಜನೇಯನಂ ಬರಿಸಿ

ವರುಣಂ ಬಾಯ್ಕೇಳನೆಂಬೀ ಮುನಿಸನುವಿಸೆ ಮೇಲೆತ್ತಲೆಂದೀಗಳೆಮ್ಮಂ
ಬರವೇೞ್ದಂ ದಾನವೇಂದ್ರಂ ತಡೆವುದು ಪದನಲ್ತೊಪ್ಪುಗೊಳ್ ರಾಜ್ಯರಕ್ಷಾ
ಭರಮಂ ನೀನೆಂಬುದುಂ ಮಾರುತಿ ಮುಕುಳಿತ ಹಸ್ತಾಂಬುಜಂ ವೀರಲಕ್ಷ್ಮೀ
ಪರಿರಂಭೋತ್ಸಾಹದಿಂದಾ ಬೆಸನನತಿಬಳಂ ತಂದೆಯಂ ಬೇಡಿಕೊಂಡಂ ೬೭

ಅಂತು ಬೇಡಿಕೊಂಡು ವಿಮಾನಾರೂಢನಸಂಖ್ಯಾತ ಬಲಸಮೇತಂ ಬರ್ಪ ಸಮಯದೊಳ್ ರಾವಣಂ ಗಗನಮಂಡಲದೊಳಿರ್ದು ಹನುಮನ ಬರವಂ ಕಂಡು

ಇದಿರ್ವರೆ ತಾನುಮುತ್ಸುಕತೆಯಿಂದಿದಿರ್ವಂದು ಮರುತ್ಸುತಂ ಪದ
ಕ್ಕೊಂದವಿದ ಭಕ್ತಿಯಿಂ ಮಣಿಕಿರೀಟ ಮರೀಚಿಯಿನೀಯೆ ಪಾದ್ಯಮಂ
ಪದಪಿನಳುರ್ಕೆಯಿಂ ತೆಗೆದು ತಕ್ಕಿಸೆ ದಾನವ ಚಕ್ರವರ್ತಿಗಾ
ದುದು ರಿಪುಚಕ್ರಮಂ ತವಿಪುದಿನ್ನೆನಗಾವರಿದೆಂಬ ಸಂತಸಂ ೬೮

ಅಂತಾತನಂ ಕಾಣಿಸಿಕೊಂಡು ದಶವದನಂ ನಡೆದು ಪಾತಾಳ ಪುಂಡರೀಕ ಪುರಮಂ ಮೂವಳಸಾಗೆ ಸುತ್ತಿ ಮುತ್ತೆ ವರುಣನತಿಕುಪಿತನಾಗಿ ಪೊಱಮಡುವುದುಮೊಡನೆ ನೂರ್ವರ್ ವರುಣಕುಮಾರರ್ ಪೊಱಮಟ್ಟು ಆಸುಂಗೊಳೆ ಕಾದೆ ದಶಮುಖಚತುರಂಗಬಲಂ ಬೆಂಗೊಡೆ ಹನುಮನೆಡೆವೊಕ್ಕು ತನ್ನ ಸೇನೆಯಿಂ ರಿಪುಸೇನೆಯಂ ಸುತ್ತಿ ಮುತ್ತಿ ವಾನರವಿದ್ಯೆಯಿನಾಂತ ಬಲಮಂ ಕೃತಾಂತನಂತೆ ತವಿಸಿ ಕುಮಾರರ್ ನೂರ್ವರುಮಂ ಪಿಡಿದು ಕಟ್ಟುವುದುಂ ವರುಣಂ ಕಂಡು

ನೆನೆಯದೆ ಕಲುಷವಶಂ ನ
ಚ್ಚಿನ ವಿದ್ಯೆಗಳಂ ಕಡಂಗಿ ಕಾದುವ ಪದದೊಳ್
ದನುಜೇಂದ್ರಂ ಪಿಡಿದಂ ವರು
ಣಸನಾವಂ ರಾವಣಂಗೆ ಕೂರ್ಪಂ ತೋರ್ಪಂ ೬೯

ಅಂತಾತನಂ ಪಿಡಿದು ಕುಂಭಕರ್ಣಂಗೆ ಸೆಱೆಯನೊಪ್ಪಿಸಿ ಬೀಡಂ ಬಿಟ್ಟೋಲಗಂಗೊಟ್ಟಿರ್ದು ವರುಣನಂ ಬರಿಸಿ

ಕಲಿ ಸಾವಂ ಪಿಡಿವಡೆವಂ
ಕಲಹದೊಳಿದು ಭಂಗಮಲ್ತು ನೀನ್ ಮುನ್ನಿನವೋಲ್
ನೆಲಸಿರ್ಪುದು ನಿಜರಾಜ್ಯದೊ
ಳೊಲವಿಂದೆಂದೊಸೆದು ವರುಣನಂ ಮನ್ನಿಸಿದಂ ೭೦

ಅಂತು ಮನ್ನಿಸಿ ಕರಗ್ರಹಣಂಗೆಯ್ದು ಕಾರುಣ್ಯಮನಱಿಪುವುದುಂ ವರುಣಂ ಹನುಮನ ನೆರಗಿಲ್ಲದ ಬಲ್ಲಾಳ್ತನಮುಂ ಪೊಗೞ್ದು ಸತ್ಯವತಿಯೆಂಬ ತನ್ನ ಮಗಳಂ ರಾವಣಂಗೆ ಮಹಾವಿಭವದಿನಿತ್ತು ತನ್ನ ಪೊೞಲ್ಗೆವೋದನಿತ್ತ ಲಂಕೆಗೆ ವಂದು

ಭರತ ತ್ರಿಖಂಡಮುಂ ದಶ
ಶಿರನಾಳ್ದಂ ಚಕ್ರರತ್ನಮುಸಿರತ್ನಂಗಳ್
ದೊರೆಕೊಂಡುವಖಿಲವಿದ್ಯಾ
ಧರವಲ್ಲಭರೆಲ್ಲರುಂ ಪದಾನತರಾದರ್ ೭೧

ಆ ಕ್ರೋಧೋದ್ಧತನಪ್ಪ ರಾವಣನೊಳಾವಂ ಕಾದುವಂ ಯುದ್ಧದೊಳ್
ಶಕ್ರಂಗಂ ತ್ರಿಜಗದ್ವಿಭೂಷಣಗಜಂ ಕೊಂದಿಕ್ಕಲೇಂ ಸಾಲದೇ
ಚಕ್ರಕ್ಕಂ ಪರಚಕ್ರಮುಂಟೆ ಸಕಲೋರ್ವೀಚಕ್ರದೊಳ್ ವಿದ್ವಿಷ
ಚ್ಚಕ್ರಂ ತೋರ್ಕುಮೆ ಚಂದ್ರಹಾಸದಿದಿರೊಳ್ ಮಾಱಾಂತು ವಿಕ್ರಾಂತ
ಮಂ ೭೨

ನಿಖಿಲ ಕ್ಷತ್ರಕುಲಂ ವಿಯಚ್ಚರಕುಲಂ ಸಂಗ್ರಾಮಕೇಳೀ ಪರಾ
ಙ್ಮುಖವಾತ್ಮಪ್ರತಿಬಿಂಬದಂತೆ ಬೞಿಸಂದಾಜ್ಞಾವಿಧೇಯಂ ಗುಹಾ

ಮುಖದಂತೆಂದುದನೆನ್ನದಂದು ನವರಕ್ತಾಸಕ್ತ ನಕ್ತಂಚರೀ
ಮುಖದೊಳ್ ತೂಂತುವುದಾಂತರಂ ದಶಮುಖೋತ್ಖಾತಾಸಿಧಾರಾಮುಖಂ

ಬಲದ ಭುಜಬಲದ ವಿದ್ಯಾ
ಬಲದ ಮನೋಬಲದ ಬಲ್ಪಿನಿಂ ನೃಪರಾರ್ಗಂ
ಗೆಲಲರಿಯಂ ದಶಕಂಧರ
ನಲಂಘ್ಯ ವಿಕ್ರಾಂತ ತುಂಗನಮರೇಂದ್ರಂಗಂ ೭೪

ಎಂಬುದುಂ ಲಕ್ಷ್ಮಣಂ ಮುಳಿಸುವೆರಸಿದ ಮುಗುಳ್ನಗೆ ಪಸರಿಸೆ

ಅದಟಂ ರಾವಣನೆಂಬುದಂ ನುಡಿದು ತೋಱಲ್ ವೇಳ್ಪುದೇ ಕಾದಲ
ಣ್ಮದೆ ಕಳ್ದುಯ್ದುದೆ ಪೇೞ್ಗುಮಂಬಿಕೆಯನಾತಂ ಭೀತನಿಕ್ಷ್ವಾಕು ವಂ
ಶದರಂ ಗೆಲ್ಗುಮೆ ರಾಮರಾವಣರ ಬಲ್ಪಂ ಮೆಲ್ಪುಮಂ ಕಾಣಲ
ಪ್ಪುದು ಘಟ್ಟೋತ್ಥಿತಱುವಲ್ಲಿ ದಿಟ್ಟಿದೊಲೆಯಿಂ ತೂಗಿಂ ರಣಕ್ಷೋಣಿಯೊಳ್ ೭೫

ನಡೆವುದಿಳೇಶನೊಳ್ ತೊಡರದನ್ನೆಗಮಾತನ ಗಂಡಗರ್ವಮಿನ್
ನಡೆಗುಮೆ ರಾಮನಂಬು ನೆಱನಂ ನಡೆ ಕಾಲ್ನಡೆಗೆಟ್ಟು ನಿಲ್ಕುಮಾ
ನುಡಿ ತಡಮಲ್ತು ನಾಳೆಯೆ ರಣಾಂಗಣದೊಳ್ ನಡೆ ನೋಡುವಿರ್ ಮರು
ಳ್ವಡೆಯೊಡಗೂಡಿ ತಾಂಡವಮನಾಡುವ ರಾವಣನಟ್ಟೆಯಾಟಮಂ ೭೬

ಎನೆ ಜಾಂಬವತ್ಪ್ರಮುಖ ಪ್ರಧಾನರ್

ಎಮಗಧಿರಾಜನಾಗಿ ಖಚರೋರ್ವಿಗೆ ವಲ್ಲಭನಾಗಿ ಖೇಚರ
ಪ್ರಮದೆಯರಂ ಮನಂಗೊಳಿಸಿ ರಾಜ್ಯವಿಲಾಸಮನಪ್ಪುಕಯ್ದನಂ
ಕ್ರಮದೊಳೆ ದಂಡಮೊಂದುಟಿಯೆ ಭೇದಿಸಿ ತರ್ಪುದು ದೇವಿಯಂ ಪರಾ
ಕ್ರಮದೆಡೆಯಲ್ತು ಪೊಲ್ಲದು ದುರಾಗ್ರಹಮಾತನೊಳಾಗ ವಿಗ್ರಹಂ ೭೭

ಎಂಬುದುಂ ರಘುವೀರಂ

ಆತಂಗೆ ನೆಱೆಯಲಾಱದ
ಭೀತರ ನೆರವೇವುದೆನಗೆ ಮೊನೆಯೊಳ್ ದನುಜಂ
ಗಾತಂಕಮನೊಡರಿಸಲನು
ಜಾತ ಭುಜೋತ್ಖಾತ ಖಡ್ಗಮಿದೆ ನೆರಮಲ್ತೇ ೭೮

ಅಸದನುಶಾಸನಂ ರಘುಕುಲಕ್ಕೆ ಕುಲವ್ರತಮನ್ಯಕಾಂತೆಗಾ
ಟಿಸಿದ ದುರಾತ್ಮನಂ ರಣದೊಳಣ್ಮಿದನಪ್ಪೊಡಮೋಘ ಬಾಣದಿಂ
ದೆಸೆವಲಿಗೆಯ್ವೆನಳ್ಕಿ ರಣಕೇಳಿಗೆ ಜಾನಕಿಯಂ ದಶಾಸ್ಯನೊ
ಪ್ಪಿಸಿದೊಡೆ ಕಾವೆನಿಲ್ಲಿ ನಿಮಗಂ ನಮಗಂ ಪದನಲ್ತು ಮಂತಣಂ ೭೯

ಸೆರಗಂ ಪಾರದುದಾತ್ತ ರಾಘವನ ಮಾತಂ ಕೇಳ್ದು ಜಾಂಬೂನದಂ
ಪಿರಿದುಂ ವಿಸ್ಮಯಮುತ್ತು ಕಾದಿ ರಣದೊಳ್ ಪೌಲಸ್ತ್ಯನಂ ಗೆಲ್ವ ದು
ರ್ಧರ ಬಾಹಾಬಲಮಂ ಪರೀಕ್ಷಿಸುವೆನೆಂಬೀ ಚಿತ್ತದಿಂ ಪೇೞಲಾ
ತುರನಾದಂ ದನುಜಂಗೆ ದಿವ್ಯಮುನಿಗಳ್ ಮುನ್‌ಪೇೞ್ದ ವೃತ್ತಾಂತಮಂ ೮೦

ದೇವ ಮುನ್ನಮೊರ್ಮೆ ದಶಗ್ರೀವನನಂತವೀರ್ಯ ಕೇವಲಿಗಳ ಚರಣೋಪಾಂತದೊಳ್ ಧರ್ಮಮಂ ಕೇಳ್ದೆನಗೆ ಪೆಱರ ಕಯ್ಯೊಳ್ ಮರಣಮಕ್ಕುಮಾಗದೆಂಬುದಂ ಬೆಸಸಿಮೆನೆ ನಿನಗೆ ಸಿದ್ಧಶೈಲಮನೆತ್ತಿದನ ಕಯ್ಯೊಳ್ ಮರಣಮಕ್ಕುಮೆನೆ ಸಿದ್ಧನಗಮನುದ್ಧರಿಸುವ ಮಹಾಸತ್ವನಾವನುಮಿಲ್ಲದುದಱಿನೆನಗೆ ಮರಣಮಿಲ್ಲೆಂದು ಹರ್ಷಿತಚಿತ್ತನಾದನೆಂಬುದುಂ ಲಕ್ಷ್ಮಣದೇವನಿಂತೆಂದಂ

ಕುಲನಗಮಂ ನೆಗಪುವ ದೋ
ರ್ವಲಕ್ಕೆ ನಿರ್ವಾಣ ಶೈಲಮೇಗಹನಮುದಂ
ಚಲಿಯಿಸುವೆನಚಲವಚನಂ
ಪಲಾಲಮಸ್ವರ್ಥನಾಮಮಲ್ತೆಂಬಿನೆಗಂ ೮೧

ಎಂಬುದುಮಾ ಮಾತಂ ಮನದೆಕೊಂಡು ಜಾಂಬೂನದನುಂ ವಿಮಲ ಬುದ್ಧಿ ಸುಗ್ರೀವ ನಳ ನೀಲಾರ್ಕಮಾಲಿಗಳುಂ ರಹಸ್ಯದಿಂ ರಾಮಲಕ್ಷ್ಮಣರಂ

ವಿಮಾನಮನೇಱಿಸಿಕೊಂಡು ವಿಯನ್ಮಾರ್ಗದೊಳೆ ಪೋಗಿ ನಿರ್ವಾಣ ನಗಮನೆಯ್ದಿ
ಬಲವಂದರ್ಚಿಸೆ ಸೌಮಿತ್ರಿ ಸಿದ್ಧಗುಣ ಸ್ತವನಂ ಮಾಡಿ

ಪದಘಾತಕ್ಕೆ ಧರಿತ್ರಿ ಬಾಯ್ವಿಡೆ ಭುಜಾದಂಡಂಗಳಂ ಸಾರ್ಚಿ ಬಿ
ರ್ಚಿದಿಳಾಸಂಧಿಗೆ ಮೆಯ್ವೊಣರ್ಚಿ ನೆಲೆಯಿಂದಕ್ಷೂಣ ಸತ್ವಂ ತಳ
ರ್ಚಿ ದಶಗ್ರೀವನ ಕಂಠಕಂದಳದ ಬೇರಂ ಕೀಳ್ವವೊಲ್ ಕಿೞ್ತನೆ
ತ್ರಿದಶೊಟ್ಟೈಸಿದನಿನ್ನರಾರೆನಲುಪೇಂದ್ರಂ ಸಿದ್ಧಶೈಲೇಂದ್ರಮಂ ೮೨

ಗಿರಿ ನಿರ್ಝರ ಪ್ರವಾಹಂ
ಸುರಿದುದು ಭರತತ್ರಿಖಂಡರಾಜ್ಯಾಭಿಷವಂ
ದೊರೆಕೊಂಡಪ್ಪುದು ದಶಕಂ
ಧರ ವಧೆಯಿಂದೆಂದು ಮುಂದೆ ತೋರ್ಪಂತಾಗಳ್ ೮೩

೬. ಲಂಕಾದಹನಂ

ಸುರ ಕುಸುಮ ವೃಷ್ಟಿ ಸುರ ತೂ
ರ್ಯರವಂ ಸುರ ಜಯಜಯಸ್ವನಂ ಕಯ್ಮಿಗೆ ವಾ
ಸರಚಿಹ್ನ ಪ್ರಮುಖ ವಿಯ
ಚ್ಚರ ಪತಿಗಳ್ ತಮ್ಮ ಮನದೊಳಚ್ಚರಿವಟ್ಟರ್ ೧

ಆಗಳ್ ಪದ್ಮದೇವಂ

ಎಡೆಯಱಿಯದಿನ್ನೆವರೆಗಂ
ತಡೆದನ್ನೆಯಮೊಂದೆ ಸಾಲದೇ ಜಾನಕಿಯಿ
ರ್ದೆಡೆಯಱಿದು ಲಂಕೆಗೆತ್ತದೆ
ತಡೆಯೆ ಪರಾಕ್ರಮದ ಪೆರ್ಮೆ ಪಟಿಗೆಡೆಯಕ್ಕುಂ ೨

ಎನೆ ಜಾಂಬವಂ

ನಯಮಂ ತಮಗಱಿಪಿದೊಡ
ನ್ನೆಯಮಂ ಬಿಡದನ್ನರಿಲ್ಲ ರಾಗಾದಿಗಳೇಂ

ನಿಯತಂಗಳೆ ಕನ್ನಡಿಯಂ
ಪ್ರಯತ್ನದಿಂ ಬೆಳಗೆ ಪತ್ತುವಿಡದೆ ಕಲುಂಬಂ ೩

ದನುಜನನುಜಂ ಶುದ್ಧಾಚಾರಂ ವಿಚಾರಪರಂ ಪರಾಂ
ಗನೆಯುನವನೀನಾಥಂ ತಾಂಗಲ್ಕೆ ತಕ್ಕುದೆ ತಕ್ಕುದಂ
ನೆನೆದು ಕಟಿಪೆಂದೊಳ್ಪಂ ಪೇೞ್ದಣ್ಣನಂ ಜಡಿದಟ್ಟುಗುಂ
ಜನಕಸುತೆಯಂ ಮಾಱಂ ದೈತ್ಯಂ ವಿಭೀಷಣನೆಂದುದಂ ೪

ಅಟ್ಟಲೆವೇೞ್ಪುದೊರ್ವಗೆ ವಿಭೀಷಣನಲ್ಲಿಗೆ ನಮ್ಮ ನಣ್ಪಿನ
ಟ್ಟಟ್ಟಿಯ ಮಾತನಟ್ಟಿದೊಡೆ ದೇವಿಯನಾತನ ಮಾತುಗೇಳ್ದು ಬಿ
ಟ್ಟಟ್ಟುಗುಮುರ್ಕಿ ಸೊರ್ಕಿ ದಶಕಂಠನುದಂಚಿತಕಂಠನಾಗಿ ಬಿ
ಟ್ಟಟ್ಟದೆ ಬೆಟ್ಟವೆಟ್ಟನುಸಿರ್ದಟ್ಟಿದೊಡಿರ್ದಪುದಲ್ತೆ ಕಾಳೆಗಂ ೫

ದೂತನನಟ್ಟುವುದೆಂತುಂ
ನೀತಿಯೆ ನಿಜಕುಶಲವಾರ್ತೆಗೇಳದೊಡಕ್ಕುಂ
ಸೀತಾದೇವಿಗೆ ಮರಣಮು
ದೇತೊದಳತಿದುಃಖ ವೇಗದಿಂದಾಗದುದೇಂ ೬

ಎಂಬುದುಮಾ ನುಡಿಗೆ ಮಹೋದಧಿ

ಮಾರುತ ದಿನಕರ ಕರ ಸಂ
ಚಾರಕ್ಕಮಗಮ್ಯಮೆಂಬಿನಂ ವಿದ್ಯಾಪ್ರಾ
ಕಾರಮನೀಗಳೊಡರ್ಚಿದ
ನಾ ರಾಕ್ಷಸಪತಿಯು ಪುರವನಾವಂ ಪುಗುವಂ ೭

ಅದಱನೀಗಳಿಲ್ಲಿರ್ದ ವಿದ್ಯಾಧರರೊಳೊರ್ವರುಂ ಲಂಕೆಗೆ ಪೋಗಲುಂ ಪೋಗಿ ಕಾರ್ಯಮಂ ತೀರ್ಚಿ ಬರಲುಂ ಸಮರ್ಥರಿಲ್ಲವೊರ್ವಸತ್ತ್ವಲಿರ್ದಪನಜೇಯಬಲನಾಂಜನೇಯಂ

ದನುಜಂ ಮನ್ನಿಸುವಂ ವಿಭೀಷಣನುಮಾತಂಗೊಳ್ಳಿದಂ ಲಂಕೆಯಂ
ಘನ ಬಾಹಾಬಲದಿಂ ವಿಭೇದಿಸಿ ಪುಗಲ್ ಸಾಮರ್ಥ್ಯಮುಂಟಂಜನಾ
ತನಯಂಗಾತನೆ ದೇವಿಯಂ ಬಿಡಿಸಿ ತರ್ಕುಂ ಕಾದಿ ತರ್ಕುಂ ದಶಾ
ನನನೊಟ್ಟೈಸಿದನಪ್ಪೊಡೀ ಕೆಲಸಮಾತಂಗಲ್ಲದೇಂ ಸಾಧ್ಯಮೇ ೮

ಎಂಬುದುಮಾ ನುಡಿಗೆ ಸಂತೋಷಂಬಟ್ಟು ಮಹೋದಧಿಗೆ ಮೆಚ್ಚುಗೊಟ್ಟು ಸುಗ್ರೀವಂ ದೂತನಂ ಹನುಮನಲ್ಲಿಗಟ್ಟುವುದುಮಾತಂ ಗಗನಮಾರ್ಗದಿಂ ಹನುಮರ ದ್ವೀಪಮನೆಯ್ದಿ ವೃತ್ತಾಂತಮಂ ಬಿನ್ನವಿಸುವುದುಂ

ಎನಗವಮರಿದಪ್ಪ ಸುಗ್ರೀ
ವನ ಪಗೆಯಂ ತೀರ್ಚಿ ಮಾಡಿದುಪಕಾರಕ್ಕೆ
ನ್ನನೆ ರಾಮಲಕ್ಷ್ಮಣರ್ಗೀ
ವೆಸೆಂದು ನಿಶ್ಚಯಿಸಿದಂ ಪ್ರಭಂಜನ ತನಯಂ ೯

ಅಂತು ನಿಶ್ಚಯಿಸಿ ವಿಮಾನಮನೇಱಿ ಕಿಷ್ಕಿಂಧ ಪುರಾಭಿಮುಖನಾಗಿ ತಳರ್ವುದುಂ ಸುಗ್ರೀವನಿದಿರ್ಗೊಂಡು ರಘುತನೂಜನ ರಾಜಮಂದಿರಕ್ಕುಯ್ವುದುಂ ಉಪಾಯನ ಪುರಸ್ಸರಂ ರಾಮಲಕ್ಷ್ಮಣರ ಚರಣಂಗಳ್ಗೆಱಗಿ ಮಣಿಮಯಾಸನದೊಳ್ ಕುಳ್ಳಿರ್ದ ರಾಮಚಂದ್ರಂಗೆ ದೇವ ಭವಜ್ಜನ್ಮಮಖಿಲ ಜಗದುಪಕಾರ ನಿಮಿತ್ತಮಾದುದು ನಮ್ಮ ಕಪಿಧ್ವಜ ಕುಲಕ್ಕೆ ಪರಮೋಪಕಾರಮಂ ಮಾಡಿದಿರ್ ಅದುಕಾರಣದಿನೆಮಗುಚಿತಂ ನಿಜಸೇವಾಪ್ರಮೋದಂ ಎಂದು ಬಿನ್ನವಿಸೆ

ಧೀರಪ್ರಕೃತಿಗೆ ಸೌಮ್ಯಾ
ಕಾರಕ್ಕನುಗುಣಮೆನಿಪ್ಪ ನಯ ವಿನಯ ಪಚ
ಸ್ಸಾರತೆಗೆ ಮೆಚ್ಚಿ ರಘುಕುಲ
ವೀರಂ ಕಾರುಣ್ಯ ದೃಷ್ಟಿಯಿಂದೀಕ್ಷಿಸಿದಂ ೧೦

ಅಪರಿಮಿತವೆನಿಪ ಕಾರು
ಣ್ಯಪಯಸ್ಸಾಗರ ಸಮುದ್ಭವಂಗಳನಿತ್ತಂ

ನೃಪರತ್ನಂ ಭಟರತ್ನಂ
ಗಪೂರ್ವಮಂ ರತ್ನ ಕರ್ಣಕುಂಡಲ ಯುಗಮಂ ೧೧

ಅಂತು ಮೆಚ್ಚುಗುಡುವುದುಂ ಮಹೋದಧಿ

ನೀನಿಲ್ಲದಿನಿಬರುಂ ಲಂ
ಕಾ ನಗರಿಗೆ ಪೋಗಿ ನುಡಿದು ದಶಕಂಧರನೊಳ್
ಜಾನಕಿಯ ಸುದ್ದಿಯಂ ಪವ
ಮಾನಜ ತರ್ಪೆಸಕಮಿಲ್ಲದೋಸರಿಸಿರ್ದರ್ ೧೨

ಎನೆ ಮನದೆ ಕೊಂಡು ಮಾರುತಿ ಮೇಘರುತಿಯಿಂ

ನಯದಿಂ ತಂದಪೆನೆಂತುಮಿಾಯದೊಡೆ ಬಲ್ಪಿಂ ತಂದಪೆಂ ದೇವ ದೇ
ವಿಯನಂತಲ್ಲದೆ ನೋಡಿ ಬರ್ಪುದೆನೆ ಮಾಯಾರೂಪದಿಂ ಪೋಗಿ ಸು
ದ್ದಿಯನಾನ್ ತರ್ಪವನಲ್ಲೆನಾನೆ ಕೊಳನಂ ಪೊಕ್ಕಂತೆವೋಲ್ ಮಾಡಿ ಲಂ
ಕೆಯುಮಂ ದೈತ್ಯನುಮಂ ಭಯಂಗೊಳಿಸಿ ತರ್ಪೆಂ ಜಾನಕೀ ಶುದ್ಧಿಯಂ ೧೩

ಎಂದು ಪೂಣ್ದು ನುಡಿದಂಜನಾಸುತಂಗೆ ರಘುವೀರಂ

ಜನಕಜೆಯ ಸುದ್ದಿಯಂ ತ
ರ್ಪ ನಿಯೋಗಂ ನಿನಗೆ ಮೊನೆಯೊಳಾಟಂದು ದಶಾ
ಸ್ಯನನಿಕ್ಕಿ ದೇವಿಯಂ ತ
ರ್ಪ ನಿಯೋಗಂ ಲಕ್ಷ್ಮಣಂಗೆ ಪುದು ಪೆಱರ್ಗುಂಟೇ ೧೪

ಅಱಿವುವರಿಲ್ಲ ತನ್ನ ಕೆಲದೊಳ್ ಮಱೆದಪ್ಪೊಡಮೆನ್ನಗಲ್ಕೆಗಂ
ಡಱಿಯದವಳ್ ಭಯಾಕುಲತೆಯಿಂದಸುವಂ ಬಿಡುವಂತುಟಪ್ಪ ಬೇ
ಸಱಿನೊಳಕೊಳ್ಗುಮಂತೆಸಗದಂತಿರೆ ಮಾಱ್ಪುದು ಸೀತೆ ದೇಹಮಂ
ತೊಱೆದ ಬಱಿಕ್ಕೆ ರಕ್ಕಸನನಿಕ್ಕಿದೊಡಿಕ್ಕಿದ ಲೆಕ್ಕಮಕ್ಕುಮೇ ೧೫

ಎಂದಣುವಂಗೆ ಜಾನಕಿಯ ತನ್ನ ಕುಱುಪಿನವಿನ್ನಾಣಂಗಳನಱಿಪಿ

ಜನಕಜೆಯ ವದನ ಸರಸಿಜ
ಮನಲರ್ಚಲ್ ವಿರಹಖೇದತಮಮಂ ಕಳೆಯಲ್
ಹನುಮನ ಕಯ್ಯೊಳ್ ರಘುನಂ
ದನನಿತ್ತನುದಂಶುಮಾಲಿ ರಪಿಮಂಡಲಮಂ ೧೬

ಅಂತಿತ್ತು ತನಗಾಕೆಯ ಚೂಡಾಮಣಿಯಂ ತರ್ಪುದೆಂದು ಬೆಸಸೆ ಮಹಾಪ್ರಸಾದಮೆಂದಾಕ್ಷಣದೊಳೆ ಬಲಾಚ್ಯುತರ ಪದಂಗಳಂ ಬೀಳ್ಕೊಂಡತಿಪ್ರಬಲ ಬಲ ಸಮನ್ವಿತಂ ವಿಮಾನಾರೂಢಂ ಪವಮಾನಸೂನು ಪವನಪಥಕ್ಕೆ ನೆಗೆದು ತೆಂಕವೊಗದೆ ಪಯಣಂಬೋಗಿ ಲಂಕೆಯ ಬಹಿಃಪುರದೊಳ್ ಬೀಡಂ ಬಿಟ್ಟು ಪುರಮಂ ಪುಗುವ ಸಮಯದೊಳ್

ಗೆಲವಂತಿರ್ಕೆಮ ವಾಯುಪುತ್ರನ ಬಲಕ್ಕಂ ಕೋಂಟೆ ವಿದ್ಯಾತ್ಮಕಂ
ಸಲವಿಲ್ಲಾದುದಲೋಕದಂತದಱ ಮೇಲಿರ್ದುಗ್ರ ಕಾಲೋರಗಾ
ವಳಿ ಭೂತಾವಲಿ ರೌದ್ರ ಸತ್ವ ನಿವಹಂ ಲೋಕಾದ್ಭುತಂ ನಾಡೆ ನೋ
ಡಲಗುರ್ವಾದುದು ತದ್ವಿಭೀಷಣ ಕೃತಂ ದುರ್ವಾರ ವೈಕುರ್ವಣಂ ೧೭

ಆಗಳದಱ ಸ್ವರೂಪಮೆಲ್ಲಮಂ ಪೃಥುಮತಿವೆಸರ ಮಂತ್ರಿ ಬಿನ್ನವಿಸೆ ಕೇಳ್ದು ಕಲುಷನಶನಾಗಿ ವಿಮಾನದಿನವನಿಗವತರಿಸಿ ವಜ್ರಕವಚಮಂ ತೊಟ್ಟು ವಿದ್ಯಾಪ್ರಾಕಾರಮನೊಡೆದು ದ್ವಾರನಿಯುಕ್ತಂ ವಜ್ರಮುಖನೆಂಬ ದನುಜನಂ ಯಮಮುಖದೊಳ್ ತೂಂತಿ ತದಾತ್ಮಜೆ ಲಂಕಾಸುಂದರಿಯಂ ಮದುವೆನಿಂದು ಲಂಕೆಯಂ ಪೊಕ್ಕು ವಿಭೀಷಣನಂ ಕಂಡು ಕ್ಷೇಮ ಕುಶಲವಾರ್ತಾನಂತರಂ

ಕುಲಮಂ ಸತ್ಯದ ಶೌಚದಗ್ಗಳಿಕೆಯಂ ಚಾರಿತ್ರಮಂ ಚಾಗಮಂ
ಚಲಮಂ ದೋರ್ಬಲಮಂ ಕಲಾವಿಭವಮಂ ಕೊಂಡಾಡುವೀ ರಾವಣಂ
ನೆಲನೆಲ್ಲಂ ಪಟಿವನ್ನಮನ್ಯವಧುವಂ ದುರ್ಮೋಹದಿಂ ಬಾಡ್ತೆಗೆ
ಯ್ಯಲದಂ ಬಾರಿಸದೊಯ್ಯನಿರ್ಪುದುಮುಪೇಕ್ಷಾದೋಷಮೇನಾಗದೇ ೧೮

ಎಣಿಸದೆ ತನ್ನ ಶೌಚಗುಣಮಂ ವ್ರತರಕ್ಷಣಮಂ ಪರಾಂಗನಾ
ಪ್ರಣಯಮನಪ್ಪುಕಯ್ಯೆ ಶರಣಾಗತರಕ್ಷಣದಕ್ಷನಪ್ಪ ದ

ಕ್ಷಿಣ ಭರತ ತ್ರಿಖಂಡ ಧರಣೀಪತಿ ದಾನವ ಚಕ್ರವರ್ತಿ ರಾ
ವಣನಿದನಾಗಡೆನ್ನದೊಡೆ ನಿನ್ನ ನೆಗಳ್ತೆಗೆ ಬನ್ನಮಾಗದೇ ೧೯

ಇನ್ನಾದೊಡವೊಪ್ಪಿಸಿ ಸತಿ
ಯನ್ನಿಮ್ಮ ಕುಲಾಪವಾದಮಂ ಕಳೆವುದು ನಿ
ಮ್ಮನ್ನರುಪೇಕ್ಷಿಸೆ ನೆಲನು
ಳ್ಳನ್ನೆವರಂ ದಶಮುಖಂಗೆ ದುರ್ಯಶಮಕ್ಕುಂ ೨೦

ಎನೆ ವಿಭೀಷಣಂ

ದನುಜೇಂದ್ರಂಗಾಗದೆಂದಾನಿದನಱಿಪದುದಾಸೀನದಿಂ ಮುನ್ನಮೇನಿ
ರ್ದ್ದನೆ ದೃಷ್ಟಾದೃಷ್ಟ ಬಾಧಾಕರಮಿದುವೆ ಪರಪ್ರೇಯಸೀಪ್ರೇಮವೆಂದಿಂ
ತೆನಿತಾನುಂ ಹೇತುದೃಷ್ಟಾಂತಮನಡಿಗಡಿಗಾನ್ ತೋಱಿಯುಂಪೇಟ್ದುದಂಕೇ
ಳನೆ ರಾಗೋದ್ವೇಗವೇಗಂ ಸಮನಿಸೆ ಹಿತಮಂ ಸೂಕ್ತಮಂ ಕೇಳ್ವನಾವಂ ೨೧

ಪನ್ನೊಂದು ದಿವಸಮಿಂದಿಂ
ಗನ್ನತ್ಯಾಗದೊಳೆ ದೇವಿ ಕುಲಮಂ ವ್ರತಮಂ
ತನ್ನುನ್ನತಿಯಂ ಕಾದೊಡ
ಮಿನ್ನುಂ ವೈರಾಗ್ಯಮಾದುದಿಲ್ಲಗ್ರಜನೊಳ್ ೨೨

ಪ್ರಮದ ವನದೊಳಗೆ ಸೆಱೆಯಿ
ಟ್ಟು ಮತ್ತಮಟ್ಟಟ್ಟಿಯಟ್ಟುತಿರ್ದಪನುಚಿತ
ಕ್ರಮಮಂ ಕಾಮುಕರಱಿವರೆ
ಸುಮನೋಬಾಣಂಗೆ ತಕ್ಕುಗಿಡದವನಾವಂ ೨೩

ಎಂದು ನುಡಿಯೆ ಮರುತ್ಸುತಂ ಕೇಳ್ದು ಕರುಣಾರಸ ವಾಹಿನೀ ಪ್ರವಾಹ ಮೆಡೆದುಯ್ಯೆ ವಿಭೀಷಣನ ಭವನಮಂ ಪೊಱಮಟ್ಟದೃಶ್ಯನಾಗಿ ಪೋಗಿ ಸೀತಾದೇವಿಯಿರ್ದ ಬನಮಂ ಪೊಕ್ಕು ಮಂಡೋದರಿವೆರಸು ಪಲಂಬರುಮಂಬರಚರ ನಿತಂಬಿನಿಯರ್ ಬಳಸಿ ದಿನಲಕ್ಷ್ಮಿಯುಂ ಬಳಸಿದ ದೀಪಮಾಲೆಯಂತೆ ಕಾಂತಿಗೆಟ್ಟಿರೆ ವಿರಹವಿಧುರೆಯಾಗಿಯುಂ ಲಾವಣ್ಯರಸ ತರಂಗಿಣೀ ತರಂಗಲೇಖೆಯ ನನುಕರಿಸಿ ತಳಿರ್ತಶೋಕತರುತಳಮನಲಂಕರಿಸಿ

ಪೊಗೆಗೊಂಡ ಚಿತ್ರಲತೆ ದೂ
ಳಿಗೊಂಡ ಪುತ್ತಳಿಗೆ ಮಂಜುಗೊಂಡಬ್ಜಿನಿ ಕಾ
ರ್ಮುಗಿಲೊಳಕೊಂಡೆಳವೆಱೆಯೆನೆ
ಮೃಗಲೋಚನೆ ಸೀತೆ ನಾಡೆ ಪಾಡಟಿದಿರ್ದಳ್ ೨೪

ನಿರುಪಮರೂಪೆಯರ್ ಸತಿಯರೀ ದೊರೆಯರ್ ಪೆಱರಾರುಮಿಲ್ಲ ಖೇ
ಚರಿಯರ ಸುತ್ತಿನೊಳ್ ಖಚರವೀರಭಟರ್ಕಳ ಕಾಪಿನೊಳ್ ಪೆಱರ್
ತರುಣಿಯರಿರ್ಪರಾರ್ ತ್ರಿಭುವನಾಂಬಿಕೆ ಜಾನಕಿ ತಪ್ಪದಪ್ಪಳಿಂ
ತಿರೆ ಕಡುನೀಱೆಯಲ್ಲದೊಡೆ ರಾಘವನಂತಿರೆ ಚಿತ್ತವಿಾವನೇ ೨೫

ಎಂದು ನಿಶ್ಚಿತಮನನಾಗಿ

ಜಾನಕಿ ಪೊಱಗಾಗಿರೆ ಪವ
ಮಾನಸುತಂ ಕಾಣದಂತು ಪೆಱರಾರುಮಶೋ
ಕಾನೋಕಹ ಕಿಸಲಯ ಸಂ
ತಾನಮನಾಭರಣ ಕಿರಣವೊದವಿಸೆ ಬಂದಂ ೨೬

ಮುನ್ನ ಱಿದಂತುಟಂ ಪ್ರಿಯನ ಮುದ್ರಿಕೆಯಂ ತನಗಿತ್ತು ವಾಯುಪು
ತ್ರನ್ ನತನಾಗೆ ಕಂಡು ಮಣಿಮುದ್ರಿಕೆಗಂದಿದಿರ್ವಂದ ಮಾಡ್ಕೆಯಿಂ
ದನ್ನಯನಾಂಬು ಹರ್ಷಪುಲಕಂ ಪೊಱಪೊಣ್ಮೆ ಮನೋವಿಕಾಸಮಂ
ಕನ್ನಡಿಸಿತ್ತು ಸೀತೆಯ ಮುಖಾಂಬುರುಹಂ ದರಹಾಸಪೇಶಲಂ ೨೭

ಅಂತು ಹರ್ಷರಸತರಂಗಿತೆಯಾದ ಜಾನಕಿಯಂ ಮಂಡೋದರಿ ಮೊದಲಾಗೆ ಕೆಲದೊಳಿರ್ದ ಖಚರಕಾಂತೆಯರ್ ರಾವಣನೊಳಪ್ಪನುಬಂಧಮನೊಡಂಬಟ್ಟು ಸಂತಸಂಬಟ್ಟಳೆಂಬುದುಂ ಜಾನಕಿ ಮುನಿದು

ಎನಗೆ ಪರಪುರುಷರಸ್ಮ
ಜ್ಜನಕ ಸಹೋದರ ಸಮಾನರೆನಗನುರಾಗಂ
ಜನಿಯಿಸಿದುದು ರಘುಕುಲ ತಿಲ
ಕನ ಬೆಸದಿಂ ಬಂದ ದೂತನಂ ಕಾಣಲೊಡಂ ೨೮

ಎನೆ ಮಂಡೋದರಿ ಕೇಳ್ದು

ಅರ್ಣವ ಲಂಘನಕ್ಷಮರೆ ಮಾನವರಾರ್ಗಮಭೇದ್ಯಮಪ್ಪುದಂ
ಸ್ವರ್ಣಿಲಯುಂಬರಂ ನಿಮಿರ್ದ ವಜ್ರದ ಕೋಂಟೆಯನಾರೊ ಭೇದಿಪರ್
ನಿರ್ಣಯವಾಗಿ ರಾಘವನ ಸುದ್ದಿಯನೀಕೆಗೆ ಪೇಟ್ದುದಾಗದೇ
ಕರ್ಣಪಿಶಾಚಮಿಾ ವಿಕಲಭಾಷೆ ನಿರಸ್ತವಿಕಾರಮಾಗದೇ ೨೯

ಎಂದು ಪೆಂಡವಾಸದ ವಿಲಾಸಿನಿಯರೊಡನೆ ನುಡಿಯುತ್ತಿರ್ಪುದುಂ ವೈದೇಹಿ ಪುಣ್ಯಪುರುಷ ನೀನೆನ್ನನಪಾರದುಃಖಭಾರದಿಂ ನವೆಯಲೀಯದೆ ಮದೀಯ ಶುಭವಾರ್ತೆಯಂ ತಂದ ದೂಸಱಿಂದೆನಗೆ ನೀನ್ ಪ್ರಭಾಮಂಡಲನಿಂದಗ್ಗಳಮಪ್ಪ ಸಹೋದರನಯ್ ನಿನ್ನ ಕುಲ ಗೋತ್ರ ನಾಮಂಗಳನನೆಗೆ ತಿಳಿಯೆ ಪೇಟೆನಲೊಡಂ

ನೆರಗಕ್ಕುಂ ಮೆಯ್ಗರೆದಾ
ನಿರಲೆಂದು ನಿಜಸ್ವರೂಪಮಂ ತೋಱುವುದುಂ
ಮರುದಾತ್ಮಜನಂತಃಪುರ
ಪುರಂಧ್ರಿಯರ್ ಸೆಡೆದು ಸೀತೆಯಂ ಮಱೆಗೊಂಡರ್ ೩೦

ಪಿತೃ ಪವನಂಜಯಂ ಖಚರವಲ್ಲಭನಂಜನೆ ಪೆತ್ತ ತಾಯ್ ಮಹಾ
ಸತಿ ಹನುಮಂತನೆನ್ ಪೆಸರೊಳಾನ್ ವಿಜಯಪ್ರಮುದಾಪ್ರಿಯಂ ಜಗ
ತ್ಪತಿ ಪತಿ ರಾಮನಾ ಸುಚರಿತಂ ಬೆಸವೇಟ್ದೊಡೆ ನಿಮ್ಮ ಸುದ್ದಿಗ
ಪ್ರತಿಮ ಪತಿವ್ರತಾಚರಣ ಭೂಷಣ ಭೂಷಿತೆ ಬಂದೆನಂಬಿಕೇ ೩೧

ಕಮಲಿನಿಯಂ ಕಲಹಂಸಂ
ಸುಮನೋಮಂಜರಿಯನಳಿ ವನಾಂತಸ್ಸ್ಥಲಿಯಂ
ಸಮದೇಭಂ ನೆನೆವಂತಸು
ಪಮೆ ನಿಮ್ಮನೆ ನೆನೆದು ದೂರಿಪಂ ರಘುವೀರಂ ೩೨

ಎಂದು ಮತ್ತಂ ಕೆಲವುಮಭಿಜ್ಞಾಣಂಗಳಂ ಬಿನ್ನವಿಪುದುಮನು ಭೂತಾರ್ಥ ಸ್ಮರಣೆಯಿಂ ಸಂಶಯಂ ಪಿಂಗೆ ಸಂತೋಷಂಬಟ್ಟು

ಮರುದಾತ್ಮಜ ನಿಮ್ಮನ್ನರ್
ಧುರೀಣರೇಕಾಂಗವಿಜಯಿಗಳ್ ಬಹುವಿದ್ಯಾ
ಪರಮೇಶ್ವರರೆನಿಬರಿಳೇ
ಶ್ವರಪಾರ್ಶ್ವದೊಳೆಂದು ಜನಕಸುತೆ ಬೆಸಗೊಂಡಳ್ ೩೩

ಎನೆ ಮಂಡೋದರಿಯೀತನ ಪರಾಕ್ರಮದಳುರ್ಕೆಯಂ ಪೇಳ್ವೊಡೆ ಮುನ್ನ ಮೊರ್ವೆ ದಶಮುಖಂಗೆ ರಣಮುಖದೊಳಿದಿರ್ಚಿದ ವರುಣನಂ ಪರಾಙ್ಮುಖಂ ಮಾಡಿ ಗೆಲ್ದು ಕುಡೆ ವಿಯಚ್ಚರಪತಿ ಮೆಚ್ಚಿ ತನ್ನ ತಂಗೆಯಪ್ಪ ಚಂದ್ರನಖಿಯ ಮಗಳನಂಗಪುಷ್ಪೆಯನೀತಂಗೆ ಮಹಾವಿಭೂತಿಯಿಂ ಮದುವೆಯಂ ಮಾಡಿ ಕೊಂಡಾಡಿ ತನ್ನೊಳೋರನ್ನನಂ ಮಾಡಿ ಪೊರೆಯೆ ಪಾಟಿಗೆ ತಪ್ಪಿ

ಬರೆವರೆ ಕರ್ವುರ್ಗ. ಕೊರ್ವಿ ಕರಮೇಳಿದಮಪ್ಪವೊಲೀತನುಂ ವಿಯ
ಚ್ಚರ ಪತಿಯಪ್ಪ ರಾವಣನಿರಲ್ ಕರಮೇಳಿದರಪ್ಪ ಭೂಮಿಗೋ
ಚರರೊಳಸೇವ್ಯರೊಳ್ ತನಗೆ ಕಿಂಕರಭಾವಮನಪ್ಪುಕಯ್ದನೀ
ತರಳತೆಯೊಂದುಮಿಲ್ಲದೊಡೆ ಪೋಲ್ವವರಾರ್ ಪವಮಾನಸೂನುವಂ ೩೪

ಎನೆ ಹನುಮನುದಾತ್ತರಾಘವನ ಗೆಯ್ದುಪಕೃತಿಗೆ ಪ್ರತ್ಯುಪಕಾರಮಂ ಗೆಯ್ದೆನ್ನ ಪುರುಷಕಾರಮಂ ಮೆಱೆಯಲೆಂದು ಬಂದಂ ನಿಮಗೆ ಕುಲಮಟಿಯೆ ನೆಲಂ ಪಟಿಯೆ ಮಾನಸಿಕೆಯನೊಕ್ಕು ಪರತ್ರೀಯಂ ಬಗೆಯದೆ ಪರಕಲತ್ರ ಮನಾಸೆಗೆಯ್ದ ಪೊಲ್ಲಮೆಯಂ ಕಳೆವಂದನಾವುದೆಂಬುದುಂ ಮಂಡೋದರಿ

ಅನಿಲತನೂಭವ ಸುಗ್ರೀ
ವನುಮಂ ನಿನ್ನುಮನವಂಧ್ಯಕೋಪಂ ದಶಕಂ
ಠನಮೋಘಂ ಕೊಲ್ಲದೆ ಮಾ
ಣ್ಬನೆ ಪೇಱನೆ ಸೀತೆ ಕಲುಷವಶಗತೆಯಾದಳ್ ೩೫

ಅಂತು ಮುಳಿದು

ದಾಂಟಿ ಕಡಲಂ ಜಗತ್ತ್ರಯ
ಕಂಟಕನಂ ಕೊಂದು ರಾಮಲಕ್ಷ್ಮಣರಿರ್ಪ

ತ್ರೆಂಟು ದಿವಸದೊಳೆ ನಿನಗಣ
ಮುಂಟಾಗಿಸುವರ್ ವಿಶೇಷಮಪ್ಪೆರ್ದೆವಲಿಲಂ ೩೬

ಎನಲಾಗಳ್ ಮಂಡೋದರಿ ಮಸಗಿ

ಕೇಸುರಿ ಸೂಸೆ ತನ್ನ ಮೊಗದಿಂ ಕಿಡಿ ಬೀಟ್ತುರೆ ತನ್ನ ಕಣ್ಗಳಿಂ
ಭಾಸುರಮಾಗೆ ದಾಡೆಗಳೊಡಲ್ ಬಳೆದಂಬರಮಂ ತಳುಂಬೆ ತ
ನ್ನಾಸುಕರಂ ಕರಂ ದೆಸೆಗಮುರ್ವಿಸೆ ಕಯ್ಗಳನೆತ್ತಿ ಪೊಯ್ಯಲೆ
ಬ್ಬಾ ಸಮಯಕ್ಕೆ ತೆಕ್ಕನೆಡೆವೊಕ್ಕನರಿಂಜಯನಂಜನಾ ಸುತಂ ೩೭

ಆದರ್ಕೆ ನಿತ್ತರಿಸದಾಕೆ ಸಭೆಯಿನೆೞ್ದು ರಾವಣನ ಕೆಲಕ್ಕೆ ಪೋದಳಿತ್ತ ಪವಮಾನಸೂನು ಬೋನಮಂ ತರಿಸೆ ಸಿದ್ಧಪ್ರತಿಜ್ಞೆಯಾಗಿ

ಸತಿ ಸುಚರಿತ್ರೆ ಪಂಚಪರಮೇಷ್ಠಿಗಳಂ ಸ್ತುತಿಗೆಯ್ದು ಭಕ್ತಿಯಿಂ
ಯತಿವರರ್ಗನ್ನಮಂ ಮನದೊಳಿತ್ತು ರಘೂದ್ವಹ ಪಾದಪಂಕಜ
ದ್ವಿತಯಮನಿಟ್ಟು ಹೃತ್ಸರಸಿಯೊಳ್ ಜನಕಾತ್ಮಜೆ ದೇವತಾ ವಿನಿ
ರ್ಮಿತ ಮಣಿಕುಟ್ಟಿಮ ಸ್ಥಲದೊಳಿರ್ದಮೃತಾನ್ನಮನುಂಡನಂತರಂ ೩೮

ಹನುಮಂ ಕಯ್ಮುಗಿದು ಜಗ
ಜ್ಜನನಿ ರಘುಪ್ರವರನಲ್ಲಿಗುಯ್ವೆಂ ನಿಮ್ಮಂ
ಜನಕಾತ್ಮಜೆ ಬಿಜಯಂಗೆ
ಯ್ಯೆನಲದು ತಕ್ಕೂರ್ಮೆಯಲ್ಲದೆಂದಿಂತೆಂದಳ್ ೩೯

ಧರಣೀವಲ್ಲಭನಾಜ್ಞೆಯಿಲ್ಲದೆನಗೆಂತುಂ ಬರ್ಪುದೌಚಿತ್ಯಮ
ಲ್ತರಸಂಗೆನ್ನಿರವಂ ನಿವೇದಿಪುದು ಕಾಲಕ್ಷೇಪಮಂ ಮಾಡಿ ನೀ
ನಿರೆ ದೈತ್ಯೇಂದ್ರನಪಾಯಮಂ ನಿನಗೆ ಮಾಳ್ಕುಂ ಪೋಪುದೆಂದಾ ತನೂ
ದರಿ ವೈದೇಹಿ ಮರುತ್ಸುತಂಗೆ ನಿಜಚೂಡಾರತ್ನಮಂ ನೀಡಿದಳ್ ೪೦

ಮತ್ತಂ ಪಲವವಿನ್ನಾಣಂಗಳಂ ಪೇೞ್ದು ಮನ್ಯುಗದ್ಗದ ಕಂಠೆಯಾದ ಜಾನಕಿಗೆ

ಎಸಗಪಾಯಮನಾವನೊಡರ್ಚುವಂ
ಮೊನೆಯೊಳೆನ್ನೊಡನಾವನಿದಿರ್ಚುವಂ
ಜನನಿ ರಾಘವನಾಜ್ಞೆಯೆ ಕಾದುದೀ
ತನನದಲ್ಲದೊಡೆಲ್ಲಿಯ ರಾವಣಂ ೪೧

ಎಂದು ಬಿನ್ನವಿಸಿ ಬೀೞ್ಕೊಂಡು

ಬರವಂ ಪೋಗುಮನಾರುಮೆತ್ತಲಱಿವರ್ ಬಂದಂತೆ ಪೋದಂದು ದೋಃ
ಪರಿಘಂ ದೂಷಿತಮಕ್ಕುಮಿಕ್ಕಿ ಖಲರಂ ಕಿಟ್ತೀ ಪುರೋದ್ಯಾನಮಂ
ಪುರಮಂ ಸುಟ್ಟು ದಶಾಸ್ಯನೆನ್ನನಱಿವಂತಾನ್ ಪೋಗಿ ರಾಮಾಂಘ್ರಿ ತಾ
ಮರಸಕ್ಕಾನತನಪ್ಪೆನೆಂಬ ಮನಮಂ ತಂದಂ ಮರುನ್ನಂದನಂ ೪೨

ಅನ್ನೆಗಮತ್ತ ಮಂಡೋದರಿ ಖಚರವಲ್ಲಭನಲ್ಲಿಗೆ ಪೋಗಿ

ದೇವ ರಘುರಾಮನಂ ಸು
ಗ್ರೀವಂ ಕಯ್ಕೊಂಡು ಹನುಮನಂ ಬರಿಸಿ ದಶ
ಗ್ರೀವ ಬೆಸವೇೞೆ ಕಂಬು
ಗ್ರೀವೆಯ ಜಾನಕಿಯ ಸುದ್ದಿಗಾತಂ ಬಂದಂ ೪೩

ಪ್ರಮದ ವನದೊಳಗೆ ಸೀತೆಯ
ಸಮೀಪದೊಳ್ ಹನುಮನಿರ್ದನೆಂದಱಿಪುವುದುಂ
ಬೆಮರ್ವನಿ ಗಂಡಸ್ಥಲದೊಳ್
ಸಮನಿಸೆ ಕಿಸುಗಣ್ಚಿ ಮಸಗಿದಂ ದಶಕಂಠಂ ೪೪

ಪ್ರಮದೋದ್ಯಾನದೊಳಾವನಿರ್ದನವನಂ ಕೊಂದಿಕ್ಕಿಮೆಂದಾಹವ
ಕ್ಷಮರಂ ಪೇೞೆ ದಶಾನನಂ ದನುಜರುಂ ಸಾಮಾನ್ಯನೆಂದುದ್ಧತರ್
ಸಮರಕ್ರೀಡೆಗಪೇಕ್ಷೆಗೆಯ್ದು ಪರಿತಂದರ್ ತಂಡದಿಂ ಚಂಡ ವಿ
ಕ್ರಮನೀತಂ ಹನುಮಂತನೆಂದಱಿದೊಡೇನಾರುಂ ಮನಂಗೆಯ್ವರೇ ೪೫

ಆ ದನುಜಬಲವನಾ ವನ
ಪಾದಪಮಂ ಕಿಟ್ತು ಮೋದಿ ಕೊಲಲೊಡರಿಸಿದಂ

ಕಾದುವ ಬನಮಂ ಕೀೞ್ವವಿ
ಸೋದಂಗಳನೆರಡನೊಡನೆ ತೀರ್ಚುವ ಬಗೆಯಿಂ ೪೬

ತಿಲಕ ತರುವಿಂ ನಿಶಾಚರ
ಬಲಮಂ ಬಿಡೆ ಪೊಯ್ದು ಕೊಂದು ರಾವಣನ ಯಶ
ಸ್ತಿಲಕಮುಮನವರ ಪೆಂಡಿರ
ತಿಲಕಮುಮಂ ತೊಡೆದನೊಡನೆ ಪವಮಾನಸುತಂ ೪೭

ಕೋಗಿಲೆ ಬೆರ್ಚಿ ಪಾಱುದುವು ಚೂತವನಾವಳಿಯಿಂ ಶುಕವ್ರಜಂ
ಪೂಗವನಂಗಳಿಂ ಬೆದಱು ಪೋದುವು ಬಾಲ ಮರಾಲ ಸಂಕುಲಂ
ಪೂಗೊಳದಿಂದಗಲ್ದುವೆನಸಂ ಪೆಱಪಿಂಗಿದುವುನ್ಮದಾಳಿ ಪು
ನ್ನಾಗ ವನಂಗಳಿಂ ತವಿಸೆ ನಂದನಮಂ ಪವಮಾನ ನಂದನಂ ೪೮

ಅಂತು ವನಭಂಗಮಂ ಮಾೞ್ಪುದುಂ ನಿಶಾಚರನೊರ್ವಂ ತ್ವರಿತಗತಿಯಿಂ ಬಂದು ಬಿನ್ನವಿಸೆ

ಚರವಚನಂ ಕಿವಿಯಂ ಸಾ
ರ್ತರೆ ಘನನಿನದಕ್ಕೆ ಕೆಳರ್ದ ಕೇಸರಿವೊಲ್ ಕೇ
ಸರಿಪೀಠದಿನೆೞ್ದಂ ದಶ
ಶಿರನೆರಡುಂ ಪುರ್ವುಮುರ್ವಿ ಗಂಟಿಕ್ಕುವಿನಂ ೪೯

ನೀಮ್ ಬರಮುಂಟೆ ದೇವ ಕದನಂ ಪವಮಾನತನೂಭವಂ ರಣಾ
ಡಂಬರದಿಂದಮಂಜದೊಡೆ ಕೊಂದಪೆನಂಜಿದೊಡಮ್ಮ ನಿಮ್ಮ ಪಾ
ದಾಂಬುರುಹಕ್ಕೆ ತಂದವನನೊಪ್ಪಿಸುವೆಂ ಬೆಸಸೆನ್ನನೆಂದು ಶೌ
ರ್ಯಾಂಬುಧಿ ಬೇಡಿದಂ ಬೆಸನನಿಂದಗಿ ದಾನವಚಕ್ರವರ್ತಿಯಂ ೫೦

ಅಂತು ಬೆಸನಂ ಪಡೆದು ಸಮರಸಂರಂಭದಿನಿದಿರ್ಚಿ ಬರ್ಪುದಂ ಕಂಡು ಪೆಱಗಿರಿಸಿದ ನಿಜವರೂಥಿನಿಯಂ ಬರಿಸಿ ವಿಜಯರಥಾರೂಢನಾಗಿ ಲಂಕಾಪುರಮೆಲ್ಲಂ ತಲ್ಲಟಿಪಂತು ಕಾದಿ ಪೆಸರ ನಾಯಕರಂ ಪೇಸೇಱೆ ಕೊಂದು

ಕಾದುವ ಕೂರ್ಪುದೋರ್ಪ ಬೆಸನಂ ರಘುಜಂ ಬೆಸವೇಱ್ದನಿಲ್ಲ ಮೇ
ಲಾದ ನಿಶಾಚರ ಪ್ರಮುಖರೊಳ್ ತಲೆಮುಟ್ಟಿಱಿವಂದಮಾವುದಾ
ನೀ ದನುಜಾತ್ಮಜಂಗೆ ಪಿಡಿಪಿತ್ತು ದಶಾನನನಲ್ಕಿ ಬಳ್ಕಿ ಲಂ
ಕಾದಹನಕ್ಕೊಡರ್ಚುವೆನೆನುತ್ತುಮಿದಂ ಬಗೆದಂ ಮರುತ್ಸುತಂ ೫೧

ಎಂದು ಕದನಕೇಳಿಗಗಿದಸಂದದಿಸಿಂದಗಿಗೆ ಪಿಡಿಪೀವುದುಮಾತನಾತನಂ ತಂದು ಕಾಣಿಸಿ ಈತಂಗೆ ತಕ್ಕುದಂ ದೇವರೆ ಬಲ್ಲಿರೆಂದು ದಶವದನಂಗೆ ಬಿನ್ನಪಿಸೆ

ಮಸುಳೆ ನಿಜಾನ್ವವಾಯಮುಹಿಮೋನ್ನತಿ ನಾಣ್ಕಿಡೆವೋಗೆ ಪಾಟಿಯುಂ
ಪಸುಗೆಯುಮೆನ್ನ ಮನ್ನಣೆಯನಿಂದಗಿಯೊಳ್ ಸಮಕಕ್ಷ್ಯನಾಗೆ ರ
ಕ್ಷಿಸಿದುದನೇನುಮಂ ಬಗೆಗೆ ತಾರದೆ ಲಜ್ಜೆಯನೊಕ್ಕು ಬಿಟ್ಟು ಮಾ
ನಸಿಕೆಯನಿಂತು ಭೂಚರರ್ಗೆ ಖೇಚರ ನೀನ್ ಚರನಾಗಿ ಬರ್ಪುದೇ ೫೨

ಎನೆ ಕೆಲದೊಳಿರ್ದ ದಾನವರುಂ ಸ್ವಾಮಿದ್ರೋಹನಾಗಿ ತಕ್ಕನುಡಿದು ಪರಬಲಮಂ ಪೊಕ್ಕು ದೋಷಕ್ಕೆ ಪಕ್ಕಾದೆಯೆಂಬುದುಂ ಪವಮಾನಸೂನು

ತೋಯದವಾಹನನನ್ವಯ
ದಾಯತಿ ಕಿಡೆ ಪಾಟಿದಪ್ಪಿ ಪಟಿ ಪೊರ್ದೆ ಪರ
ಸ್ತ್ರೀಯನಪೇಕ್ಷಿಸಿದ ಖಲ
ನ್ಯಾಯಮನಾರಯ್ದು ನೋಡಿಕೊಳ್ಳಿಂ ನಿಮ್ಮೊಳ್ ೫೩

ಅಱಿನಂ ದಶಮುಖನನುಡಿದುದ
ನಱಿಯುತ್ತುಂ ಸಲ್ಲದೆಂದು ಬಾರಿಸದೊಳ್ಪಂ
ಮಱೆದಿರ್ಪುದಱಿಂ ದೋಷ
ಕ್ಕೆಱೆವಟ್ಟೆನಿಸಿರ್ದ ಪಾಪಿಗಳ್ ನೀಮೆ ವಲಂ ೫೪

ಸೌಮಿತ್ರಿಯ ಕಯ್ಯೊಳ್ ರಣ
ಭೂಮಿಯೊಳಿರ್ದಪುದು ರಾವಣಂಗಂ ನಿಮಗಂ
ಪೋ ಮರಣಂ ಬಿದಿ ಬರೆದುದ
ನೇಮಾತೇದೊರೆಯಱಾದೊಡಂ ತೊಡೆದಪರೇ ೫೫

ಎಂದು ಪಲತೆಱದಿಂ ನೆಱನೆತ್ತಿ ನುಡಿಯೆ ದಶಮುಖಂ ಮುಳಿದು ಪಲವಂ ಗಟಿಪಲೀಯದೀತನಂ ರಾಮದೂತನೆಂದು ಗೋಸಣೆಗಳೆದು ಪರಿಭವಿಸಿ ಪೊಱ ಮಡಿಸಿ ಕಳೆಯಿಮೆನೆ

ಉರಿಲಿಂಗಂ ರಸೆಯಿಂದಮುಂದೊಗೆದುದೋ ಪೇಳೆಂಬಿನಂ ಕಣ್ಣ ಕೇ
ಸುರಿಗಳ್ ದಳ್ಳಿಸೆ ಕೋಪದಿಂದಮುರಿದೆಱ್ದಾ ಸ್ಥಾನದಲ್ಲಿರ್ದ ದು
ರ್ಧರ ವಿದ್ಯಾಧರ ವೀರರಂ ಜವನ ಬಾಯೊಳ್ ತೂಂತಿದಾ ತನ್ನ ನಿ
ಷ್ಠುರ ಪಾದಾಹತಿಯಿಂ ಪ್ರಭಂಜನಸುತಂ ಹಸ್ತಪ್ರಹಾರಂಗಳಿಂ ೫೬

ಅಂತು ಕೊಂದು ಮುಸಗಿ ಪೊಡೆವ ಸಿಡಿಲಂತೆ ಸಿಡಿಲ್ದು ಸಿಂಹಲಂಘನ ದಿಂದಂಬರಕ್ಕೆ ನೆಗೆದು

ಮನೆಮನೆದಪ್ಪದೆ ನೆಗೆದುದು
ತನಿಗಿರ್ಚನೆ ದಹನವಿದ್ಯೆಯಿಂ ಸುಟ್ಟಂ ಪಾ
ವನಿ ಲಂಕೆಯನಸುರಾಧೀ
ಶನ ಮನಮುರಿವನ್ನಮಾನನಂ ಪೊಗೆವನ್ನಂ ೫೭

ಬಹುಧೂಮಲೇಖೆ ನಿಮಿರ್ದುವು
ಮಿಹಿರಾಧ್ವದೊಳಾಂಜನೇಯನೊಡರಿಸೆ ಲಂಕಾ
ದಹನಮನಸುರೇಂದ್ರವಿನಾ
ಶ ಹೇತುಗಳ್ ಧೂಮಕೇತುಗಳ್ ನೆಗೆದುವೆನಲ್ ೫೮

ಅಣುವನ ವಹ್ನಿವಿದ್ಯೆ ಸುಡೆ ಲಂಕೆಯನಲ್ಲಿ ಛಟಚ್ಛಟೆಂಬ ಭೀ
ಷಣರವಮುಣ್ಮೆ ನೀಳ್ದುವುರಿನಾಲಗೆಗಳ್ ದಶಕಂಠ ರಕ್ತದಿಂ
ತಣಿವ ದಿನಂಗಳಾದಪುವು ರಾಮಶರಂಗಳಿನೆಂದು ರಾಗದಿಂ
ಕುಣಿವ ಕುಕಿಲ್ವ ಭೈರವಿಯ ರಕ್ತಜಟಾಪಟಲಂಗಳೆಂಬಿನಂ ೫೯

ಆ ಸಮಯದೊಳಗ್ನಿಶಿಖಾಮುಖಕ್ಕೆ ದೂರಮಪ್ಪ ಬಕ್ಕಬಯಲ ತಾಣ ದೊಳ್ ಪುರಜನಂಗಳ್ ದೊಮ್ಮಳಿಸಿ ನಿಂದುಮ್ಮಳಿಸಿ

ಜನಕಜೆಗಾಸೆಗೆಯ್ದು ಸುಕೃತಕ್ಷಯದಿಂ ಜಲವರ್ಷವಿದ್ಯೆ ಪ
ಳ್ಚನೆ ಪೆಱಪಿಂಗೆ ಪುಷ್ಪಕವಿಮಾನಮನೇಱಿ ದಶಾನನಂ ವಧೂ
ಜನಸಹಿತಂ ಕೃಶಾನುಗೆ ಭಯಾಕುಲನಪ್ಪುದು ಚೋದ್ಯಮಲ್ತಮೆಂ
ತೆನೆ ಶುಚಿಯಲ್ಲದಂಗೆ ಬೆಸಕಯ್ಗುಮೆ ವಿದ್ಯೆಗಳಾವುವಾದೊಡಂ ೬೦

ಮಾನವದೂತನೆತ್ತ ಜಲರಾಶಿಯನಕ್ಕದೆ ಪಾಯ್ದು ಬರ್ಪುದೆ
ತ್ತಾನಲಟುಂಬಮಪ್ಪಸುರಸೇನೆಯನೊರ್ವನೆ ಕೊಲ್ವುದೆತ್ತ ಲಂ
ಕಾನಗರಕ್ಕೆ ನಂದನವನಕ್ಕೆ ವಿನಾಶಮನೀವುದೆತ್ತಿದೇನ್
ದಾನವರಾಜದುರ್ವಿಲಸಿತೋತ್ಕಟಸಂಕಟವೇಗಮಾಗದೇ ೬೧

ಎಂದುಲಿಯೆ ಲಂಕಾಪುರಮನುರಿಪಿ ಗಗನತಲಕ್ಕೆ ನೆಗೆದು ನಿಜಸೇನೆಯಂ ಕೂಡಿಕೊಂಡು ಗಂಧವಹನಂದನಂ ಮಗುಳ್ದು ಕಿಷ್ಕಿಂಧಪುರಮಂ ಪೊಕ್ಕು ಬರುತ್ತುಮಿರೆ

ವದನವಿಕಾಸದಿಂ ಬರವಿನೆಟ್ಟರದಿಂದಮೆ ಕಾರ್ಯಸಿದ್ಧಿಯಾ
ದುದನಱಿದಂಜನಾಸುತನಿರೀಕ್ಷಣದಿಂ ರಘುಜಂಗೆ ಹರ್ಷಮಾ
ದುದು ಪರಿಷಜ್ಜನಕ್ಕೆ ಪರಮೋತ್ಸವಮಾದುದು ಲಕ್ಷ್ಮಣಂಗೆ ಕೊ
ರ್ವಿದುದು ಮನಂ ಮುದಂಬಡೆಯರಾರಭಿವಾಂಛಿತ ಕಾರ್ಯಸಿದ್ಧಿಯಿಂ ೬೨

ಮಣಿಯೆ ವಿರಹಾಂಧಕಾರಂ
ಕುಣಿಯೆ ಜಗತ್ಪತಿಯ ನೇತ್ರಪುತ್ರಿಕೆ ಮೆಯ್ಯೊಳ್
ಪೆಣೆಯೆ ಪುಲಕಾಳಿ ಚೂಡಾ
ಮಣಿಯಂ ಕೊಟ್ಟಂ ನೃಪಂಗೆ ಪವಮಾನಸುತಂ ೬೩

ಘನಸಮಯ ಸಮಾಗಮಮಂ
ಮನದೊಳ್ ನೆನೆಯುತ್ತುಮಿರ್ಪ ಚಾದಗೆವೊಲ್ ಮ
ಜ್ಜನನಿ ನಿಜಾಗಮನಮೆ ಜೀ
ವನಮಾಗಿರೆ ದೇವ ಜೀವಮಂ ಪಿಡಿದಿರ್ಪಳ್ ೬೪

ಅನ್ನಿಮ್ಮ ಸುದ್ದಿಯಂ ಪೇ
ಳ್ವನ್ನಂ ಮಜ್ಜನನಿ ಜೀವಿತಾಶೆಯನಿಳಿಕ
ಯ್ದನ್ನತ್ಯಾಗಂಗೆಯ್ದುಳ್
ಮುನ್ನಾದರ್ ಸತಿಯರಿನ್ನರಾರೆಂಬಿನೆಗಂ ೬೫

ಅಸುರನ ಮಾಟ್ಟಪಕೃತಿಯಿಂ
ದಸುವಂ ಬಿಡುವಂತುಟಕ್ಕುಮಂಬಿಕೆಗೆ ಬೞಿ
ಕ್ಕಸುರೇಂದ್ರನನಿಕ್ಕಿದೊಡ
ಲ್ಲಿ ಸಾಧ್ಯಮೇನ್ ತಕ್ಕುದಲ್ತು ಕಾಲಕ್ಷೇಪಂ ೬೬

ಎಂಬುದುಮಂಜನಾಸುತನ ಬಿನ್ನಪಮೆ ತನಗೆ ವೀರರಸ ಪ್ರವಾಹಿನಿಗೆ ಸೇತುವಾಗೆ

ಈ ವಾರಾಶಿಯನೀಂಟಲೆನ್ನ ಬಡಬಾಸ್ತ್ರಂ ಸಾಲ್ವುದಾರಾಂತೊಡಂ
ಜೀವಾಕರ್ಷಣವಿದ್ಯೆಯಂ ಮೆಱೆವುದೆನ್ನೀ ಚಾಪದಂಡಂ ದಶ
ಗ್ರೀವಂಗಣ್ಣನೆ ಸಾಲ್ವನಿನ್ ತಡೆವುದೇತರ್ಕೆಂದು ಸೌಮಿತ್ರಿ ಸು
ಗ್ರೀವಂಗೆಂದನುದಂಚಿತ ಭ್ರುಕುಟಿ ಗಂಡೋದ್ಗಾರಿ ಘರ್ಮೋದಕಂ ೬೭

ಆ ನುಡಿಗೊಡಂಬಟ್ಟು ಸುಗ್ರೀವಂ

ತಡೆವನಿತೇಕೆ ನಾಳೆ ನಡೆವಂ ರಣಕೇಳಿಗೆ ಬಾಡಬಾಸ್ತ್ರಮಂ
ತುಡುವನಿತಚ್ಚಿಗಂ ನಮಗದೇವುದೊ ಲಕ್ಷ್ಮಣದೇವ ನಮ್ಮ ಪೆ
ರ್ವಡೆ ಕಡಲಂ ನಭೋಗಮನವಿದ್ಯೆಯೆ ಸೇತುವೆನಲ್ಕೆ ದಾಂಟಿ ಮಾ
ರ್ಪಡೆಯನದಿರ್ಪುಗುಂ ರಘುತನೂಜನೊಳಾಜಿಗೆ ಬರ್ಪ ಗಂಡರಾರ್ ೬೮

ಎಂದಱಿಕೆಯ ವಿದ್ಯಾಧರರೆಲ್ಲರುಂ ರಾಮಲಕ್ಷ್ಮಣರ ಬೆಸನನೆ ಪಾರುತ್ತುಂ ವಿಜಯಪ್ರಯಾಣ ನಿಶ್ಚಿತಮಂತ್ರರಾಗಿರ್ಪುದುಂ

ದಶವದನನ ಪರಮಾಯು
ರ್ದಶೆಯಂತಸ್ತಮಿಸೆ ಭಾನುಮಂಡಲಮಾಗಳ್
ದಶವದನನ ಪೞಿಯಂತಿರೆ
ದಶದಿಗ್ವದನಮುಮನುರ್ವಿ ಪರ್ವಿತ್ತು ತಮಂ ೬೯

೭. ರಾಮಲಕ್ಷ್ಮಣ ಪುಣ್ಯಪ್ರಭಾವಂ

ಅನಂತರಂ ನೇಸಱ್ ಮೂಡುವುದುಂ ರಾಮಚಂದ್ರಂ ಜಿನೇಶ್ವರಂಗೆಱಗಿ ಮಹತ್ವಮಂ ತಳೆದು ಓಲಗಸಾಲೆಗೆ ಬಂದು ಸುಗ್ರೀವಾಂಗದ ನಳ ನೀಲ ಜಾಂಬವ ಹನುಮತ್ಪ್ರಮುಖ ನಿಖಿಲ ಖಚರಪರಿವೃಢನಾಗಿರ್ಪುದುಂ ಆ ಸಮಯದೊಳ್ ಪುರೋಹಿತನುಚ್ಚರಿತ ಸ್ವಸ್ತಿಶಬ್ದಂ ದೇವ ದಿಗ್ವಿಜಯಪ್ರಯಾಣಲಗ್ನಮತ್ಯಾಸನ್ನವೆಂದು ಬಿನ್ನವಿಸೆ ಸೇನಾಪ್ರಧಾನಂ ನಳಂ ವಿಜಯ ದುಂದುಭಿಯಂ ಪೊಯ್ಸುವುದುಂ

ಲಂಕಾಧೀಶ್ವರ ಕಾಳೆಗಂ ನಿನಗೆ ಲೇಸಲ್ತೆಂತೆನಲ್ ವಾಸುದೇ
ವಂ ಕೊಲ್ವಂ ಪ್ರತಿವಾಸುದೇವನನಿದೇಂ ಸಂದೇಹಮೋ ಸೀತೆಯಂ
ನೀನ್ ಕೊಟ್ಟಟ್ಟು ಬರ್ದುಂಕಲಾಟಿಸುವೊಡೆಂಬಂತಪ್ಪುದಿಗ್ಭಿತ್ತಿಯಂ
ಧೀಂಕಿಟ್ಟತ್ತು ರಘುಪ್ರವೀರ ವಿಜಯ ಪ್ರಸ್ಥಾನ ಭೇರೀರವಂ ೧

ಇರದೊಡನೆಬ್ದ ವಿಯಚ್ಚರ
ಪರಿವೃಢರ ಕಿರೀಟ ರತ್ನರುಚಿಗಳ್ ಗಗನೋ
ದರಮಂ ಚಿತ್ರಿಸೆ ತಳರ್ದಂ
ನಿರಂಕುಶಂ ಲಕ್ಷ್ಮಣಾನ್ವಿತಂ ರಘುರಾಮಂ ೨

ನಡೆಗೊಂಡತ್ತು ಮದೇಭದಾನಜಲಧಾರಾಸಾರದಿಂ ಮಾರುತಂ
ನಡೆಗಟ್ಟಿರ್ಪಿನಮುತ್ಪತಾಕೆಗಳಿನಾಕಾಶಾಪಗಾವೀಚಿ ನೂ
ರ್ಮಡಿಸುತ್ತಿರ್ಪಿನಮಸ್ತ್ರ ಶಸ್ತ್ರಪಟಲ ಪ್ರದ್ಯೋತದಿಂದಂ ಪಗಲ್
ಕಡುಕೊರ್ವಂ ಪಡೆದಿರ್ಪಿನಂ ರಘುತನೂಜಾಖರ್ವ ಚಾತುರ್ಬಲಂ ೩

ಅಂತಸಂಖ್ಯಾತ ಸೇನಾ ಸಮುದ್ರಂ ದಕ್ಷಿಣ ಸಮುದ್ರಾಭಿಮುಖಮಾಗಿ ನಡೆಯೆ ಮುಂದೆ ನಡೆವ ನಳನ ಪಡೆಗೆ ರಣಾನುರಾಗದಿನಡ್ಡಂ ಬಂದ ಸಮುದ್ರ ವೆಸರ ವಿದ್ಯಾಧರನಂ ನಳಂ ಕಟ್ಟಿ ರಾಘವಂಗೊಪ್ಪಿಸೆ ಲಂಕಾದ್ವೀಪ ಸಮೀಪಮಪ್ಪ ಹಂಸದ್ವೀಪದೊಳ್ ಬೀಡಂಬಿಟ್ಟು ಲಕ್ಷ್ಮೀಧರಂ ಪ್ರಭಾಮಂಡಲಂಗೆ ಒಡಿಯನಟ್ಟಿ ಪೆಱವುಂ ದ್ವೀಪಾಂತರದ ವಿದ್ಯಾಧರಾಧಿರಾಜರನಾಜ್ಞಾವಿಧೇಯರಂ ಮಾಡುತ್ತುಮಿರ್ಪಿನಮಿತ್ತಲ್

ತನುಜರುಮನುಜರುಮುಚಿತಾ
ಸನದೊಳ್ ಮಂತ್ರಿಗಳುಮಿರೆ ವಿಲಾಸದಿನಿರ್ದಂ
ದನುಜಾಧೀಶಂ ಪ್ರತ್ಯಂ
ತನಗಂ ಬಳಸಿರ್ದ ನೀಲಕುತ್ಕೀಲದವೊಲ್ ೪

ಜನಕಸುತೆ ಮನದೊಳಿರೆ ಪರಿ
ಜನಮಿರೆ ನಿಯತಪ್ರದೇಶದೊಳ್ ವಿರಹೋದ್ದೀ
ಪನಮಂ ಮಱೆಯಿಸಿ ದನುಜೇಂ
ದ್ರನಿಂದ್ರನಿರ್ಪಂತಿರೋಲಗಂಗೊಟ್ಟಿರ್ದಂ ೫

ಅಂತಿರ್ಪುದುಂ ಚರನೊರ್ವಂ ಬಂದು

ಭುವನದೊಳಿನ್ನೆಗಂ ಮಱೆದು ಕಂಡಱಿಯೆಂ ದನುಜೇಂದ್ರ ದೇವದಾ
ನವಖಚರಾಧಿನಾಯಕರೊಳಾಹವದೊಳ್ ನಿನಗುರ್ಕಿ ಸೊರ್ಕಿ ಮೀ
ಱುವ ತಲೆದೋಱುವುದ್ಧತರನೀಗಳಿದಚ್ಚರಿ ಕಂಡೆನಾನ್ ಮಹೋ
ತ್ಸವದೊಳೆ ಬಂದಪರ್ ಮನುಜರಾಹವಕೇಳಿಗೆ ರಾಮಲಕ್ಷ್ಮಣರ್ ೬

ಎಂದು ಬಿನ್ನವಿಸೆ ವಿದ್ಯಾಧರವೀರ ಪ್ರಮುಖನಪ್ಪ ದಶಮುಖಂ

ತಂದೆಂ ಸೀತೆಯನಾನ್ ಪರಾಭವಮನೆನ್ನೊಳ್ ಕಾದಿ ನೀಗಲ್ ಮನಂ
ದಂದೇಕಾಕಿಗಳೆತ್ತಿ ಬರ್ಪರವರೊಳ್ ಸಂಧಾನಮಂ ಮಾಡಿ ಮು
ನ್ನೆಂದುಂ ಕಪ್ಪಮನಿತ್ತು ಬಾಳ್ವ ಖಚರರ್ ಕಯ್ವಾರದಿಂ ಕಾದಿಸಲ್
ಬಂದಪ್ಪರ್ ಪರಹಸ್ತದಿಂ ಮೊಟನಿಡಲ್ ಬರ್ಪಂತೆ ಕಾಳಾಹಿಯುಂ ೭

ಮೃಗರಾಜಂ ಗರ್ಜಿಪುದುಂ
ನಗದೊಳ್ ಮಾರ್ದನಿಗಳುಣ್ಮುವಂತೊಡನೊಡನಿಂ
ದಗಿ ಮೇಘವಾಹನಾದಿಗ
ಳಗುರ್ವು ಪರ್ವಿನನುಸುರನೆಂದುದನೆಂದರ್ ೮

ಅದಂ ಕೇಳ್ದು ನಯವಿದ್ಯಾವಿನಯವಿಭೂಷಣನಪ್ಪ ವಿಭೀಷಣಂ ಬಿನ್ನಪಮನವಧಾರಿಸುವುದೆಂದಿಂತೆಂದಂ

ಬಗೆ ದೆಸೆಬಿದ್ದಂ ಪರಿವುದು
ಬಗೆಯುಂ ಬಗೆದಂತೆ ಪರಿಯಲೀಯದೆ ಪಿರಿಯಂ
ತೆಗೆವುದು ಪಟಿ ಪೊರ್ದದ ಬ
ಟ್ಟೆಗೆ ನಿಜದಿಂದಾರ ಬಗೆಗಳುಂ ಸೇರಿದುವೇ ೯

ಅವಿರುದ್ಧಮಿದೆಂಬಿನಮನು
ಭವಿಸುವುದಿಂದ್ರಿಯಸುಖಂಗಳಂ ಮಱೆದುಂ ಮೀ
ಱವು ತನ್ನನವೆಂಬನ್ನೆಗ
ಮವನೀಶ್ವರನಪ್ಪುಕಯ್ಯ್ವುದಿಂದ್ರಿಯಜಯಮಂ ೧೦

ಜಡಧಾರೆ ಸೋಂಕೆ ಸಿರಿಗ
ನ್ನಡಿಗೆ ಕಲುಂಬೇಱುವಂತೆ ಸಿರಿಯೊಡೆಯಂಗೇನ್
ಪಡೆಮಾತೊ ಪರಕಲತ್ರದ
ತೊಡರ್ಪಿನಿಂ ಕರ್ಪುಗೊಳ್ಳದಿರ್ಪುದೆ ತೇಜಂ ೧೧

ವಧಮುಂಬಂಧನಮುಂ ಪರಾಭವಮುಮಂಗಚ್ಛೇದಮುಂ ಪೊರ್ದುಗುಂ
ವಿಧುವಿಖ್ಯಾತಿ ಕಲುಂಬುಗೊಳ್ಗುಮಪವಾದಾತೋದ್ಯನಾದಂ ದಿಶಾ
ವಧಿಯಂ ದಾಂಟುಗುಮನ್ಯಜನ್ಮದೊಳಮಕ್ಕುಂ ದುರ್ಗತಿ ಕ್ಲೇಶಮೆಂ
ದಧಿರಾಜರ್ ಕೆಲರಾಲಿಸರ್ ಮಱೆದುಮನ್ಯ ಪ್ರೇಯಸೀವಾರ್ತೆಯುಂ ೧೨

ಪೂವಿನೊಳಂ ಪೋರ್ಕುಳಿ ಸಮ
ಗೇವೃದೊ ಯುದ್ಧಂ ಪ್ರಧಾನಪುರುಷಕ್ಷಯಮೆಂ
ಬೀ ವಚನಮಂ ವಿಚಾರಿಪು
ದೀವುದು ಜಾನಕಿಯನುಟಿವುದಸದಾಗ್ರಹಮಂ ೧೩

ಪರಿಜನಮುಮಾಪ್ತ ಜನಮುಂ
ಪುರಮುಂ ಬಾಂಧವರುಮಗಲದೊಂದೆಡೆಯೊಳ್ ಸ
ಯ್ತಿರಲಕ್ಕುಂ ಜಾನಕಿಯಂ
ಪರಿಹರಿಸಿದೊಡಲ್ಲದಂದಿರಲ್ ಬಂದಪುದೇ ೧೪

ಎಂದು ನುಡಿಯಲೊಡಮಿಂದಗಿ ವಿಭೀಷಣಸುಭಾಷಿತದೂಷಣಪರಂ

ವನಿತಾರತ್ನಮಯತ್ನಸಾಧ್ಯಮೆನೆ ಕಯ್ಸಾರ್ದತ್ತು ನೆಪ್ಪಿಂದದಂ
ಮನುಜಂಗೀವುದು ಮಂತ್ರವಿಹಾಯದೊಡಪಾಯಂ ಸಾಗುರ್ವೆಂಬೀನಯಂ
ಮನದೊಳ್ ಮಚ್ಚರಿಪಂಗೆ ತೋರ್ಕುಮುಟಿದಂಗೇನ್ ತೋರ್ಕುಮೇ ಯುದ್ಧಸಾ
ಧ್ಯನೆ ವಿದ್ಯಾಧರಸಿದ್ಧಕಿನ್ನರಜಮೂವಿದ್ರಾವಣಂ ರಾವಣಂ ೧೫

ಬಗೆಯಂ ಶಂಕಾತಮಂ ತಳ್ತಿರೆ ತಱಿಸಲವಂ ಕಾಣ್ಬುದೇನ್ ಮೊಗ್ಗೆ ನೀಗಾ
ದಿಗೆ ಮುನ್ನೀರ್ ಕೋಂಟೆವಿದ್ಯಾತ್ಮಕವಸುರಬಲಂ ಕಾಪಿನಾಳ್ ತೋಳಬಲ್ಪಿಂ
ನೆಗಟ್ದಾ ತಾರಾದ್ರಿಯಂ ಚಾಲಿಸಿದ ದಶಮುಖಂ ಮುಖ್ಯನೆಂದಂದು ಲಂಕಾ
ನಗರಕ್ಕಾತಂಕಮಕ್ಕುಂ ಮನುಜಬಲದಿನೀ ಕಜ್ಜಮಂ ನೀನೆ ಕಾಣ್ಬಾಯ್ ೧೬

ಎಂಬುದುಂ ವಿಭೀಷಣಂ ಮುಳಿಸಂ ಮೊಗಕ್ಕೆ ತಂದು

ಅಯಶಕ್ಕಂಜದೆ ನೀನ್ ತಂ
ದೆಯ ರಾಜ್ಯಕ್ಕಳಿಪಿ ಕಲಹಮಂ ಬಲ್ಲಿದರೊಳ್
ಬಯಸುವೆ ಗಾವಿಲ ರಣಭೂ
ಮಿಯೊಳಾರುಮನುಸುಟಿಯಲೀಗುಮೇ ರಾಮಶರಂ ೧೭

ತಂದನೆ ಸೀತೆಯನಟಿವಂ
ತಂದಂ ಲಂಕಾಪುರಕ್ಕೆ ತನಗಂ ನಮಗಂ
ತಂದಂ ತವಿಲಂ ನಮ್ಮರ
ಸಂ ದೆಸೆಯುಂ ಪುದಿಯೆ ದುರ್ಯಶಃಪಟಹ ರವಂ ೧೮

ಸಂಧಿಯನಂಟುಮಾಡುವುದು ಸೀತೆಯನೀವುದು ರಾಮಲಕ್ಷ್ಮಣರ್
ಬಾಂಧವರಪ್ಪುದಂ ಬಗೆವುದೇಳಿಸುವಂತವರ್ಗಾರುಮೇನ್ ಸಮ
ಸ್ಕಂಧರೆ ಯುದ್ಧದೊಳ್ ರಣಮನರ್ಥಕಮೆಂತೆನೆ ಕಾದಿದಂದು ನಿ
ಲ್ಕುಂ ಧರೆ ನಿಲ್ವಿನಂ ಪಟಿ ಜಯಾಪಜಯಂಗಳೊಳಂ ದಶಾನನಾ ೧೯

ಮುನ್ ಕೊಟ್ಟಟ್ಟುವುದುತ್ತಮಂ ರಿಪುಬಲಂ ವಾರಾಶಿಯಂ ದಾಂಟಿದ
ನ್ನಂ ಕಲ್ಪಾಂತ ಕೃತಾಂತ ದೂತ ಸದೃಶಂಗಳ್ ರಾಮರೌದ್ರೇಷುಗಳ್
ಲಂಕಾದ್ವಾರ ಕವಾಟಮಂ ಮುಱಿಯದನ್ನಂ ಲಕ್ಷ್ಮಣಜ್ಯಾಲತಾ
ಟಂಕಾರಂ ಕಿವಿಗೆಯ್ದುದನ್ನಮಖಿಲ ಪ್ರಖ್ಯಾತೆಯಂ ಸೀತೆಯಂ ೨೦

ಎಂಬುದುಮಾ ನುಡಿಗೆ ಕಾರ್ಮುಗಿಲ ಮೊೞಗಿಂಗೆ ಮಸಗುವ ಪಂಚಾಸನ ದಂತೆ ದಶಾಸನಂ ದೆಸೆದೆಸೆಗೆ ಮಸಗಿ

ಒಱೆಯಿಂದಮುರ್ಚೆ ಮಿಂಚಂ
ಕಱೆಯುತ್ತುಮಗುರ್ವ ಪರ್ವೆ ವಿಲಯಾಂಬುದದಿಂ
ಪೊಱಮಟ್ಟ ಸಿಡಿಲ ಮಸಕಮ
ನುಱೆ ಸೆಱೆವಿಡಿದತ್ತು ಚಂದ್ರಹಾಸ ಕೃಪಾಣಂ ೨೧

ಆಗಳ್ ವಿಭೀಷಣಂ ವಜ್ರಮಯ ಘನ ಗದಾದಂಡಮಂ ಕೊಂಡದಿರದಿದಿರೊಳಿರ್ಪುದುಂ ಕುಲವೃದ್ಧರೆಡೆವೊಕ್ಕು ನುಡಿವುದುಂ ಕೋಪಮನುಪಸಂಹರಿಸಿ ಮಂದಸ್ಮಿತಮುಖಂ ದಶಮುಖನಿಂತೆಂದಂ

ಎನಗಂ ಬಲ್ಲಾಳ್ ಗಡಂ ಮಾನವನಭಿಮತಮಂ ಕೇಳಲಾದತ್ತವಂಗಾ
ಳ್ತನಮಂ ಪೂಣ್ದೆನ್ನೊಳಂ ದಾಯಿಗತನಮನಿವಂ ತೋರ್ಕೆ ದೋರ್ದಂಡ ಕಂಡೂ
ಯನಮಂ ಚಂಡಾಸಿಸಂಘಟ್ಟದಿನೊಗೆವುರಿಯಿಂ ಮುೞ್ಗಿಪೆಂ ಮೂಱುಕಣ್ಣಾ
ತನುಮೆನ್ನಂ ಮಿಱಿ ಮಾಱಾಂತೊಡೆ ಪಡೆಯದೆ ಸಂತ್ರಾಸಮಂ ಚಂದ್ರಹಾಸಂ

ಭೀತಿಯನುಪದೇಶಂಗೆಯ್ವ ಪಂದೆಯನೀಗಳೆ ಲಂಕೆಯಿಂ ಕಳೆಯಿಮೆನೆ

ಉರಿ ಕೊಳಲಿರ್ದ ಸಾನುವನದಿಂ ಮದಸಿಂಧುರಯೂಥನಾಥನೋ
ಸರಿಸುವ ಮಾಳ್ಕೆಯಿಂ ದಶರಥಾತ್ಮಜರಿಂ ಕಿಡಲಿರ್ದ ಲಂಕೆಯಿಂ
ದಿರದೆ ವಿಭೀಷಣಂ ತೊಲಗಿದಂ ಖಚರಾನ್ವಯ ರಾಜ್ಯಲಕ್ಷ್ಮಿಯಂ
ಧರಿಯಿಸಲಿರ್ದ ಪುಣ್ಯನಿಧಿಯಂ ಸುಕೃತಂ ತೊಲಗಿಕ್ಕದಿರ್ಕುಮೇ ೨೨

ಅಂತು ವಿಭೀಷಣಂ ಲಂಕಾದ್ವೀಪಮಂ ಪೊಱಮಟ್ಟು ಹಂಸದ್ವೀಪಕ್ಕೆ ವಂದು ನಿಜ ಮಹತ್ತರನಂ ಮುಂದಟ್ಟುವುದುಮಾತಂ ಪೋಗಿ ಪ್ರತೀಹಾರ ಪುರಸ್ಸರಂ ರಾಜಭವನಮಂ ಪೊಕ್ಕು ದೂರಾವನತಮಸ್ತಕಂ ದೇವ

ಮದಮದಿರಾ ಪ್ರಮತ್ತಹೃದಯಂ ಹಿತಮಂ ತನಗೊಲ್ದು ಪೇೞೆ ಕೇ
ಳದೆ ವಿಪರೀತಮಂ ಬಗೆದು ಬಗ್ಗಿಸೆ ರಾವಣನೀ ದುರಾತ್ಮನೊಳ್
ಪುದುವೆನೆಗೇವುದೆಂದು ಒಡುತಿರ್ದಪನಲ್ತೆ ಶರಣ್ಬುಗಲ್ ಭವ
ತ್ಪದಸಖವಜ್ರಪಂಜರಮನಾಜಿವಿಭೀಷಣನಾ ವಿಭೀಷಣಂ ೨೪

ಎಂದು ಬಿನ್ನವಿಸುವುದುಮತಿಕ್ರಾಂತ ಪ್ರಮುಖಮಂತ್ರಿಮುಖ್ಯರಿವರೊಡವುಟ್ಟಿದವರಾಗಿಯುಮತಿಸ್ನೇಹಿತರಪ್ಪರ್ ಪುಸಿಜಗಳವಂ ಪೊಣರ್ಚೆ ನಮಗುಪಾಯದಿನಪಾಯಮಂ ಬಗೆದು ಬಂದಪ್ಪರಿದಂ ದೇವರವಧಾರಿಸುವುದೆನೆ

ದನುಜರಪಾಯಮಂ ಬಗೆವರೆಂತೆನಗಾ ದಶಕಂಠನುಂ ರಣ
ಕ್ಕೆನಗಿದಿರಾಗಲಳ್ಕಿ ಜನಕಾತ್ಮಜೆಯಂ ಕಪಟಪ್ರಪಂಚಮಂ
ಜನಿಯಿಸಿ ಕೊಂಡು ಪೋದನೆನೆ ಕೆಮ್ಮನೆ ಬೆರ್ಚುವುದೇ ಶರಣ್ಗೆ ವಂ
ದನೊಳಭಯಪ್ರದಾನಮನೊಡರ್ಚುವುದೇವುದಿದರ್ಕೆ ಮಂತಣಂ ೨೫

ಎರೆದರ್ಗೀಯದೆ ಮಾಱಾಂ
ತರಸಿಕ್ಕದೆ ಮಱೆಗೆ ವಂದರಂ ಕಾಯದೆ ಬಾ
ಳ್ವರಮಗನ ಬಾಹುದಂಡಂ
ನಿರರ್ಥಕಂ ವ್ಯರ್ಥಮವನ ಪಾರ್ಥಿವ ಜನ್ಮಂ ೨೬

ಎಂಬುದುಮಂಜನಾಸುತಂ ಜನಪ್ರವಾದದೊಳಮಿವರ ವಿಪ್ರತಿಪತ್ತಿಯಂ ಕೇಳ್ದವದಲ್ಲದೆಯುಂ ವಿಭೀಷಣಂ ಗುಣಾಧಿಕನೆಂಬುದು ಜಗತ್ಪ್ರಸಿದ್ಧಮಾತನೆನಗಸ್ಮಜ್ಜನನಿ ಸೀತಾದೇವಿಯಿರ್ದೆಡೆಯಂ ಪೇೞ್ದನ್ನಂ ಮನ್ನಿಸಿ ಕಟಿಪಿದನೆನೆ ರಘುಕುಲಾಂಬರದ್ಯುಮಣಿ ವಿಭೀಷಣಮಹತ್ತರನಂ ತುಷ್ಟಿದಾನ ಪುರಸ್ಸರಂ ನಿಮ್ಮಾಳ್ದನಂ ತಂದು ಕಾಣಿಸೆಂದು ವಿಸರ್ಜಿಸುವುದುಮಾತಂ ವಿಭೀಷಣನಂ ಕಂಡು ರಾಮದೇವರ ಕಾರುಣ್ಯಮುಮಂ ಮಹಾಮಹಿಮೆಯುಮಂ ಬಿನ್ನಪಂ

ಗೆಯ್ವುದುಂ ಪ್ರಧಾನಪುರುಷಪುರಸ್ಸರಂ ಒಂದು ಪದಾನತನಾಗೆ ರಾಮಂ ತೆಗೆದಾದರದಿಂ ತಪ್ಕೈಸೆ

ರಾವಣನಿಂದಾದೆರ್ದೆವಟ
ಲಾವಗಮೋಸರಿಸೆ ನೃಪನ ದಯೆಯಿಂ ಖಚರಂ
ದಾವಾನಲನಿಂ ಬೆಂದು ಸು
ಧಾ ವರ್ಷದಿನಾಱಿದಚಲಮಿರ್ಪಂತಿರ್ದಂ ೨೭

ಅನಂತರಂ ರಾಮಚಂದ್ರಂ ವಿಭೀಷಣನಂ ಬೀಡಿಂಗೆ ಬಿಸಸುವುದುಮನ್ನೆಗ ಮಿತ್ತಲ್ ಪ್ರಭಾಮಂಡಲಂ ಸಹಸ್ರಾಕ್ಷೌಹಿಣೀಬಲಂ ಬೆರಸು ಬಂದು ಕೂಡು ವುದುಂ ಮಱುದಿವಸಮಲ್ಲಿಂ ತಳರ್ದು ಸಮುದ್ರತೀರಮನೆಯ್ದಿ ಅದಂ ನೋಡಿ ಮೆಚ್ಚುತ್ತುಮಿರ್ಪುದುಮಾ ಸಮಯದೊಳ್ ನಳಂ ನಡೆಯಿಸಲ್

ಬೆಟ್ಟಮನೊಟ್ಟಿ ಬಟ್ಟೆನಡೆವಚ್ಚಿಗಮೇವುದೊ ವಾರ್ಧಿಯಂ ಮುಗಿ
ಲ್ವಟ್ಟೆಯೆ ಬಟ್ಟೆಯಾಗೆ ನಡೆವಚ್ಚರಿವೆತ್ತು ವಿಯಚ್ಚರಾಧಿಪರ್
ತೊಟ್ಟನೆ ದಾಂಟಿ ವಾರಿಧಿಯನಾ ತಡಿಗೆಯ್ದುವುದುಂ ನಭಕ್ಕೆ ತೂಂ
ತಿಟ್ಟವೊಲಾಗೆ ದಳ್ಳಿಸಿದುದಾ ಪಡೆಯೊಳ್ ಪೊಱಪೊಣ್ಮುವುಳ್ಳೊಳಂ ೨೮

ಅಂತು ಸಮುದ್ರಮಂ ದಾಂಟಿ ಲಂಕಾಭಿಮುಖರಾಗಿ ಪಯಣಂ ಬೋಗಿ ವಿಂಶತಿಯೋಜನ ವಿಸ್ತಾರಮುಂ ತ್ರಿಂಶದ್ಯೋಜನಾಯಾಮಮುಮಪ್ಪ ರಣ ಭೂಮಿಯಂ ಕಯ್ಕೊಂಡು ಬೀಡಂ ಬಿಟ್ಟಿರ್ಪುದುಂ

ಜನತಾ ಕೋಲಾಹಲಂ ಕಾಹಳ ಬಹುವಿಧ ವಾದ್ಯಸ್ವನಂ ಶಂಖ ಭೇರೀ
ಧ್ವನಿ ಹೇಷಾಬೃಂಹಿತಂಗಳ್ ವಿಲಯ ಜಲನಿಧಿ ಧ್ವಾನಮೆಂಬನ್ನೆಗಂ ಭೋಂ
ಕನೆ ಕರ್ಣಾಭ್ಯರ್ಣಮಂ ಸಾರ್ತರೆ ಮುನಿದಸುರಂ ಪೊಯ್ಸೆ ಪೊಣ್ಮಿತ್ತುಚಂಡಾ
ಶನಿಘೋಷಂ ಲೋಕಮಂ ಮೂವಳಸುವಳಸೆ ಸನ್ನಾಹ ಭೇರೀನಿನಾದಂ ೨೯

ಎನಗೆ ರಣರಭಸದಿಂ ಗಡ
ಮನುಜಂ ಮೇಲೆತ್ತಿ ಬಂದನಿನ್ ಡೋಃಕಂಡೂ
ಯನಮಂ ಕಟಿಲ್ಚಲೆಡೆಯಾ
ಯ್ತೆನುತ್ತುಮುತ್ತರಳ ತಾಮ್ರ ಲೋಚನನಾದಂ ೩೦

ಆಗಳಾ ಭೇರೀರವಮಂಬರವನಾವರಿಸೆ ಭಾಸ್ಕರಪುರಂ ಮೊದಲಾಗೆ ಪಲವುಂ ಪುರಂಗಳ ವಿದ್ಯಾಧರರಾಜರೆಲ್ಲಂ ಸೇನಾಸಾಮಗ್ರೀಸಹಿತರಾಗಿ ಬಂದು ಕೂಡುವುದುಮವರಂ ಸನ್ಮಾನದಾನ ಪುರಸ್ಸರಂ ಸಂತೋಷಂಬಡಿಸಿ ಚತುಸ್ತ್ರಿಂಶತ್ಸಹಸ್ರಾಕ್ಷೌಹಿಣೀ ಬಲಂಬೆರಸು ದಶಗ್ರೀವಂ ರಣರಸೋದ್ಗ್ರೀವನಾಗಿರ್ದಂ ಇತ್ತ ರಾಮಲಕ್ಷ್ಮಣರ್ ಸಹಸ್ರಾಕ್ಷೌಹಿಣೀ ಬಲಕ್ಕಧಿಪರಪ್ಪ ಸುಗ್ರೀವ ಪ್ರಭಾಮಂಡಲ ಸಮನ್ವಿತರ್ ಪೆಱರುಮತಿಬಲರಪ್ಪ ವಿದ್ಯಾಧರರ್ ಬಂದು ಕೂಡುವುದುಮವರನೊಳಕೊಳುತ್ತುಂ ಸಂಗ್ರಾಮೋತ್ಸುಕ ಚಿತ್ತರಾಗಿರ್ದರ್ ಅಂತು ಭಯಬಲಂ ನೆಲನುಮಾಗಸಮುಮೆಡೆನೆಱೆಯದಂತು ಸಮುಚಿತ ವ್ಯೂಹಪ್ರತಿವ್ಯೂಹ ಸ್ಥಾಪನೆಗಳಂ ಯಥಾವಿಧಿಯಿಂ ಪ್ರಯೋಗಿಸಿ ಕನಲ್ದೊನಲ್ದು ಕದನಕೇಳೀ ಕುತೂಹಲದಿನಿರ್ಪುದುಮಿತ್ತ ನಳನೀಲರುಮತ್ತ ಹಸ್ತಪ್ರಹಸ್ತರುಮೊಡನೆ ಕಡೆಗಾಲದ ಸಂಜಿನ ಪ್ರಳಯಪ್ರಭಂಜನಂ ಬೀಸುವಂತೆ ಕಯ್ವಾಸುವುದುಂ

ಧರೆ ಕಂಪಂಗೊಳ್ವಿನಂ ಪೆರ್ವಡೆಗಳೆರಡುಮೋರೊಂದಱೊಳ್ ತಾಗೆ ತೂರ್ಯ
ಸ್ವರಮುಂ ಕೋದಂಡ ಟಂಕಾರಮುಮಿಭರದಸಂಘಟ್ಟನಿರ್ಘೋಷಮುಂ ಜೋ
ದರ ಬಾಣಾಸಾರ ಘೋರಧ್ವನಿಯುಮಸಿಖಣತ್ಕಾರಮುಂ ಪರ್ವಿರೋದೋಂ
ತರಮಂ ಸಂವರ್ತಕಾಲ ಕ್ಷುಭಿತ ಜಲನಿಧಿ ಧ್ವಾನದಂತಾದುದೆತ್ತಂ ೩೧

ಓವದೆ ಬಿಲ್ಲ ಬಿತ್ತಿಗರಡುರ್ತಿಸೆ ರೌದ್ರಶರಾಳಿ ರೋಮ ರೋ
ಮಾವಳಿದಪ್ಪದುರ್ಚೆ ಬಿಸುನೆತ್ತರ ಸುಟ್ಟುರೆ ಪರ್ವೆ ವಹ್ನಿಜಿ
ಹ್ವಾವಳಿಯಂದಮಾಗೆ ತೊವಲಿಕ್ಕಿದ ಪೆರ್ವಟು ಬೇಗೆಗಿರ್ಚೆನೊಳ್
ಜೀವವೊಲಿರ್ದುವಿರ್ವಲದ ಬಿಲ್ಲಣಿಗಳ್ ರಣರಂಗಭೂಮಿಯೊಳ್ ೩೨

ಬಾಳುಡಿ ಪಾಱಿ ಬೀಟೆ ಪಗಲುಳ್ಕದವೊಲ್ ರುಧಿರಂ ದಿಗಂತಮಂ
ಮೇಳಿಸಿ ಕೊರ್ವಿ ಕಲ್ಪದವಸಾನದ ಸಂಜೆಮುಗಿಲ್ಗಳಂದಮಂ
ಪಾಳಿಸಿ ಸೂಸಿ ಕೊಟ್ಕಿದುಳ ತಂಡಮಿಳಾವಳಯಕ್ಕೆ ಬಿಟ್ಟು ತಾ
ರಾಳಿಗಳಂತಗುರ್ವಿಸೆ ಭಯಂಕರಮಾಯ್ತು ತುರಂಗ ಸಂಗರಂ ೩೩

ಕದನದೊಳಾರ್ದು ಸಾರ್ದಿಸೆ ಮಹಾರಥರಚ್ಚು ಸಡಿಲ್ದುದೀಸು ಸೂ
ಸಿದುದರಗೀಲ್ ಕಟಿಲ್ದುದು ಮಡಂ ಕಡಿವೋದುವು ಪಾಪೆ ರೂಪುಗೆ

ಟ್ಟುದು ಸೊಗಸೋರೆವೋಯ್ತು ತುರಗಂ ಪಡಲಿಟ್ಟುದು ವೈಜಯಂತಿ ಜಿ
ಬ್ಬುದು ರಥಚೋದಕರ್ ಮಡಿದರಾಗಳಪಾರ ಶರಪ್ರಹಾರದಿಂ ೩೪

ಉಗುವೆಂಟಂ ಮದಧಾರೆ ಬಲ್ಸರಿಗಳಂ ದಂತಾಂಶುಗಳ್ ಬಳ್ಳಿಮಿಂ
ಚುಗಳಂ ಬಿಜ್ಜನೆ ಬಿಟ್ಟ ದಿಟ್ಟಿ ಸಿಡಿಲಂ ಕೀಪ್ಮಾಡೆ ಬಂದೆಯ್ದಿ ಕಾ
ರ್ಮುಗಿಲೊಡ್ಡಂ ಮುಗಿಲೊಡ್ಡು ತಾಗುವವೊಲೆಯ್ತಂದಾನೆಯೊಡ್ಡಾನೆಯೊ
ಡ್ಡುಗಳೊಳ್ ತಾಗಿದುವದ್ಭುತ ಸ್ತನಿತಮೆಂಬನ್ನಂ ಬೃಹದ್ಬೃಂಹಿತಂ ೩೫

ಅಂತು ಪಲವುಂ ದಿನಮೆರಡುಂ ಬಲದ ಮಹಾ ಬಲಪರಾಕ್ರಮರ್ ಕಾದಿ ವಣ್ಮುಟಿಯಾಗೆ ಹಸ್ತಪ್ರಹಸ್ತರಸ್ತಮಿಸೆ ಪವಮಾನತನೂಭವಂ ಕುಂಭಕರ್ಣನ ತನೂಭವರಪ್ಪ ಮಾಲಿ ಜಂಬುಮಾಲಿಗಳ ಬಲಮನಳಱೆ ತಾಗಿ

ಮಾಲಿಗೆ ಜಂಬುಮಾಲಿಗೆ ಮರುತ್ತನಯಂ ಕುಡೆ ಯುದ್ಧದೊಳ್ ಕೃತಾಂ
ತಾಲಯಮಂ ನಿಜಾತ್ಮಜರ ಸಾವಿನೊಳುತ್ಕಟಮಾಗೆ ಶೋಕಮು
ನ್ಮೀಲಿಸೆ ಕೋಪವಾ ಪ್ರಳಯಭೈರವನಂತಿರೆ ಕುಂಭಕರ್ಣನಾ
ಭೀಳಮನೆತ್ತಿ ಪೊತ್ತು ನಡೆದಂ ಕದನಕ್ಕಿದಿರಂ ತ್ರಿಶೂಲಮಂ ೩೬

ಆಗಳ್ ಸುಗ್ರೀವಂ ಹನುಮಂ ಮೊದಲಾಗೆ ಕಪಿಧ್ವಜರ ನಾಯಕರನಿಬರುಂ ರಕ್ಕಸವಡೆ ಬೆಂಗುಡೆ ಕಾದುತ್ತುಮಿರೆ ಕಂಡು ಕಡುಮುಳಿದು

ಚಳಿಯಿಸಲಮರಾಚಲಮಂ
ತುಳುಂಕಲಂಭೋನಿಧಾನಮಂ ದಿನಕೃನ್ಮಂ
ಡಳಮನಿಳೆಗಿಟಿಪಲೆಂದಾ
ಜಿಳಂಪಟಂ ದೆಸೆಗೆ ಮಸಗಿದಂ ದನುಜೇಂದ್ರಂ ೩೭

ನೀನ್ ಬರೆಗಂ ಕಪಿಧ್ವಜರಸಾಧ್ಯರೆ ನಿನ್ನೊಳಿದಿರ್ಚುವನ್ನನಾ
ವನ್ ಬೆಸಸೆನ್ನನಂಜಿದೊಡಮಂದಿರ ಬಾಡ್ದಲೆದಂದಪೆಂ ರಣಾ
ಡಂಬರದಿಂದಮಂಜದೊಡೆ ಪಂದಲೆದಂದಪೆನೆಂದು ಪೂಣ್ದು ಶೌ
ರ್ಯಾಂಬುಧಿ ಬೇಡಿದಂ ಬೆಸನನಿಂದಗಿ ದಾನವಚಕ್ರವರ್ತಿಯಂ ೩೮

ಅಂತು ತಂದೆಯುಂ ಬೇಡಿಕೊಂಡು ತ್ರೈಲೋಕ್ಯ ಕಂಟಕಮೆಂಬಾನೆಯನೇಱಿ ಮುಳಿದು ಬರೆ ವಾನರಬಲಂ ದೋರ್ವಲಮನುೞಿದು ಪೆಱಱೆ ಸುಗ್ರೀವಂ ಪ್ರಭಾಮಂಡಲನೊಡನಿದಿರ್ಚಲ್ ನೆಱೆದು ನಿಲ್ವುದುಮವನನಿಂದ್ರಜಿತ್ಕುಮಾರಂ

ಕಪಿವಂಶಕ್ಕೆ ನಿಸರ್ಗಂ
ಚಪಲತೆ ಖಚರೇಂದ್ರನಪ್ಪ ದಶಕಂಠನ ಪಾ
ದಪಯೋಜ ಸೇವೆಯುಂ ಬಿ
ಟ್ಟು ಪಶುವೆ ನೀನ್ ಭೂಚರಂಗೆ ಕಿಂಕರನಾದಯ್ ೩೯

ನಿನ್ನಿಂಬನಱಿಯದಾಜಿಯೊ
ಳೆನ್ನೊಡನೆ ಪೊಣರ್ಕೆಗೆಂದು ಬಂದಪೆ ಮುಳಿದಾನ್
ನಿನ್ನಂ ಕೊಲ್ವೆಡೆಯೊಳ್ ಕಾ
ವನ್ನರ್ ಕಯ್ಕೊಂಡು ಭೂಮಿಗೋಚರರೊಳರೇ ೪೦

ಎನೆ ಮುಳಿದು

ಕಾಳೆಗಮನುೞಿದು ಪೆಂಡಿ
ರ್ಗಾಳಿಗಮಂ ಮಾಪ್ಪೆ ಗಂಡುವಾತುಳ್ಳೊಡೆ ಕೂ
ರ್ವಾಳ ಮಸೆದೋರ್ಪುದೆನಗೆಂ
ದೇಳಿಸಿದಂ ದನುಜತನುಜನಂ ಸುಗ್ರೀವಂ ೪೧

ಅಂತವರಿರ್ವರುಮೋರೊರ್ವರಂ ಮೂದಲಿಸಿ ಕಾದುತ್ತಿರ್ದರಿತ್ತಲ್

ಜನಕಾತ್ಮಜನೊಳ್ ದಶಮುಖ
ತನೂಭವಂ ಮೇಘವಾಹನಂ ಬಿಲ್ವೊಯ್ದಂ
ಬಿನ ಮಡೆಯಂ ಲಯಸಮಯದ
ಘನಾಘನಂ ಕಱೆವ ಮಾಳ್ಕೆಯಿಂದಂ ಕಱೆದಂ ೪೨

ಅವನೆಚ್ಚಂಬುಗಳಂ ಪ್ರಭಾಮಂಡಲಂ ಕಡಿಯೆ

ದನುಜಸುತಂ ಪನ್ನಗಶರ
ದಿನಿಸುವುದುಂ ಜನಕಸುತನನದು ಪೆಣೆದಹಿಬಂ
ಧನದಿಂ ಪೊಡರ್ಪುಗುಂದಿಸೆ
ತನುವಂ ಮಱೆದಿಳೆಗೆ ಬಿಬ್ದು ಮೂರ್ಛೆಗೆ ಸಂದಂ ೪೩

ಇತ್ತಲಿಂದ್ರಜಿತ್ಕುಮಾರಂ ಸುಗ್ರೀವನಂ ವಿರಥನಂ ಮಾಡಿ ಪನ್ನಗಾಸ್ತ್ರ ದಿಂದಿಸುವುದುಂ

ಕಾಲಡಿಯಿಂ ಕೊರಲ್ವರೆಗಮಿಂದಗಿಯೆಚ್ಚ ಫಣೀಂದ್ರಸಾಯಕಂ
ಕೀಲಿಸಿದಂತೆವೊಲ್ ಬಿಗಿಯೆ ಸುತ್ತುವುದುಂ ಬಸನುತ್ತು ಮುಚ್ಚಿ ಕ
ಣ್ಣಾಲಿಗಳಿಚ್ಚೆಗೆಟ್ಟು ಕಪಿಕೇತನನಾಗಳೆ ಮುಚ್ಚೆವೋಗೆ ಶ
ಕ್ರಾಲಯಮಂ ಪಳಂಚಿದುದು ದಾನವ ಸೈನ್ಯ ಜಯಾನಕಸ್ವನಂ ೪೪

ಮತ್ತಿತ್ತಲೊಂದು ಮೊನೆಯೊಳ್

ಮಾಯಾಯುದ್ಧದೊಳಂ ದಿ
ವ್ಯಾಯುಧಯುದ್ಧದೊಳಮಧಿಕಬಲರುಭಯಬಲಂ
ಜೀಯೆಂಬಿನೆಗಂ ಕಾದಿದ
ರಾಯತಿ ನಿಲೆ ಕುಂಭಕರ್ಣನುಂ ಮಾರುತಿಯುಂ ೪೫

ರಣಕರ್ಕಶನಸುರ ಕುಲಾ
ಗ್ರಣಿ ವಿರಥಂ ಮಾಡಿ ವೀರನಂ ಖಚರಕುಲಾ
ಗ್ರಣಿಯಸವಯುವದೊಳಣುವನ
ಸಣುವಂ ಪಿಡಿವಂತೆ ಕುಂಭಕರ್ಣಂ ಪಿಡಿದಂ ೪೬

ಅಂತಿಂದಗಿ ಮೇಘವಾಹನ ಕುಂಭಕರ್ಣರಿಂ ಸುಗ್ರೀವ ಪ್ರಭಾಮಂಡಲ ಹನುಮತ್ಪ್ರಮುಖ ಮುಖ್ಯನಾಯಕರ್ಕಳ್ ನಾಗಪಾಶ ವಿದ್ಯೆಯಿಂ ಕಟ್ಟುವಡೆದು ಪಟ್ಟಿರ್ಪುದುಂ

ಅವರಗವಟ್ಟಿರವಂ ತಿಳಿ
ದು ವಿಭೀಷಣನಱಿಪಿ ರಾಮ ಲಕ್ಷ್ಮೀಧರರ್ಗೆ

ನ್ನ ವರೂಥಿನಿಯಂ ಕೊಂಡ
ನ್ನೆವರಂ ನೀಮಿರ್ಪುದವರನೀಗಳೆ ತರ್ಪೆಂ ೪೭

ಎಂದು ಬಿನ್ನಪಂಗೆಯ್ದು ರಣರಸಿಕನಾಗಿ ಪೋಪುದುಮಂಗದಂ ತಾನು ಮೊಡನೆ ಸಂಗ್ರಾಮಸಂರಂಭಮನಪ್ಪುಕಯ್ದು ಕುಂಭಕರ್ಣನಂ ಮುಟ್ಟೆವಂದು

ಸಂಗರದೊಳ್ ಕುಡುವೆಂ ದೋ
ರ್ಭಂಗಮನಾವಂಗಮೆಂದು ಕಲುಷಾನಲಸಿಂ
ದಂಗದನಂಗೀಕರಿಸಿದ
ನಂಗಾರಮನುಗುೞ್ವ ಕಾರ ಸಿಡಿಲ ಪೊಡರ್ಪಂ ೪೮

ಶರಭಂ ಪಿಡಿದ ಮೃಗಾಧೀ
ಶ್ವರನಂ ಭೇರುಂಡನೆಡೆದುಕೊಳ್ವಂತೆ ನಿಶಾ
ಚರ ಕರದಿನಂಗದಂ ಸಂ
ಗರ ರಂಗದೊಳೆಡೆದುಕೊಂಡನನಿಲಾತ್ಮಜನಂ ೪೯

ಗೆಲೆ ಕಾದಿ ಕುಂಭಕರ್ಣನ
ನಲಂಘ್ಯಬಲನಂಗದಂ ಜಯಶ್ರೀ ನಿಲಯಂ
ಜಲದ ಪಥಕ್ಕೊಗೆದಾಕ್ಷಣ
ದೊಳೆ ಮಾರುತಿವೆರಸು ರಘುಜನಲ್ಲಿಗೆ ಬಂದಂ ೫೦

ಇತ್ತಲಾ ವಿಭೀಷಣನಿಂದಗಿ ಮೇಘವಾಹನರೊಳಾಹವಕ್ಕೊಡರ್ಚುವುದು ಮವರೆಮ್ಮ ಕಿಱಿಯಮ್ಮನೊಳ್ ಕಾದುವುದು ತಕ್ಕುದಲ್ತು ಪಿಂಗೆ ಭಂಗ ಮಿಲ್ಲೆಂದು ಕಯ್ದುಗೆಯ್ದುದುಪೇಕ್ಷೆಗೆಯ್ದು ತೊಲಗೆ ಮುಟ್ಟೆವೋಗಿ ವಿಭೀಷಣಂ ಪನ್ನಗಶರವೇಷ್ಟಿತರಾಗಿರ್ದ ಸುಗ್ರೀವ ಪ್ರಭಾಮಂಡಲರಂ ಕಂಡೇನುಂಗೆಯ್ಯ ಲಱಿಯದೆ ಸಂಭ್ರಮಚಿತ್ತನಾಗಿ ನೋಡುತ್ತುಮಿರೆ

ಏನುಚಿತಮೆನಗೆ ರಘುಕುಲ
ಹಾನಿಯನೀಕ್ಷಿಸುವುದೆಂದು ಕಡುವೇಗದಿನು
ತ್ತಾನಪದಂ ಪೋಪಂತಿರೆ
ಭಾನು ಬಿಸಿಲ್ ಮಸುಳೆ ಪೊಕ್ಕನಪರಾರ್ಣವಮಂ ೫೧

ದಶಾಸ್ಯನುಮಪಹಾರತೂರ್ಯಮಂ ಪೊಯಿಸಿ ಬೀಡಿಂಗೆ ಪೋದನಿತ್ತಲ್

ಸೌಮಿತ್ರಿ ಮುಕುಲಿತಾಂಜಲಿ
ರಾಮಂಗಿಂತೆಂದನಿವರ್ಗೆ ಪನ್ನಗಶರಮುಂ
ಭ್ರಾಮುದ್ರಾಚ್ಛೇದನದಿಂ
ಕ್ಷೇಮಮನೊಡರಿಸುವುಪಾಯಮಾವುದು ಬೆಸಸಿಂ ೫೨

ಎನೆ ದಾಶರಥಿ

ಇವರುಪದ್ರವಮಂ ಕ್ಷಣಮಾತ್ರದಿಂ
ತವಿಸುಗುಂ ನೆನೆ ಮುನ್ ಬರಮಿತ್ತನಂ
ದಿವಿಜನಂ ಪೆಱತೇನೆನೆ ಲಕ್ಷ್ಮಣಂ
ಸವಿನಯಂ ನೆನೆದಂ ಬರಮಿತ್ತನಂ ೫೩

ತನಗಾಸನಕಂಪಂ ತೊ
ಟ್ಟನೆ ಪುಟ್ಟೆ ರಣಪ್ರಪಂಚದೊಳ್ ರಘುವೀರಂ
ನೆನೆದಪನೆಂದು ಮಹಾಲೋ
ಚನನೊರ್ಮೊದಲಱಿದನವಧಿಲೋಚನದಿಂದಂ ೫೪

ಅಂತದನಱಿದು ಸಿಂಹವಾಹಿನಿ ಗರುಡವಾಹಿನಿಯೆಂಬೆರಡು ವಿದ್ಯೆಗಳುಮಂ ದಿವ್ಯಾಸ್ತ್ರಂಗಳುಮಂ ಕವಚಂಗಳುಮನುಯ್ದು ಕುಡೆಂದು ನಿಜಾನುಚರನಪ್ಪ ಚಿಂತಾವೇಗನೆಂಬ ದೇವಂಗೆ ಬೆಸಸುವುದುಮಾತಂ ಬಂದು ಸಿಂಹವಾಹಿನಿಯಂ ಶ್ರೀರಾಮಂಗೆ ಗರುಡವಾಹಿನಿಯಂ ಲಕ್ಷ್ಮೀಧರಂಗೆ ಸದ್ಭಾವದಿನೀವುದುಂ

ಮನ್ನಿಸಿ ಚಿಂತಾವೇಗನು
ಹೋನ್ನತನಂ ಜೈನಪೂಜೆಗೆಯ್ದು ತಿಹರ್ಷೋ
ತ್ಪನ್ನ ಪುಲಕಾವಲೀ ಸಂ
ಛನ್ನ ಶರೀರರ್ ಬಲಾಚ್ಯುತರ್ ಬಗೆಗೊಂಡರ್ ೫೫

೮. ರಘುವೀರ ವಿಜಯಂ

ಆನಂತರಮಾ ಗರುಡವಾಹಿನಿಯ ತನುಪ್ರಭೆ ತಮಮನಭಿಭವಿಸೆ ತತ್ಪಕ್ಷಪಾತಜಾತವಾತಘಾತದಿಂ ನಾಗಪಾಶವಿದ್ಯೆ ಸಡಿಲ್ದುಪೋಗೆ ಸುಗ್ರೀವ ಪ್ರಭಾಮಂಡಲರಪಗತಮೂರ್ಛಾಪ್ರಪಂಚರ್ ರಾಮಲಕ್ಷ್ಮಣರಲ್ಲಿಗೆ ಬಂದು ಅವರ ಪುಣ್ಯಪ್ರಭಾವಕ್ಕೆ ಸಂತೋಷಂಬಟ್ಟಿರ್ಪುದುಂ

ಇಂದಿನನುವರದೊಳಪಜಯ
ಮಂ ದನುಜಂಗುಂಟುಮಾಳ್ಕುಮಿನವಂಶಜನೆಂ
ದಂದಧಿಕ ರಾಗಮಂ ತಳೆ
ದಂದದಿನಿನನುದಯಶಿಖರಿ ಶೇಖರನಾದಂ ೧

ಅಂತು ನೇಸಱ್ ಮೂಡುವುದುಂ ದಶವದನನೆಂದಿಸಂದದಿಂ ರಣಭೂಮಿಗೆ ವಂದೊಡ್ಡಿ ನಿಲ್ವುದುಮಿತ್ತ ರಾಮಲಕ್ಷ್ಮಣರ್ ದೇವನಿತ್ತ ದಿವ್ಯಕವಚಮಂ ತೊಟ್ಟು ಸಿಂಹ ಗರುಡವಾಹನಂಗಳನೇಱಿ ಸಿಂಹ ಗರುಡಧ್ವಜಂಗಳನೆತ್ತಿಸಿ ದೇವನಿರ್ಮಿತಂಗಳಪ್ಪ ಸಿತಾತಪತ್ರಂಗಳಂ ಪಿಡಿಯಿಸಿ ಸುಗ್ರೀವ ಪ್ರಭಾಮಂಡಲ ಮರುತ್ಸುತ ವಿಭೀಷಣ ಪ್ರಮುಖ ನಿಖಿಲ ವಿದ್ಯಾಧರರ್ ಬಳಸಿ ಬರೆ ಸಂಗ್ರಾಮಭೂಮಿಗೆ ಬಂದೊಡ್ಡಿ ನಿಲ್ವುದುಂ

ವಾನರಸೇನೆ ದಾನವರ ಸೇನೆಯುಮಳ್ಕುಱೆ ಕಾದೆ ಕಂಡು ಪಂ
ಚಾನನದಂತೆ ಗರ್ಜಿಸಿ ದಶಾನನನೆಯ್ತರೆ ಬೆರ್ಚಿ ಪೋಗೆ ದೀ
ನಾನನವಾ ಕಪಿಧ್ವಜಿನಿ ಬೇಗಮದಂ ಪೆಱಗಿಕ್ಕಿ ತಾಗಿದಂ
ದಾನವರಾಜನಂ ಜವನ ಮುಂಬಿವನೆಂಬಿನೆಗಂ ವಿಭೀಷಣಂ ೨

ಅಂತು ತಾಗುವುದುಂ ಕಡುಮುಳಿದು

ಎನ್ನೊಡನೆ ಪುಟ್ಟಿ ಖಚರ ಕು
ಲೋನ್ನತಿ ಕೀೞ್ಪಟ್ಟು ತಕ್ಕುಗಿಡೆ ಕಿಂಕರ ಭಾ
ವನ್ನಿನಗೆ ಸಮನಿಸಿತ್ತು ಕೆ
ಲನ್ನಗುವಿನಮೆಲವೊ ನೀಚ ಭೂಗೋಚರರೊಳ್ ೩

ಅದಱಿನೆನ್ನ ಮುಂತಣಿಂ ತೊಲಗೆಂದ ದಶಮುಖನ ದುರುಕ್ತಿಗೆ ವಿಭೀಷಣಂ ಕೋಪಗ್ರಹಾವೇಶಮನಪ್ಪುಕಯ್ದು ಹಿತಮನಱಿಪಿದೊಡೆನ್ನಂ ಪೋಱಿನುಡಿಸಿ ಕಳೆದಂದೆ ನಿನ್ನ ಸುಧರ್ಮಿಕೆಯುಂ ತಕ್ರೊಮೇರ್ಮೆಯುಂ ಪಱಿಪಟ್ಟು ಪೋದುದಿನ್ನಾದೊಡಂ ತ್ರಿಭುವನಸ್ತವನೀಯಮಪ್ಪ ನಮ್ಮ ತೋಯದವಾಹನಾನ್ವಯಕ್ಕೆ ಬನ್ನಮಪ್ಪಂತು ಪರಪ್ರೇಯಸಿಗಳಿಪಂ ತಂದ ನಿರ್ಬುದ್ಧಿಕೆಯನುೞಿದು ನಿನಗಂ ನಿನ್ನ ವಂಶಕ್ಕಮಕಾಲ ಮೃತ್ಯುವಂ ತಾರದೆ ರಾಮಸ್ವಾಮಿಗೆ ಜಗನ್ಮಾತೆಯುಂ ಸೀತಾದೇವಿಯನೊಪ್ಪಿಸಿ ನಿನ್ನ ಸಾಮ್ರಾಜ್ಯಪದವಿಯೊಳ್ ಪದುಳಂ ನಿಲ್ವುದೆನೆ ಮುಳಿದು ತಿರುವಾಯೊಳಂಬಂ ತೊಟ್ಟು ಮುಟ್ಟಿವರೆ

ದಶವದನಶರಾಸನಮಂ
ನಿಶಾತ ಶರದಿಂ ವಿಭೀಷಣಂ ಖಂಡಿಸಿದಂ
ದಶವದನನುಂ ವಿಭೀಷಣ
ನ ಶರಾಸನಮುಂ ನಿಶಾತಶರದಿಂ ಕಡಿದಂ ೪

ಅಗಳಿಂದ್ರಜಿತ್ಕುಮಾರನೆಡೆವೊಕ್ಕು ವಿಭೀಷಣನೊಳ್ ಕಾದಲೊಡರಿಸೆ ಲಕ್ಷ್ಮಣಂ ನಿಜವರೂಥಮನಾತನ ರಥಕ್ಕಡ್ಡಂ ನೂಂಕಿ

ಇತ್ತಿತ್ತ ಮಗುಳ್ ಮಗುಳೆಂ
ದತ್ತಲ್ ರಾಮಾನುಜನ್ಮನಿಂದಗಿಯೊಳ್ ಕಾ
ದುತ್ತುಮಿರೆ ರಾಘವಂ ಸುಭ
ಟೋತ್ತಮನೊಳ್ ಕುಂಭಕರ್ಣನೊಳ್ ಬಿಲ್ಪೊಯ್ದಂ ೫

ಗಗನಾಭೋಗದೊಳಿರ್ದುನೋಟ್ಪ ಸುರಸಂದೋಹಂ ಮಹೋತ್ಸಾಹದಿಂ
ಪೊಗಟ್ವನ್ನಂ ತಮದಂಬನರ್ಕಶರದಿಂದಾಶೀವಿಷೋಗ್ರಾಸ್ತ್ರಮಂ
ಖಗರಾಜಾಸ್ತ್ರನಿಪಾತದಿಂ ಕಿಡಿಸಿ ದಿವ್ಯಾಸ್ತ್ರಂಗಳಿಂ ಗೆಲ್ದನಿಂ
ದಗಿಯಂ ಸಂಹೃತಿಕಾಲಸಾಂಧ್ಯಜಲದಾರಕ್ತೇಕ್ಷಣಂ ಲಕ್ಷ್ಮಣಂ ೬

ಅಂತು ಗೆಲ್ದು ನೆಲಕ್ಕಿಕ್ಕಿ ನಾಗಪಾಶದೊಳ್ ಕಟ್ಟಿ ವಿರಾಧಿತನ ಕಯ್ಯೊಳ್ ಬೀಡಿಂಗೆ ಕಟಿಪುವುದುಮಿತ್ತಲ್ ಕುಂಭಕರ್ಣಂ ಕದನ ಕರ್ಕಶನಾಗಿ ಕಾದುತ್ತು

ಮಿರೆ ರಾಘವನವನನೇಳಿದಂ ಬಗೆದು ಸಾಮಾನ್ಯಾಸ್ತ್ರಂಗಳಿಂ ಭಂಗಮನೊಡರಿಸಿ ಆವನ ಶಸ್ತ್ರಾಸ್ತ್ರಮುಂ ತನುತ್ರ ಕೋದಂಡ ಪತಾಕಾ ದಂಡಂಗಳಂ ಖಂಡಿಸುವುದುಂ

ಮಿಕ್ಕ ಮಹಾರಥಂ ವಿರಥನಾದನಧೋಕ್ಷ ಜನಂತೆ ನಾಗಪಾ
ಶಕ್ಕೊಳಗಾದನೀಶ್ವರ ಕಿರೀಟಮೆನಲ್ ರಥದಿಂ ಸೆಲಕ್ಕೆ ಪಾ
ಯ್ದುಕ್ಕಟ ಬೊಮ್ಮನಂತಿರೆ ರಜೋಮಯನಾದನಿದಿರ್ಚೆ ರಾಮನೊಳ್
ತಕ್ಕಿನ ಕುಂಭಕರ್ಣನೆನೆ ಮಿಕ್ಕವರಾಂತು ಬರ್ದುಂಕುವನ್ನರಾರ್ ೭

ಅಂತು ಬಂಧನಕ್ಕೆ ವಂದ ಕುಂಭಕರ್ಣನಂ ಪ್ರಭಾಮಂಡಲಂಗೊಪ್ಪಿಸು ವುದುಂ ಪ್ರಭಾಮಂಡಲಂ ಮೇಘವಾಹನನಂ ನಾಗಪಾಶದೊಳ್ ಕಟ್ಟಿ ಕುಂಭ ಕರ್ಣಂ ಬೆರಸು ಬೀಡಿಂಗೆ ಪೋದನಿತ್ತಲ್ ಪಿರಿದುಂಬೊಬ್ಬಿ ಭರಂಗಯ್ದು ಕಾದುತ್ತುಮಿರ್ದ ವಿಭೀಷಣನಂ ರಾವಣಂ ನೋಡಿ ಕೊಲಲ್ವೇಡಿ

ಶೂಲಾಯುಧದಿಂದಿಡೆ ಲಯ
ಕಾಲೋರಗದಂತೆ ಬರ್ಪುದಂ ಜಯಲಕ್ಷ್ಮೀ
ಲೋಲಂ ಲಕ್ಷ್ಮೀಧರನ
ಸ್ತ್ರಾಲಿಗಳಿಂ ಖಂಡ ಖಂಡಮಾಗಿರೆ ಕಡಿದಂ ೮

ಅಂತು ಕಡಿದು ವಿಭೀಷಣನಂ ಪೆಱಗಿಕ್ಕಿ ಲಕ್ಷ್ಮಣನೆಡೆಗೋದು ರಾವಣ ನೊಳ್ ತಾಗುವುದುಂ

ನೀನ್ ಕಾದೆ ವಿಭೀಷಣನಂ
ಮುನ್ ಕೊಲಲೆಂದಿಟ್ಟ ಶೂಲಮಂ ಖಂಡಿಸಿ ನಿ
ನ್ನಂ ಕಾವನಾವನಿನ್ನೆನು
ತುಂ ಕೊಂಡಂ ದಿವ್ಯ ಶಕ್ತಿಯಂ ದಶಕಂಠಂ ೯

ಅಂತು ಕೊಂಡಭಿಮಂತ್ರಿಸಿ ಸರ್ವಶಕ್ತಿಯಿಂದಿಡುವುದುಂ

ಕುಳಿಕನ ದಾಡೆಯೋ ಜವನ ದಾಡೆಯೊ ಮೇಣ್ ವಿಲಯಾಗ್ನಿ ಜಿಹ್ವೆಯೋ
ಜಳಧಿಯನೀಂಟುವೌರ್ವದಹನಾರ್ಚಿಯೊ ಪೇಡೆನೆ ರೌದ್ರರೂಪಮಂ
ತಳೆದು ಕಪಿಧ್ವಜರ್ ನಡುಗುವಂತು ದಶಾನನನಿಟ್ಟ ಶಕ್ತಿ ನಿ
ಶ್ಚಳಮೆನೆ ನಟ್ಟುದಪ್ರತಿಮಶಕ್ತಿ ಜನಾರ್ದನ ವೀರವಕ್ಷಮಂ ೧೦

ಅಂತು ದಿವ್ಯಶಕ್ತಿ ನಿಶ್ಶಕ್ತಿಯಪ್ಪಂತು ನಟ್ಟು ನಿಲೆ ಲಕ್ಷ್ಮಣಂ ಮೂರ್ಛೆ ತನಪ್ಪುದುಂ

ಅನುವರದೊಳ್ ಸಮಬಲನೀ
ತನೆ ದೋರ್ಬಲದೃಪ್ತನೆಂದು ಬಗೆದಾರದೆ ಬ
ಬ್ದನನಿಱಿಯಲೊಲ್ದನಿಲ್ಲಾ
ವನೊ ರಾವಣನಂತು ಪಾಟಿಯುಂ ಪಾಳಿಸುವಂ ೧೧

ಅನುಜನ ಮೂರ್ಛೆವೋದಬಲೆ ಕೋಪಮನಗ್ಗಳಮುಂಟುಮಾಡೆ ಕೀ
ಳ್ವೆನೊ ಕುಲಶೈಲಮಂ ಕುಡಿವೆನೋ ಕಡಲಂ ವಸುಧಾತಲಕ್ಕೆ ತ
ರ್ಪೆನೊ ಶಶಿಸೂರ್ಯಮಂಡಲಮನೆತ್ತುವೆನೋ ನೆಲನಂ ವಿಯತ್ತಲ
ಕ್ಕೆನಗಿದರಾವನೆಂದೊದಱಿ ರಾವಣನೊಳ್ ಪೊಣರ್ದಂ ರಘೂದ್ವಹಂ ೧೨

ತಿರುವಿಲ್ಲಂಬು ಪತಾಕೆ ವಜ್ರಕವಚಂ ಸೂತಂ ವರೂಥಂ ಹಯೋ
ತ್ಕರಮೆಂಬಿಂತಿವನಾಗಳೆಚ್ಚು ಕಡಿಖಂಡಂ ಮಾಡಿ ದಿವ್ಯಾಸ್ತ್ರದಿಂ
ವಿರಥಂ ಮಾಡಿದನೇಬು ಸೊಬ್ಬರೆಗಮಾವಂ ರಾಮಬಾಣಕ್ಕೆ ನಿ
ತ್ತರಿಪಂ ತನ್ನನೆ ಸಂತವಿಟ್ಟನಸುರಂ ಮುಂ ತಾಗಲೇನಾರ್ತನೇ ೧೩

ಅಂತು ರಾವಣಂ ಪಲವು ಸೂೞ್ ವಿರಥನಾಗಿಯುಂ ಅಚ್ಛಿನ್ನ ಕವಚನು ಮವ್ರಣಕಾಯನುಮಾಗಿರೆ

ಭೇದಿಪುವು ಕುಲಾದ್ರಿಯನೆ
ನ್ನೀ ದಿವ್ಯ ಶರಂಗಳಿವನ ದೇಹಮನಿನಿಸುಂ
ಭೇದಿಸಿದುವಿಲ್ಲ ವಿಸ್ಮಯ
ಮಾದಪುದಲ್ಲಾಯುವಲ್ಲಮುಕ್ಕುಂ ದನುಜಂ ೧೪

ಎಂದು ಬಗೆಯುತ್ತಿರ್ಪಿನಂ ನೇಸಱ್ ಪಡುವುದುಮೆರಡುಂಪಡೆಗಳಪಹಾರ ತೂರ್ಯಮಂ ಪೊಯಿಸಿ ತಂತಮ್ಮ ಬೀಡಿಂಗೆ ಪೋಪುದುಂ

ಮನದೊಳ್ ಹರ್ಷವಿಷಾದಮಾದುವು ದಶಾಸ್ಯಂಗೊರ್ವನಂ ವೈರಿಯಂ
ಮೊನೆಯೊಳ್ ಸಾಧಿಸಿದೆಂ ಮಹಾಬಲನನೆಂದುತ್ಸಾಹದಿಂದಾತ್ಮನಂ

ದನರಪ್ಪಿಂದಗಿ ಮೇಘವಾಹನನುಮಂ ಮತ್ತೋದರಂ ಕುಂಭಕ
ರ್ಣನುಮಂ ಬಾಳ್ದಲೆಗೊಂಡರೆಂದಸದಳಂ ಮೆಯ್ವೆರ್ಚೆದುಬ್ಬೇಗದಿಂ ೧೪

ಅಂತು ಬಗೆ ಬೆದಱಿ ರಾವಣಾರಿ ಲಂಕೆಗೆ ಪೋಗಿ

ಸಾಯದೆ ಮಾಣಂ ಲಕ್ಷ್ಮಣ
ನೀಂಬಿರುಳೊಳೆ ಸಾಯೆ ನೆಱೆಗಳಂ ಕೊಲ್ಲದೆ ಕ
ಯ್ಗಾಯರವರೆಮಗೆ ಪಿರಿದುಮ
ಪಾಯಂ ಸಮನಿಸಿದುದೆಂದು ಚಿಂತಿಸುತಿರ್ದಂ ೧೫

ಇತ್ತಲ್ ದಾಶರಥಿ ಮೂರ್ಛಿತನಾಗಿರ್ದ ಲಕ್ಷ್ಮಣನಂ ಕಂಡು ಅತಿ ವಿಹ್ವಲಚಿತ್ತನಾಗಿ ತಮ್ಮನನೆಯ್ದೆವರ್ಪುದುಂ ಸುಷೇಣ ಪ್ರಮುಖ ಮಂತ್ರಿಗಳ್ ದೇವ ದಿವ್ಯಶಸ್ತ್ರದೊಳಾದ ವೇದನೆ ಕರಸ್ಪರ್ಶನದಿನಧಿಕಮಕ್ಕುಂ ಮುಟ್ಟಬೇಡೆಂದು ಬಾರಿಸಿ ನೀಮೇಕೆ ವಿಹ್ವಲರಪ್ಪಿರ್ ಸೌಮಿತ್ರಿಯೆಂಟನೆಯ ಕೇಶವನಾತನ ಕಯ್ಯೊಳ್ ರಾವಣಂಗಪಾಯಮಕ್ಕುಮಲ್ಲದೀತಂಗಪಾಯಮಪ್ಪುದಲ್ತು ದಿವ್ಯ ಶಸ್ತ್ರ ಪ್ರಹರಣ ಭರಮನಪಹರಿಸುವ ಭೇಷಜ ಪ್ರಯೋಗಮನೊಡರಿಸುವಮೆಂದು ಶೋಕೋದ್ರೇಕಮನುಪಶಮಿಸುವುದುಂ

ಸೌಮಿತ್ರಿಯ ಸುತ್ತಣ ರಣ
ಭೂಮಿಯನಿಂಬಾಗೆ ಸಮಱಿ ಕಪಿಕೇತುಕುಲ
ಗ್ರಾಮಣಿ ಸುಗ್ರೀವಂ ವಿ
ದ್ಯಾಮಯಮಂ ಸಪ್ತಗುಪ್ತಿಯಂ ನಿರ್ಮಿಸಿದಂ ೧೬

ಅಂತು ನಿರ್ಮಿಸಿದ ವಿದ್ಯಾಪ್ರಾಕಾರಂಗಳ ಬಹಿರಂತಃಪ್ರದೇಶಂಗಳೊಳ್ ಪಲಬರ್ ವಿದ್ಯಾಧರರುಂ ಕಾಪುವೇಳ್ವುದುಮಾಗಳ್ ಲಕ್ಷ್ಮೀಧರನಗಣ್ಯಪುಣ್ಯ ಪ್ರಭಾವದಿಂ ಗಗನಚರನೊರ್ವಂ ಬೇಗಂ ಬಂದು ವಿಶಲ್ಯಸೌಂದರಿಯ ಮಿಂದ ಗಂಧೋದಕದ ಮಹಿಮೆಯುಂ ಪೇೞ್ದೊಡೆ ರಾಮಚಂದ್ರಂ ಮೆಚ್ಚಿ ಮೆಚ್ಚುಗೆಗೊಟ್ಟು ಅದಂ ತರಲೆಂದು ಹನುಮದಂಗದ ಪ್ರಭಾಮಂಡಲರನಟ್ಟುವುದುಂ ಅವರ್ ವಿಮಾನಂಗಳನೇಱಿ ಸಾಕೇತಪುರಮಂ ಪೊಕ್ಕು ಭರತನಂ ಕಂಡು ಬೇಡುವುದುಮಾತನಾ

ತರುಣಿಯಂ ಸೊಡಗೊಂಡು ಪೋಪುದೆನೆ ವಿಮಾನಾರೂಢರ್ ನಕ್ಷತ್ರವೀಥಿಯಿಂ ಕ್ಷಣಮಾತ್ರದೊಳ್ ರಣಭೂಮಿಯನೆಯ್ದಿ ಅವನೀತಲಕ್ಕವತರಿಸಿ ಬರ್ಪಲ್ಲಿ ವಿಶಲ್ಯಸೌಂದರಿ ಲಕ್ಷ್ಮಣನನೆನಿತೆನಿತು ಸಾರ್ವೋಕುಮನಿತನಿತು ಶಕ್ತಿ ಶಕ್ತಿಗೆಟ್ಟು ಜನಾರ್ದನನ ವಕ್ಷೋಭಾಗಮಂ ಬಿಟ್ಟು ಮೇಗೊಗೆಯೆ ಆ ಕನ್ಯಾರತ್ನದ ಕರಸ್ಪರ್ಶದಿಂ ಪವಿತ್ರಸುರಭಿಸಲಿಲಸೇಚನದಿಂ

ಪತ್ತುವಿಡೆ ಮೂರ್ಛೆ ಮುನಿಸಿನ
ಚೊತ್ತಿದವೋಲ್ ಮನದಿನಗಲದಿರೆ ಕಣ್ ಕೆಂಪಂ
ಬಿತ್ತರಿಸೆ ಮಸಗಿ ರಾವಣ
ನೆತ್ತಣನೆನುತುಂ ಜನಾರ್ದನಂ ಕುಳ್ಳಿರ್ದಂ ೧೮

ಚರನಱಿಪೆ ತನುಗೆ ದಶಕಂ
ಧರನ ಮೃಗಾಂಕಾದಿ ಮಂತ್ರಿಮುಖ್ಯರ್ ಲಕ್ಷ್ಮೀ
ಧರಪುಣ್ಯಾಶಕ್ತಿಯುಂ ದಶ
ಶಿರಂಗದಂ ಪೇಟಲೆಂದು ಬೇಗಂ ಬಂದರ್ ೧೯

ಅಂತು ಬಂದು ಮುಕುಳಿತಾಂಜಲಿಗಳಾಗಿ ದೇವ ಇರುಳೊಳೆ ವಿಶಲ್ಯ ಸೌಂದರಿ ಬರೆ ಶಕ್ತಿ ಪೊಡರ್ಪುಗೆಟ್ಟು ಪೋದುದು

ಸೀತೆಯನೊಪ್ಪಿಸುವುದು ರಘು
ಜಾತನೊಳೊಡರಿಪುದು ಸಂಧಿಯುಂ ಸಂಗ್ರಾಮಂ
ಪೋ ತಕ್ಕುದಲ್ತು ನಮಗವ
ರೇತೆಱದೊಳಮಧಿಕರವರನಾರ್ ಗೆಲ್ವಪರೋ ೨೦

ಎತ್ತಾನುಂ ಗೆಲ್ದೊಡಮಾ
ಪತ್ತಂ ಪಿಡಿವೆತ್ತ ಕುಂಭಕರ್ಣಾದಿಗಳೊಳ್
ಮತ್ತೇನೊಡರಿಸುವರ್ ದನು
ಜೋತ್ತಂಸ ಬಿಟಿಕ್ಕೆ ಗೆಲ್ದೊಡಂ ಫಲಮುಂಟೇ ೨೧

ಎನೆ ದಶಾನನಂ ಕನಲ್ದು

ಇಂದ್ರಸುಮಮಂ ಗೆಲ್ದೆನ್ನನು
ಪೇಂದ್ರಂ ಗೆಲ್ದಪನೆ ಗೆಲ್ದೊಡಂ ಜೀವನಮಾ
ಚಂದ್ರಾರ್ಕಮೆ ವಿಶದಯಶ
ಶ್ಚಂದ್ರಿಕೆಗೆ ಕಳಂಕಮಾಗದಂತಿರೆ ನಗೆಪ್ಪೆಂ ೨೨

ಅದಱಿಂ ನಿಮ್ಮ ಮಂತಣಕ್ಕವಸರಮಲ್ತುಸಿರದಿರಿಮೆಂದು ಮಂತ್ರಿಗಳಂ ಜಡಿಯೆ ರಾವಣನ ಕಟ್ಟಾಯಕ್ಕೆ ಮಯಂ ವಿಸ್ಮಯಂಬಟ್ಟು ದೇವ ನಮ್ಮ ಸೆಱೆಗಪಾಯಮಾಗದಂತು ಕಾದಿ ಗೆಲ್ವುದೆನೆ ಆತನ ನುಡಿಗೊಡಂಬಟ್ಟು ರಾಮಲಕ್ಷ್ಮಣರ ಪುಣ್ಯಪ್ರಭಾವಕ್ಕೆ ವಿಸ್ಮಯಂಬಟ್ಟು

ಅವಯವದಿಂದಮೆನ್ನ ತನುಜಾನುಜರಂ ಪಿಡಿದುಯ್ದರೆನ್ನ ಕ
ಯ್ದುವನುರಗೇಂದ್ರನೊಳ್ ಪಡೆದ ಶಕ್ತಿಯನಶ್ರಮದಿಂದೆ ಗೆಲ್ದರಾ
ನವರನಶ್ಯರೆಂದುಱದೆ ಕಾದಿದೆನಪ್ಪೊಡೆ ಕಾರ್ಯಹಾನಿ ಸಂ
ಭವಿಸುಗುಮೆಂದು ತನ್ನ ಮನದೊಳ್ ಪರಿಭಾವಿಸಿದಂ ದಶಾನನಂ ೨೩

ಸಾಧಾರಣರಿವರೆನಿಪ ವಿ
ರೋಧಿಗಳುಮನುಱದೆ ನೆಗಟ್ಟುವುದನುಚಿತಮದಱಿಂ
ಸಾಧಿಸಿ ಬಹುರೂಪಿಣಿಯಂ
ಸಾಧಿಸುವೆಂ ಪಗೆಯನೆಂಬ ಬಗೆಯಂ ಬಗೆದಂ ೨೪

ಅಂತು ಬಗೆದು ಲಂಕಾನಗರದೊಳಂ ನಾಡೊಳಂ ಹಿಂಸೆ ಬೇಡೆಂದು ಗೋಸಣೆಗಳೆದು ಎನಿತುಪಸರ್ಗಮನಾರ್ ಮಾಡೆಪ್ಪೊಡಂ ನಮ್ಮ ಪಡೆಯೊಳ್ ಮಾರ್ಕೊಳ್ಳದಂತು ಮಾಳ್ಪುದೆಂದು ಪೇಱ್ದು

ಅರಮನೆಯೊಳಗಣ ಜಿನಮಂ
ದಿರಕ್ಕೆ ನಡೆತಂದು ಮಂಗಳದ್ರವ್ಯಪುರ
ಸ್ಸರಮೊಳಗೆ ಪೊಕ್ಕು ಶಾಂತೀ
ಶ್ವರಂಗೆ ಪದಪೊದವೆ ಮಾಡಿ ನವನೋತ್ಸವಮಂ ೨೫

ದಿವ್ಯಾರ್ಚನೆಗಳಿಂದರ್ಚಿಸಿ ದಿವ್ಯಮಂತ್ರಂಗಳಂ ಜಪಿಯಿಸುತ್ತಿರ್ದನದನಱಿದು ವಿಭೀಷಣಂ

ಭುಜಬಲಮಂ ಪಸಣ್ಬಡಿಪೊಡಪ್ರತಿಮಂ ತವಿಲಿಲ್ಲ ದಾನವ
ಧ್ವಜಿನಿಗೆ ಚಂದ್ರಹಾಸಮನಿದಿರ್ಚುವ ಚಕ್ರಮನಾಂಕೆಗೊಳ್ವ ಭೂ
ಭುಜಸುರಖೇಚರಪ್ರಮುಖರಿಲ್ಲೆನೆ ರಾಘವದೇವ ದುರ್ಜಯಂ
ನಿಜದೊಳೆ ಮತ್ತೆ ಸಾಧಿಸಿದಪಂ ಬಹುರೂಪಿಣಿಯಂ ದಶಾನನಂ ೨೬

ರಾವಣಸೊರ್ವನುಮಂ ಧರ
ಣೀವಲ್ಲಭ ಗೆಲ್ವುದರಿದು ಸಾಧಿಸಿ ವಿದ್ಯಾ
ದೇವತೆಯನವಂ ಪಡೆವಂ
ರಾವಣಕೋಟಿಯನಿದಿರ್ಚುವವರಾರ್ ಬಟಿಯಂ ೨೭

ಆದಱಿಂ ವಿದ್ಯಾಸಾಧನೆವುಗದ ಮುನ್ನಂ ರಾವಣಂಗುಪಸರ್ಗಮನೊಡರ್ಚಿ ಲಂಕಾಪುರಮಂ ಕಯ್ಕೊಳಲಿದವಸರಮೆನೆ ರಘುವೀರಂ

ವನಿತೆಗೆ ಕಯ್ದುವಂ ಬಿಸುಟವಂಗಿದಿರಾಗದವಂಗೆ ಭೂಭುಜಂ
ಮುನಿವುದು ಪಾಟಿಯಲ್ತು ನಿಯಮಸ್ಥಿತನಾಗಿ ದಶಾನನಂ ಜಿನೇಂ
ದ್ರನ ಮಱೆವೊಕ್ಕು ಸಾಧಿಸಿದಪಂ ಗಡ ವಿದ್ಯೆಯನೆಂತೊ ಬಾಧೆಯಂ
ಜನಿಯಿಪುದಾತನೊಳ್ ಬಿಸುಡತಕ್ಕುದನಿಂತುಸಿರಲ್ಕೆ ತಕ್ಕುದೇ ೨೮

ಎಂಬುದುಂ ವಿಭೀಷಣಾಂಗದಾದಿಗಳ್ ಈ ಮಹಾಸತ್ವನನಾಚಾರಮನೆಂತು ಮೊಲ್ವನಲ್ಲನಧಿರಾಜನಱಿಯದಂತು ವಿದ್ಯಾಸಾಧನೆಗೆ ವಿಘ್ನಂ ಮಾಳ್ಪೆಮೆಂದು ಲಂಕೆಯಂ ಪುಗುತಂದು

ಒಡೆಯುತ್ತುಂ ಮಾಡಂಗಳ
ನುಡಿಯುತ್ತುಂ ನಂದನಂಗಳಂ ನೀರ್ನೆಲನಂ
ಕಿಡಿಸುತ್ತುಂ ಲಂಕೆಗವರ್
ಪಡೆದರ್ ನಿಶ್ಶಂಕರಳವಿಗಟಿದೆರ್ದೆವಟಲಂ ೨೯

ಮುನಿದೆಡೆದು ತಂದು ನಿಜಕುಲ
ವನಿತೆಯರಂ ಬಿಡದೆ ಮೋದಿಯುಂ ಹಾಹಾಕ್ರಂ
ದನಮಂ ಪುಟ್ಟಿಸೆ ಕೇಳ್ದುಂ
ದನುಜಂ ಜಪಿಯಿಸುತುಮಿರ್ದನವ್ಯಗ್ರಮನಂ ೩೦

ಅಂತು ನೀಲಸಗದಂತೆ ನಿಶ್ಚಲನಾಗಿರ್ದ ರಾವಣನಂ ನೋಡಿ

ಅಂಗದನೆಂದಂ ರಾಮಶ
ರಂಗಳ ಕೋಳ್ಗಗಿದು ಸುಗಿದು ದಶವದನ ಮನೋ
ಭಂಗಮನೊಳಕೊಂಡೇಕೆ ಜ
ಪಂಗೆಯ್ದಪೆ ನೆನೆಯು ನಿನ್ನ ದುರ್ವಿಲಸಿತಮಂ ೩೧

ದುರಭಿಪ್ರಾಯನೆ ಖೇಚರಾನ್ವಯದ ಶುದ್ಧಾಚಾರಮಂ ಬಿಟ್ಟು ಕಾ
ಪುರುಷಂ ಕಾತರನೆಂದು ಸತ್ಪುರುಷರೆಲ್ಲಂ ದೂಷಿಸುತ್ತಿರ್ಪಿನಂ
ಪರದಾರಪ್ರಿಯನಾದ ಪಾತಕನೆ ಯುದ್ಧಕ್ಕಳ್ಕಿ ಶುದ್ಧಾತ್ಮನಂ
ತಿರೆ ಶಾಂತೀಶನ ಮುಂದೆ ಮೆಯ್ಗರೆದಿದೇನಂ ಜಾನಿಸುತ್ತಿರ್ದಪಯ್ ೩೨

ಬಲವಟಿಯೆ ನಿನ್ನ ಬಾಹಾ
ಬಲಮಂ ಪೆಱಗಿಕ್ಕಿ ವಿದ್ಯೆಯಂ ಸಾಧಿಸಿ ನೀನ್
ಗೆಲಲೇನಾರ್ತಪೆ ನಿನ್ನಂ
ಕೊಲಲ್ಕೆ ಜನಿಯಿಸಿದ ರಾಮಲಕ್ಷ್ಮೀಧರರಂ ೩೩

ಕಿಚ್ಚೆಟ್ಟಿ ಬಟಿಕೆ ನಂದಿಸ
ಲಚ್ಚಿಗದಿಂ ಬಾವಿದೋಡುವಂತಿರೆ ಕಣ್ಣಂ
ಮುಚ್ಚಿ ಜಪಿಯಿಸುವೆ ರಾಘವ
ನೆಚ್ಚಂಬಿಂ ಕಾಯಲಾರ್ಪುವೇ ದೇವತೆಗಳ್ ೩೪

ಎಂದು ಪಲತೆಱದಿಂ ನೆಱನೆತ್ತಿ ನುಡಿಯುತ್ತುಮುತ್ತರೀಯ ವಸನಾಂಚಲದಿಂ ಮೋದುತ್ತುಂ ಕಯ್ಯ ಪಳಿಕಿನಕ್ಷಮಾಲೆಯಂ ಪಱಿದೀಡಾಡುತ್ತುಂ ಪೆಂಡಿರ ಭೂಷಣಂಗಳಂ ಬಿಸುಡುತ್ತುಮಲ್ಲದುದಂ ನುಡಿಯುತ್ತುಂ ಮಾಣದೆ ಮತ್ತಂ

ರೋದನಮುಣ್ಮೆ ಪೊಣ್ಮೆ ಕುಟಿಲಾಲಕಮಂ ಪಿಡಿದಿಟ್ಟು ತಂದು ಮಂ
ಡೋದರಿಯುಂ ಮದೀಯ ಪಿತೃಗುಕ್ಕೆವ ಚಾಮರಮಿಕ್ಕಲುಯ್ದಪೆಂ
ಕಾದುಕೊಳಲ್ ಪೊಡರ್ಪು ನಿನಗುಳ್ಳೊಡೆ ಚೇತರಿಸೆಂದು ದುಃಖ ಸಂ
ಪಾದನಮುಂ ತದಂಗನೆಯರೊಳ್ ಪಡೆದಂ ರಣತುಂಗನಂಗದಂ ೩೫

ಸಾಧಿಸಿ ವಿದ್ಯೆಯಂ ಪಡೆವುದೇನ್ ನಿಜಪಾರ್ಶ್ವದೊಳೆಮ್ಮನಿಂತಿವಂ
ಬಾಧಿಸಲೆಂತು ನೀನ್ ಮಿಡುಕದಿರ್ದಪೆ ಮೂರ್ಛೆಗೆ ಸಂದರಂತೆ ವಿ
ದ್ಯಾಧರ ಚಕ್ರವರ್ತಿ ಶರಣಾರೆಮಗೆಂದು ಶರೀರತಾಪ ತ
ಪ್ತಾಧರಮುಟ್ಟುದುಚ್ಚರವದಿಂದವರೋಧ ವಧೂಕದಂಬಕಂ ೩೬

ಅಂತತಿ ಪ್ರಳಾಪಮಪ್ಪಂತವರ್ಗಚಲನಂಗದಂ ಪಡೆದೊಡಂ ರಾವಣಂ ಧ್ರುವಮಂಡಲದಂತೆ ಚಲಿಯಿಸದೆ ಚಿತ್ತನಿರೋಧಂಗೆಯ್ದು ದಿವ್ಯಮಂತ್ರದಿಂ ವಿದ್ಯೆಯಂ ಸಾಧಿಸುವುದುಂ

ಪೊಸಗಾರ ಸಿಡಿಲ ಮಸಕಮ
ನಸಕಟಿದು ಕೃತಾಂತಜಿಹ್ವೆ ಪೊಡಕರಿಸುವವೊಲ್
ಬೆಸಸು ಬೆಸಸೆಂದು ಕರಮ
ರ್ವಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್ ೩೭

ಅಂತು ಸನ್ನಿಹಿತೆಯಾಗಿ ಚಕ್ರಧರನಪ್ಪ ಲಕ್ಷ್ಮೀಧರನುಂ ಚರಮದೇಹ ಧಾರಿಯಪ್ಪ ರಾಮಸ್ವಾಮಿಯುಮುಟಿಯಲುಟಿದರನುಟಿಯಲೀಯೆನೆನೆ ರಾವಣ ನುಟಿದವರಟಿವೆನಗೇವುದೆಂದು ವಿದ್ಯಾದೇವತೆಗೆ ಪೊಡೆವಟ್ಟು ಶಾಂತಿ ಜಿನಭವನಮಂ ಮೂಱುಸೂಱ್ ಬಲಗೊಂಡು ಬರ್ಪನ್ನೆಗಮಂಗದಾದಿಗಳ್ ಪೊಱಮಟ್ಟು ಪೋಗಿ ತಮ್ಮ ಬೀಡಂ ಪುಗುವುದುಂ

ಇತ್ತ ದಶಾನನಂ ನಿಜ ವಧೂಜನಮಂ ಕೊಱಚಾಡಿ ಕಾಡಿದು
ದ್ವೃತ್ತ ವಿರೋಧಿ ಖೇಚರರನಿಕ್ಕುವ ಬಲ್ಮುಳಿಸಿಂದೆ ಬಂದು ಪೊ
ಯ್ವೈತ್ತಿಭವೈರಿಯಂತೊದಱ ಕೆಂಗಱಿಮೂಡಿದ ಭೃಂಗಮಾಲೆ ನೀ
ಳ್ದತ್ತೆನೆ ನೋಡಿದಂ ಮಯತನೂಜೆಯ ಬಾಡಿದ ವಕ್ತ್ರಪದ್ಮಮಂ ೩೮

ಅಂತಾಕೆ ವೆರಸು ಸಮಸ್ತಾಂತಃಪುರಮಂ ನೋಡಿ ನಿಮಗಿನಿತು ಭಂಗಮಂ ಮಾಡಿದಂಗದಾದಿಗಳಂ ಭ್ರೂಭಂಗ ಮಾತ್ರದೊಳೆ ಸೆಱೆಗೆಯ್ದು ತಂದು ನಿಮ್ಮ ಮುಂದೆ ಪರಿಭವಿಸುವೆನೆಂದು ಸಂತಯಿಸಿ ಶಾಂತಿಜಿನ ಭವನದೊಳ್ ಮಹಾ ಪೂಜೆಯಂ ಮಾಡಿಸಿ ನಿರ್ವರ್ತಿತನಿತ್ಯನಿಯಮನಮೃತಾಹಾರಮನಾರೋಗಿಸಿ ತದನಂತರಂ ಬಹುರೂಪಿಣೀ ವಿದ್ಯಾಪ್ರಭಾವಮಂ ಪರೀಕ್ಷಿಸಿ

ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ ೩೯

ಅಂತು ಭೋಂಕನೆ ಬರ್ಪ ರಾವಣನ ಗಂಡಗಾಡಿಯಂ ಕೆಲದೊಳಿರ್ದ ಖಚರಕಾಂತೆಯರ್ ಸೀತಾದೇವಿಗೆ ತೋರ್ಪುದುಂ

ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್ ೪೦

ಏನಂ ಕೇಳ್ದಪೆನೋ ರಘು
ಸೂನುವ ಲಕ್ಷ್ಮಣನ ಪೊಲ್ಲವಾರ್ತೆಯನಿನ್ನೆಂ
ದಾ ನಳಿನಾನನೆ ಬರ್ಪ ದ
ಶಾನನನಂ ಕಂಡು ತಾಳ್ದಿದಳ್ ತಲ್ಲಣಮಂ ೪೧

ಅಂತು ತಲ್ಲಣಿಸುತಿರ್ದ ಮಾನಿನಿಯನೆಯ್ದೆವಂದು ದಶಾನನನಿಂತೆಂದಂ ಬಹುರೂಪಿಣೀವಿದ್ಯೆ ಸಾಧಿತಮಾದುದಿನ್ನೆನಗಸಾಧ್ಯಮಪ್ಪ ಮಱುವಕ್ಕಮಿಲ್ಲ ನಿನ್ನ ನಚ್ಚಿನ ರಾಮನ ದೆಸೆಯಂ ಬಿಟ್ಟೆನಗೊಡಂಬಟ್ಟು ಸಾಮ್ರಾಜ್ಯಸುಖಮನನು ಭವಿಸೆನೆ ಸೀತೆ ವಿಹ್ವಲೀಭೂತ ಚಿತ್ತೆಯಾಗಿ

ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃಪ್ರಾಣಂ
ಬರೆಗಂ ಬಾರದಿರೆಸುತುಂ
ಧರಿತ್ರಿಯೊಳ್ ಮೆಯ್ಯನೊಕ್ಕು ಮೂರ್ಛೆಗೆ ಸಂದಳ್ ೪೨

ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟೆ ಕರುಣಿಸಿ ತನ್ನಂ

ತಾನೆ ಪಟಿದುಟಿದು ಕರ್ಮಾ
ಧೀನ ಸಮುತ್ಪನ್ನದುರಘದುಷ್ಪರಿಣತಿಯಂ ೪೩
ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ ೪೪

ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಳಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿದರ್ಪನೇ ೪೫

ಅಂತು ಮನದೊಳೊಗೆದ ಕಾರುಣ್ಯರಸಮೆ ಸೀತೆಯೊಳಾದನುರಕ್ತತೆಯಂ ಕರ್ಚಿ ಕಳೆವುದುಂ ಸ್ವಭಾವಪರಿಣತಿಯೊಳ್ ನಿಂದು ಸ್ವಕೀಯಾಪ್ತ ಪುರುಷ ಪರಿಷಜ್ಜನಕ್ಕಿಂತೆಂದಂ

ಗುಣಪರಿಪಾಲನಾರ್ಥಮೆನಗಂ ಬಗೆದೋಱದಳಿಲ್ಲ ದಿವ್ಯ ಭೂ
ಷಣ ವಸನಾಂಗರಾಗಮುಮನೊಲ್ಲದೆ ಖೇಚರ ರಾಜ್ಯಲಕ್ಷ್ಮಿಯಂ
ತೃಣಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗಿ ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯುಸೆನ್ನ ಪಾಪದಿಂ ೪೬

ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಟಿವಿನೆಗಂ ೪೭

ರಾಮನಿನಗಲ್ಚಿ ತಂದಾ
ಸೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮ ವ್ಯಾಮೋಹದಿನಾ
ಶಾ ಮುಃಖಮುಂ ಪುದಿಯೆ ದುರ್ಯಶಃಪಟಹ ರವಂ ೪೮

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇಟೆ ಕೇಳದಾ
ತನನವಿನೀತನೆನ್ ಗಜಱಿ ಗರ್ಜಿಸಿ ಬಯ್ದುಸುಜಾತನಂ ವಿನೀ
ತನನಱೆಯಟ್ಟಿ ದುರ್ವ್ಯಸನಿಯೆನ್ ಕಟಿದೆಂ ವ್ಯಸನಾಭಿಭೂತನಾ
ವನುಮನುರಾಗ ವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ ೪೯

ಜನದಟಿವಂ ಪರಾಭವದ ಪತ್ತುಗೆಯಂ ದೊರೆವೆತ್ತ ತಮ್ಮ ಮಾ
ನಸಿಕೆಯ ಕೇಡನುನ್ನತಿಯ ಬನ್ನಮನನ್ಯಭವಾನುಬದ್ಧಮ
ಪ್ಪಸುಗತಿಯಂ ಸುಹೃಜ್ಜನದ ಬೇವಸಮಂ ಜನತಾಪವಾದಮಂ
ವ್ಯಸನಿಗಳಾರುಮೆತ್ತಲಱಿವರ್ ವಿಷಯಾಸವಮತ್ತಚೇತಸರ್ ೫೦

ಎಂದುದ್ವೇಗಪರನಾಗಿ ನುಡಿದಾತ್ಮಗತದೊಳಿಂತೆಂದಂ

ಇರದುಯಿದ್ದಾಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ
ಬಿರುದುಂ ಬೀಸರಮಕ್ಕುಮೋಸರಿಸಿದಂತಾಗಿರ್ಕುಮಂತಾಗದಂ
ತಿರೆ ದೋರ್ಗರ್ವಮನಿರ್ವಲಂ ಪೊಗಟ್ವನಂ ಸೌಮಿತ್ರಿಯಂ ರಾಮನಂ
ವಿರಥರ್ ಮಾಡಿ ರಣಾಗ್ರದೊಳ್ ಪಿಡಿದು ತಂದಾನ್ ಕೊಟ್ಟಪೆಂ ಸೀತೆಯಂ ೫೧

ಎಂದು ನಿಶ್ಚಯಿಸಿ ನಿಜನಿವಾಸಕ್ಕೆ ವಂದಂಗದ ಪ್ರಭಾಮಂಡಲ ಸುಗ್ರೀವ ಹನುಮದಾದಿಗಳ ದುರಾಚಾರಕ್ಕೆ ಮುಳಿದವಂದಿರಂ ರಾಮನುಟಿಯೆ ಕೊಲ್ವೆನೆಂದು ಭರಂಗೆಯ್ದಿರ್ದನಾ ಸಮಯದೊಳ್

ಪರಿವೇಷಂ ನಾಡೆ ಭಯಂ
ಕರಮಪ್ಪುದನರ್ಕಬಿಂಬದೊಳ್ ನಟ್ಟಿರುಳೊಳ್
ಸುರಚಾಪಂ ಮೂಡುವುದಂ
ಗಿರಿಶಿಖರಂ ಬಿರಿವುದಂ ನೆಲಂ ಮೊಟಗುವುದಂ ೫೨

ಪಿಡಿಗೆ ಮದಮಪ್ಪುದಂ ಮದ
ಮುಡುಗುವುದಂ ಮದಗಜಕ್ಕೆ ಗೃಹದೇವತೆಗಳ್
ಗಡಣದಿನಟ್ಟುದನಾಗಸ
ವೆಡೆಗೆಟ್ಟಿರೆ ಧೂಮಕೇತುಗಳ್ ಮೂಡುವುದಂ ೫೩

ಪಗಲುಳ್ಕಂ ಬೀೞ್ವುದಂ ಧಾರಿಣಿ ನಡುಗುವುದಂ ಘೊಳ್ಳೆನಲ್ ದೀಪ್ತದೊಳ್ ಬ ಳ್ಳುಗಳೂಳುತ್ತಿರ್ಪುದಂ ಕಯ್ದುಗಳುಡಿವುದನಾದಿತ್ಯನುಂ ಚಂದ್ರನುಂ ಮೆ [1][ಯ್ದೆ]ಗೆದಂತಾಗಿರ್ಪುದಂ ಮಾಡದ ಮಣಿಕಲಶಂ ಬೀೞ್ವುದಂ ಕಂಡು ತಮ್ಮೊಳ್ ಬಗೆದರ್ ನೈಮಿತ್ತಿಕರ್ ನಾಳಿನ ಕದನದೊಳಕ್ಕುಂ ದಶಾಸ್ಯಂಗಪಾಯಂ ೫೪

ಎಂದು ನುಡಿಯುತ್ತಿರೆ ಅಸುರಪತಿ ಸೆಱೆಯೊಳಿರ್ದ ತನುಜಾನುಜರಂ ನೆನೆದು ಮುಳಿದು ಕಾಳೆಗಕ್ಕೆ ನಡೆಯಲೊಡರಿಸಿ ಶಸ್ತ್ರಶಾಲೆಯಂ ಪುಗುವುದು ಮದಂ ಮಂಡೋದರಿ ಕಂಡು ಮಂತ್ರಿಗಳಂ ಕರೆದೀ ರಣಮಂ ಮಾಣ್ಬಂತು ಮಾೞ್ಪುದೆಂದು ಪೇೞ್ವುದುಂ ಅವರ್ ಆಮುಂ ಪಲವುಂ ಪರ್ಯಾಯದಿಂ ಪೇೞ್ದೊಡಂ ಕೇಳ್ದನಿಲ್ಲಿಲ್ಲಿಗೆ ತಕ್ಕುದಂ ನುಡಿದು ದೇವಿಯರೆಂತಾನುಮೊಡಂಬಡಿಸು ವುದೆನೆ ಮಂಡೋದರಿ ರಾವಣನಲ್ಲಿಗೆ ಬಂದೆಱಗಿ

ಆನೀ ಜಾನಕಿಯಂ ರಘುಪ್ರಿಯತನೂಜಂಗಿತ್ತು ತರ್ಪೆಂ ಭವ
ತ್ಸೂನುಭ್ರಾತೃಗಳಂ ರಣವ್ಯಸನದಿಂ ಸಾವೆಯ್ದುಗುಂ ಬಂಧು ಸಂ
ತಾನಂ ಕಾಳೆಗಮಂ ಬಿಸುೞ್ಪುದೆನೆ ರೋಷಾವೇಶದಿಂ ರಾವಣಂ
ನೀನಿಲ್ಲಿಂ ತೊಲಗೆಂದು ಚಪ್ಪರಿಸಿದಂ ಮಂಡೋದರೀ ದೇವಿಯಂ ೫೫

ಅಂತು ಚಪ್ಪರಿಸೆಯುಂ ಮಾಣದೆ ಮತ್ತೆ ಈತಂಗಳೆಂಟನೆಯರ್ಧ ಚಕ್ರವರ್ತಿ ಗಳ್ ನಿನಗೆ ಶತ್ರುಗಳಪ್ಪುದಱಿಂ ಬವರಮನುೞಿದು ಸಂಧಿಗೊಡಂಬಟ್ಟು ವಿದ್ಯಾಧರ ರಾಜ್ಯಸುಖಮನನುಭವಿಸುವುದೆನೆ ರಾವಣನೆಂದನವಂದಿರೆನಗೆ ಕಾಳೆಗದೊಳ್ ನಿಲ್ವ ಗಂಡರಲ್ಲರದರ್ಕೆ ನೀನಂಜದಿರೆಂದು ನುಡಿದು ಸನ್ನಾಹ ಭೇರಿಯಂ ಪೊಯಿಸಿ ಚಂದ್ರಹಾಸಮುಂ ಜಡಿಯುತ್ತುಂ ಸಹಸ್ರದ್ವಿಪ ಸ್ಕಂಧದೊಳ್ ಪೂಡಿದ ವಿದ್ಯಾ ದೇವತಾ ನಿರ್ಮಿತ ರಥಮನತಿಕ್ಷೋಭದಿಂದೇಱಿ ಬಂದು ಸಂಗ್ರಾಮ ಭೂಮಿ ಯೊಳೊಡ್ಡಿ ನಿಲ್ವುದುಂ ಲಕ್ಷ್ಮಣಂ ಸನ್ನಾಹಭೇರಿಯಂ ಪೊಯಿಸೆ ರಘುವೀರಂ ಸಿಂಹರಥಮನೇಱಿ

ವಿಗ್ರಹ ಭೂಮಿಯೊಳಿಂದು ದ
ಶಗ್ರೀವನನಿಕ್ಕಿ ವಿಜಯಲಕ್ಷ್ಮಿಯೊಳಾನ್ ಸಾ

1 ಮಯ್ಗರೆ. ಕ. ಖ. ಚ. ಮೇಗೊಗೆ. ಘ.

ಣಿಗ್ರಹಣಮನೊಡರಿಪೆನೆಂ
ಬಾಗ್ರಹದಿಂ ಕೃಷ್ಣನೇಱಿದಂ ಸ್ಯಂದನಮಂ ೩೬

ಅಂತು ರಾಮಲಕ್ಷ್ಮಣರ್ ಶುಭಶಕುನಂಗಳನಿದಿರ್ಗೊಳುತ್ತುಂ ಸಂಗ್ರಾಮ ಭೂಮಿಗೆ ಬಂದೊಡ್ಡಿ ನಿಲ್ವುದುಂ ರಾವಣಂ ಕಂಡು ಕಯ್ವೀಸುವುದುಂ ಉಭಯ ಬಲಮುಂ ತಲೆಮಟ್ಟು ಮಲೆದು ಕಾದುವಲ್ಲಿ

ವನಗಜ ಯೂಥಮಂ ಭರದಿನಟ್ಟುವ ಕೇಸರಿಯಂತೆ ದೈತ್ಯರು
ಳ್ಳನಿಬರುಮಂ ಮಹಾರಣದೊಳದ್ಭುತಮಾಗೆ ಕಱುತ್ತು ಕಾದಿ ಪಾ
ವನಿ ಜಿಱುತೋಡುವಂತೆ ಬೆದಱಟ್ಟುವುದಂ ನಡೆ ನೋಡಿ ಕೊಂಡು ಕಾ
ಯ್ಪುನುವಿಸೆ ಮುಟ್ಟಿ ಮೂದಲಿಸಿ ತಾಗಿದನಾಹವದುರ್ಜಯಂ ಮಯಂ ೩೭

ಅಂತು ತಾಗಿ ಹನುಮನಂ ಪ್ರಭಾಮಂಡಲನಂ ಸುಗ್ರೀವನಂ ವಿಭೀಷಣನಂ ನಿರಸ್ತ್ರಂ ಮಾಳ್ಪುದುಮಾಗಳಾ ಮಯನ ಮಸಕಮಂ ದಾಶರಥಿ ಕಂಡು ಕಡು ಮುಳಿದು ಜೇವೊಡೆವುದುಂ

ರಾವಣನ ದಿವ್ಯರಥದ ಗ
ಜಾವಳಿ ಪೆಳ್ಪಳಿಸೆ ಬೆರ್ಚೆ ರವಿಯ ಹಯಂಗಳ್
ತೀವಿದುದು ಗಗನಮಂ ವ
ಜ್ರಾವರ್ತ ಧನುರ್ಲತಾ ಘನಜ್ಯಾರಾವಂ ೩೮

ಅನಂತರಂ ಸಂವರ್ತಸಮಯದತಿವರ್ತಿಯಪ್ಪ ದಂಡಧರನ ಪೊಡರ್ಪನಪ್ಪ ಕಯ್ದು ಮಯನಂ ಮುಟ್ಟಿವಂದು ಮಹಾಯುದ್ಧಂ ಗೆಯ್ದು

ಪಿಡಿಯೆ ರಘೂದ್ವಹಂ ಮಯನನೀಕ್ಷಿಸಿ ರಾಕ್ಷಸಚಕ್ರವರ್ತಿ ಕಾ
ಯ್ಪೊಡರಿಸೆ ಕೀಱಿ ತನ್ನ ರಥಮಂ ಪರಿಚೋದಿಸವೇೞ್ದು ರಾಮನೊಳ್
ತೊಡರಲೊಡರ್ಚೆ ಬರ್ಪ ಪದದೊಳ್ ಮಗುಳಿತ್ತಲೆನುತ್ತುಮೆಯ್ದಿದಂ
ಸಿಡಿಲ ಪೊಡರ್ಪುಮಂ ಜವನ ಕೂರ್ಪುಮನಿಟ್ಟುಕಳಿಗೊಂಡು ಲಕ್ಷ್ಮಣಂ ೩೯

ಎಂತಾಸುಂ ದೊರೆಕೊಂಡೆ ರಾಘವನಮೋಘಾಸ್ತ್ರಕ್ಕೆ ಮಾಱಾಂಪ ವಿ
ಕ್ರಾಂತಂ ಕಾರ್ಮುಕ ನಿನ್ನೊಳುಂಟೆ ಕದನಕ್ಕಣ್ಣಂಬರಂ ಗಂಡರಾರ್
ಮುಂತಾಗೆನ್ನೊಳಿದಿರ್ಚುವ ಕೂರ್ಗಣೆಯು ಕೂರ್ಪಂ ತ್ರೋರ್ಪೆನಸ್ಮೆಂದು ಕ
ಲ್ಪಾಂತೋಗ್ರಾಂತಕನಂತೆ ಗರ್ಜಿಸಿದನಾರಕ್ತೇಕ್ಷಣಂ ಲಕ್ಷ್ಮಣಂ ೬೦

ಅಂತು ಗಜಱಿ ಗರ್ಜಿಸುವುದುಂ ಕೇಸರಿಯಂತೆ ಕೆಳರ್ದು

ಕರಿಗಳ ಸಾಸಿರದೊಳ್ ಪೂ
ಡಿ ರಥಂ ಜಂಗಮಕುಲಾದ್ರಿ ಬರ್ಪಂತೆ ಭಯಂ
ಕರಮಾಗೆ ಬಂದು ದಶಕಂ
ಧರನಾಸುರಮಾಗೆ ತಾಗಿದಂ ಲಕ್ಷ್ಮಣನಂ ೬೧

ಆಗಳೆಱಂಕೆಯ ಬೆಟ್ಟಂ
ಬೇಗಂ ಬರ್ಪಂತೆ ಬಂದು ಲಕ್ಷ್ಮಣನ ರಥಂ
ತಾಗಿದುದು ಗರುಡವಾಹಿನಿ
ಸಾಗರಮುಚ್ಚಳಿಸೆ ಪಕ್ಷಪವನಾಹತಿಯಿಂ ೬೨

ಅಂತವರ್ ತಮ್ಮ ರಥಮನನತಿದೂರದೊಳ್ ನಿಲಿಸಿ

ಇವು ದೃಷ್ಟಿವಿಷಾಹಿಯ ಗರ
ಳವಹ್ನಿ ಜಿಹ್ವಾವಿಭಾಸಮೆನೆ ಕಣ್ಗಳ ಕೆಂ
ಪವರೊರ್ವರೊರ್ವರಂ ಪ್ರಾ
ಣವಾಯುವಂ ನುಂಗುವಂತೆ ನೋಡಿದರಾಗಳ್ ೬೩

ಅಂತವರಿರ್ವರುಂ ಜನ್ಮಾಂತರ ಜನಿತ ಕಲುಷವಶಗತರಾಗಿ ನೀಡುಂ ನೋಡೆ ಲಕ್ಷ್ಮೀಧರಂ ದಶಕಂಧರನಂ

ಪಲ ದಿವಸಕ್ಕೆತ್ತಾನುಂ
ಕಲಹಕ್ಕೊಳಗಾದೆ ನಿನ್ನ ಬಾಹ್ವಾಸೆಯ ಪಂ
ಬಲನಿನ್ನುಟಿ ರಘುವೀರನ
ಚಲನಾಬ್ಜಕ್ಕೆಱಗಿ ಪಡೆಯ ಮೃತ್ಯುಂಜಯಮಂ ೬೪

ಎನೆ ದಶಮುಖಂ ಮುನಿದು

ತ್ರಿಜಗದೊಳುಳ್ಳಱಿಕೆಯ ಭೂ
ಭುಜರಂ ಭುಜಬಲದಿನೆನ್ನ ಕಾಲ್ಗೆಱಗಿಸಿದೆಂ
ನಿಜತನುಗೆಱಗಿಸುವೆನಧೋ
ಕ್ಷಜ ನಿಮಿಷಾರ್ಧದೊಳೆ ಪರ್ದುಮಂ ಕಾಗೆಯುಮಂ ೬೫

ಎಂದು ಬಿಡೆನುಡಿದು ಕಯ್ದುಗೆಯ್ಯೆಂದು ಮೊದಲಿಸಿ ಉಪೇಂದ್ರನುಂ ದೈತ್ಯೇಂದ್ರನುಂ ನಿಜ ವಿಜಯಚಾಪಂಗಳನೇಱಿಸಿ ಕಾಯ್ದಿಸೆ

ದನುಜೇಂದ್ರನ ಗಜರಥಮುಂ
ಮನುಜೇಂದ್ರನ ಗರುಡರಥಮುಮೆಲೆಮಿಡುಕದೆ ನಿ
ಲ್ವಿನಮವರೆಚ್ಚಂಬುಗಳಂ
ದನುವರದೊಳ್ ಪಡೆದುವೊಡನೆ ಶರಪಂಜರಮಂ ೬೬

ಓರೊರ್ವರೆಚ್ಚ ಕಣೆಗಳ
ನೋರೊರ್ವರ್ ಕಡಿದು ಮಾಣದಿಸೆ ಮಾರ್ಮುಗಿಲಿಂ
ದೋರಂತೆ ಪಾಯ್ವ ಪುಷ್ಕರ
ಧಾರಾಸಂದೋಹದಂತೆ ಪಾಯ್ದುವು ಕಣೆಗಳ್ ೬೭

ಪುರುಷೋತ್ತಮನಿಸೆ ದಶಕಂ
ಧರನಂ ಕೂರ್ಗಣೆಗಳುರ್ಚಲಾಱವೆ ದಶಕಂ
ಧರನಿಸೆ ನಿಶಿತಾಸ್ತ್ರಂಗಳ್
ಪುರುಷೋತ್ತಮತನುವನುರ್ಚಲಾಱವೆ ಧುರದೊಳ್ ೬೮

ಸಮಧಿಕರಸ್ತ್ರಶಸ್ತ್ರಬಲದೊಳ್ ದೃಢಕಾಯದೊಳತ್ಯುದಗ್ರ ವಿ
ಕ್ರಮದೊಳನಂತ ವೀರ್ಯದೊಳನೇಕವಿಧ ಪ್ರಧನಂಗಳೊಳ್ ಧನು
ಶ್ರಮದೊಳಪಾರ ಪೌರುಷದೊಳಾದೊಡಮೇಂ ಪ್ರತಿವಾಸುದೇವನೊಳ್
ಸಮನಿಸಿದಾಯುರಂತಮೆ ಜಯಪ್ರದಮಾದುದು ವಾಸುದೇವನೊಳ್ ೬೯

ರಾವಣ ಲಕ್ಷ್ಮಣರತಿ ರೋ
ಷಾವೇಷದಿನೆಚ್ಚು ಮಿಟ್ಟು ಮಿಱಿದುಂ ಪೊಯ್ದುಂ
ಸೋವಂ ಸಾವಂ ಬಗೆಯದೆ
ದೇವರ್ಕಳ ನೆರವಿ ನೋಡೆ ಕಾದುತ್ತಿರ್ದರ್ ೭೦

ಅಂತಚಿಂತ್ಯಯುದ್ಧಂಗೆಯ್ದು ಲಕ್ಷ್ಮಣನಂ ಗೆಲಲ್ ನೆಱೆಯದೆ

ಸಿಡಿಮಿಡಿಗೊಂಡು ತನ್ನ ಕಲುಷೋಗ್ರ ಕೃಶಾನುವೆ ತನ್ನ ದೇಹಮಂ
ಸುಡೆ ನಿಖಿಲಾಱಿದುಮ್ಮಳಿಸಿ ಲಕ್ಷ್ಮಣದೇವನ ದಿವ್ಯಬಾಣದಿಂ
ಕಡೆ ನಿಜ ದಿವ್ಯಬಾಣದೆಸಕಂ ಮಸಕಂಗಿಡದಿಂದ್ರವಿದ್ವಿಷಂ
ಪಡೆದನಪಾರಮುಂ ತನುಗಳಂ ಬಹುರೂಪಿಣಿಯೆಂಬ ವಿದ್ಯೆಯಿಂ ೭೧

ಆ ವಿದ್ಯೆಯ ಸಾಮರ್ಥ್ಯಮ
ನೇವಣ್ಣಿಸುವೆಂ ಜನಾರ್ದನಂಗಾಕ್ಷಣದೊಳ್
ರಾವಣಮಯಮಾಯ್ತಖಿಲ ಧ
ರಾವಲಯಂ ಗಗನವಲಯಮಾಶಾವಲಯಂ ೭೨

ಇಟ್ಟರ್ ಕೆಲರಿಱಿದರ್ ಕೆಲ
ರೊಟ್ಟಜೆಯಿಂ ಬಂದು ತಾಗಿದರ್ ಕೆಲರಂಬಂ
ತೊಟ್ಟರ್ ಕೆಲರಳ್ಕುಱೆ ಬೊ
ಬ್ಬಿಟ್ಟರ್ ಕೆಲರಾಜಿರಂಗದೊಳ್ ಪೌಲಸ್ತ್ಯರ್ ೭೩

ಅಂತಗುರ್ವಾಗೆ ಬಿಗುರ್ವಿಸಿ ಕಾದುವಲ್ಲಿ

ಅನಿತುಂ ರಾವಣಕೋಟಿ ಕೋಟಿತೆಱದಿಂ ದಿವ್ಯಾಸ್ತ್ರಶಸ್ತ್ರಂಗಳಿಂ
ಮುನಿದೆಯ್ತಂದಿಸೆ ಪೊಯ್ಯೆ ತಳ್ತಿಱಿಯೆ ತಳ್ತೇಸಾಡಿದಂ ಕೋಟಿಗೊ
ರ್ವನೆ ಬಿಲ್ಗೊಂಡು ಪುನರ್ಭವಂಗಳವು ಕೋಟಾಕೋಟಿಗಳ್ ಪಾಱಿ ಬೀ
ಟ್ವಸೆಗಂ ಪಂದಲೆಗಳ್ ಧನುರ್ಧರಧುರೀಣಂ ದುರ್ಧರಂ ಲಕ್ಷ್ಮಣಂ ೭೪

ರಾವಣಕೋಟಿಯ ತಲೆ ಕೆಂ
ದಾವರೆಯಂ ಕೆದಱಿದಂತೆ ರಣಮಂಡಲಮಂ
ತೀವೆ ತೆಗೆದೆಚ್ಚು ಲಕ್ಷ್ಮಣ
ದೇವನವೊಲ್ ಕೋಟಿಭಟನೆನಿಪ್ಪವನಾವಂ ೭೫

ಅಂತು ರಾವಣನ ತಲೆಗೆ ನೆಲನುಮಾಗಸಮುಮೆಡೆನೆಱೆಯದೆನೆ ತಱಿದೊಟ್ಟೆ ರಾವಣಂ ಬಹುರೂಪಿಣೀವಿದ್ಯೆಯನುಟಿದು ಮುಳಿಸನುಟಿಯದೆ ಚಂದ್ರಹಾಸದಿ ನಿಱಿಯೆ ಲಕ್ಷ್ಮಣಂ ಸೂರ್ಯಹಾಸದಿನದರ್ಕೆ ಭಂಗಮನೊಡರಿಸೆ ಕೆರ್ಳೀಱಿದ ಕೋಪದಿಂ ಕಿಡಿಕಿಡಿವೋಗಿ

ಪರಚಕ್ರಕ್ಷಯ ಕಾಲಚಕ್ರಮೆನಿಸಿದರ್ಧಾತ್ಮೀಯಚಕ್ರಕ್ಕೆ ಖೇ
ಚರಚಕ್ರೇಶ್ವರನುಯ್ಯೆ ಕಯ್ಯನದು ತೇಜಶ್ಚಕ್ರದಿಂ ಕೋಟಿಭಾ
ಸ್ಕರಚಕ್ರಪ್ರಭೆಯಂ ಪಳಂಚಲೆದು ಕಯ್ಗೆಯ್ತಂದು ಲೋಕೈಕ ಭೀ
ಕರಮಾಟಂದುದು ನೀಲಮೇಘನಿಕಟ ಪ್ರಸ್ಫಾರ ದಂಭೋಳಿವೊಲ್ ೭೬

ಅಂತು ವೀರಪುರುಷರತ್ನನೆನಿಪ ರಾವಣನ ಕಯ್ಗೆ ಚಕ್ರರತ್ನಂ ಬರ್ಪುದುಂ ದಶಮುಖಂ ಲಕ್ಷ್ಮಣಂಗಭಿಮುಖನಾಗಿ

ಅಟಿಗಂಡಿನೊಳೇಂ ಕಯ್ದುವ
ನುಟಿ ಶಕ್ತಿಯೊಳಾದ ಸಾವನೆಂತಾನುಂ ಮುನ್
ಕಟಿದಿನ್ ಸಾಯದಿರಾಂತರ
ನುಟಿವಂತಾಡುಗುಮೆ ಚಕ್ರಧಾರಾಚಕ್ರಂ ೭೭

ಎಂದು ಮೂದಲಿಸಿ

ತಿರಿಪೆ ಧರಾಚಕ್ರಂ ಕೋ
ವರ ಚಕ್ರದ ತೆಱದೆ ತಿರಿದುದೆಂಟುಂ ದೆಸೆ ತ
ಳ್ತುರಿದುವು ಚಕ್ರದ ಬಿಸುಪಿಂ
ಸುರಸಂಕುಲವಗಿದು ತೆಗೆದುದಿರ್ದೆಡೆಯಿಂದಂ ೭೮

ಆಗಳದಂ ಕಂಡು

ಕಾವವರಾರೊ ಲಕ್ಷ್ಮಣಸನಕ್ಕಟ ಸೀತೆಯು ಬೇವಸಕ್ಕೆ ಕಾ
ಲಾವಧಿಯಾದುದಿಲ್ಲೆನೆ ಸುರಾಸುರಮಂಡಲಮಾರೆ ಹರ್ಷದಿಂ
ರಾವಣಸೈನಿಕಂ ಕಪಿಬಲಂ ಬಿಡುತೋಡುವಿನಂ ತ್ರಿಲೋಕ ವಿ
ದ್ರಾವಣನಿಟ್ಟನಾ ಖಚರಚಕ್ರಿ ಸುದರ್ಶನದಿವ್ಯಚಕ್ರದಿಂ ೭೯

ಅಂತಿಸುವುದುಮಾ ಚಕ್ರಂ ಲಕ್ಷ್ಮೀಧರನಂ ಮುಟ್ಟಿವಂದು ಮೂಱುಸೂಟ್ ಬಲಗೊಂಡಾತನ ಬಲದ ಮುಯ್ಪಿನ ಕೆಲದೊಳಿರ್ಪುದುಮದಂ ಲಕ್ಷ್ಮೀಧರನವಲೋಕಿಸುತ್ತುಮಿರೆ ರಾಮಸ್ವಾಮಿ ಕಂಡು ಲಕ್ಷ್ಮಣ ನಿನಗೆ ಚಕ್ರರತ್ನಂ ದೊರೆಕೊಂಡುದದನೆ ಕೊಂಡಿಡೆಂದು ಬೆಸಸುವುದುಮದರ್ಕೆ ಲಕ್ಷ್ಮಣಂ ದಕ್ಷಿಣ ಭರತಧಾತ್ರಿಗಭಯ ಹಸ್ತಮೆನಿಪ್ಪ ತನ್ನ ದಕ್ಷಿಣ ಹಸ್ತಮಂ ನೀಡೆ

ಲಂಕಾಧೀಶನ ಜಯವಧು
ಪಂಕಜನಾಭಂಗೆ ಕೂರ್ತು ರಣಮುಖದೆಡೆಯೊಳ್
ಮುನ್ ಕೊಟ್ಟಟ್ಟಿದ ರನ್ನದ
ಕಂಕಣಮೆಂಬಂತೆ ಕಯ್ಗೆವಂದುದು ಚಕ್ರಂ ೮೦

ಆಗಳ್ ಚಕ್ರಪಾಣಿ

ನಿನ್ನ ನಚ್ಚಿನ ಚಕ್ರಮುಂ ಬೆಸಕಯ್ಯಲೊಲ್ಲದೆ ಬಿಟ್ಟು ಬಂ
ದೆನ್ನನಾಶ್ರಯಿಸಿತ್ತು ಕೆಮ್ಮನೆ ಕಾದಿ ಸಾಯದೆ ಲಂಕೆಯೊಳ್
ನಿನ್ನ ಪುತ್ರ ಕಳತ್ರ ಮಿತ್ರರೊಳೊಂದಿ ರಾಜ ವಿಭೂತಿಯೊಳ್
ಮುನ್ನಿನಂತಿರು ಬೇಡಿಕೊಂಡಭಯಪ್ರದಾನಮನಣ್ಣನೊಳ್ ೮೧

ಅಸದಾಗ್ರಹಮಂ ಬಿಸುಟೊ
ಪ್ಪಿಸು ಸೀತಾದೇವಿಯಂ ಜಗಜ್ಜನನಿಯನ
ರ್ಚಿಸು ರಾಮಸ್ವಾಮಿಯ ಚರ
ಣಸರೋರುಹಮಂ ಕಿರೀಟಮಣಿಮಂಜರಿಯಿಂ ೮೨

ಎನೆ ದಶಮುಖಂ ಕೋಪಶಿಖಿಯಿಂ ಸಂದ-ವ ಸೋಡರಂತುದ್ದಮುರಿದು

ಎಲೆ ಪಾಱುಂಬಳಿ ಪೋಗೆ ಪೋದುದೆ ಸುಮಿತ್ರಾಪುತ್ರ ಮತ್ಪೌರುಷಂ
ಪಲವಂ ಸೀನ್ ಗಿಳಿಯಂದದಿಂ ಗಱಪದಿರ್ ಕೈಲಾಸಮುಂ ತೂಗಿದೀ
ತೋಳೆಯೊಳ್ ದಕ್ಷಿಣಬಾಹುದಂಡದೊಳಿದಿರ್ಚಲ್ ಗಂಡನಾರೆಂದು ಮೆ
ಯ್ಗಲಿ ಪಾಯ್ದಂ ರಥದಿಂ ನೆಲಕ್ಕೆ ಜಡಿಯುತ್ತುಂ ಚಂದ್ರಹಾಸಾಸಿಯಂ ೮೩

ಅಂತು ಪೊಡರ್ಪುಗಿಡದತಿಭರದಿನಿಱಿಯಲಸುಗೆಯ್ದು ಬರ್ಪನಂ ಕಂಡು
ಕೋಟಿಕಶಿಲೆಯನೆತ್ತಿದ ಮಹಾಸತ್ವಂ ಸುದರ್ಶನ ಚಕ್ರದಿಂದಿಡುವುದುಂ

ಹೃದಯಂ ಸೀತಾನಿಮಿತ್ತಂ ಮನಸಿಜನಿಸೆ ಪಂಚೇಷುವಿಂ ಭಿನ್ನಮಾಗಿ
ರ್ದುದಱಿಂ ಲಕ್ಷ್ಮೀಧರಂ ಕೋಪದಿನಿಡೆ ಪೆಱತೇಂ ಚಕ್ರರತ್ನಕ್ಕೆ ಪಾಡಾ
ದುದೆನಲ್ ನಟ್ಟುರ್ಚಿ ಬೆನ್ನಿಂ ಪೊಱಮಡೆ ವಿಗತಪ್ರಾಣನಾ ದಾನವೇಂದ್ರಂ
ತ್ರಿದಶೇಂದ್ರಂ ವಜ್ರದಿಂದಿಟ್ಟೊಡೆ ನಡುಗೆ ನೆಲಂ ಬೆಟ್ಟು ಬೀೞ್ವಂತೆ ಬಿೞ್ದಂ ೮೪

ಅಸುರನನರ್ಘಶೋಣಮಣಿಭೂಷಣದೀಧಿತಿಯೊಳ್ ಕಿರೀಟದೊಳ್
ಮಿಸುಗುವ ಪದ್ಮರಾಗ ರುಚಿಯೊಳ್ ಪೊಱಪೊಣ್ಮುವ ರಕ್ತವಾರಿಯೊಳ್
ಮುಸುಕಿ ರಣಾವಲೋಕನ ಕುತೂಹಲದಿಂ ನೆರೆದಪ್ಸರೋಗಣ
ಕ್ಕಸುರ ಕುಲಾಧಿದೇವತೆ ಚಿತಾನಲನಿಂ ಸುಡುವಂತೆ ತೋಱಿದಂ ೮೫

ಅಸಿರತ್ನಂ ಚಕ್ರರತ್ನಂಬಡೆದನಮಿತ ಶಸ್ತ್ರಾಧಿದೈವಂಗಳಂ ಸಾ
ಧಿಸಿದಂ ಕೈಲಾಸಮುಂ ಚಾಲಿಸಿದನಖಿಲ ದಿಕ್ಪಾಲರಂ ಗೆಲ್ದನಂತ
ಪ್ಪಸುರೇಂದ್ರಂ ತನ್ನ ಶಸ್ತ್ರಾಸನದೊಳೆ ಮರಣಪ್ರಾಪ್ತನಾದಂ ದಲಂದ
ನ್ಯಸತೀಸಂಭೋಗಕೇಳೀರತರುೞಿದವರ್ಗಳ್ ಸಾವುದಿನ್ನಾವ ಚೋದ್ಯಂ ೮೬

ಅಂತು ದಶಾನನಂ ಯಮಾನನಮುಂ ಪುಗುವುದುಂ

ಸುರಿದುದು ಪುಷ್ಪವೃಷ್ಟಿ ಸುರದುಂದುಭಿ ಘೂರ್ಣಿಸಿದತ್ತುಪೇಂದ್ರನಂ
ಪರಸಿದುದಱ್ಕಱಿಂ ಸುರಗಣಂ ಮಿಳಿರ್ದತ್ತು ಜಯಧ್ವಜಂ ನಿಶಾ
ಚರ ಬಲಮೋಡಿದತ್ತಭಯ ಘೋಷಣಮುಣ್ಮಿದುದಬ್ಧಿಘೋಷಮಂ
ಪರಿಭವಿಸಿತ್ತು ವಾನರಪತಾಕಿನಿಯೊಳ್ ವಿಜಯಾನಕಸ್ವನಂ ೮೭

ಆಗಳವನೀತಲದೊಳ್ ಬಿಟ್ಟಿರ್ದ ರಾವಣನಂ ವಿಭೀಷಣಂ ಕಂಡು ಸೋದರ ಸ್ನೇಹಂ ಕಾರಣಮಾಗೆ ಮೂರ್ಛೆವೋಗಿಯೆಂತಾನುಮೆೞ್ಚತ್ತು ಮತ್ತಮತಿ ಪ್ರಲಾಪಂಗೆಯ್ದು ಶೋಕವಿಕಲನಾಗಿರ್ದನಿತ್ತ ರಾವಣಂಗೆ ಮರಣಮಾದುದ ನಱಿದು ಮಂಡೋದರಿ ಮೊದಲಾಗೆ ಪಲರುಮಂತಃಪುರ ಪುರಂಧ್ರಿಯರ್ ಬೇಗಂ ಬಂದಾತನ ಕಳೇಬರಮಂ ಕಂಡು ಮೂರ್ಛೆವೋಗಿ ನೀಡಱಿಂದೆೞ್ಚತ್ತು

ನಿನ್ನಂತವುರದ ಕಾಂತೆಯ
ರನ್ನೋಡದೆ ನುಡಿಯದಿಂಬುಕಯ್ಯದೆ ಪದಪಿಂ
ಮನ್ನಿಸದೆ ಮುಳಿದ ತೆಱದಿಂ
ನಿನ್ನಿರ್ದಿರವಾವ ಕಾರಣಂ ಖಚರಪತೀ ೮೮

ಕರಿ ಹರಿ ಹಂಸ ಮೀನ ಮಕರಾದಿ ಮಹಾಧ್ವಜವಾರ ಮುಂದೆ ಪೇೞ್
ಪರಿವುವೊ ನಿನ್ನ ಬೆಳ್ಗೊಡೆಯ ತಣ್ನೆೞಲೊಳ್ ನಿಲಲಾರೊ ಯೋಗ್ಯರಾರ್
ಸುರ ನರ ಕಿನ್ನರೋರಗರನಾಳ್ವೆಸಕಯ್ಯುವುದಾತ್ತರಿನ್ನದಾರ್
ಭರತ ವಸುಂಧರಾವಲಯಮಂ ಪರಿರಕ್ಷಿಸುವರ್ ದಶಾನನಾ ೮೯

ಇನ್ ಕಡುಕಯ್ದು ದಿಕ್ಪತಿಗಳಳ್ಕುವಿನಂ ತ್ರಿಜಗದ್ವಿಭೂಷಣ
ಕ್ಕಂಕುಶಮಿಕ್ಕಿ ದಿಗ್ಗಜಮನೋಡಿಸಲುಂ ವಿಜಯಾರ್ಧಶೈಲದಿಂ
ತೆಂಕಣ ಧಾತ್ರಿಯಂ ತನಗೆ ಕಂಕಣದಂತಿರೆ ಕಯ್ಗೆ ಮಾಡಲುಂ
ಲಂಕೆಯುನಾಳಲುಂ ನೆಱೆವ ಖೇಚರವಲ್ಲಭನಾರ್ ದಶಾನನಾ ೯೦

ಬಾಳಿಯನಂಜಿಸಿ ಭುಜ ಬಲ
ಶಾಳಿಯನೋಡಿಸಿ ಸಹಸ್ರಬಾಹುವನಿನ್ನಾರ್
ಬಾಳ ಮಸೆಯಿಂ ದಶಾನನ
ಕೀಟಾಳ್ಮಾಡುವರೊ ನೆಲದೊಳುಳ್ಳರಸುಗಳಂ ೯೧

ದಿವಿಜಭವನಕ್ಕೆ ಹಾ ದಾ
ನವೇಂದ್ರ ನೀನತಿಥಿಯಾದೆ ತುಡುವವರಿನ್ನಾರ್
ನವಮುಖಭೂಷಣಮಂ ಸ್ವೈ
ರವಿಹಾರದಿನೇಱುವನ್ನರಾರ್ ಪುಷ್ಪಕಮಂ ೯೨

ಎತ್ತುವಿನಂ ಮಹೋತ್ಸವ ಪತಾಕೆಗಳುತ್ಸವತೂರ್ಯ ನಿಸ್ವನಂ
ಬಿತ್ತರಿಪನ್ನಮಂತಕನ ಬಾರಿಗೆ ಸೋವತಮಾದೆ ದೇವ ದು
ವೃತ್ತವಿರೋಧಿನಿರ್ದಲನ ಕಾಳೆಗದೊಳ್ ಪಿಡಿವೆತ್ತ ಸತ್ತ ಬೆ
ನ್ನಿತ್ತ ವಿರೋಧಿ ಭೂಭುಜರ ಖೇಚರ ರಾಜರ ರಾಜಧಾನಿಯೊಳ್ ೯೩

ಎಂದತಿಪ್ರಲಾಪಂಗೆಯ್ಯುತ್ತುಂ ರಾವಣನ ಚರಣೋಪಾಂತದೊಳ್ ಮೆಯ್ಯನೀಡಾಡಿ ಬಹುವಿಧದಿಂದೆ ಪಳವಿಸುವ ಪೌಲಸ್ತ್ಯನ ಕುಲಸ್ತ್ರೀಯರಂ ಕಂಡು ರಾಮಸ್ವಾಮಿ ಕರುಣಿಸಿ ರಾವಣಂಗೀ ಮರಣಮಿಾತನ ದುರ್ವ್ಯಸನದಿಂದಾದುದಲ್ಲದೆಮ್ಮಿಂದಾದುದಲ್ತಾಗರ್ಾದೊಡಂ ಸಂಸಾರಸ್ವರೂಪಮಿಂತುಟೆ ವಲಮಾರ ಜೀವನಮುಂ ಜೌವನಮುಂ ಧನಧಾನ್ಯಮುಮಿಷ್ಟಸಂಯೋಗಮುಂ ಕ್ಷಣದೆ ನಶ್ವರಂಗಳದಱಿಂದವರ್ಗಳಲದಲಸದೆ ಸೈರಿಸುವುದೆಂದವರುಮಂ ವಿಭೀಷಣನುಮಂ ಸಂತಯಿಸಿ

ಬವರಂಗೆಯ್ದಾತಂಗಾ
ಯ್ತುವಸಾನಂ ತಕ್ಕುದಲ್ತು ಪಗೆಗೊಳ್ವುದು ಮಿ
ಕ್ಕವರೊಳ್ ನಮಗೆಂದುಂ ರಾ
ಘವಂಗೆ ಸಚ್ಚರಿತದೆಸಕಮೊಂದಚ್ಚರಿಯೇ ೯೪

ಎಂದು ತಾನುಂ ಲಕ್ಷ್ಮಣನುಂ ಕರ್ಪೂರಾಗರು ಗೋಶೀರ್ಷ ಚಂದನಾದಿಗಳಿಂ ರಾವಣನಂ ಯಥಾವಿಧಿಯಿಂ ಸಂಸ್ಕರಿಸಿ ತದನಂತರಮಿಂದ್ರಜಿ ಮೇಘವಾಹನ ಕುಂಭಕರ್ಣ ಮಯ ಮಾರೀಚಾದಿಗಳಂ ಬರಿಸಿ ಸೆಱೆಯುಂ ಬಿಡಿಸಿ ಪಲತೆಱದಿನವರ ಶೋಕಮನುಪಶಮಿಯಿಸಿ

ರಾವಣನೊರ್ವನೆ ಕಟಿದಂ
ನೀವಿನಿಬರುಮಟ್ಕಱಿಂ ವಿಭೀಷಣನೊಳ್ ಸ
ದ್ಭಾವಮನೆ ಮೆಱೆದು ಖಚರ
ಶ್ರೀ ವಿಭವಮನೆಂದಿನಂದದಿಂದನುಭವಿಸಿಂ ೯೫

ಎಂಬುದುಂ ಕುಂಭಕರ್ಣಾದಿಗಳ್ ರಾಮಲಕ್ಷ್ಮಣರ ನಿಷ್ಕಷಾಯತ್ವಮುಮಂ ಸಂಸಾರ ಭೀರುತ್ವಮುಮಂ ಧೈರ್ಯಮುಮಂ ಬಾಹುವೀರ್ಯಮುಮಂ

ಮೆಚ್ಚಿ ಪೊಗೞ್ದಿನ್ನೆಮಗೆ ಸಂಸಾರಸುಖಂ ಸಾಲ್ಗುಮೆಂದು ಭೋಗನಿರ್ವೇಗಪರರಾಗಿ ನುಡಿದು ರಾಮಲಕ್ಷ್ಮಣರ್ ವೆರಸು ಪದ್ಮ ಸರೋವರದೊಳ್ ಜಲದಾನಕ್ರಿಯೆಯಂ ನಿರ್ವರ್ತಿಸಿದಿನ್ ಬೞಿಯಂ ದೀಕ್ಷೆಗೊಂಡರ್ ಮಂಡೋದರಿಯುಂ ನಾಲ್ವತ್ತೆಣ್ಛಾಸಿರ ವಿದ್ಯಾಧರಿಯರ್ ವೆರಸು ದೀಕ್ಷೆಗೊಂಡು ಶುಭಧ್ಯಾನತಾತ್ಪರ್ಯದಿನಿರ್ದಳ್.

೯. ಸೀತಾಪರಿತ್ಯಾಗಂ, ರಾಮಪರಿನಿರ್ವಾಣಂ

ಇತ್ತಲ್ ಸುಗ್ರೀವಾಂಗದಪ್ರಭಾಮಂಡಲ ಮರುತ್ಸುತ ವಿರಾಧಿತ ಪ್ರಮುಖ ವಿದ್ಯಾಧರ ಪರಿವೃತರ್ ತ್ರಿಜಗದ್ಭೂಷಣ ಗಜಾರೂಢರಾಗಿ ಬಲಾಚ್ಯುತರ್ ಲಂಕಾಪುರಮಂ ಪೊಕ್ಕು ಸೀತಾದೇವಿಯರಿರ್ದ ನಂದನದ ದೆಸೆಯನೆಯ್ದೆವಂದು

ಬಂಬಲನೆ ಬಾಡಿ ಮಂಜೞಿ
ದಂಬುಜಲತೆಯಂತಿರಿರ್ದ ಜಾನಕಿಯಂ ನೀ
ಲಾಂಬರನೀಕ್ಷಿಸಿ ವಿಜಯ
ಸ್ತಂಬೇರಮದಿಂ ಸಮುತ್ಸುಕಂ ಧರೆಗಿೞಿದಂ ೧

ಇದಿರ್ವಂದು ಕಯ್ಗಳಂ ಮುಗಿ
ದುದಯಿಸೆ ಪುಲಕಂಗಳುಣ್ಮೆ ಘರ್ಮಜಲಂಗಳ್
ಪದಪದ್ಮಕ್ಕೆಱಗಿರ್ದಳ್
ಕೆದಱಿದ ಕುರುಳೊಳಿ ಮೞಸೆ ಮೞಿದುಂಬಿಗಳಂ ೨

ಸತಿಯ ಪತಿವ್ರತಾಗುಣಸಮೃದ್ಧಿಗೆ ದರ್ಶನಶುದ್ಧಿಗಚ್ಚಱಿಂ
ಸ್ತುತಿಯಿಸಿ ನಿರ್ಜರರ್ ಕಱೆದು ಪೂಮೞೆಯಂ ವಸನಾಂಗರಾಗದಿಂ
ದತಿಶಯ ದಿವ್ಯಭೂಷಣಗಣಂಗಳಿನರ್ಚಿಸೆ ನೋಡಿ ನಾಡೆ ವಿ
ಸ್ಮಿತಮನರಾಗಿ ಜಾನಕಿಗೆ ಕಯ್ಮುಗಿದರ್ ಖಚರಾಧಿನಾಯಕರ್ ೩

ಅನಂತರಂ ಲಕ್ಷ್ಮೀಧರಂ ತನಗೆ ಪೊಡವಟ್ಟೊಡಾತನಂ ಪರಸಿ ಮನ್ನಿಮಿತ್ತಂ ಕರಂ ನೋದೆವಟ್ಟಿರೆಂದು ಮನ್ನಿಸುಮಿಕ್ಕು ಶೋಕಿಸುತ್ತಿರ್ಪುದುಂ ಲಕ್ಷ್ಮಣನುಂ

ರಾಮನುಂ ಸಂತಯಿಸಿದಿನ್ ಬಳಿಯುಂ ಪ್ರಭಾಮಂಡಲನಂ ಕಂಡು ಪೊಡೆವಟ್ಟೊ ಡಾತಸತಿಪ್ರೀತಿಯಿಂ ಪರಸಿ ಸೀತಾದೇವಿಗೆ ಸುಗ್ರೀವ ಜಾಂಬವಾದಿಗಳಂ ಪೆಸರ್ವೆ ಸರೊಳೆ ಪೇಳ್ದು ತೋಱಿ ಸಂತೋಷಮಂ ಮಾಡೆ

ಸತಿಯುಂ ತಾನುಂ ಮದಾಂಧದ್ವಿಪಮನೊಡನೆ ಬಂದೇಱಿ ವಿದ್ಯಾಧರಾಧೀ
ಶತನೂಜರ್ ಸುತ್ತಲುಂ ಮಂಡಲಿಸಿ ನಡೆಯೆ ಬೇಱೊಂದು ಪೂರ್ಣೇಂದುಬಿಂಬಾ
ಕೃತಿಯಿಂ ಶ್ವೇತಾತಪತ್ರಂ ಸೊಗಯಿಸೆ ದೆಸೆಯಂತೀವೆ ತೂರ್ಯಪ್ರಣಾದಂ
ಜಿತಶಕ್ರಾವಾಸಮಂ ರಾವಣನರಮನೆಯಂ ರಾಘವಂ ಬಂದು ಪೊಕ್ಕಂ ೪

ಅವರ್ಗೆ ವಿಭೀಷಣನತ್ಯು
ತ್ಸವದಿಂ ಬಿರ್ದಿಕ್ಕಿ ದಿವ್ಯಮಣಿಭೂಷಣ ದಿ
ವ್ಯವಿಲೇಪನ ದಿವ್ಯಾಂಬರ
ನಿವಹಮನೋಲಗಿಸಿ ವಿನಯಮಂ ಪ್ರಕಟಿಸಿದಂ ೫

ಅಂತು ಲಂಕೆಯೊಳ್ ರಾಮಲಕ್ಷ್ಮಣರ್ ಚಕ್ರವರ್ತಿಗಳಾಗಿ ಕೆಲವುಕಾಲ ಮಿರ್ದು ನಿಜಜನನಿಯರನಗಲ್ದು ಬಹುಕಾಲಮತಿಕ್ರಾಂತಮಾದುದೆಂದು ಕಟ್ಟು ಕಡೆದು ವಿಭೀಷಣನಂ ಬರಿಸಿ

ಅವಧಿಯ ವರ್ಷಂಗಳ್ ತೀ
ರ್ದುವಯೋಧ್ಯೆಗೆ ಪೋಗದಂದು ಜನನಿಯರುಂ ಬಾಂ
ಧವರುಂ ಖೇದಿಸುವರ್ ಪೋ
ಗವೇಳ್ಪುದೆಂದಱಪಿ ತಮ್ಮ ಗಮನೋದ್ಯಮಮಂ ೬

ಪ್ರಯಾಣಭೇರಿಯಂ ಪೊಯಿಸಿ ಬಲದೊಳ್ ಲಕ್ಷ್ಮೀಧರನೆಡದೊಳ್ ಜಾನಕಿ ಸುತ್ತಲುಂ ಖಚರ ವಿಮಾನಾವಲಿಯಿರೆ ಮಣಿವಿಮಾನದೊಳ್ ಕಣ್ಗೆಸೆದು ಅಯೋಧ್ಯಾಭಿಮುಖನಾಗಿ ಜಲಧಿಯಂ ದಾಂಟಿ ದಂಡಕಾರಣ್ಯಮನೆಯ್ದೆ ವಂದು

ಚಾರಣಮುನಿಯುಗಲಕ್ಕಾ
ಹಾರಮನಿತ್ತೆಡೆಯನಲ್ಲಿ ತಮ್ಮಿರ್ದ ಲತಾ
ಗಾರದ ಪುಳಿಲೆಡೆಯಂ ಸೀ
ತಾರಮಣಿಗೆ ಸುಟ್ಟಿತೋಱಿದಂ ರಘುವೀರಂ ೭

ಅಂತು ಪವನಪಥದೊಳ್ ಮನಃಪವನವೇಗದಿಂದಯೋಧ್ಯಾಪುರ ಬಹಿಃಪುರಮನೆಯ್ದೆ ಬರ್ಪ ಸಮಯದೊಳ್ ರಾಮಸ್ವಾಮಿಯ ಬರವನಱಿದು ಮಹಾವಿಭೂತಿಯಿಂ ಮುದಿತಹೃದಯನಾಗಿ ಭರತಂ ಶತ್ರುಘ್ನಸಹಿತಮಿದಿರ್ಗೊಳಲಯೋಧ್ಯೆಯಂ ಪೊಱಮಟ್ಟು ಬರೆ ರಾಮಸ್ವಾಮಿ ಗೆಂಟಱೊಳೆ ಕಂಡು ಪುಷ್ಪಕವಿಮಾನದಿನವನಿಗವತರಿಸೆ ಭರತಶತ್ರುಘ್ನರುಮಾನೆಯಿಂದಿೞಿದು ಬಂದು ಪಾದಪ್ರಾಂತದೊಳ್ ಸರ್ವಾಂಗಪ್ರಣತರಾಗಿರ್ಪುದುಂ ರಾಮಸ್ವಾಮಿ ತೆಗೆದಪ್ಪಿಕೊಂಡು ಪರಸಿದಿನ್ ಬೞಿಕ್ಕೆ ಸೀತಾದೇವಿಗಂ ಲಕ್ಷ್ಮೀಧರಂಗಮನುಕ್ರಮದಿಂ ಪೊಡೆವಟ್ಟು ಪರಕೆಯುಂ ಕಯ್ಕೊಂಡೋರೊರ್ವರ ಕುಶಲವಾರ್ತೆಯುಂ ಬೆಸಗೊಂಡು ಸಂತುಷ್ಟಚಿತ್ತರಾದನಂತರಂ ಪುರಮಂ ಪೊಕ್ಕು ಜನನಿಯರಂ ಕಂಡು ಪೊಡೆವಟ್ಟು ಅವರಾಶೀರ್ವಾದ ಪಾರಿಜಾತ ಕರ್ಣಪೂರದಿನಲಂಕರಿಸಿ ಓರೊರ್ವರ ಕ್ಷೇಮವಾರ್ತೆಯುಂ ನುಡಿದಿಷ್ಟಸಂಯೋಗದಿಂ ಮನೋರಾಗಮನಪ್ಪುಕಯ್ದಿರ್ಪಿನವೊಂದು ಶುಭದಿನಮುಹೂರ್ತದೊಳ್ ರಾಮಸ್ವಾಮಿ ರಾಕ್ಷಸ ದ್ವೀಪ ಸಹಿತಂ ಲಂಕೆಯಂ ವಿಭೀಷಣಂಗೆ ದೇವಾನೀಕಪುರಮಂ ರತ್ನಜಟಿಗ ಕಿಷ್ಕಿಂಧನಗರಮಂ ಸುಗ್ರೀವಂಗೆ ಶ್ರೀಪರ್ವತನಗರಮಂ ಹನುಮಂಗೆ ಪಾತಾಳಲಂಕೆಯಂ ವಿರಾಧಿತಂಗೆ ರಥನೂಪುರಚಕ್ರವಾಳಪುರಮಂ ಪ್ರಭಾಮಂಡಲಂಗ ರಾಜ್ಯಾಭಿಷೇಕಂಗೆಯ್ದು ಕೊಟ್ಟು ಮತ್ತಂ ಪೆಱರುಪಕಾರಂಗೆಯ್ದವರ್ಗಂ ಪ್ರಾರ್ಥಿಸೆ ಬಂದ ವಿದ್ಯಾಧರರ್ಗಂ ನಾಡಂ ಬೀಡುಮಂ ಕೊಟ್ಟು ಲಕ್ಷ್ಮಣನಂ ತ್ರಿಖಂಡಮಂಡಲಕ್ಕಧಿರಾಜನಂ ಮಾಡಿ ಭರತನನಯೋಧ್ಯೆಯಂ ಮುನ್ನಿಸಂದದಿಂದಾಳ್ವುದೆಂದು ಬೆಸಸೆ

ಭರತಂ ನಿಮ್ಮಾಜ್ಞೆಯುಂ ಮೀಱದೆ ವಸುಮತಿಯಂ ಕಾದುಕೊಂಡಿರ್ದೆನಿನ್ನಾನರಸಂ ಕಯ್ಕೊಳ್ವನಲ್ಲೆಂ ವಿಷಯಸುಖಮನಾನೊಲ್ಲೆನಾಂ ಮೋಕ್ಷಲಕ್ಷ್ಮೀಪರಿರಂಭೋತ್ಕಂಠನೆನ್ ಸಂಸೃತಿಯುದೆಸೆಗೆ ಬೆಳ್ಕುತ್ತೆನೆಂದಂದು ವೈರಾಗ್ಯರತಂ ರಾಮಂಗೆ ಕಯ್ಯಂ ಮುಗಿದೆಱಗಿದನನ್ನಂ ಮಹಾಸತ್ವನಾವಂ ೮

ಅಂತು ತಪಕ್ಕೆ ತಱಿಸಂದು ಸುಡಿಯೆ ಶ್ರೀರಾಮದೇವರ್ ಮುನ್ನೆಮಗೆ ಭೂಚರರೆ ಬೆಸಕಯ್ದರೀಗಳ್ ಖೇಚರರುಂ ಬೆಸಕಯ್ವರಿನ್ ಕೆಲವುಕಾಲಂ ರಾಜ್ಯ

ಸುಖಮನನುಭವಿಸಿ ನಾವೆಲ್ಲಮೊಡನೆ ತಪಂಬಡುವಮೆನೆ ನಿಮ್ಮಡಿ ನೀಮೆನಗೆ ಕಾರುಣ್ಯಂಗೆಯ್ವೊಡೆನ್ನಂ ಪೋಗಲೀವುದೆನಗಿನ್ ತಪಮೆ ಕಾರ್ಯಂ ನೀಮಿದಂ ಮಾರ್ಕೊಳ್ಳದಿರಿಮೆಂದು ಮಱುಮಾತಿಂಗೆಡೆಯಿಲ್ಲದಂತತಿ ಪ್ರತಿಜ್ಞೆಗೆಯ್ದು ಬಿನ್ನವಿಸಿ ರಾಜಭವನಮಂ ಪೊಱಮಟ್ಟು ಪೋಗಿ ತಪಸ್ಸ್ಥನಾದಂ ಕೈಕೆಯುಂ ಮುನ್ನೂರ್ವರ್ ಸ್ತ್ರೀಯರ್ ವೆರಸು ಪೋಗಿ ಸಮ್ಯಕ್ತ್ವಪೂರ್ವಕಂ ತಪಂಗೊಂಡಳ್

ಪರಿಪಾಲಿಸಿ ಧರೆಯಂ ಖೇ
ಚರ ಭೂಚರ ಭೂಪರಾಳ್ದೆಸಂಗೆಯ್ಯೆ ನಿರಂ
ತರ ಸುಖದಿನಿರ್ತ್ತಲಮರೇ
ಶ್ವರವಿಭವಂ ಬಡೆದು ರಾಮಲಕ್ಷ್ಮಣರಿರ್ದರ್ ೯

ಅಂತು ಸುಖದಿನಿರೆ ಒಂದು ದಿವಸಂ ನಿಶಾವಸಾನಸಮಯದೊಳ್

ಶರಭದ್ವಿತಯಂ ನಿಜ ಮುಖ
ಸರೋಜಮಂ ಬಂದು ಪುಗುವುದಂ ಪುಷ್ಪಕದಿಂ
ಧರಣಿಗೆ ಬೀೞ್ವುದನಾ
ಹರಿಣೇಕ್ಷಣೆ ಸೀತೆ ಕಂಡಳೆರಡಂ ಕನಸಂ ೧೦

ಅಂತು ಕಂಡ ಸ್ವಪ್ನಂಗಳಂ ರಾಮಸ್ವಾಮಿಗಱಿಪುವುದುಂ

ಅಮಿತ ಪರಾಕ್ರಮರಿವರೆನಿ
ಪ ಮಕ್ಕಳಂ ಪಡೆವೆ ಶರಭಯುಗದರ್ಶನದಿಂ
ಕಮಲಾನನೆ ಮತ್ತಿನ ಕನ
ಸು ಮನೋಹರಮಲ್ತು ಖೇದಮಂ ಪುಟ್ಟಿಸುಗುಂ ೧೧

ಎಂದಿರ್ವರುಮೇವಯಿಸುತ್ತುಮಿರೆ ಕೆಲವು ದಿವಸಕ್ಕೆ ಸೀತೆಗೆ ಗರ್ಭಚಿಹ್ನಂಗಳ್ ತೋಱಿದುವಾ ಮಹಾನುಭಾವೆ ಬಯಕೆ ಸಮನಿಸೆ ಜಿನಪೂಜೋತ್ಸವಮನನುದಿನಂ ಮಾಡುತ್ತುಮಿರಲೊಂದು ದಿವಸಂ

ಕಟ್ಟಿದುದಂ ಕಳಿವವರಾರ್
ನೆಟ್ಟನೆ ಸತ್ಪಥದೊಳೆಸಗೆಯುಂ ಬೇಪಸಮೆ
ಬ್ಬಿಟ್ಟುವುದಂ ಸೂಚಿಪವೊಲ್
ಪುಟ್ಟಿದುದಾ ಸತಿಗೆ ದಕ್ಷಿಣಾಕ್ಷಿಸ್ಪಂದಾ ೧೨

ಆಗಳಾ ದುರ್ನಯಕ್ಕೆ ಸೀತೆ ಭಯಸ್ಥೆಯಾಗಿ ಗೃಹ ಮಹತ್ತರನಂ ಕರೆದಾರೇನಂ ಬೇಡಿದೊಡವರ್ಗದಂ ಕುಡುವುದೆಂದು ಪೇೞ್ದು ತಾನುಂ ಜಿನಾಭಿಷೇಕಮುಮಂ ಜಿನಪೂಜೆಗಳುಮಂ ಮಾಡುತ್ತಿರಲ್ ಜನಪದಜನಂ ಬಂದು ಬಿನ್ನವಿಸಲಣ್ಮದಿರೆ ರಾಮಸ್ವಾಮಿ ನಿಮ್ಮ ಬಂದ ಕಾರ್ಯಮನಂಜದೆ ಪೇೞಿಮೆಂಬುದುಂ ಪ್ರಜೆಗಳನುಮತದಿಂ ವಿಜಯನೆಂಬ ಮಹತ್ತರಂ

ವ್ಯಸನಿ ದುರಾತ್ಮನಪ್ಪ ದನುಜಂ ಕರಮೆಡ್ಡಮೆನಿಪ್ಪ ಸೀತೆಗಾ
ಟಿಸಿ ಪಿಡಿದುಯ್ದೊಡಾ ಖಲನಿವಾಸದೊಳಿನ್ನೆಗಮಿರ್ದಳಂ ವಿಚಾ
ರಿಸದೆ ಒಡಗೂಡಿ ಮುನ್ನಿನವೊಲಿರ್ಪುದು ಪಾೞಿಯೆ ಲೋಕಸೀಮೆಯಂ
ವಸುಧೆಗಧೀಶನೇೞಿಸುವುದುಂ ಪ್ರತಿಪಾಲಿಪರಾರೊ ಧರ್ಮಮಂ ೧೩

ಎಂಬುದುಂ ರಾಮನದಂ ಕೇಳ್ದು

ಜನವೆಂದಂತುಟೆ ಭಾವಿಸ
ದನಯಮನಾಂ ನೆಗೞ್ದೆನೆಂದು ಪಶ್ಚಾತ್ತಾಪಂ
ತನಗಧಿಕಮಾಗೆ ರಘುನಂ
ದನನುಬ್ಬರಮೆನಿಸೆ ತಳೆದನಂದುಬ್ಬೆಗಮಂ ೧೪

ಜನಮುಂ ಧರ್ಮಮುಮಱಿವಂ
ತೆನಗುವುದೇೞಿದಿಕೆಯೆಂದು ವೈದೇಹಿಯುಮಂ
ಬಿಸುಡಲ್ ಬಗೆದಂ ಮನುವಂ
ಶ ಸಮುದ್ಭವರಾರುಮುಚಿತಮಂ ಮಾಱುವರೇ ೧೫

ಅಂತು ರಾಮಸ್ವಾಮಿ ಸೀತಾದೇವಿಗತಿಸ್ನೇಹಿತನಾಗಿಯುಂ ಜನಾಪವಾದಕ್ಕೆ ಸೆಡೆದು ಪರಿಹರಿಸಲೊಡರಿಸಿ ಲಕ್ಷ್ಮಣನಂ ಬರಿಸಿ ಕಟ್ಟೇಕಾಂತ

ದೊಳಾನ್ಯತಿಕರಮನಱಿಪೆ ಸೌಮಿತ್ರಿ ಕೇಳ್ದು ಕಡುಮುಳಿದು ನಿಮ್ಮಡಿಗಳವಿವೇಕಿಗಳಂತೇಕೆ ನುಡಿವಿರ್

ಸತಿ ಸೀತಾದೇವಿ ಪತಿ
ವ್ರತಾದಿ ಗುಣರತ್ನಭೂಷಣಾಲಂಕೃತೆ ತ
ತ್ಸತಿಯೊಳವಗುಣಮನೂರ್ಜಿತ
ಮತಿಗಳ್ ನಿಮ್ಮನ್ನರುಸಿವುದನುಚಿತಮಲ್ತೇ ೧೬

ಎನೆ ರಾಮಸ್ವಾಮಿ

ಪುರುದೇವಂ ಮೊದಲಾಗಿರೆ
ದೊರೆವೆತ್ತಿಕ್ಷ್ವಾಕುವಂಶದವನೀಶರೊಳಾನ್
ಬರಮಿಲ್ಲ ದುಶ್ಚರಿತ್ರಂ
ದೊರೆಕೊಂಡಂದೆನ್ನ ಪೌರುಷಂ ದೊರೆಗಿಡದೇ ೧೭

ಎಂಬುದುಂ ಲಕ್ಷ್ಮೀಧರಂ

ಸೀತೆ ಗುಣಂಗಿಡೆ ಸಕಲ ಧ
ರಾತಲವೊಡನಟಿಗುಮಲ್ಲದಂದಾ ಸತಿಯುಂ
ಪ್ರೀತಿಯಿನರ್ಚಿಸಿ ದಿವಿಜ
ವ್ರಾತಂ ಕಱೆಗುಮೆ ನರೇಂದ್ರ ಪೂವಿನ ಮಱೆಯಂ ೧೮

ಎಂದೆನಿತಾನುಮಂ ರಾಮಸ್ವಾಮಿಗೆ ನುಡಿದೀ ಪೊಲ್ಲವಾತಂ ಪರೆಪಿದೊಕ್ಕಲಿಗರ ನಾಲಗೆಯಂ ಕಿತ್ತಿಕ್ಕುವೆನೆಂಬುದುಂ ಲಕ್ಷ್ಮಣನ ಕಯ್ಯಂ ಪಿಡಿದಿದನೊಂದಂ ಮಾರ್ಕೊಳ್ಳದಿರೆಂದು ತನ್ನ ಮೇಲೆ ಸೂರುಳ್ದು ಕೃತಾಂತವಕ್ತ್ರನಂ ಕರೆದು ಅಯೋಧ್ಯಾನಗರದ ಸಮ್ಮೇದ ಪರ್ವತದ ಸಮೀಪಪಡೆಯ ಜಿನಾಲಯಂಗಳಂ ವಂದಿಸಿ ನಿಮ್ಮ ಬಯಕೆಯಂ ತೀರ್ಚಿ ಬರ್ಪೆಂ ಬನ್ನಿಮೆಂದು ಸೀತೆಯನೊಡಗೊಂಡು ಪೋಗಿ ಭೀಮಾಟವಿಯೊಳ್ ನಿರ್ಜಂತುಕ ಪ್ರದೇಶದೊಳ್ ಬಿಟ್ಟು ಬರ್ಪುದೆನೆ

ಸೇವೆಯೆ ಕಷ್ಟಂ ಸೀತಾ
ದೇವಿಯನೀಡಾಡಿ ಬರ್ಪುದಡವಿಯೊಳೆಸೆ ದೋ
ಷಾವಿಲಮನಕ್ಕಿ ರಾಘವ
ದೇವಂಗೆ ಕೃತಾಂತವಕ್ತ್ರನದನೇಗೊಂಡಂ ೧೯

ಅಂತು ಬೆಸನಂ ಕಯ್ಕೊಂಡು ಸೀತಾದೇವಿಯ ಕೆಲಕ್ಕೆ ವಂದು

ರಾಮಂ ಕಲಿಸಿದ ತೆಱದಿಂ
ರಾಮೆಗೆ ಪುಸಿನುಡಿದು ರಥಮನೇಱಿಸಿ ಕೊಂಡಾ
ಭೀಮಾಟವಿಯಂ ಕರಿಹರಿ
ಭೀಮಾಟನಮಂ ಕೃತಾಂತಮುಖನೆಯ್ತಂದಂ ೨೦

ಆ ಮಹಾಗಹನಮಂ ಪೊಕ್ಕು ತನ್ಮಧ್ಯನಿರ್ಝರ ವಾರಿಧಾರಾ ಪರೀತ ಗಿರಿದರೀ ಪ್ರದೇಶದೊಳ್ ಮಹಾಸತಿಯಂ ರಥದಿಂದಿೞಿಪಿ ಮನ್ಯುಗದ್ಗದ ಕಂಠನಾಗಿ ಕಣ್ಣೀರ್ಗಳಂ ನೆಗಪುವುದುಂ ಕೃತಾಂತವಕ್ತ್ರನಂ ಸೀತಾದೇವಿ ಕಂಡಿದೇಕೆ ಶೋಕಂಗೆಯ್ದಪೆ ಪೇೞ್ ಎಂದೊಡಾತನಬ್ಬಾ ನಿಮ್ಮ ಮೇಲೆ ಲೋಕಮೆಲ್ಲಮಭಿಯೋಗಮನಿಟ್ಟೊಡರಸಂ ನಿಮ್ಮನಡವಿಯೊಳ್ ಬಿಸುಟ್ಟು ಬರವೇೞ್ದೊಡಿಲ್ಲಿಗೆ ತಂದೆನೆನೆ ಸೀತಾದೇವಿ ಕೇಳ್ದು ಮೂರ್ಛೆವೋಗಿ ಕೆಱೆದುಂ ಬೇಗದಿಂ ಚೇತರಿಸಿ ಕೃತಾಂತವಕ್ತ್ರಂಗೆ ರಾಮದೇವರ್ ಸಕಲವಸುಧಾತಲಮಂ ನ್ಯಾಯದಿಂ ಪ್ರತಿಪಾಲಿಸುವುದು ದೇವಗುರುಪೂಜೆಯಂ ಮಱೆಯದಿರ್ಪುದು ಜನಾಪವಾದ ಭಯದಿಂದೆನ್ನಂ ಬಿಸುಟ್ಟಂತೆ ಮಿಥ್ಯಾದೃಷ್ಟಿಗಳ ನುಡಿಯಂ ಕೇಳ್ದರ್ಹತ್ಪರಮೇಶ್ವರ ಶ್ರೀಧರ್ಮಮಂ ಬಿಸುಡದಿರ್ಪುದೆನಗೆ ದಯೆಗೆಯ್ವರಪ್ಪೊಡೆಂದಳೆಂಬುದಂ ಮಱೆಯದೆ ಪೇೞೆಂದು ಬಾಷ್ಪಲುಲಿತಲೋಚನೆ ತಲೆಯಂ ಬಾಗಿ ನೆಲನಂ ಬರೆಯುತ್ತುಮಿರ್ದಳಂ ಕೃತಾಂತವಕ್ತ್ರಂ ನೋಡಿ

ತರುಣಿಯನಂತರ್ವತ್ನಿಯ
ನರಣ್ಯದೊಳ್ ಬಿಸುಡವೇೞ್ದೊಡೀ ಬೆಸನಂ ಕಾ
ಪುರುಷನನೇಗೊಂಡೆಂ ಕಿಂ
ಕರಭಾವದಿನಪ್ರಶಸ್ತಮಾವುದುಮುಂಟೇ ೨೧

ಎಂದು ತನ್ನಂ ತಾನೆ ಸಿಂದಿಸಿಕೊಂಡು ಕಣ್ಣೀರ್ಗಳಂ ಮಿಡಿಯುತ್ತುಂ ಸೀತಾದೇವಿಗೆ ಕ್ಷಮಿಯಿಸುವುದೆಂದು ಪೊಡೆವಟ್ಟು ಬೀಳ್ಕೊಂಡಯೋಧ್ಯೆಗೆ ಪೋದನಿತ್ತಲ್

ಗುಣವತಿ ರಾಘವನಂ ಲ
ಕ್ಷ್ಮಣನಂ ನೆನೆನೆನೆದು ಶೋಕಪಾವಕನೆರ್ದೆಯೊಳ್
ಮಣಿಯದೆ ದಳ್ಳಿಸೆ ಕಣ್ಗಳ
ಪೊಣರಿಂ ಕಣ್ಬನಿಗಳುಣ್ಮೆ ದೆಸೆಗೆಟ್ಟಿರ್ದಳ್ ೨೨

ಅಂತಿಷ್ಟವಿಯೋಗವಿಕಲೆ ದಶದಿಶಾಮುಖದತ್ತದೃಷ್ಟಿ ಪೆಱರಾರುಮಂ ಕಾಣದೆ

ಜಿನಮುನಿಯುಂ ಪೆಱವುಂ ಪ್ರಾ
ಣಿ ನಿಕಾಯಮನಕ್ಕೆ ನಾಡೆ ಸೋಯಿಸಿದೆಂ ಮು
ನ್ನಿನ ಜನ್ಮದೊಳಂತಲ್ಲದೊ
ಡೆನಗಿನಿವಿರಿದೊಂದವಸ್ಥೆ ಬಱಿದಾದಪುದೇ ೨೩

ಎಂದು ಜಿನಾಗಮಕುಶಲೆಯಪ್ಪುದಱಿಂ ತನ್ನಂ ತಾನೆ ಸಿಂದಿಸಿಕೊಂಡು ಸಂತಯಿಸಿ ಮಹಾಋಷಿಯರ್ಕಳ್ ಮಹಾಗಹನದೊಳ್ ತಪಂಗೆಯ್ದಪವರ್ಗಮಂ ಸಾಧಿಸುವರದಱಿಂದೆನಗಮೀ ಪ್ರದೇಶಮೊಳ್ಳಿತ್ತು ಸಮನಿಸಿತ್ತು ನೋಂತುಂ ಪಸಿದುಮಂತ್ಯದೊಳ್ ಸಂನ್ಯಸನದಿಂ ಪರತ್ರೆಯಂ ಸಾಧಿಸುವೆನೆಂದು ಪರಮಾಗಮಭಾವನೆಯಿಂದಿರ್ಪನ್ನೆಗಂ

ಜನಕತನೂಜೆಯ ಸುಕೃತಮೆ
ಮನುಷ್ಯರೂಪಾಗಿ ಬರ್ಪ ತೆಱದಿಂ ನೃಪನಂ
ದನನೊರ್ವನಾ ಮಹಾಕಾ
ನನಕ್ಕೆ ಬಲಸಹಿತಮಾನೆವೇಂಟೆಗೆ ಬಂದಂ ೨೪

ವನದೇವತೆಯೋ ಲಕ್ಷ್ಮಿಯೊ
ವನಿತೆಯೊ ದಿವದಿಂದಮಿೞಿದ ಮೇನಕೆಯೋ ಪೇ

ಬೆಸನುತುಂ ಜಾನಕಿಯುಂ ಲೋ
ಜನಪಥದೊಳ್ ಮುಂದೆ ವಜ್ರಜಂಘಂ ಕಂಡಂ ೨೫

ಅಂತು ಕಂಡೆಯ್ದೆವಂದು ವಿಸ್ಮಯಸ್ತಿಮಿತ ಲೋಚನನಬ್ಬಾ ನೀವಾರ್ಗೆ ನಿಮಿತ್ತಮಿಾ ಕಾನನದೊಳಿರ್ದಿರೆಂಬುದುಮನವದ್ಯಚರಿತನೆಂದಱದಿಂತೆಂದಳಾನ್ ಜನಕತನೂಜೆಯೆನ್ ಪ್ರಭಾಮಂಡಲನನುಜೆಯೆನ್ ರಾಮಸ್ವಾಮಿಯ ಭಾರ್ಯೆ ಸೀತಾದೇವಿಯೆಂಬೆನೆನ್ನ ಮೇಲೆ ಜನಪದ ಜನಂ ಪೊಲ್ಲನಪ್ಪ ರಾವಣನುಯ್ದುಳಂ ತಂದು ವಿಚಾರಿಸದೆ ಮಹಾದೇವೀಪಟ್ಟಂಗಟ್ಟುವುದಾವುಚಿತಮೆಂದಿಟ್ಟಳಿವಿಟ್ಟು ನುಡಿಯೆ ಲೋಕಾಪವಾದಕ್ಕೆ ರಾಮಸ್ವಾಮಿ ನಾಣ್ಚಿ ಕೃತಾಂತವಕ್ತ್ರನೆಂಬ ಪಡೆವಳನಂ ಕರೆದು ತೀರ್ಥಸ್ಥಾನಂಗಳ ಜಿನಾಲಯಂಗಳಂ ವಂದಿಸಿ ಬರ್ಪವೆಂದು ನಂಬೆ ನುಡಿದೊಡಗೊಂಡುಯ್ದು ಬಿಸುಟ್ಟು ಬರ್ಪುದೆಂದೊಡಾತನೆನ್ನಂ ನಿರಪರಾಧೆಯಂ ತಂದಿಲ್ಲಿ ಬಿಸುಟ್ಟು ಪೋದನೆಂದು ಮಹಾದೇವಿ ಕಣ್ಣೀರ್ಗಳಂ ನೆಗಪೆ ಭವವಿಭವದ ಚಪಲತೆಯಂ ಸವಿಸ್ತರಂ ತಿಳಿಸಿ ವಜ್ರಜಂಘನರೇಂದ್ರನನಂತರಮಿಂತೆಂದ ನಾನ್ ಸೋಮವಂಶದರಸಂ ಪುಂಡರೀಕಿಣೀ ಪುರಮನಾಳ್ವೆನ್ ಜಿನಧರ್ಮದ ದೆಸೆಯಿಂ ನೀಮೆನಗೆ ತಂಗೆಯಿರಪ್ಪಿರ್ ಬಿಜಯಂಗೆಯ್ಯಿಮೆಂದು ಸಿವಿಗೆಯನೇಱಸಿಕೊಂಡು ಪೋಗಿ ಕಾಂತಾರಮಂ ಕಟಿದು ಪುರಮನೆಯ್ದಿ ನಿಜರಾಜಭವನಮಂ ಪೊಕ್ಕು ಶೀಲವತಿವೆಸರ ನಿಜಾಗ್ರಜೆಯ ಮಾಡಕ್ಕುಯ್ದು ರಾಮದೇವರ ಭಾರ್ಯೆ ಸೀತಾದೇವಿ ನಮಗಂ ಜಿನಧರ್ಮದ ದೆಸೆಯಿಂದೊಡವುಟ್ಟಿದಳೆಂದು ಸಮರ್ಪಿಸಿ ನಿಮಗೆ ಪ್ರಭಾಮಂಡಲನಿಂದಗ್ಗಳಮಾಗೆ ಬೆಸಕಯ್ವೆನೆಂದು ನುಡಿದು ತನ್ನ ಮಾಡಕ್ಕೆ ಪೋದನಿತ್ತಲಾ ಕೃತಾಂತವಕ್ತ್ರಂ ಪೋಗಿ ರಾಘವನಂ ಕಂಡು ಸೀತೆ ಕಲಿಸಿದ ಮಾತೆಲ್ಲಮಂ ಪೇೞೆ ಕೇಳ್ದು ಅತಿಪ್ರಲಾಪಂಗೆಯ್ಯೆ ಲಕ್ಷ್ಮಣಂ ಶೋಕವಿಕಲನಾಗೆ ಕೃತಾಂತವಕ್ತ್ರನವರ ಶೋಕಮನುಪಶಮಿಸುವುದುಂ ರಾಮಚಂದ್ರಂ ಸೀತಾ ಮಹತ್ತರನಂ ಕರೆದು ಸೀತೆ ಪೇೞ್ದ ತೆಱದಿಂ ನೆಗೞೆಂದು ಪೇೞ್ದನಿತ್ತಲ್ ಆ ಸೀತೆ ಅವುಳಂ ಪೆತ್ತು ಜಾತೋತ್ಸವಮಂ ಮಾಡಿ ಲವಾಂಕುಶರೆಂದು ಪೆಸರಿಡೆ ಅವರ್ ಶಸ್ತ್ರಾಸ್ತ್ರವಿದ್ಯೆಗಳೆಲ್ಲಮಂ ನೆಱೆಯೆ ಕಲ್ತು ನವಯೌವನ ಪ್ರಾಪ್ತರಪ್ಪುದುಂ ವಜ್ರಜಂಘನವರ್ಗೆ ಮದುವೆಯಂ ಮಾಡೆ ಲವಾಂಕುಶರ್ ಸಿದ್ಧ

ದಿಗ್ವಿಜಯರ್ ಸಕಲ ರಾಜಸಮಾಜಂಬೆರಸು ಮಗುಳ್ದು ಬಂದು ಪುಂಡರೀಕಿಣೀ ಪುರಮಂ ಪೊಕ್ಕು ಸುಖದಿನಿರ್ದ ರಿತ್ತಲ್ ನಾರದಂ ಜಾನಕಿಯಿರ್ದೆಡೆಯಂ ತಿಳಿದು ಬಂದು ಲವಾಂಕುಶರಂ ಕಂಡು ರಾಮಲಕ್ಷ್ಮಣರಂತೆ ಮಹಾನುಭಾವರಾಗಿ ಮೆಂದು ಪರಸುವುದುಂ

ಅವರ ಕುಲವಾವುದವರಾ
ವವನೀ ವಲ್ಲಭ ತನೂಭವರ್ ಪೌರುಷಮೇ
ನವರ್ಗೆಂದತಿ ಕೌತುಕದಿಂ
ಲವಾಂಕುಶರ್ ಮಾಯಜೋಗಿಯಂ ಬೆಸಗೊಂಡರ್ ೨೬

ನಾರದನದನೆಲ್ಲಮಂ ಪೇಳೆ ಕೇಳ್ದು ಕದನಕೇಳೀನಿರಂಕುಂಶಸಂಕುಶಂ

ತಕ್ಕರ ಮಾತಂ ಕೇಳದೆ
ತಕ್ಕೊರ್ಮೆಯನುೞಿದು ತೊಱೆದು ಗುಣವತಿಯಂ ಪಾ
ಪಕ್ಕಂಜದ ಜಡಮತಿಯಂ
ತಕ್ಕುದೆ ಪೊಗೞಲ್ಕೆ ರಾಮನಂ ನಿರ್ಗುಣನಂ ೨೭

ಎಂದು ಸಮಸ್ತಬಲಂ ಬೆರಸೆತ್ತಿ ನಡೆದಯೋಧ್ಯೆಯನೆಯ್ದಿ ಬಹಿಃಪುರದೊಳ್ ಪೀಡಂ ಬಿಡುವುದುಮಿತ್ತ ನಾರದಂ ಪ್ರಭಾಮಂಡಲನಲ್ಲಿಗೆ ಪೋಗಿ ಲವಾಂಕುಶರ ತೆಱನೆಲ್ಲಮುನಱಿಪುವುದುಮಾತಂ ವ್ಯಾಕುಲಚಿತ್ತನಾಗಿ ಜನಕ ವಿದೇಹಿಗಳ್ವೆರಸು ಪುಂಡರೀಕಿಣೀ ಪುರಕ್ಕೆ ವರ್ಪುದುಂ ಸೀತಾದೇವಿ ಕಂಡಿದಿರೆೞ್ದು ಪೊಡೆವಟ್ಟು ದುಃಖಂಗೆಯ್ದಿನ್ ಒೞಿಯಂ ಪ್ರಭಾಮಂಡಲಂ ರಾಮಲಕ್ಷ್ಮಣರ ದೆಸೆಯಿಂ ಕೂಸುಗಳ್ಗೆ ಪ್ರಮಾದಮಕ್ಕುಮಯೋಧ್ಯೆಗೆ ಪೋಪಮೆಂದು ಸೀತಾದೇವಿಯಂ ಲವಾಂಕುಶರರಸಿಯರಂ ತನ್ನ ವಿಮಾನಮನೇಱಿಸಿಕೊಂಡು ಬಂದು ಲವಾಂಕುಶ ರೊಳ್ ಕೂಡುವುದುಮಿತ್ತಲ್ ಪರಚಕ್ರಮಿದಿರೆತ್ತಿ ಬಂದುದೆಂದತಿಕುಪಿತರಾ ಬಲಾಚ್ಯುತರ್ ಪೊಱಮಟ್ಟು ಬಂದು ತಾಗೆ

ಲವನ ಬಲಕ್ಕೆ ರಾಘವಬಲಂ ಪೆಱಪಿಂಗೆ ಕಡಂಗಿ ರಾಘವಂ
ಲವನೊಳಿದಿರ್ಚೆ ರಾಘವನ ಕೇತನಮಂ ಧನುವಂ ವರೂಥಮುಂ

ಲವನುಡಿಯೆಚ್ಚೊಡಿರ್ದ್ದ ವಿರಥಂ ರಘುನಂದನನಾದನಾವನಾ
ಹವದೊಳಿದಿರ್ಚಿ ಜೀವಿಸುವವಂ ಲವನಂ ಜವನಂ ಮಹೀಭುಜಂ ೨೮

ಅಂತಚಿಂತ್ಯಯುದ್ಧಂಗೆಯ್ದು ರಾಘವಂಗೆ ಚಾಪಾಗಮದೊಳ್ ಲವಂ ಶತಸಹಸ್ರಗುಣಂ ಮಿಗಿಲಾಗೆ ರಾಘವಂ ಕಾದಿ ಲವನಂ ಗೆಲಲ್ ನೆಱೆಯದೆ ವಿಸ್ಮಿತಚಿತ್ತನಾಗಿರ್ಪಿನಮತ್ತಲ್

ಪರಶುವಿನಿಂ ಲಕ್ಷ್ಮೀಧರ
ಸುರಗೆಲನನನಂತವೀರ್ಯನಂಕುಶನಿಡೆ ಕಣ್
ತಿರುಗಿ ಬರೆ ಮಱೆದು ಮೆಯ್ಯಂ
ಪರವಶದಿಂ ಕೇತುದಂಡಮಂ ನೆರ್ಮಿರ್ದಂ ೨೯

ನೀಡಱನೆಚ್ಚುತ್ತು ರಣ
ಕ್ರೀಡಾಸಕ್ತಂ ಸರಕ್ತಲೋಚನನಿವನಂ
ನಾಡಾಡಿಯ ಕಯ್ದುಗಳಿಂ
ಕೂಡದು ಗೆಲಲೆಂದು ಚಕ್ರಿ ಚಕ್ರಮನಿಟ್ಟಂ ೩೦

ಇಡೆ ಕಡುಪಿಂದಂಕುಶನಂ
ನಡಲೊಲ್ಲದೆ ಚಕ್ರರತ್ನಮಿರ್ದ್ದೆಸೆಗಮದೇ
ನೆಡೆಯಾಡುತಿರ್ದುದೋ ಸಾ
ವೊಡರಿಸದರನಾವ ಕಯ್ದುಗಳುಮುರ್ಚುಗುಮೋ ೩೧

ಅಂತಂಕುಶಂ ಗೆಲೆ ಕಾದೆ ಲಕ್ಷ್ಮಣಂ ತನ್ನ ಮನದೊಳ್ ನಮ್ಮ ಪುಣ್ಯ ಪ್ರಭಾವಂ ತೊಲಗಿದುದೀಗಳಿವರ್ ಬಲದೇವ ವಾಸುದೇವರಾದರ್ ಎಮಗಜಯ್ಯರೆಂದು ಸುರಗತಿಯಂ ನಿಶ್ಚಯಿಸಿ ಸಮರಸಂರಂಭಮನುಳಿದಿರ್ಪುದುಮತ್ತ ನಾರದಂ ನಗುತ್ತಮಿವರ್ ಸೀತಾದೇವಿಯ ತನೂಜರ್ ಲವಾಂಕುಶರೆಂಬರ್ ತಮ್ಮ ಜನನಿಯಂ ವಿಚಾರಿಸದೆ ಪೊಱಮಡಿಸಿ ಕಳೆದಿರೆಂದು ಮುಳಿದು ನಿಮ್ಮನೀ ತೆಱದಿಂ ಕಾಣಲ್ ಬಂದರೆಂದಱಿಪುವುದುಮತಿ ಮುದಿತ ಹೃದಯನಾಗಿ

ಧನುವಂ ದಿವ್ಯೇಷುಗಳಂ
ತನುತ್ರಮುಮಂ ಕಳೆದು ಲಕ್ಷ್ಮಣಂ ದಶರಥರಾ
ಮನನೆಯ್ದೆ ಬಂದು ಕಯ್ಮುಗಿ
ದು ನಮಸ್ಮಣಿಮಯ ಕಿರೀಟನಂದಿಂತೆಂದಂ ೩೨

ಈತಂಗಳಿರ್ವರುಂ ರೂ
ಪಾತಿಶಯದೊಳಸಮಶೌರ್ಯದೊಳ್ ನಿಮ್ಮನ್ನರ್
ಸೀತಾದೇವಿಯ ಸೂನುಗ
ಳೀ ತೆಱದಿಂ ಕಾಣಲೆಂದು ಬಂದರ್ ನಿಮ್ಮಂ ೩೩

ತನಗೆ ಲವಾಂಕುಶಾಗಮನ ವೃತ್ತಕಮಂ ತಿಳಿವಂತು ಪೇಡೆ ತ
ನ್ನನುಜನದರ್ಕೆ ವಿಸ್ಮಯಮುಮುತ್ಸುಕ ಭಾವಮುಮಾದಮಪ್ಪುದುಂ
ತನಯರನಾಗಳಂತೆ ಪಡೆದಂತನುರಾಗಮನಪ್ಪುಕಯ್ದು ಭೋಂ
ಕನೆ ರಥದಿಂದಮಂದಿಟಿದು ಬಂದನುಪೇಂದ್ರಯುತಂ ರಘೂದ್ವಹಂ ೩೪

ಆಗಳವರ್ಗೆ ಕ್ರಮದಿಂ ಲವಾಂಕುಶರ್ ವಿಕ್ರಮಧನರತಿಹರ್ಷಭಾರದಿಂದೆಱಗೆ ರಾಮಲಕ್ಷ್ಮಣರ್ ತನೂಭವಾಂಗ ಪರಿಷ್ವಂಗ ಸುಖಾನುಭವದಿಂ ತಣಿದು ಅವರ ಪುರುಷಕಾರಮಂ ಮನದೆಗೊಂಡಾನಂದ ಬಾಷ್ಪಜಲಲುಲಿತ ಲೋಚನರಾಗಿರ್ಪಿನಮತ್ತ ಸೀತಾದೇವಿ ತನೂಭವರ ಭುಜಬಲಮುಮಂ ತಂದೆವಿರೊಳೊಂದಿದುದುಮಂ ವಿಮಾನಾರೂಢೆ ಕಂಡು ಸಂತಸಂಬಟ್ಟು ವಿಯನ್ಮಾರ್ಗದಿಂ ಪುಂಡರೀಕಿಣೀ ಪುರಕ್ಕೆ ಪೋದಳ್ ಇತ್ತ ರಾಮಲಕ್ಷ್ಮಣ ಲವಾಂಕುಶರ್ ಪುಷ್ಪಕವಿಮಾನಮನೇಱ ಸುಗ್ರೀವ ವಿರಾಧಿತ ಹನುಮದಂಗದಾದಿ ವಿಯಚ್ಚರರಿಂ ಪೆಱರುಮಱಕೆಯ ಮಹೀಭುಜರಿಂ ಪರಿವೃತರಾಗಿ ಸಾಕೇತಪುರಮಂ ಪೊಕ್ಕು ಸುಖದಿನಿರ್ಪುದುಮೊಂದು ದಿವಸಂ ಸುಗ್ರೀವ ಸುಷೇಣ ಜಾಂಬವ ಪ್ರಮುಖರಧಿರಾಜನಲ್ಲಿಗೆ ಬಂದವಸರಂಬಡೆದು

ಪರವಿಷಯದೊಳಿರ್ಪುದೆ ಸ
ಚ್ಚರಿತ್ರೆಯಂ ದೇವ ಜಾನಕೀದೇವಿಯನಿನ್

ಬರಿಸುವುದಿದಸೇಗೊಳ್ವುದು
ಕರುಣಿಪುದೆಮಗೆಂದು ವಿನಯಮುಮಂ ಪ್ರಕಟಿಸಿದರ್ ೩೫

ಅಂತು ಬಿನ್ನವಿಸೆ ರಾಘವಂ
ಲೋಕಾಪವಾದಭಯದಿಂ
ಡಾಕೆಯನಾನ್ ಕಳೆದೆನವಗುಣಾರೋಪಣದಿಂ
ಪೋ ಕಳೆದೆನೆ ಸಚ್ಚರಿತದೊ
ಳಾಕೆಗೆ ಸಮನಾರುಮಿಲ್ಲದುದನಾನಱಿವೆಂ ೩೬

ಅದಱಿನೆಲ್ಲರುಮಱಿಯೆ ದಿವ್ಯದಿನಪವಾದಮಂ ಕಳೆವಂತು ಮಾೞ್ಪುದೆಂಬುದು ಮವರ್ ಮಹಾಪ್ರಸಾದಮೆಂದು ಬೀೞ್ಕೊಂಡು ಪುಂಡರೀಕಿಣೀ ಪುರಕ್ಕೆ ವಂದು ಸೀತಾದೇವಿಯುಮಂ ಕಂಡು ಕಯ್ಮುಗಿದು ರಾಮದೇವರ್ ಕಾರುಣ್ಯಂ ಗೆಯ್ದು ತೆಱನನಱಿಪೆ ವೈದೇಹಿ ವಿಷಯವಿರಕ್ತೆ ದಿವ್ಯದೊಳ್ ಶುದ್ಧೆಯಾಗಿ ತಪಂಬಡುವೆನೆಂದು ಮನದೊಳ್ ಪರಿಚ್ಛೇದಿಸಿ ಪುಷ್ಪಕವಿಮಾನಮನೇಱಿ ಗಗನ ಮಾರ್ಗದಿಂ ಬಂದಯೋಧ್ಯೆಯನೆಯ್ದಿ ರಾಘವನಂ ಕಂಡು

ಅವಿಚಾರಂ ಕಳೆದೆನ್ನನಿಂತಿನಿತು ನೋವಂ ಮಾಡಿದಿರ್ ದೇವರೆಂ
ದು ವಿಷಾದಂ ಮಿಗೆ ನೊಂದು ಸೀತೆ ನುಡಿದಳ್ ತಾನಂತದಂ ಕೇಳ್ದು ರಾ
ಘವದೇವಂ ಜನತಾಪವಾದ ಭಯದಿಂದೀ ಖೇದಮಂ ಮಾಡಿದೆಂ
ಭುವನಖ್ಯಾತವೆನಿಪ್ಪ ನಿನ್ನ ಚರಿತಂ ಪೇೞಾರ್ಗಮಜ್ಞಾತಮೇ ೩೭

ಅದಱಿಂ ಲೋಕಪ್ರತ್ಯಯಮಪ್ಪಂತು ಮಾೞ್ಪುದೆನೆ ಮಹಾ ಪ್ರಸಾದ ಮೆಂದು ಪಿರಿದಪ್ಪದೊಂದು ಕೊಂಡಮನುಗುಟಿಸಿ ಚಂದನದಗರುವಿನಿಂಧನಂ ಗಳುಮಂ ಸುಗಂಧ ದ್ರವ್ಯಂಗಳುಮನಿಕ್ಕಿ ಕಿರ್ಚಂ ತಗುಳ್ಚುವುದುಂ ಸೀತಾದೇವಿ ಅಗ್ನಿಕುಂಡದೇರಿಯಂ ಮೆಟ್ಟಿ

ನೆರೆದ ವಿಯಚ್ಚರಾಮರ ನರ ಪ್ರಮುಖರ್ಕಳುಮೆಯ್ದೆ ಕೇಳೆ ಸು
ಸ್ವರಮಿಳಿಕಯ್ಯೆ ಕೋಕಿಲ ಕಲಸ್ವರನುಂ ನುಡಿದಳ್ ವಸುಂಧರಾ
ವರನೆನಿಸಿರ್ದ ರಾಘವನೊಳಲ್ಲದೆ ರಾವಣನಾದಿಯಾಗೆ ಮಿ
ಕ್ಕರೊಳಳಿಪಂ ಮನಕ್ಕೆ ತರೆ ಮಾರಣಮಕ್ಕೆನಗೀ ಕೃಶಾನುವಿಂ ೩೮

ಎಂದತಿಪ್ರತಿಜ್ಞೆಗೆಯ್ದು ಪಂಚಪರಮೇಷ್ಠಿಗಳ್ಗೆ ನಮಸ್ಕಾರಂಗೆಯ್ದು ಧಗದ್ಧಗಿಸಿ ತಿಣ್ಣಮುರಿಯುತ್ತಿರ್ದ ಕುಂಡದೊಳಗೆ ಮೆಯ್ಯನೀಡಾಡೆ

ಮರಪಟ್ಟತ್ತು ಮರುದ್ಗಣಂ ಪರಿಜನಂ ಬೆರ್ಚಿತ್ತು ಶೋಕಾಗ್ನಿಯಿಂ
ದುರಿದತ್ತಾಪ್ತಜನಂ ಲವಾಂಕುಶರೊಳಾದತ್ತಾಕುಲಂ ವಿಹ್ವಲಂ
ಪಿರಿದಾದತ್ತು ರಘೂದ್ವಹಂಗೆ ಪರಿತಾಪಂ ಲಕ್ಷ್ಮಣಂಗಾಗಳು
ಬ್ಬರಮಾದತ್ತು ಲತಾಂಗಿ ಸೀತೆ ಪುಗೆ ತೇಜಃಪಿಂಡಮಂ ಕುಂಡಮಂ ೩೯

ಜಳದೇವತೆ ಕೋಡುವ ತಿಳಿ
ಗೊಳದೊಳಗಿರ್ಪಂತೆ ಶೀಲವತಿ ಸೀತೆ ವಿನಿ
ಶ್ಚಳಮಿರೆ ಮನದೊಳ್ ಜಿನಪತಿ
ಚಳಣಂ ದಳ್ಳುರಿಯ ನಡುವೆ ಕೋಡುತ್ತಿರ್ದಳ್ ೪೦

ಆಗಳಾಖಂಡಲನ ಬೆಸದಿಸಿರ್ದ ದೇವನಾ ಕುಂಡಮನೆ ಪದ್ಮಷಂಡಂಮಾಡಿಯಲ್ಲಿ ಸಹಸ್ರದಳ ಸುವರ್ಣತಾಮರಸಮುಮದಱ ಕರ್ಣಿಕೆಯಮೇಲೆ ಸಿಂಹಾಸನಮುಮಂ ವಿಗುರ್ವಿಸಿ ತನ್ನ ದೇವಿಯರ್ಕಳಿನಾ ಸರೋವರದೊಳಿರ್ದ ಸೀತಾದೇವಿಯನೆತ್ತಿ ತರಿಸಿ ಸಿಂಹಾಸನದೊಳಿರಿಸಿ ತಾನಾಕಾಶದೊಳಿರ್ದು ಲೋಕಕ್ಕೆಲ್ಲಮಾಶ್ಚರ್ಯಮಾಗೆ ಪೂವಿನ ಮೞೆಯಂ ಕಱೆವುದುಮದಂ ಕಂಡು ಜನಮೆಲ್ಲಮೊಂದೆ ಕೊರಲೊಳ್ ಜನಕಾತ್ಮಜೆಯಂ ಪೊಗೞೆ ಜನನಿಯ ಕೆಲದೊಳ್ ಸಂಜಾತಪುಲಕರಂಜಿತತನುಗಳ್ ಲವಾಂಕುಶರ್ ಕುಳ್ಳಿರೆ

ರಾಮಂ ರೋಮಾಂಚಮಂ ತಾಳ್ದಿದನಣಮೊಸೆದಂ ಲಕ್ಷ್ಮಣಂ ಬಂಧುವರ್ಗಂ
ಪ್ರೇಮಕ್ಕಾವಾಸಮಾದತ್ತಖಿಲ ಪರಿಜನಂ ಹರ್ಷಮಂ ತಾಳ್ದಿದತ್ತು
ದ್ದಾಮಂ ಪೊಣ್ಮಿತ್ತು ದೇವಾನಕರುತಿ ಕುಲವೃದ್ಧರ್ಕಳೆಟ್ಟಾಡಿದರ್ ದಿ
ವ್ಯಾಮೋದಂ ಗಂಧವಾಹಂ ಸುೞಿದುದು ಪರಸಿತ್ತಕ್ಕಱಿಂ ರಾಜಲೋಕಂ ೪೧

ಆಗಳ್ ರಾಮಸ್ವಾಮಿ ಸೀತಾದೇವಿಯ ಸಮೀಪಕ್ಕೆ ಬಂದು

ಕ್ಷಮಿಯಿಸುವುದೆನಗೆ ನೀನ್ ಮು
ನ್ನಮಿರ್ದ ತೆಱದಿಂ ಮದೀಯವಲ್ಲಭೆಯಾಗಿ

ರ್ದಮೃತಾಂಶುವದನೆ ಸಾಮ್ರಾ
ಜ್ಯ ಮಹಿಮೆಯೊಳ್ ನೆರೆದು ಪಡೆಯ ಸುಖಸಂಪದಮಂ ೪೨

ಎಂದು ನುಡಿಯೆ ಸೀತಾದೇವಿ ಎನ್ನ ಮುನ್ನುಪಾರ್ಜಿಸಿದ ಕರ್ಮ ಮೆಸಗೆ ಪಿರಿದಪ್ಪ ದುಃಖಮಂ ಮಾಡಿದೊಡಾ ಕರ್ಮಕ್ಕೆ ಮುಳಿವೆನಲ್ಲದುಟಿ ದರ್ಗದೇಕೆ ಮುಳಿವೆಂ ಕೇಡುಳ್ಳ ಸಂಸಾರದೊಳಪ್ಪುದೇಂ ಕೇಡಿಲ್ಲದ ಮೋಕ್ಷ ಸುಖಕ್ಕೆ ಕಾರಣಮಪ್ಪ ತಪಮಂ ಕಯ್ಕೊಳ್ವೆನೆಂದು ತನ್ನ ಸಹಸ್ರಕುಂತಲಂಗಳಂ ಪಱಿದು ಮಹೇಂದ್ರೋದ್ಯಾನದೊಳ್ ಸಕಲಭೂಷಣ ಕೇವಲಿ ಭಟ್ಟಾರಕರ ಸಭೆ ಯೊಳ್ ದೀಕ್ಷೆಗೊಂಡಿರ್ಪುದುಂ

ಇತ್ತ ಬಲದೇವನುಂ ಪುರು
ಷೋತ್ತಮನುಮನೇಕ ವತ್ಸರಂ ರಾಜ್ಯಸುಖಾ
ಯತ್ತಮನರ್ ನಿರವಧಿ ಸಂ
ಪತ್ತಿಗೆ ನೆಲೆಯೆನಿಸಿ ನಾಡೆ ನಲಿಯುತ್ತಿರ್ದರ್ ೪೩

ಅಂತಿರ್ಪುದುಮತ್ತಲೊರ್ಮೆ ಸುರಪರಿಷನ್ಮಧ್ಯವರ್ತಿ ಸೌಧರ್ಮೇಂದ್ರಂ ಮನುಜಗತಿ ಗತಿಗಳೊಳ್ ಪಾವನಂ ಮಿಕ್ಕ ಗತಿಗಳಪವರ್ಗ ಶ್ರೀಯನೀಯಲಾಱ ವೆಸೆ ರಾಮನದೇಕೆ ದೀಕ್ಷೆಗೊಳ್ಳಂ ಎಂದು ದೇವರಿರ್ವರ್ ಬಗೆದು ಲಕ್ಷ್ಮಣ ನೊಳಾದ ಸ್ನೇಹಂ ಕಾರಣಮಾಗೆ ತಪಮನುಪೇಕ್ಷಿಸಿರ್ದಂ

ಎಂತುಂ ಪೂರ್ವಭವ ಸ್ನೇ
ಹಂ ತೊಱೆಯಲ್ ಬರ್ಪುದಲ್ತು ಲಕ್ಷ್ಮಣನ ವಿಯೋ
ಗಂ ತನಗಾದೊಡೆ ರಾಮಂ
ಸಂತಾಪಮನತಿವಿಷಾದಮಂ ಕಯ್ಕೊಳ್ಗುಂ ೪೪

ಲಕ್ಷ್ಮಣನುಮಂತೆ ರಾಮಂಗತಿಸ್ನೇಹಿತನಾತನಗಲ್ದಾಗಳೆ ಸಾಗುಂ ಎಂದ ಯೋಧ್ಯಾಪುರಕ್ಕೆ ಬಂದು

ಪರಲೋಕಪ್ರಾಪ್ತನಾದಂ ದಶರಥಸುತನೆಂಬಂತು ರಾಜಾಲಯಮಂ ಶೋ ಕರಸಾಂಭೋರಾಶಿಯೊಳ್ ಭೋಂಕನೆ ಮುಳುಗಿದುದೆಂಬಂತು ಹಸ್ತಚ್ಛಟಾಜ

ರ್ಝರಮಧ್ಯಂ ಪೆಂಡವಾಸಂಗಗನವಿವರಮಂ ರೋದಸೋನ್ನಾದದಿಂದಂ
ಭರಿತಂ ಮಾಳ್ಪಂತು ವೈಕುರ್ವಣ ಪರಿಣತಿಯಿಂ ಬೀಱಿದಂ [ದೇವನೊರ್ವಂ] ೪೫

ಬಲದೇವಾಕೃತಿಯುಂ ಸರಾಗನಮರಂ ನಿಷ್ಪ್ರಾಣಮಂ ವಿಕ್ರಿಯಾ
ಬಲದಿಂ ನಿರ್ಮಿಸೆ ಕಂಡು ಲಕ್ಷ್ಮಣನದಂ ನಿಸ್ಸೀಮಶೋಕಂ ಭಯಾ
ಕುಳಿತಂ ಹಾ ನಿನದಾನುಗಂ ಕ್ಷಣದೆ ಜೀವಂ ಪೋಗೆ ಬಿಟ್ಟಂ ಧರಾ
ತಲದೊಳ್ ಹರ್ಷ ವಿಷಾದ ವೇಗದೊದವಿಂ ಸಾವಪ್ಪುದಾಶ್ಚರ್ಯಮೇ ೪೬

ಅದಂ ಕಂಡು ಲಕ್ಷ್ಮಣನಂತಃಪುರಪುರಂಧ್ರಿಯರತಿಪ್ರಲಾಪಂ ಗೆಯ್ವುದಂ ರಾಮಂ ಕೇಳ್ದು ಲಕ್ಷ್ಮಣನ ಕೆಲಕ್ಕೆ ಪೋಗಿ ಪಲತೆಱದಿಂ ಪ್ರಲಾಪಂಗೆಯ್ದು

ಹಾ ತಮ್ಮನೆ ನಿನ್ನ ಮನಾ
ಪಾತಕಿ ಬಿದಿ ಕೊಂಡು ಪೋದನೇವೆನೆನುತ್ತುಂ
ಸೀತಾಪತಿ ಪೂರ್ವಭವ
ಪ್ರೀತಿಯಿನತಿಶೋಕವೇಗವಿಹ್ವಲನಾದಂ ೪೭

ಆಗಳ್ ರಾಮನ ಶೋಕಮಂ ವಿಭೀಷಣಂ ಬಂದು ಸಂಸಾರದನಿತ್ಯತೆಯಂ ಪೇೞ್ದುಪಶಮಿಸಲಾಱದಿರೆ ಸುಗ್ರೀವಾದಿಗಳ್ ನೆರೆದು ಲಕ್ಷ್ಮಣನ ಶವಮಂ ದಹಿಸುವಮೆಂಬುದುಂ

ಅವರಂ ಪಲತೆಱದಿಂ ಬ
ಯ್ದುವೊಯ್ದು ಲಕ್ಷ್ಮಣನ ಪೆಣನನಾಕ್ಷಣದೊಳ್ ನಾ
ನಿವರ ಸಮೀಪದೊಳಿರಲೆಂ
ತುವಾಗದೆಂದೆತ್ತಿಕೊಂಡು ರಾಮಂ ಪೋದಂ ೪೮

ಮರುಳಾದಂ ವಾಸುದೇವಂ ಕಟಿದೊಡೆ ಬಲದೇವಂ ಪೆಣಕ್ಕಿತ್ತು ವಸ್ತ್ರಾ
ಭರಣ ಸ್ರಕ್ಚಂದನಾಲೇಪನ ಪರಿಕರಮಂ ಪೊತ್ತುಕೊಂಡಿರ್ದಪಂ ತ
ಚ್ಚರಮಾಂಗಂ ವಿಶ್ವವಿದ್ಯಾವಿದನೆನೆ ವಿಕಳಂಮಾಳ್ಪುದಾಶ್ಚರ್ಯಮೇ ಮಿ
ಕ್ಕರನಜ್ಞಾನಾಸವಾಸ್ವಾದಿತ ಜಡರನೆಲೇ ಮೋಹಮೂರ್ಛಾತಿರೇಕಂ ೪೯

ಬಗೆಗಿಡಿಸೆ ಮೋಹನೀಯಂ
ನಗಧರಶವಧಾರಿಯಾಗೆ ಷಣ್ಮಾಸಮದೇಂ
ನೆಗಟ್ಟುದೊ ಸಲೆ ಬಲದೇವನ
ಪೆಗಲ ಪೆಣಂ ಕುಂದದೆಂಬ ನಾಣ್ನುಡಿ ಜಗದೊಳ್ ೫೦

ಆಗಳಾ ದೇವರ್ ಧರ್ಮವಾತ್ಸಲ್ಯದಿಂ ರಾಮನ ವೈಕಲ್ಯಮಂ ಕಳೆಯಲೆಂದೊಂದೆಡೆಯೊಳ್ ನಯನಪಥದೊಳಿರ್ದು

ಕಲನೊಂದಂ ತೀವಿ ನೀರಂ ಪೊಸೆದು ಸಿಕತದೊಳ್ ಗಾಣಮಂ ಪೊಯ್ದು ಮತ್ತಂ
ಶಿಲೆಯೊಳ್ ಧಾನ್ಯಂಗಳಂ ಬಿತ್ತಿಯುಮೊಣಗಿದಭೂಜಕ್ಕೆ ನೀರ್ವೊಯ್ವುದುಂಕೋ
ಟಲೆವಟ್ಟೀ ನಿಷ್ಫಲೋದ್ಯೋಗಮನೊಡರಿಪುದೇಸೆಂಬುದುಂ ದೇವರೆಂದರ್
ಬಲದೇವಂಗಣ್ಣ ನೀನೀ ಪೆಣನನಳಿಪಿನಿಂ ಪೊತ್ತಿರಲ್ ಬರ್ಪುದುಂಟೇ ೫೧

ಎನೆ ಮುನಿದಮಂಗಳ ವಚನಮನೇಕೆ ನುಡಿದಿರೆಂದೊರ್ವನೊಳ್ ನುಡಿಯುತ್ತಿರ್ಪನ್ನೆಗಂ ಮತ್ತೊರ್ವನೊಂದು ಪೆಣನಂ ಪೊತ್ತು ಮುಂದಣ್ಗೆವರೆ ರಾಮಂ ಕಂಡೀ ಮೃತಕಮಂ ನಿಷ್ಪ್ರಯೋಜನಮಿಂತೇಕೆ ಪೊತ್ತು ತೊಟಲ್ದಪೆಯೆನೆ ನೀನೀ ಪೆಣನಂ ಪೊತ್ತು ತೊಟಲ್ವುದೇನಿಮಿತ್ತಮೆಂದು ಕೋಱಿ ನುಡಿದು

ಎಂತಾನುಂ ಪಲವುಂ ದೃ
ಷ್ಟಾಂತಮನೆನಿತಾನುಮುಪಮೆಯಂ ತದ್ದಿವಿಜರ್
ಮುಂ ತೋಱಿ ತೋಱಿ ಚಿತ್ತ
ಭ್ರಾಂತಿಯುಮಂ ಹಲಿಯ ಪಟಿಯುಮಂ ಪಿಂಗಿಸಿದರ್ ೫೨

ಮುಗಿಲ ಮಱೆ ಪೋದ ಚಂದ್ರಾಂ
ಶುಗೆ ಕಾಳಿಕೆ ಪೋದ ಪೊನ್ಗೆ ಪೊಗೆ ಪೋದ ಕೃಶಾ
ನುಗೆ ಸಮನಾದಂ ಮೋಹಂ
ಬಗೆಯಿಂ ಪೊಱಮಟ್ಟು ಪೋಗೆ ದಶರಥರಾಮಂ ೫೩

ಎನ್ನು ಮನಸಾನಱಿಯದೆ ಚಿಃ
ಬನ್ನಕ್ಕೊಳಗಾದೆನೆಂದು ರಘುಕುಲತಿಲಕಂ

ತನ್ನಂ ತಾನಱಿದೊಡಲಂ
ತನ್ನಿಂ ಬೇರ್ಪಡಿಸಲಾದಮುತ್ಸುಕನಾದಂ ೫೪

ಅಂತು ವೈರಾಗ್ಯ ಪರಾಯಣನಾಗಿ ಸರಯುವೆಂಬ ತೊಱೆಯ ತಡಿಯೊಳ್ ಲಕ್ಷ್ಮಣನ ಶವಮಂ ಯಥಾವಿಧಿ ಸಂಸ್ಕಾರಿಸಿ ಸುವ್ರತರೆಂಬ ಚಾರಣರ ಪಕ್ಕದೆ ತಪಸ್ಸ್ಥನಾಗಿ ಪರಮಾಗಮಪ್ರಣೀತ ಮಾರ್ಗದಿಂ ಉಗ್ರೋಗ್ರ ತಪಶ್ಚರಣ ನಿರತನಾಗೆ

ಕೇವಲ ಬೋಧೋದಯಮೆಂ
ಬೀ ವಿಭವಂಬೆತ್ತು ಸಕಲರೂಪವ್ಯಾಪಾ
ರಾವಗಮಸಂಪದಂ ಸ
ರ್ವಾರ್ಥಿ ಪುಟ್ಟಿತ್ತು ರಾಘವಪ್ರತಿಪತಿಯೊಳ್ ೫೫

ಆವರಿಸಿರ್ದ ಘಾತಿಘನ ಕಾಂಡಪಟಂ ಪೆಱಪಿಂಗೆ ದಿವ್ಯಭಾ
ಷಾ ವಧುವಿಂಗೆ ರಾಘವ ಯತಿಪ್ರವರಂ ವರನಾಗೆ ನಿರ್ಮಲಂ
ಕೇವಲಬೋಧಮೆಂಬ ಮಣಿದರ್ಪಣಮುಜ್ವಲಿಸಿತ್ತು ತೋರ್ಪಿನಂ
ಜೀವಮಜೀವಮೆಂಬಖಿಲ ವಸ್ತುಗಳುಂ ಗುಣಪರ್ಯಯಂಗಳುಂ ೫೬

ಸತತಂ ಪೂಜಿಸೆ ದೇವ ಮರ್ತ್ಯ ಖಚರ ಕ್ಷ್ಮಾಪಾಲಕರ್ ಪಂಚವಿಂ
ಶತಿ ಸಂವತ್ಸರಮಿಂತೆ ಪೂಜೆವಡೆಯುತ್ತುಂ ಭವ್ಯ ಸಸ್ಯಕ್ಕೆ ನಿ
ರ್ವೃತಿಧರ್ಮಾಮೃತವೃಷ್ಟಿಯಂ ಕಱೆಯುತುಂ ನಿರ್ಬಾಧಬೋಧಂಯಶೋ
ಲತೆಯಿಂ ಮುದ್ರಿಸಿದಂ ಜಗತ್ತ್ರಿತಯಮಂ ಶ್ರೀರಾಮಭಟ್ಟಾರಕಂ ೫೭

ಅನಂತರಂ ಚರಮಸಮಯದೊಳ್ ಸಕಲ ಸಂಸಾರಭಾರ ದುಃಖಭಾರ ಭಂಜನನುಂ ನಿರಂಜನನುಮಾಗಿ

ಕಿಡೆ ನಿಶ್ಶೇಷಮಘಾತಿ ಪಜ್ಜಳಿಸೆ ತನ್ನೆಂಟುಂ ಗುಣಂ ಕೂಡೆ ಸೇ
ರ್ಪಡೆ ದೀಪಾರ್ಚಿಂಗಳಂತಿರೂರ್ಧ್ವಗತಿ ಮೂಱುಂ ಲೋಕದಿಂ ಮೇಲೆ ಪೆ
ಳ್ಗೊಡೆಯಿರ್ಪಂತೆವೊಲಿರ್ದ ಸಿದ್ಧನಿಲಯಕ್ಕಾನಂದದಿಂ ಪೋಗಿ ಕ
ಯ್ವಿಡಿದಂ ಶಾಶ್ವತಮಪ್ಪ ಮುಕ್ತಿವಧುವಂ ಶ್ರೀರಾಮಭಟ್ಟಾರಕಂ ೫೮

ಪಿರಿದೆನಿಸಿರ್ದ ರಾಮಕಥೆಯುಂ ಕಿಱಿದಾಗಿರೆ ದೇಸಿ ಮಾರ್ಗಮೆಂ
ಬೆರಡಱೊಳಂ ರಸಂಬಡೆದು ಪಂಡಿತಮಂಡಲಿ ಮೆಚ್ಚೆ ನೇರ್ಪುವೆ
ತ್ತಿರಲವಿರೋಧಮಾಗೆ ಕೃತಿವೇೞ್ವೊಡೆ ಸತ್ಕವಿ ನಾಗಚಂದ್ರನಂ
ತಿರೆ ಪೇೞರಾರ್ ಸರಸ್ವತಿ ಕುಡಲ್ ಪಡೆದರ್ ವರಮಂ ಕವೀಶ್ವರರ್ ೫೯

ಕೃತವಿದ್ಯರ್ ಸಮಚಿತ್ತರಾಗಿ ಪದಪಿಂದಾರಯ್ಯೆ ಕರ್ಣಾಟ ಸಂ
ಸ್ಕೃತ ಕಾವ್ಯಂಗಳೊಳರ್ಥದಿಂ ರಚನೆಯಿಂ ನೇರ್ಪಟ್ಟು ವಿದ್ವಚ್ಚಮ
ತ್ಕೃತಿಯಪ್ಪಂತಿರೆ ನಾಗಚಂದ್ರ ವಿಬುಧಂ ಪೇೞ್ದಂದದಿಂದಾದ್ಯರ
ದ್ಭುತನಂ ಪೇೞ್ದಭಿರಾಮ ರಾಮಕಥೆಯಂ ಸಯ್ಪಿಂಗಡಪ್ಪರ್ಗನೇ ೬೦

ಇದು ಪರಮ ಜಿನಸಮಯ ಕುಮುದಿನೀ ಶರಚ್ಚಂದ್ರ ಬಾಲಚಂದ್ರ ಮುನೀಂದ್ರ ಚರಣ
ನಖಕಿರಣಚಂದ್ರಿಕಾಚಕೋರ ಭಾರತೀಕರ್ಣಪೂರ ಶ್ರೀಮದಭಿನವಪಂಪ ವಿರಚಿತಮಪ್ಪ
ರಾಮಚಂದ್ರಚರಿತಪುರಾಣ [ಸಂಗ್ರಹಂ]
ಸಮಾಪ್ತಂ

ಟಿಪ್ಪಣಿ

ಪುಟ ೧ **ಮುನಿಸುವ್ರತ**—ಇಪ್ಪತ್ತನೆಯ ತೀರ್ಥಂಕರ. ತಂದೆ ಮಗಧ ವಿಷಯದ ಕುಶಾಗ್ರಪುರದ ರಾಜ ಸುಮಿತ್ರ; ತಾಯಿ ಸೋಮ ಮಹಾದೇವಿ. ರಾಜಗೃಹದಲ್ಲಿ ಹುಟ್ಟಿದನು; ಸಮ್ಮೇದ ಶಿಖರದಲ್ಲಿ ನಿರ್ವಾಣ ಹೊಂದಿದನು. ಇವನ ಕಾಲದಲ್ಲಿ ರಾಮಾಯಣದ ಕಥೆ ನಡೆಯಿತು. ಆದ್ದರಿಂದ ನಾಗಚಂದ್ರನು ಮೊದಲು ಈ ತೀರ್ಥಂಕರನನ್ನು ಸ್ತುತಿಸಿದ್ದಾನೆ.

ಪುಟ ೧ **ಕೈವಲ್ಯಬೋಧ**—ಕೇವಲಜ್ಞಾನ ಎಂದೂ ಕರೆಯುತ್ತಾರೆ. ದೇಶಕಾಲಗಳ ತಡೆಯಿಲ್ಲದೆ ಇರುವ ಸರ್ವಜ್ಞತ್ವ. ತೀರ್ಥಂಕರರಿಗೂ ಗಣಧರರಿಗೂ ಇರುತ್ತದೆ. ಕೇವಲಜ್ಞಾನವುಳ್ಳವರು ಕೇವಲಿಗಳು.

ಪುಟ ೨ **ನಾಭಿರಾಜ**—ಹದಿನಾಲ್ಕನೆಯ ಮನು. ಇಕ್ಷ್ವಾಕು ವಂಶದವನು. ಹೆಂಡತಿ ಮರುದೇವಿ. ಮೊದಲನೆಯ ತೀರ್ಥಂಕರನಾದ ಪುರುದೇವನ ತಂದೆ; ಭರತಚಕ್ರವರ್ತಿಯ ತಾತ. ಆಗತಾನೇ ಹುಟ್ಟಿದ ಮಕ್ಕಳ ನಾಭಿ ಕತ್ತರಿಸುವುದನ್ನು ಕಲಿಸಿಕೊಟ್ಟದ್ದರಿಂದ ಅವನಿಗೆ ಆ ಹೆಸರುಂಟಾಯಿತು. ಕಬ್ಬಿನಿಂದ ರಸ ತೆಗೆಯುವುದನ್ನೂ ವಿವಿಧ ಧಾನ್ಯಗಳನ್ನು ಉಡುಗಿ ಒಕ್ಕಿ ಅಡಕಿ ಮುಚ್ಚಿಡುವ ರೀತಿಯನ್ನೂ ಅಕ್ಕಿ ಮಾಡುವುದನ್ನೂ ತುಪ್ಪ ಎಣ್ಣೆ ಹಾಲು ಮೊಸರು ಮುಂತಾದುವುಗಳ ಉಪಯೋಗವನ್ನೂ ಪಾತ್ರೆಗಳಲ್ಲಿ ಅಡಿಗೆ ಮಾಡುವುದನ್ನೂ ಜನರಿಗೆ ಮೊದಲು ತೋರಿಸಿಕೊಟ್ಟನು.

ಪುಟ ೫ **ಪರಿನಿಷ್ಕ್ರಮಣ ಕಲ್ಯಾಣ**—ತೀರ್ಥಂಕರನ ಜೀವನದಲ್ಲಿ ನಡೆಯುವ ಪಂಚಕಲ್ಯಾಣಗಳಲ್ಲಿ ಮೂರನೆಯದು. ತೀರ್ಥಂಕರನಾಗುವವನ ಮನಸ್ಸಿನಲ್ಲಿ ವೈರಾಗ್ಯ ಹುಟ್ಟಿ ದೀಕ್ಷೆಹೊಂದಿ ತಪಸ್ಸುಮಾಡುವುದಕ್ಕೆ ಅವನು ಹೊರಡುತ್ತಾನೆ

ಪುಟ ೨೦ **ಚರಮಾಂಗ**—ಕೊನೆಯ ದೇಹ. ಅದು ಬಿದ್ದುಹೋದಮೇಲೆ ಪುನರ್ಜನ್ಮ ಉಂಟಾಗದು; ಜೀವನು ನಿರ್ವಾಣವನ್ನು ಪಡೆಯುತ್ತಾನೆ.

ಪುಟ ೨೨ **ಅನಂತ ವೀರ್ಯ**—ಅನಂತಶಕ್ತಿ. ಮುಕ್ತಜೀವನ ಗುಣಗಳಲ್ಲಿ ಒಂದು. ಅನಂತವೀರ್ಯ, ಅನಂತಜ್ಞಾನ, ಅನಂತದರ್ಶನ, ಅನಂತ ಸುಖ—ಈ ನಾಲ್ಕಕ್ಕೆ ಅನಂತ ಚತುಷ್ಟಯವೆಂದು ಹೆಸರು.

ಪುಟ ೪೨ **ಅವಧಿ**—ಐದು ವಿಧವಾದ ಜ್ಞಾನಗಳಲ್ಲಿ ಒಂದು. ಯೋಗ, ತಪಸ್ಸು ಮುಂತಾದ ಸಾಧನೆಗಳಿಂದ ಉಂಟಾಗುವ, ದೇಶಕಾಲಗಳ ಪರಿಮಿತಿ ಯುಳ್ಳ, ಜ್ಞಾನ.

ಪುಟ ೪೫ **ಅಜಾಕೃಪಾಣೀಯ**—ಒಂದು ಲೌಕಿಕ ನ್ಯಾಯ. ಮೇಕೆಗೂ ಕತ್ತಿಗೂ ಸಂಬಂಧಿಸಿದೆ. ಮೇಕೆ ಬರುವುದಕ್ಕೂ ಕತ್ತಿ ಬೀಳುವುದಕ್ಕೂ ಸರಿಹೋಗಿ ಅನಿರೀಕ್ಷಿತವಾಗಿ ಮೇಕೆ ಸಾಯುತ್ತದೆ; ಅದಕ್ಕೆ ಅನಿಷ್ಟ ಫಲ ಪ್ರಾಪ್ತಿಯಾಗುತ್ತದೆ. ಈ ನ್ಯಾಯ 'ಕಾಕತಾಳೀಯ ನ್ಯಾಯ' ದಂತೆಯೇ ಇದೆ. ಆದರೆ ಅಲ್ಲಿ ಇಷ್ಟ ಫಲ ದೊರಕುತ್ತದೆ. "ಶಂಬುಕನು ತಪಸ್ಸುಮಾಡಿ ಪಡೆದ ಕತ್ತಿ ಅಕಸ್ಮಾತ್ತಾಗಿ ಅವನ ಮರಣಕ್ಕೆ ಕಾರಣ ವಾಯಿತು" ಎಂದು ಇಲ್ಲಿ (೪-೧೮) ಅರ್ಥ.

ಪುಟ ೬೬ **ಪಂಚಪದ**—ಅರ್ಹಂತ. ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು—ಈ ಐವರಿಗೆ ಸಂಬಂಧಿಸಿದ ಮಂತ್ರ.

ಪುಟ ೮೬ **ಅಲೋಕ**—ಲೋಕ ಸ್ವರೂಪವನ್ನು ಹೇಳುವಾಗ ಜೈನ ಧರ್ಮವು ಲೋಕಾಕಾಶ, ಅಲೋಕಾಕಾಶ ಎಂದು ಆಕಾಶದಲ್ಲಿ ಎರಡು ವಿಭಾಗ ಮಾಡುತ್ತದೆ. ಇಲ್ಲಿ ಅಲೋಕಾಕಾಶ; ಸಿದ್ಧರಿಗೆ ಮಾತ್ರ ಪ್ರವೇಶ, ಇತರರಿಗಿಲ್ಲ.

ಪುಟ ೧೩೩ **ಸಮ್ಯಕ್ತ್ವ**—ಜೈನಮತದ ತತ್ತ್ವಗಳಲ್ಲಿ ಸಂಪೂರ್ಣವಾದ ನಂಬಿಕೆ ಇರುವುದು.

ಪುಟ ೧೩೬ **ಮಿಥ್ಯಾದೃಷ್ಟಿ**—ಕುದೃಷ್ಟಿ. ಎಂದರೆ ಜೈನ ತತ್ತ್ವಗಳೆಲ್ಲಾ ಸುಳ್ಳೆಂದು ತಿಳಿಯುವುದು. 'ಸಮ್ಯಕ್ತ್ವ'ಕ್ಕೆ ವಿರುದ್ಧವಾಗಿದೆ.

ಪುಟ ೧೪೪ **ಮೋಹನೀಯ**—ಯುಕ್ತಾಯುಕ್ತ ಪರಿಜ್ಞಾನವನ್ನು ಹೋಗಲಾಡಿಸಿ ಜೀವನಿಗೆ ಅತ್ಯಾಸಕ್ತಿಯನ್ನುಂಟುಮಾಡುವ ಕರ್ಮ.

ಪುಟ ೧೪೬ **ಘಾತಿ**—ಎಂಟು ಬಗೆಯ ಕರ್ಮಗಳಲ್ಲಿ ಜ್ಞಾನಾವರಣೀಯ, ದರ್ಶನಾವರಣೀಯ ಮೋಹನೀಯ, ಅಂತರಾಯ—ಎಂಬ ಈ ಮೊದಲ ನಾಲ್ಕಕ್ಕೆ ಘಾತಿ ಕರ್ಮ ಎಂದು ಹೆಸರು. ಜೀವನ ಸ್ವಾಭಾವಿಕವಾದ ಗುಣಗಳನ್ನು ಇವು ನಾಶಮಾಡುತ್ತವೆ.

ಪುಟ ೧೪೬ **ಅಘಾತಿ**—ಉಳಿದ ನಾಲ್ಕು ಬಗೆಯ ಕರ್ಮಗಳು—ವೇದನೀಯ, ಆಯು, ನಾಮ, ಗೋತ್ರ. ಮುಕ್ತಿ ಆಗುವುದಕ್ಕೆ ಮುಂಚೆ ಈ ಕರ್ಮಗಳು ಜೀವನಿಂದ ಕಳಚಿ ಬೀಳುತ್ತವೆ.

ಪುಟ ೧೪೬ **ಎಂಟುಂ ಗುಣಂ**—ಮುಕ್ತಿ ಪಡೆದ ಜೀವನ ಲಕ್ಷಣಗಳು—

(i) ಸಮ್ಯಕ್ತ್ವ=ಪುಟ ೧೩೩ ಟಿಪ್ಪಣಿ ಸೋಡಿ.

(ii) ಜ್ಞಾನ=ಸವಿಕಲ್ಪಕವಾದದ್ದು. ಪ್ರತಿಯೊಂದು ವಸ್ತುವಿನ ಎಲ್ಲಾ ಭಾಗಗಳ ಪರಿಪೂರ್ಣ ಜ್ಞಾನ.

(iii) ದರ್ಶನ=ನಿರ್ವಿಕಲ್ಪಕವಾದದ್ದು. ಎಂದರೆ ಜಗತ್ತ್ರಯ ಕಾಲ ತ್ರಯಗಳಲ್ಲಿರುವ ಸಮಸ್ತ ವಸ್ತುಗಳ ಸಾಮಾನ್ಯ ಜ್ಞಾನ. ಉದಾ.—ಚಿತ್ರವನ್ನು ನೋಡಿದರೆ ಅದರ ಸಾಮಾನ್ಯ ಸ್ವರೂಪ ಗ್ರಹಣವುಂಟಾಗುತ್ತದೆ.

(iv) ವೀರ್ಯ=ಅನಂತ ಪದಾರ್ಥಗಳ ನಿಶ್ಚಿತಜ್ಞಾನಸಂಪಾದನೆಯಲ್ಲಿ ಆಯಾಸವನ್ನು ಹೊಂದದೆ ಇರುವುದು.

(v) ಸೂಕ್ಷ್ಮ=ಅತೀಂದ್ರಿಯ. ಇಂದ್ರಿಯಗಳಿಗೆ ಅಗೋಚರವಾಗಿರುವುದು.

(vi) ಅವಗಾಹನ=ಒಂದು ದೀಪದ ಬೆಳಕಿನಲ್ಲಿ ನಾನಾ ದೀಪಗಳ ಪ್ರಕಾಶ ಹೇಗೆ ಸೇರಲು ಅವಕಾಶವಿರುವುದೋ ಹಾಗೆಯೇ ಮುಕ್ತಜೀವನಲ್ಲಿ ಅನೇಕ ಸಿದ್ಧ ಜೀವಿಗಳು ಸಂಕ್ರಮಿಸಲು ಇರುವ ಅವಕಾಶದ ಗುಣ.

(vii) ಅಗುರುಲಘು=ಭಾರವೂ ಅಲ್ಲ. ಹಗುರವೂ ಅಲ್ಲ. ಭಾರವಾಗಿದ್ದರೆ ಕೆಳಕ್ಕೆ ಕುಸಿಯುತ್ತದೆ, ಹಗುರವಾಗಿದ್ದರೆ ಮೇಲೆ ತೇಲಾಡಬೇಕಾಗುತ್ತದೆ. ಎರಡೂ ಅಲ್ಲದೆ ಇದ್ದೆಡೆಯಲ್ಲೇ ಇರಬಹುದಾದ ಗುಣ.

(viii) ಅವ್ಯಾಬಾಧ=ಯಾವುದರಿಂದಲೂ ಕುಂದದ ಹೆಚ್ಚದ ಅನಂತ ಸುಖ.

ಶಬ್ದಕೋಶ

ಅ

ಅಕಾಂಡ	೪-೧೦೮	ಕಾಲವಲ್ಲದ ಕಾಲ, ಅಸಮಯ
ಅಕ್ಷೂಣ	೫-೮೭	ಕಡಮೆಯಾಗದ
ಅಖರ್ವ	೨-೩	ಕುಳ್ಳಲದ, ಚಿಕ್ಕದಲ್ಲದ, ದೊಡ್ಡದಾದ
ಅಗವಡು	೨-೪೨	ಅಗಂ+ಪಡು ; ಒಳಗೆ ಬೀಳು, ಸಿಕ್ಕಿಬೀಳು
ಅಗಿ	೮-೨೮	ಹೆದರು
ಅಗುರ್ವು	೭-೧೮	ಭಯ
ಅಗುಟಿಸು	೯-೩೨ ಗ.	ತೋಡಿಸು
ಅಗೆ	೧-೬೩	ಮೊಳಕೆ
ಅಗ್ಗಲಿಸು	೪-೧೧೬	ಹೆಚ್ಚಿಸು, ಹೆಚ್ಚಾಗು
ಅಗ್ಗಳ	೫-೬೪	ಅತಿಶಯ
ಅಚ್ಚಿಗ	೪-೨೧ ; ೪-೯೦ ೬-೬೮ ; ೨-೭೮	ವ್ಯಥೆ, ಕಷ್ಟ
ಅಜನಿಸು	೪-೩೬ ಗ.	ಹೀಯಾಳಿಸು, ತಿರಸ್ಕರಿಸು (?)
ಅಟ್ಟಟ್ಟ	೬-೫ ೬-೭೩	ದೌತ್ಯ, ದೂತಸಂದೇಶ (?)
ಅಟ್ಟೆ	೫-೨೬	ತಲೆಯಿಲ್ಲದ ದೇಹ, ಮುಂಡ
ಅಡರ್ಪು	೯-೬೦	ಆಶ್ರಯ
ಅಡುಂಬು	೪-೩೮ ; ೨-೩೭	ಅಡ್ಡಗಟ್ಟು, ತಡೆ
ಅಣಂ	೧-೭೨ ; ೪-೬ ಗ.	ವಿಶೇಷವಾಗಿ, ಸ್ವಲ್ಪ
ಅಣಿ	೨-೩೭	ಸಾಲು
ಅಣ್ಮು	೫-೭೧	ಪರಾಕ್ರಮ, ಸಾಮರ್ಥ್ಯ
ಅದಿರ್ಪು	೭-೭೯ ; ೫-೩೮ ಗ.	ನಡುಗಿಸು
ಅಧೋಕ್ಷಜ	೮-೨	ವಿಷ್ಣು
ಅನುಕಂಪೆ	೮-೪೩	ಕರುಣೆ
ಅನುಬಂಧ	೬-೭೨ ಗ.	ಸಂಬಂಧ
ಅನುವರ	೮-೧	ಯುದ್ಧ
ಅನುವಿಸು	೫-೬೨	ಉಂಟಾಗು, ಸಿದ್ಧವಾಗು (?)
ಅನೋಕಹ	೬-೭೬	ಮರ
ಅನ್ನೆಯ	೪-೫	(ಸಂ.) ಅನ್ಯಾಯ

ಅನ್ನೆವರಂ	೩-೪೩	ಅಲ್ಲಿಯ ವರೆಗೆ
ಅಪಘನ	೫-೪೬ ಗ.	ದೇಹ
ಅಪತ್ಯ	೪-೫೦ ಗ.	ಮಗ
ಅಪವರ್ಗ	೯-೨೩ ಗ.	ಮೋಕ್ಷ
ಅಪವರ್ತಿಸು	೪-೧೧	ಹಿಂದಿರುಗಿಸು, ಕಳೆ
ಅಪಸಾರಿತ	೩-೪೦ ಗ.	ಕಳೆದುಹೋದ ಓಸರಿಸಲ್ಪಟ್ಟ
ಅಪ್ಪುಕಯ್	೨-೧ ಗ. ; ೨-೨	ಹೊಂದು, ಅಂಗೀಕರಿಸು
ಅಪ್ರಾಕೃತ	೧-೬೮	ಅಸಾಮಾನ್ಯ, ಪ್ರಕೃತಿ ಸಂಬಂಧಿಯಲ್ಲದ
ಅಭಿಯೋಗ	೯-೨೦ ಗ.	ನಿಂದೆ, ದೂರು
ಅಭಿರಾಮ	೧-೫೯ ಗ.	ಮನೋಹರ
ಅಮರ್ದು	೧-೬೫	1. (ಧಾ.) ಅಮರ್=ಸೇರು ; 2. (ಸಂ.) ಅಮೃತ
ಅಮ್ಮ	೩-೩೩	ಅಪ್ಪ, ತಂದೆ
ಅಯಸ	೪-೩೩ ಗ.	ಕಬ್ಬಿಣ
ಅರಗೀಲ್	೭-೩೪	ಅರದ+ಕೀಲ್ ; ಚಕ್ರದ ಕಡ್ಡಿಗಳ ಕೀಲು
ಅರಿಂಜಯ	೬-೩೭	ಶತ್ರುಗಳನ್ನು ಜಯಿಸುವವನು
ಅರಿದು	೧-೨೮	ಅಸಾಧ್ಯ
ಅಱ	೬-೫೪	ಧರ್ಮ
ಅಱಿತಂ	೪-೧೧	ತಿಳಿವಳಿಕೆ
ಅಱುನೀರ್	೪-೧೦೭	ಆಱಿದ+ನೀರ್ ; ಬತ್ತಿದ ನೀರು
ಅಱೆಯಟ್ಟು	೮-೪೯	ಹೊಡೆದೋಡಿಸು
ಅಲಸು	೪-೬೮	ಆಯಾಸಪಡು
ಅಲಂಪು	೧-೬	ಸಂತೋಷ
ಅಲೆಪ	೪-೬೮	ಅಲೆದಾಟ, ಬೀಸುವುದು
ಅವಗಮ	೯-೫೫	ಅರಿವು, ಜ್ಞಾನ
ಅವಚಱು	೩-೭	ಹೇಸು, ಜುಗುಪ್ಸೆಪಡು
ಅವನಂ	೩-೩೩	ರಕ್ಷಣೆ
ಅವಯವ	೭-೪೬ ; ೮-೨೫	ಅಶ್ರಮ, ಸುಲಭ (?)
ಅವರೋಧ	೮-೩೬	ಅಂತಃಪುರ
ಅವಸರ	೫-೧೩ ಗ.	ಅವಕಾಶ, ಸಮಯ
ಅವ್ಯವಚ್ಛಿನ್ನ	೧-೧೦	ನಡುವೆ ನಿಂತು ಹೋಗದ
ಅವ್ವಳಿಸು	೪-೧೧೧	ಮೇಲೆ ಬೀಳು
ಅವಿನ್ನಾಣ	೬-೧೫ ಗ. ; ೬-೩೨ ಗ.	(ಸಂ.) ಅಭಿಜ್ಞಾನ ; ಗುರುತು
ಅರ್ವಿಸು	೪-೨೮ ; ೬-೩೭ ; ೮-೩೭	ವ್ಯಾಪಿಸು, ಹರಡು

ಅಸಕಟಿ	೮-೩೭	ಕೈವಿಂಚಿಹೋಗು, ಮೀರಿಸು
ಅಸಕೃತ್	೩-೩೧	ಪದೇ ಪದೇ, ಮೇಲೆ ಮೇಲೆ
ಅಸಿತಾಹಿ	೧-೬೬	ಕೃಷ್ಣಸರ್ಪ
ಅಸುಂಗೊಳ್	೫-೬೮ ಗ.	ಪ್ರಾಣವನ್ನು ಸೆಳೆ
ಅಳಱಿಸು	೩-೭೨	ಹೆದರಿಸು, ಚೆದರಿಸು
ಅಳವಿಗಟಿ	೮-೨೯	ಅಳತೆ ಮೀರು
ಅಳವು	೪-೧೬	ಶಕ್ತಿ
ಅಳಿಪು	೧-೨೨ ; ೩-೪	ಅಭ್ಯಾಸ
ಅಳುರ್ಕೆ	೫-೩೨ ; ೫-೪೭ ೫-೬೮ ; ೬-೩೩ ಗ.	ವ್ಯಾಪನೆ, ಆಧಿಕ್ಯ
ಅಳ್ಕು	೩-೧೫	ಹೆದರು
ಅಳ್ಕುಱು	೫-೨೨	ಭಯವನ್ನು ಹೊಂದು
ಅೞಲ್	೧-೨೭	ಸಂಕಟಪಡು, ವ್ಯಥೆ
ಅೞಿ	೧-೨೭	ನಾಶಮಾಡು, ನಾಶವಾಗು
ಅೞಿವೆಣ್	೩-೮	ಕೆಟ್ಟ ಹೆಂಗಸು
ಅೞುಂಬಂ	೬-೬೧	ಆಧಿಕ್ಯ
ಅೞ್ಕಱು	೨-೧೬	ಪ್ರೀತಿ
ಅೞ್ಕಾಡು	೪-೧೦೭	ನಿರವಶೇಷವಾಗು, ಹಾಳಾಗು
ಅೞ್ಕೆ	೪-೮೪ ಗ.	ಅಳುವುದು
ಅೞ್ತಿ	೫-೧೧	ವಿಶ್ವಾಸ
ಅಂಗರಾಗ	೪-೧೦೫	ಮೈಗೆ ಬಳಿಯುವ ಸುಗಂಧ ದ್ರವ್ಯ
ಅಂಘ್ರಿ	೧-೧	ಪಾದ
ಅಂಚೆ	೩-೬೭	ಹಂಸ
ಅಂಜಲ್	೪-೯೯	ಹೆದರಬೇಡ
ಅಂಡಲೆ	೩-೧೨	ಹತ್ತಿರಹೋಗಿ ಪೀಡಿಸು
ಅಂತರ್ವತ್ನಿ	೧-೫೫	ಗರ್ಭಿಣಿ
ಅಂಬರಿವಿಡು	೪-೧೦೮	ತೊಟ್ಟಿಡು, ಸ್ರವಿಸು
ಅಂಶು	೧-೧೩	ಕಿರಣ

ಆ

ಆಕೀರ್ಣ	೧-೧	ದಟ್ಟವಾದ, ತುಂಬಿದ
ಆಖಂಡಲ	೫-೧೮	ಇಂದ್ರ
ಆಗ	೫-೭೭	ಆಗದು
ಆಗಳುಂ	೫-೩೩ ಗ.	ಯಾವಾಗಲೂ
ಆಜವಂಜವ	೩-೬	ಸಂಸಾರ

ಆಟಂದು	೬-೧೪ ; ೮-೭೬	(ಧಾ. ಆಟರ್) : ಮೇಲಿಬಿದ್ದು (?)
ಆಟಿಸು	೩-೬	ಬಯಸು
ಆಡು	೯-೪೧	ಕುಣಿ
ಆಡುಂಬೊಲ	೧-೭	ಆಡುವ ಹೊಲ
ಆತಪ	೧-೨೩	ಬಿಸಿಲು
ಆತೋದ್ಯ	೭-೧೨	ವಾದ್ಯ
ಆಧೋರಣ	೫-೬೪ ಗ.	ಮಾವಟಿಗ
ಆನಕ	೨-೧೩	ಭೇರಿ
ಆಪಗಾ	೭-೩	ನದಿ
ಆಭೀಲ	೭-೩೬	ಭಯಂಕರ
ಆಭೋಗ	೮-೬	ವಿಸ್ತಾರ
ಆಮೋದ	೪-೧೩	ಸುಗಂಧ
ಆಯತ್ತ	೩-೪೨	ಅಧೀನ
ಆಯತಿ	೭-೪೫	ಪರಾಕ್ರಮ, ಉನ್ನತಿ
ಆಯಾಮ	೭-೨೮ ಗ.	ಉದ್ದ
ಆರ್	೪-೪೫	ತೃಪ್ತಿಯಾಗು, ಗರ್ಜಿಸು
ಆವಗಂ	೭-೨೭	(ಆವ+ಆಗಂ) ಸಂಪೂರ್ಣವಾಗಿ
ಆವಸಥ	೫-೧೫	ಮನೆ
ಆವಿಷ್ಕೃತ	೫-೩೧	ಪ್ರಕಟವಾದ
ಆವಿಳ	೧-೧೯ ? ೨-೮	ಕದಡಿದ
ಆಶಾ	೨-೧೭	ದಿಕ್ಕು
ಆಶೀವಿಷ	೮-೬	ಸರ್ಪ
ಆಸವ	೪-೨೪	ಮದ್ಯ
ಆಸುಕರಂ	೬-೩೭	(ಸಂ) ಅಶುಕರ ; ವೇಗ, ಜೋರು (?)
ಆಂಕೆಗೊಳ್	೮-೨೮	ಆನ್+ಕೆ+ಕೊಳ್ ; ಎದುರಿಸು, ಪ್ರತಿಭಟಿಸು

ಇ

ಇಕ್ಕುಂಗೂಟ್	೩-೧೮	ಇಕ್ಕುವ+ಕೂಟ್ ; ಇಡುವ ಅನ್ನ
ಇರ್ಕೆಮ	೬-೧೭	ಇರ್ಕೆ+ಎಮ ; ಇರಲಿ
ಇಟ್ಟೆಳವಿಡು	೯-೨೫ ಗ.	ಗುಂಪಾಗು. ದೂಷಣೆಮಾಡು (?)
ಇನಿವಿರಿದು	೩-೫	ಇನಿತು+ಪಿರಿದು; ಇಷ್ಟು ದೊಡ್ಡದು
ಇಲ್ಲವೆ	೪-೪	ಇಲ್ಲದಿರುವುದು
ಇಸುವೆಸ	೩-೬೩ ; ೪-೯೫	ಸೇವೆ, ಉಪಚಾರ
ಇಳಿಕಯ್	೬-೬೫	ಕಡೆಗಣಿಸು, ಉಪೇಕ್ಷೆಮಾಡು

ಇಳಿಕೆಗೆಯ್	೩-೫೦	ಕಡೆಗಣಿಸು, ಉಪೇಕ್ಷೆಮಾಡು
ಇಳಿಸು	೪-೧೫	ಕಡಮೆಮಾಡು, ತಿರಸ್ಕರಿಸು
ಇೞಿಪು	೧-೧೩	ಕೆಳಕ್ಕೆ ಇಳಿಸು
ಇೞ್ಕುಳಿಗೊಳ್	೮-೫೯	ಸೆಳೆದುಕೊಳ್ಳು
ಇೞ್ದುಕೊಳ್	೭-೧೧ ಗ.	ಎಳೆದುಕೊಳ್ಳು
ಇೞ್ದುತರ್	೮-೩೫	ಎಳೆದು ತರು
ಇಂಚರ	೭-೭೦	ಇನಿದು + ಸರ ; ಇಂಪಾದ ಶಬ್ದ
ಇಂಧನ	೧-೧೪	ಸೌದೆ
ಇಂಬು	೪-೪	ಅವಕಾಶ, ಆಶ್ರಯ
ಇಂಬುಕಯ್	೮-೮೮	ಒಪ್ಪು

ಈ

ಈಂಟು	೧-೬೬	ಕುಡಿ
ಈಸು	೨-೩೪	ಬಂಡಿಯ ಮೂಕಿ

ಉ

ಉಕ್ಕೈವ	೪-೧೦೮	ಕಪಟ, ಮೋಸ
	೮-೩೫	(ಸಂ.) ಉತ್ಸವ ; ಒಸಗೆ
ಉರ್ಚ್	೪-೩೨	ಚುಚ್ಚು, ಸೀಳು
ಉಡಿ	೬-೩೩	ಚೂರು, ಚೂರಾಗು
ಉತ್ಕಂಠ	೪-೯೮	ಕಾತರ, ಆಸಕ್ತಿಯುಳ್ಳ
ಉತ್ಖಾತ	೫-೬೩ ; ೫-೨೮	ಹೊರಕ್ಕೆ ಸೆಳೆದ
ಉತ್ತರಳ	೬-೩೦	ಹೆಚ್ಚು ಚಂಚಲವಾದ
ಉತ್ತರಿಸು	೩-೨	ದಾಟು
ಉತ್ತು	೫-೮೦	(ಧಾ. ಉೞು) ; ಹೊಂದಿ
ಉತ್ತಂಸ	೧-೧	ತಲೆಯ ಆಭರಣ
ಉದಂಚಿತ	೬-೫	ಮೇಲಕ್ಕೆ ತಿರುಗಿದ
ಉದ್ಗಾರಿ	೬-೬೨	ಕಾರುವ
ಉದ್ಗ್ರೀವ	೫-೭೯ ಗ.	ಮೇಲಕ್ಕೆತ್ತಿದ ಕಂಠವುಳ್ಳ
ಉದ್ದಾನಿ	೪-೯೪	ಆಧಿಕ್ಯ, ಹೆಚ್ಚಿಗೆ (?)
ಉನ್ಮಾರ್ಗಿ	೫-೪೩	ದಾರಿ ಮೀರಿ ನಡೆಯುವವನು
ಉಪಕಂಠ	೪-೧೧	ಸಮೀಪ
ಉಪಚಯ	೭-೧ ಗ.	ಅಭಿವೃದ್ಧಿ
ಉಪಚಿತ	೩-೩೧	ಸೇರಿದ, ಒಟ್ಟಾದ

ಉಪಸರ್ಗ	೮-೨೪ ಗ.	ದೇವತೆ, ಮನುಷ್ಯ, ಪ್ರಾಣಿ, ನಾರಕಿ—ಇವರಿಂದ ಜೈನ ಮುನಿಗಳಿಗೆ ಆಗುವ ತೊಂದರೆ, ಹಿಂಸೆ
ಉಪಹತಿ	೪-೧೧೨	ಕೇಡು, ಹಾನಿ
ಉಪಹಾರ	೧-೩	ಪೂಜೆ, ಬಲಿ
ಉಪಾಯನ	೫-೬೫	ಕಾಣಿಕೆ
ಉಪಾಂತ	೫-೮೦ ಗ.	ಸಮೀಪ
ಉಬ್ಬರ	೯-೧೪	ಹೆಚ್ಚಿಗೆ
ಉಬ್ಬೆಗ	೧-೩೩	(ಸಂ.) ಉದ್ವೇಗ ; ದುಃಖ
ಉಮ್ಮಚ್ಚ	೩-೨೫	ಭ್ರಾಂತಿ, ವೈಕಲ್ಯ
ಉಮ್ಮಳ	೨-೩	ದುಃಖ
ಉರ್ವಿ	೧-೧೯	ಭೂಮಿ
ಉಳ್ಳಂಜಿಸು	೪-೧೦೩	ಒಳಗೆ + ಅಂಜಿಸು ; ಮನಸ್ಸಿಗೆ ಭಯವನ್ನುಂಟುಮಾಡು
ಉಳ್ಳಳ್ಕು	೪-೧೦೫	ಒಳಗೆ + ಅಳ್ಕು ; ಮನಸ್ಸಿನಲ್ಲಿ ಅಳುಕು
ಉಳ್ಳೊಳಂ	೭-೨೮	(ಸಂ.) ಉಲ್ಲೋಲ : ಕೋಲಾಹಲ, ಗದ್ದಲ

ಊ

ಊಳ್	೮-೫೪	ಕಿರಿಚು, ಕೂಗು

ಎ

ಎಗ್ಗು	೧-೧೧	ನಾಚಿಕೆ
ಎಡಱು	೧-೧೩	ಅಡ್ಡಿಯಾಗು
ಎಡೆಗಟ್ಟು	೩-೩೭	ಒಳಗಿನ ನಿಬಂಧನೆ, ಕಟ್ಟುಪಾಡು
ಎಡೆಗೋದು	೮-೮ ಗ.	ನಡುವೆ ಬಂದು
ಎಡೆನೆಱೆ	೭-೩೦ ಗ.	ಸ್ಥಳ ತುಂಬು
ಎಡೆಯಾಡು	೯-೩೧	ನಡುವೆ ಓಡಾಡು
ಎಡೆವಱಿ	೪-೧೭	ನಡುವೆ ಕತ್ತರಿಸು
ಎಡೆವೊಗು	೫-೬೮ ಗ ; ೭-೨೧ ಗ.	ನಡುವೆ ಹೊಗು
ಎಡ್ಡ	೯-೧೩	ಮನೋಹರ ಸುಂದರ
ಎರ್ದೆವಱಲ್	೬-೩೬ ; ೭-೨೭ ; ೮-೨೯	ಎರ್ದೆಯ + ಬಱಲ್ : ಹೃದಯದ ಆಯಾಸ
ಎನ್ನರ್	೩-೪೩	ಎಂಥವರು
ಎನ್ನೆವರಂ	೩-೪೩	ಎಲ್ಲಿಯವರೆಗೆ
ಎರೆ	೧-೫೨	ಬೇಡು

ಎಱೆವಟ್ಟು	೬-೫೪	ಆಕರ, ಮನೆ
ಎಸಕ	೬-೧೨	ಸಾಮರ್ಥ್ಯ
ಎಸಗು	೧-೫೭	ಬೀಸು, ಕಾರ್ಯಮಾಡು
ಎಳವಾಳೆ	೪-೪೪	ಎಳೆಯ ಮೀನು
ಎಳವೆ	೧-೧೫	ಬಾಲ್ಯ
ಎಳಸು	೨-೨೬ ; ೪-೯೮	ವ್ಯಾಪಿಸು, ಹರಡು
	೫-೫೬	ಬಯಸು
ಎೞ್ತರ	೪-೩೮	ಎತ್ತರ, ಆಧಿಕ್ಯ
ಎೞ್ಬಟ್ಟು	೧-೪೯	ಹಿಂಬಾಲಿಸು

ಏ

ಏಗೊಳ್	೨-೧೧ ಗ ; ೪-೫೬	ಒಪ್ಪು
ಏದೊರೆ	೩-೪೭	ಏನು ಶ್ರೇಷ್ಠ (ಎಂತಹ)
ಏಬಾಪ್ತೆ	೩-೪೦	ಏನು ಪ್ರಯೋಜನ
ಏಬಂಡ	೩-೪೨	ಯಾವ ಹಣ (ಭಾಂಡ. ಸಂ.)
ಏರಂಡಕಾಂಡ	೨-೧೭ ಗ.	ಹರಳು ಗಿಡದ ಕಡ್ಡಿ
ಏವ	೧-೧೨, ೩-೧	ಸಂಕಟ, ವ್ಯಥೆ
ಏವಯಿಸು	೯-೧೧ ಗ.	ಕೊರಗು
ಏವುದು	೧-೨೭ ; ೭-೨೫	ಯಾವುದು
ಏವೆನ್	೯-೪೭	ಏನು ಮಾಡುವೆನು, ನಾನು ಯಾರು
ಏಸಾಡು	೫-೧೪	ಬಾಣವನ್ನು ಬಿಡು
ಏಸು	೪-೪೬	ಹೊಡೆತ
ಏಳಿದನ್	೫-೧೦	ಕೀಳಾದವನು
ಏಳಿದಿಕೆ	೯-೧೫	ಅವಮಾನ, ನೀಚತನ
ಏಳಿಸು	೧-೨೦	ತಿರಸ್ಕರಿಸು

ಒ

ಒಕ್ಕಲಿಕ್ಕು	೫-೨೨	ಹೊಡೆ, ತೊಂದರೆಪಡಿಸು
ಒಟ್ಟಜೆ	೮-೭೩	ಹೆಮ್ಮೆ, ಪರಾಕ್ರಮ, ಗುಂಪು
ಒಟ್ಟೈಸು	೫-೮೨ ; ೬-೮	ಸ್ಪರ್ಧಿಸು, ಒಟ್ಟುಮಾಡು
ಒಡರಿಸು	೩-೧೬	ಉಂಟಾಗು, ಉಂಟುಮಾಡು, ಉದ್ಯುಕ್ತನಾಗು
ಒನಲ್	೪-೭೬	ರೇಗು, ಕೋಪಿಸು
ಒರ್ಮೊದಲ್	೨-೧೮	ಒಂದೇಸಲ

ಓ

ಓಪಳ್	೪-೬೦	ಪ್ರಿಯಳು

ಕ

ಕಟ್ಟಾಯ	೮-೨೨ ಗ : ೮-೫೧	ಕಡಿದು + ಆಯ : ಹೆಚ್ಚು ಪ್ರಮಾಣ, ಸಾಮರ್ಥ್ಯ
ಕಟ್ಟುಕಡೆ	೩- ೪೭ ಗ ; ೪-೧೭ ಗ.	ಮರ್ಯಾದೆ ಮೀರು, ನಿಯಮವನ್ನು ಉಲ್ಲಂಘಿಸು
ಕಡುಕಯ್	೪-೩೫	ವೇಗವನ್ನು ತೋರಿಸು
ಕಡುಪು	೮-೫೧	ಪರಾಕ್ರಮ ಅದಟು
ಕಡಂಗು	೩-೪೭	ಉತ್ಸಾಹವನ್ನು ಹೊಂದು
ಕಣ್ಣಾರ್	೧-೨೧	ಕಣ್ಣು ತುಂಬು
ಕಣ್ಮುಟ್ಟು	೧-೩೦	ಕಣ್ಣಿಗೆ ಸಮೀಪ, ದೃಷ್ಟಿ ಪಥ
ಕರ್ಣಪೂರ	೪-೯೮	ಕಿವಿಯ ಆಭರಣ
ಕತಿಪಯ	೧-೫೯ ಗ.	ಕೆಲವು
ಕದುಪು	೪-೮	ಹಿಂಡು, ಗುಂಪು
ಕನಲ್	೪-೭೬	ಒಳಗೊಳಗೇ ಬೇಯು, ಕೋಪಿಸು
ಕನೀಯ	೩-೪೨	ಕಿರಿಯ
ಕಯ್ಗೞ್ಚು	೪-೩೦	ಕಯ್ಯಂ + ಕೞ್ಚು ; ಕಯ್ಯನ್ನು ತೊಳೆ
ಕಯ್ಗೞಿ	೪-೭೮	ಕೈಮೀರು
ಕಯ್ಮಿಗು	೬-೧	ಕೈಮೀರು
ಕಯ್ವರ್	೨-೨೪ ೩-೩೧	ಫಲಿಸು
ಕಯ್ವಾರ	೭-೭	ಹೊಗಳಿಕೆ
ಕಯ್ವೊಲ	೧-೮	ಗದ್ದೆಯ ಬಯಲು
ಕರ	೫-೭೦ ಗ.	ಕಪ್ಪ
ಕರಣ	೪-೨	ಇಂದ್ರಿಯ
ಕರಮೆ	೮-೩೯	ಹೆಚ್ಚಾಗಿಯೇ, ವಿಶೇಷವಾಗಿ
ಕರವಾಳ್	೪-೧೫ ಗ.	ಕತ್ತಿ
ಕರುವಿಡು	೧-೬	ಎರಕ ಹುಯ್ಯು
ಕರೆಗೞ್ಚು	೪-೬೭	ಕರೆಯಂ + ಕೞ್ಚು : ದಡವನ್ನು ತೊಳೆ
ಕಱುತ್ತು	೧-೪೪ ; ೮-೫೭	ಕೋಪಿಸಿ
ಕಱಂಗು	೪-೧ ಗ.	ಕಪ್ಪಾಗು
ಕಲಸ್	೯-೫೧	ಪಾತ್ರೆ

ಕವಚಹರ	೩-೭	ಕವಚವನ್ನು ಧರಿಸಲು ತಕ್ಕ ವಯಸ್ಸಾದವನು, ಪ್ರಾಯದವನು
ಕಷಾಯ	೧-೩೪	ಭಾವಗಳ ಅತಿರೇಕ
ಕಟಿ	೮-೫೦	ದೂರವಾಗಿ ಅಟ್ಟು
ಕಟಿಪು	೧-೨೭ ಗ.	ದೂರ ಕಳುಹಿಸು
ಕಾದಲ	೩-೧	ಪ್ರಿಯ
ಕಾಯ್	೪-೩೯	ಕೋಪಿಸು
ಕಾಲಾಯಸ	೧-೪	ಕಪ್ಪಾದ ಕಬ್ಬಿಣ
ಕಾಲ್ಗಾಪು	೨-೬ ಗ.	ಪದಾತಿ ಸೈನ್ಯ
ಕಿಣ	೩-೭೧	ಜಡ್ಡು
ಕಿತ್ತಡ	೪-೬ ಗ.	ಕಪಟ
ಕಿಸುಗಣ್ಣು	೬-೪೪	ಕಣ್ಣು ಕೆಂಪಗೆ ಮಾಡು, ರೇಗು
ಕಿಸುರ್	೧-೨೨ ; ೪-೧೫	ಕಲಹ, ಜಗಳ
ಕೀಱು	೧-೪೭ ; ೪-೫೬ ೮-೮೯	ಕೆರಳು, ಹೆದರಿಕೆಯಿಂದ ಕೂಗು
ಕುಕಿಲ್	೬-೫೯	ಶಬ್ದಮಾಡು
ಕುಟ್ಟಿಮ	೬-೩೮	ನೆಲಗಟ್ಟು
ಕುತ್ಕೀಲ	೭-೪	ಬೆಟ್ಟ
ಕುಶೇಶಯ	೫-೫	ಕಮಲ
ಕುಳಿಕ	೮-೧೧	ಒಂದು ಜಾತಿಯ ಸರ್ಪ
ಕೂಟ	೧-೧೯	ಶಿಖರ
ಕೂರ್ಪು	೪-೧೫ ಗ.	ಹರಿತ
ಕೃಪಾಣ	೪-೧೮	ಕತ್ತಿ
ಕೃಶಾನು	೪-೮೭	ಅಗ್ನಿ
ಕೆರ್ಚೀಱು	೮-೭೫ ಗ.	ಕೆಚ್ಚು ಹತ್ತು
ಕೆತ್ತು	೧-೩೬	ಚಲಿಸು
ಕೆಮ್ಮನೆ	೭-೨೫	ಸುಮ್ಮನೆ
ಕೇಕರ	೨-೧೬	ಕುಡಿನೋಟ
ಕೇಸಡಿ	೫-೧೫	ಕಿಸಿದು + ಅಡಿ, ಕೆಂಪಾದ ಹೆಜ್ಜೆ
ಕೇಸುರಿ	೫-೫೪ ಗ.	ಕಿಸಿದು + ಉರಿ ; ಕೆಂಪಾದ ಉರಿ
ಕೊಱಚಾಡು	೮-೩೮	ಕೀಳು ಮಾತಾಡು ; ನಿಂದಿಸು
ಕೊಬ್ಮಿದುಳ್	೭-೩೩	ಕೊಬ್ + ಮಿದುಳ್ ; ಕೊಬ್ಬಿದ ಮೆದುಳು
ಕೋಡು	೯-೪೦	ತಂಪಾಗು
ಕೋವಣ	೧-೨೨	(ಸಂ.) ಕೌಪೀನ
ಕೋವರ್	೮-೭೮	ಕುಂಬಾರರು

ಕೋಳ್	೪-೩೭ ; ೮-೩೧	(ಧಾ. ಕೊಳ್) ಹಿಡಿಯುವುದು, ಕಚ್ಚುವುದು
ಕೌವರೆ	೩-೬೫ ಗ.	ಸಂಭ್ರಮ, ಸಡಗರ
ಕಂಠಿಕೆ.	೧-೪	ಕೊರಳ ಹಾರ
ಕಂಡರಣೆ	೪-೯೦	ಕಡೆತ
ಕಂಡೂಯನ	೭-೨೨	ತೀಟೆ, ನವೆ
ಕಂದಳ	೫-೮೨	ಮೊಳಕೆ
ಕಾಂಡಪಟ	೯-೫೬	ತೆರೆ
ಕುಂಭಿ	೧-೧೯	ಆನೆ
ಕೆಂಕ	೪-೩೪	ಕೆಂಪು
ಕೆಂದಳ	೧-೩೯	ಕೆಂಪಾದ ಅಂಗೈ
ಕೊಂಬುಗೊಡು	೪-೯	ಆಶ್ರಯಕೊಡು
ಕ್ಷುಲ್ಲಕ	೩-೭೫ ಗ.	ಅಪ್ರಶಸ್ತವಾದ

ಖ

ಖಾತ	೪-೧೨ ಗ.	ಅಗೆತ, ಗುಂಡಿ
ಖುರಪುಟ	೨-೭	ಗೊರಸು

ಗ

ಗರ್ತ	೩-೧೭	ಹಳ್ಳ
ಗಳಪು	೮-೮೩	ಹರಟು
ಗಾಡಿ	೧-೩೭	ಸೌಂದರ್ಯ, ಚೆಲ್ವು
ಗಾವಿಲ	೭-೧೭	ಮೂರ್ಖ, ದಡ್ಡ
ಗುಡಿ	೧-೬೧	ಬಾವುಟ
ಗುಡಿಗಟ್ಟು	೩-೧೯ ಗ.	ರೋಮಾಂಚವನ್ನು ಹೊಂದು
ಗುಪ್ತಿ	೮-೧೭	ಗೋಡೆ, ಪ್ರಾಕಾರ
ಗೆಡೆ	೧-೬೪	ಸ್ನೇಹ, ಜೊತೆ
ಗೆತ್ತು	೪-೮೭	(ಧಾ. ಗಿಱು) ; ಭಾವಿಸಿ
ಗೊಡ್ಡು	೪-೮೯ ; ೫-೮	ತುಂಟತನ
ಗೊಲೆ	೨-೧೮	ಬಿಲ್ಲಿನ ಕೊನೆ
ಗೋಶೀರ್ಷ	೮-೯೪ ಗ.	ಒಂದು ಬಗೆಯ ಚಂದನ
ಗೋಸಣೆ	೪-೯೫	(ಸಂ.) ಘೋಷಣೆ ; ಶಬ್ದ, ಸಾರುವುದು, ಡಂಗುರ
ಗಾಂಪ	೪-೪೯	ದಡ್ಡ
ಗುಂಡಿಗೆ	೩-೬	ಕೊಡ, ಕಮಂಡಲು
ಗೆಂಟು	೯-೭ ಗ.	ದೂರ

ಘ

ಘನಾಘನ	೧-೨೯, ೩-೬೬	ದೊಡ್ಡ ಮೋಡ
ಘರ್ಮಜಲ	೯-೨	ಬೆವರುನೀರು
ಘೂರ್ಣಿಸು	೮-೮೯	ಘೋಷಿಸು, ಶಬ್ದಮಾಡು

ಚ

ಚೀಲ	೪-೧೦೨	ಚೀರ, ಬಟ್ಟೆ

ಜ

ಜಡಧಾರೆ	೭-೧೧	ಜಲದ ಧಾರೆ
ಜನಪ್ರವಾದ	೭-೨೬ ಗ.	ಸುದ್ದಿ, ಸಮಾಚಾರ
ಜರತ್	೩-೪೬	ಮುದಿಯಾದ
ಜಲಧರ	೧-೪೫ ಗ.	ಮೋಡ
ಜರ್ವು	೩-೫೩	ಹುಬ್ಬುಹಾರಿಸು, ಗದರಿಸು
ಜೇವೊಡೆ	೧-೪೪	ಟಂಕಾರಮಾಡು
ಜ್ಯಾ	೧-೪೪	ಬಿಲ್ಲಿನ ಹಗ್ಗ
ಜ್ಯಾಯ	೩-೪೨	ಜ್ಯೇಷ್ಠ, ಹಿರಿಯಮಗ

ಡ

ಡಿಂಡಿಮ	೧-೪೫	ಭೇರಿ

ತ

ತಕ್ಕು	೪-೮೪, ೬-೨೩	ಯೋಗ್ಯತೆ, ಸಾಮರ್ಥ್ಯ
ತಕ್ಕೊವರ್ಜೆ	೩-೬೨, ೫-೬೬ / ೬-೩೯, ೯-೨೭	ಯೋಗ್ಯತೆ
ತಗುಳ್	೧-೪೩	ಅಟ್ಟು, ಹಿಂದೆ ಓಡು
ತಟಿತ್	೧-೪೦	ಮಿಂಚು
ತತಿ	೫-೫೪	ಗುಂಪು
ತನುತ್ರ	೫-೫೪	ಕವಚ
ತಱಿಸಲ್	೧-೧೩ ಗ.	ನಿಶ್ಚಯಿಸು
ತಱುಂಬು	೬-೩೭	ಅಡ್ಡಗಟ್ಟು, ನಿಲ್ಲಿಸು
ತಲೆಗರೆ	೧-೨೯	ತಲೆಮರೆಸಿಕೊಳ್ಳು
ತಲೆಮಡು	೬-೫೧, ೮-೫೬ ಗ.	ತಲೆ ಜೋಡಿಸು, ಎದುರಿಸು
ತಲ್ಲಟಿಸು	೬-೫೦	ಹೆದರು, ನಡುಗು
ತವಿಲ್	೮-೨೬ ಗ.	ಕ್ಷಯ, ನಾಶ
ತವಿಸು	೫-೬೮	ನಾಶಮಾಡು

ತಳರ್	೫-೫೨ ಗ.	ಹೊರಡು, ಚಲಿಸು
ತಳ್ಪೊಯ್	೪-೩೪	ಒತ್ತಿ ಸುರಿ
ತೞೆ	೨-೨೦	ಕೊಡೆ
ತೞ್ಕೈಸು	೪-೫ ಗ.	ಅಪ್ಪಿಕೊಳ್ಳು
ತೞ್ಪು	೪-೯೫	ಆಲಿಂಗನ
ತಾರಶೈಲ	೧-೬೮	ಬೆಳ್ಳಿಯ ಬೆಟ್ಟ
ತಿಣ್ಣ	೪-೨೩, ೯-೩೮ ಗ.	ವಿಶೇಷ, ಅಧಿಕ
ತಿರುವಾಯ್	೫-೧೪, ೮-೩ ಗ.	ಬಿಲ್ಲಿನ ಹಗ್ಗದ ಬಾಯಿ
ತಿಱಿಕಲ್	೪-೧೦೭	ಅಣ್ಣೆಕಲ್ಲು
ತೀನ್	೫-೨೨	(ಧಾ. ತಿನ್), ಕಡಿತ, ತೀಟೆ
ತುಱುಗು	೫-೫೪ ಗ.	ತುಂಬು
ತುೞಿಲ್	೪-೨ ಗ.	ನಮಸ್ಕಾರ
ತೆಕ್ಕನೆ	೬-೩೭	ಬೇಗನೆ
ತೆಗೞ್	೫-೪೩	ನಿಂದೆ
ತೆಱಪು	೫-೪೦	ಅವಕಾಶ
ತೊದಳ್	೧-೨೫	ಸುಳ್ಳು
ತೊವಲಿಡು	೭-೩೨	ಚಿಗುರು
ತೋಳ್ವೆರಗು	೧-೩೬	ತೋಳ್ + ಬೆರಗು, ಆಲಿಂಗನ (?)
ತಂದ್ರೀಭೂತ	೩-೨೧	ಆಯಾಸವನ್ನು ಹೊಂದಿದ
ತಾಂಗು	೬-೪	ಸೋಂಕು, ಮುಟ್ಟು
ತುಂಡ	೪-೬೪	ಕೊಕ್ಕು
ತೂಂತು	೫-೭೩, ೬-೧೭ ಗ. ೬-೫೬	ಗಿಡಿ, ತುರುಕು
ತೂಂತು	೭-೨೮	ತೂತು, ರಂಧ್ರ
ತೇಂಕು	೩-೬೧	ತೇಲು

ಥ

ಥಟ್ಟು	೫-೭೫	ಗುಂಪು

ದ

ದಕ್ಷಿಣ	೪-೭೯	ಬಲಗಡೆಯ
ದಯಿತ	೪-೧೧೦	ಗಂಡ, ವಲ್ಲಭ
ದಾರ	೪-೩೩ ಗ.	ಹೆಂಡತಿ
ದಾರಕ	೪-೩೩ ಗ.	ಮಗ
ದಿಟ್ಟದೊಲೆ	೫-೭೫	ದಿಟ್ಟ + ತೊಲೆ, ನೋಟವೆಂಬ ತಕ್ಕಡಿ

ದಿವ್ಯ	೯-೩೬ ಗ.	ಕಷ್ಟವಾದ ಪ್ರಮಾಣ (Ordeal)
ದಿಶಾಘಾಟ	೪-೮	ದಿಕ್ಕಿನ ಎಲ್ಲೆ
ದ್ವಿಷತ್	೪-೧೦೭	ಶತ್ರು
ದೀರ್ಘಿಕೆ	೧-೩೫	ಬಾವಿ
ದೀಧಿತಿ	೮-೮೫	ಕಾಂತಿ
ದುಗುಲ	೧-೨೨	(ಸಂ.) ದುಕೂಲ, ರೇಷ್ಮೆ ಬಟ್ಟೆ
ದುರ್ಣಯ	೪-೧೧೪	ಕೆಟ್ಟ ನೀತಿ
ದುರ್ವಿಲಸಿತ	೪-೫ ಗ.	ಕೆಟ್ಟಕಾರ್ಯ
ದೂದವಿ	೫-೬೦ ಗ.	ದೂತಿ
ದೂರಿಸು	೫-೧೭, ೬-೩೨	ಚಿಂತಿಸು
ದೂಸಱು	೧-೨೫	ಕಾರಣ
ದೃಪ್ತ	೪-೧೦೭	ಗರ್ವಿತ
ದೆಸೆಬಿದ್ದ	೧-೬೧, ೨-೧	(ಸಂ.) ದಿಶಾವಿದ್ಧ, ದಿಶಾವಿದ್ರ, ದಿಕ್ಕನ್ನು ತಗಲುವುದು
ದೇಸಿಗ	೧-೪೩	ಅಪರಿಚಿತನಾದವನು, ಮನೆಯಿಲ್ಲದವನು
ದೋಣೆ	೫-೧೪	ಬತ್ತಳಿಕೆ
ದೊಮ್ಮಳಿಸು	೬-೫೯ ಗ.	ಸಡಗರವನ್ನು ಹೊಂದು, ಗಾಬರಿಪಡು
ದೋಹಳ	೪-೧೦೮	ಬಯಕೆ
ದಂಭೋಳಿ	೮-೭೬	ವಜ್ರಾಯುಧ

ಧ

ಧಾರಾ	೫-೧೩	ಕತ್ತಿಯ ಬಾಯಿ, ಅಲಗು
ಧೀಂಕಿಡು	೭-೧	ಹಾರು, ಎಗರು

ನ

ನಕ್ತಂಚರೀ	೫-೭೩	ರಾಕ್ಷಸಿ
ನಖರ	೪-೬೫	ಉಗುರು
ನಡಪು	೨-೧ ಗ.	ಸಲಹು
ನಣ್ಪು	೫-೪೫, ೫-೬೦ ಗ.	ಸ್ನೇಹ, ಪ್ರೀತಿ
ನನೆಕೊನೆಯೇಱು	೨-೧೪	ಚಿಗುರಿ ಹೂ ಬಿಡು
ನನ್ನಿ	೩-೩೭	ಸತ್ಯ
ನಮೇರು	೨-೧೬	ರುದ್ರಾಕ್ಷಿಹೂವಿನ ಮರ
ನಾಡಾಡಿ	೧-೭	ಸಾಮಾನ್ಯ
ನಾಡೆ	೫-೫೯	ಹೆಚ್ಚಾಗಿ (ಧಾ. ನಾಡು=ನೋಡು, ವಿಚಾರಿಸು)

ನಾಟ್ಕಡೆ	೬-೫೨	ನಾಡ+ಕಡೆ, ದೇಶದ ಕೊನೆ
ನಿಕಾಮ	೫-೨೫	ಅಧಿಕವಾಗಿ
ನಿಕಾಯ	೯-೨೩	ಸಮೂಹ
ನಿಕ್ಷಿಪ್ತ	೧-೨೫	ಇಟ್ಟ
ನಿಗ್ಗವ	೫-೩೫	ಆನೆಯ ದಂತ
ನಿದಾಘ	೨-೧೭	ಬೇಸಗೆ
ನಿರ್ದಲನ	೮-೯೫	ಸೀಳುವುದು
ನಿಮಿರ್	೬-೫೮	ನೆಟ್ಟಗಾಗು, ಹಬ್ಬು
ನಿಮಿರ್ಚು	೧-೬೯	ಪ್ರಸರಿಸು
ನಿರವದ್ಯ	೪-೯ ಗ.	ದೋಷವಿಲ್ಲದ
ನಿರೋಧ	೧-೧೪	ತಡೆಯುವುದು
ನಿಯೋಗ	೬-೧೪	ಕೆಲಸ
ನಿಶಿತ	೪-೬೫	ಮೊನೆಯಾದ
ನಿಶ್ಶಲ್ಯ	೫-೪೫ ಗ., ೫-೬೬ ಗ.	ದುರಾಸೆ, ಅಪನಂಬಿಕೆ ಮುಂತಾದ ಮನೋವಿಕಾರಗಳಿಲ್ಲದಿರುವುದು
ನಿಸರ್ಗ	೭-೩೯	ಸಹಜ
ನಿಸ್ತುಲ	೩-೫೪	ಎಣೆಯಿಲ್ಲದ
ನಿಸ್ವನ	೧-೪೫	ಧ್ವನಿ
ನೀರ್ಗಾದಿಗೆ	೭-೧೬	ನೀರಿನ ಕಂದಕ
ನೀರದ	೧-೨೧	ಮೋಡ
ನೀಱೆ	೪-೯೦	ಸುಂದರಿ
ನೀಲೀರಾಗ	೮-೪೪	ಸ್ಥಿರವಾದ ಪ್ರೀತಿ
ನೀಹಾರ	೧-೬೭	ಮಂಜು, ಹಿಮ
ನೆಗೞ್	೧-೯	ಕೀರ್ತಿಪಡೆ
ನೆಗೞ್ತೆ	೧-೩೩	ಕೆಲಸ, ಉದ್ಯೋಗ
ನೆಱಗೊಳ್	೪-೯೧	ನೆಱನಂ+ಕೊಳ್, ಮರ್ಮಸ್ಥಾನವನ್ನು ಭೇದಿಸು
ನೆಱನ್	೨-೮, ೮-೩೪ ಗ.	ಮರ್ಮಸ್ಥಳ
ನೆಱೆ	೨-೬	ಸಮರ್ಥನಾಗು
ನೆಲೆವೆರ್ಚು	೨-೨	ಅಧಿಕವಾಗು
ನೇರ್ಗಿಱಿಯಂ	೫-೪ ಗ.	ನೇರ್+ಕಿಱಿಯಂ, ಸದ್ಯ ತಮ್ಮ
ನೇವಾಳ	೩-೬೯	ಹಾರ
ನೇಸಱ್	೧-೧೫	ಸೂರ್ಯ
ನೊಚ್ಚಿತು	೫-೩೬	ಲಘುವಾದ, ಕೀಳಾದ
ನೊಚ್ಚಿದರ್	೧-೪೯	ಹಗುರವಾದವರು

ಪ

ಪಗೆಂಡುಗೊಳ್	೩-೪೦	ದಟ್ಟವಾಗಿ ಹೆಣೆದುಕೊಳ್ಳು
ಪಚ್ಚಬಗೆ	೩-೨೫	ವಿಭಾಗವಾದ ಮನಸ್ಸು
ಪಟಚ್ಛದೆ	೫-೫೭	ಬಟ್ಟೆಯ ಮುಸುಕುಳ್ಳವಳು
ಪಟ್ಟವರ್ಧನ	೫-೩೮ ಗ.	ಪಟ್ಟದಾನೆ, ಪೂಜಿಸುವ ಆನೆ
ಪಡೆಮಾತು	೩-೩೯	ಪಡೆಯ ಮಾತು, ಜನರ ಮಾತು
ಪತ್ತುಗೆ	೮-೫೦	ಸೇರುವೆ, ಸಂಬಂಧ
ಪತ್ತುವಿಡು	೫-೬೩ ಗ., ೬-೩	ಕಳಚಿಕೊಳ್ಳು, ಸೇರುವೆ ತಪ್ಪು
ಪದಪು	೫-೬೮	ಸಂಭ್ರಮ
ಪದುಳ	೮-೩ ಗ.	ಕ್ಷೇಮ
ಪರಾಭವ	೧-೧೨	ಸೋಲು
ಪರಿಚ್ಛೇದಿಸು	೨-೪ ಗ.	ನಿರ್ಣಯಿಸು
ಪರಿಜು	೧-೩೭, ೪-೯೦	ಆಕಾರ, ರೂಪ
ಪರಿಭವ	೪-೩೩	ತಿರಸ್ಕಾರ, ಅವಮಾನ
ಪರಿರಂಭ	೫-೬೭	ಆಲಿಂಗನ
ಪರಿವೃಢ	೭ ಗ.	ಒಡೆಯ
ಪರಿವೇಷ	೮-೫೩	ಸೂರ್ಯಚಂದ್ರರ ಸುತ್ತ ಬೆಳಕು ಕಟ್ಟುವುದು
ಪರಿಷ್ವಂಗ	೯-೩೪ ಗ.	ಅಲಿಂಗನ
ಪರೆ	೪-೩೦	ಹರಡು, ಚೆದರು
ಪಱಿಪಡು	೮-೩ ಗ.	ಕತ್ತರಿಸಿ ಬೀಳು
ಪಲಾಲ	೫-೮೧	ಜಳ್ಳು
ಪಸರಿಗ	೧-೨೨	ಹರಡುವವನು
ಪಸುಗೆ	೬-೫೨	ನ್ಯಾಯ, ಕ್ರಮ
ಪಳಂಚು	೧-೪೫	ತಗಲು
ಪಳ್ಚನೆ	೬-೬೦	ಪಳಚ್ಚನೆ, ವಿಶದವಾಗಿ
ಪ್ರತಿಪತ್ತಿ	೨-೫ ಗ., ೪-೭ ಗ.	ಸತ್ಕಾರ, ಉಪಚಾರ
ಪ್ರತೀಹಾರ	೭-೨೩ ಗ.	ಬಾಗಿಲು ಕಾಯುವವನು, ಸೇವಕ
ಪ್ರತ್ಯಯ	೯-೩೭ ಗ.	ನಂಬಿಕೆ, ಪ್ರಮಾಣ
ಪ್ರಧನ	೮-೬೯	ಯುದ್ಧ
ಪ್ರಭಂಜನ	೩-೧೨	ಗಾಳಿ
ಪ್ರಸ್ಥಾನ	೧-೩	ಕ್ರಮ, ಮಾರ್ಗ
ಪ್ರಸ್ಫಾರ	೮-೭೬	ನಡುಗುವ, ಮಿಂಚುವ
ಪಾಡಟಿ	೫-೫೯	ಸ್ಥಿತಿ ಕೆಡು

ಪಾದಪ	೬-೪೬	ಮರ
ಪಾರ್	೩-೧೮	ಎದುರುನೋಡು ; ನಿರೀಕ್ಷಿಸು
ಪಾರಾವಾರ	೩-೪೮	ಸಮುದ್ರ
ಪಾಱುಂಬಳೆ	೮-೮೩	ಪಾಱುವ + ಬಳೆ ; ಚಕ್ರಾಯುಧ
ಪಾವನಿ	೬-೫೭	ಪವನನ ಮಗ ; ಹನುಮಂತ
ಪಾಸಟಿ	೪-೯೩	ಸಮಾನ, ಎಣೆ
ಪಾಟಿ	೩-೧೪	ಕ್ರಮ
ಪಿಸುಣ	೧-೨೨	ಚಾಡಿ ಹೇಳುವವ
ಪೀಲಿ	೨-೨೦	ನವಿಲುಗರಿ
ಪುತ್ತಳಿಗೆ	೬-೭೪	ಬೊಂಬೆ
ಪುತ್ರಿಕಾ	೪-೬೭	ಬೊಂಬೆ
ಪುಯ್ಯಲ್	೫-೩	ದುಃಖದ ಕೂಗು
ಪುರಂಧ್ರಿ	೬-೩೦	ಹೆಂಗಸು
ಪುಷ್ಕರ	೮-೬೭	ನೀರು
ಪುಟಿಲ್	೪-೮೨ ಗ. ; ೯-೭	ತೋಪು
ಪೂಗ	೬-೪೮	ಅಡಕೆಯ ಮರ
ಪೂಣ್	೩-೧೦	ಪ್ರತಿಜ್ಞೆಮಾಡು
ಪೂವಲಿ	೧-೬೧ ; ೨-೧	ಹೂವಿನ ಅರ್ಚನೆ
ಪೆಡಂಮುಗುಳ್	೨-೧೭ ಗ.	ಹಿಂದಿರುಗು
ಪೆರ್ವಿಡಿ	೩-೬೬	ಪಿರಿದು + ಪಿಡಿ ; ದೊಡ್ಡ ಹೆಣ್ಣಾನೆ
ಪೆಳಱು	೭-೩೮ ಗ.	ಹೆದರು
ಪೆಳ್ಪಳಿಸು	೮-೬೦	ಭಯವನ್ನು ಹೊಂದು
ಪೇಶಲ	೬-೨೭	ಸುಂದರ, ಅಲಂಕೃತ
ಪೇಸೇಱು	೬-೫೦ ಗ.	ಪೇಸು + ಏಱು ; ಅಸಹ್ಯವಾಗು
ಪೊಗರ್	೪-೧೫	ಕಾಂತಿ
ಪೊಡಕರಿಸು	೮-೩೭	ಸ್ಫುರಿಸು, ಅಲ್ಲಾಡು
ಪೊಡರ್ಪು	೧-೪೮	ಚೈತನ್ಯ, ಶಕ್ತಿ
ಪೊಡೆವಡು	೫-೪೪	ನಮಸ್ಕಾರಮಾಡು
ಪೊಣರ್	೯-೨೨	ಜೊತೆ
ಪೊಣರ್ಚು	೫-೮೨	ಸೇರಿಸು, ಜೋಡಿಸು
ಪೊಣರ್ಕೆ	೭-೪೦	ಯುದ್ಧ
ಪೊದಳ್	೧-೬೬	ವ್ಯಾಪಿಸು
ಪೊರ್ದು	೩-೬೦	ಸೇರು
ಪೊನಲ್	೫-೫೧ ಗ.	ಪ್ರವಾಹ
ಪೊಲ್ಲಮೆ	೧-೩೪	ಕೇಡು, ಕೆಟ್ಟದ್ದು

ಪೊಸತಿಕ್ಕು	೧-೬೮	ಬಲಿಕೊಡು
ಪೋರ್ಕುಳಿ	೭-೧೩	ಜಗಳ
ಪೋಡುಗಾಱ	೨-೪	ಮರಕಡಿಯುವವನು, ಸೀಳುವವನು
ಪಂದಲೆ	೪-೧೭	ಪಸಿದು + ತಲೆ, ಆಗ ತಾನೆ ಕತ್ತರಿಸಿದ ತಲೆ
ಪಿಂಗು	೩-೭೨	ಹಿಂಜರಿ
ಪೆಂಪು	೮-೪೭	ದೊಡ್ಡತನ, ಅತಿಶಯ

ಬ

ಬಕ್ಕಬಯಲ್	೬-೫೯ ಗ.	ಬರಿದಾದ ಬಯಲು
ಬಗ್ಗಿಸು	೭-೨೪	ಗದರಿಸು, ನಿಂದಿಸು
ಬದ್ದವಣ	೧-೬೧ ; ೨-೧	(ಸಂ.) ವರ್ಧಮಾನ ; ಮಂಗಳವಾದ್ಯ
ಬಿನ್ನ	೪-೬ ಗ.	ಭಂಗ, ಕೇಡು
ಬಯ್	೧-೩೯	ಮುಚ್ಚಿಡು
ಬಯ್ಕೆ	೧-೩೯	ಮುಚ್ಚಿಟ್ಟದ್ದು
ಬಲಗೊಳ್	೫-೮೯	ಪ್ರದಕ್ಷಿಣೆಮಾಡು, ಸುತ್ತು
ಬಲ್ವಲ	೪-೫೮ ; ೪-೭೦ ಗ.	ಆಧಿಕ್ಯ, ಹೆಚ್ಚಿಗೆ
ಬವರ	೧-೧೨	ಯುದ್ಧ
ಬಳ್ಳು	೮-೫೪	ಒಂದು ಜಾತಿಯ ನರಿ
ಬಱಿಯಟ್ಟು	೪-೧೩	ದೂತನನ್ನು ಕಳುಹಿಸು
ಬಱಿವಱಿ	೩-೫ ಗ. ; ೪-೧೪	ಬಳುವಳಿ ; ಹಿಂದೆ ಹಿಂದೆ
ಬಱಿಸಲ್	೫-೭೩	ಹತ್ತಿರಕ್ಕೆ ಬರು
ಬಾಯ್ಕೇಳಿಸು	೧-೨೦	ವಿಧೇಯರನ್ನಾಗಿ ಮಾಡು
ಬಾರಿ	೮-೯೩	ಸರದಿ
ಬಾಳ್	೧-೨೦	ಕತ್ತಿ
ಬಾಱ್ದಲೆ	೩-೬೪ ಗ. ; ೮-೧೬	ಬದುಕಿದ ತಲೆ, ಸೆರೆ
ಬಿಗುರ್ವಿಸು	೪-೧೧೧	ಮಾಯೆಯಿಂದ ನಿರ್ಮಿಸು
ಬಿಡೆನುಡಿ	೪-೯೭. ಗ.; ೪-೧೦೯	ಕೋಪದಿಂದ ಮಾತಾಡು, ಉತ್ತರಕೊಡು
ಬಿತ್ತಗ	೭-೩೨	ಪ್ರೌಢ
ಬಿರ್ದಿಕ್ಕು	೯-೫ ; ೪-೩೬ ಗ.	ಔತನಮಾಡು
ಬಿಱುತು	೮-೭೯	ಹೆದರಿ
ಬಿಸವಂದ	೪-೨೮	ಕೌತುಕ
ಬಿಸಸೂತ್ರ	೧-೨೨	ತಾವರೆಯ ನೂಲು
ಬೀಸರ	೩-೩೫ ; ೮-೫೧	ವ್ಯರ್ಥ
ಬೀಱುಡೆ	೪-೧೦೫	ಬಿದ್ದಬಟ್ಟೆ (ಉಟ್ಟು ತೆಗೆದುಹಾಕಿದ ಬಟ್ಟೆ)
ಬೆಕ್ಕಸ	೩-೪೧	ಆಶ್ಚರ್ಯ

ಬೆಟ್ಟವೆಟ್ಟನೆ	೬-೫	ಗಡುಸಾಗಿ, ಬಿರುಸಾಗಿ
ಬೆರಗು	೫-೬೨	ಉಪಾಯ (ತ. ವಿರಂಗು)
ಬೆಸನ್	೧-೩೧	ಕೆಲಸ
ಬೆಸಲೆಯಾಗು	೨-೬	ಹೆರು (?)
ಬೆಳ್ಮಾಡು	೩-೪೯	ಬೆಪ್ಪುಮಾಡು, ಮರಳುಮಾಡು
ಬೆಳ್ಳೆರಲೆ	೧-೧೯	ಅಳುಕುವ ಜಿಂಕೆ
ಬೇವಸ	೪-೮೭ ಗ. ; ೮-೭೯	ಸಂಕಟ, ದುಃಖ
ಬೇಳ್	೫-೫೨ ಗ.	ಯಜ್ಞಮಾಡು
ಬೋನ	೬-೩೭ ಗ.	(ಸಂ.) ಭೋಜನ

ಭ

ಭೂಭೃತ್	೧-೧೯	ಬೆಟ್ಟ
ಭೂಮಿಗೋಚರ	೧-೩೩	ಮನುಷ್ಯ

ಮ

ಮಗುಳ್	೧-೩೨ ಗ.	ಹಿಂದಿರುಗು
ಮಡ	೭-೩೪	ಬಂಡಿಯ ಹಿಂಭಾಗ
ಮಡಗೂಳ್	೪-೧೦೫	ಮಡಗಿದ ಅನ್ನ (ಎಂಜಲನ್ನ)
ಮಡಲ್	೪-೧೧ ; ೪-೧೦೮	ಹಬ್ಬು
ಮಣ್ಮಟಿ	೭-೩೫ ಗ.	ರೂಪು ಕೆಟ್ಟ ಸಾವು
ಮದಿರಾ	೪-೧೧೫ ಗ	ಮದ್ಯ
ಮನ್ಯು	೬-೪೦ ಗ.	ದುಃಖ
ಮಯೂಖ	೪-೧೫	ಕಿರಣ
ಮರವಡು	೯-೩೯	ಮರದಂತೆ ಬೀಳು, ನಿಶ್ಚೇಷ್ಟವಾಗು
ಮರವಾನಸ	೪-೮೬	ಮರದ ಮನುಷ್ಯ
ಮರುಳ್	೫-೭೬	ಪಿಶಾಚ
ಮರ್ಯಾದೆ	೪-೪೮	ಮೇರೆ, ಎಲ್ಲೆ
ಮಱುವಕ್ಕ	೮-೪೧ ಗ.	ಎದುರು ಪಕ್ಷ
ಮಲರ್	೫-೨೫	ಹೂ
ಮಲೀಮಸ	೩-೨೨	ಹೊಲಸಾದ, ಕಶ್ಮಲವಾದ
ಮಸಗು	೧-೩೧	ರೇಗು
ಮಸುಳ್	೪-೫೦	ಕಾಂತಿಗೆಡು
ಮಸೆ	೭-೪೧	ಸಣ್ಣಗಾಯ
ಮಹತ್ತರ	೨-೧೧ ಗ.	ಪಾರುಪತ್ಯಗಾರ
ಮುಗ್ಗಿಸು	೭-೨೨	ಕಡಮೆಮಾಡು, ಕುಗ್ಗಿಸು

ಮಾಣಿಸು	೩-೪೦	ನಿಲ್ಲಿಸು, ತಡೆ
ಮಾನಸಿಕ್ಕೆ	೪-೪೭ ; ೬-೩೪ ಗ.	ಮನುಷ್ಯತ್ವ
ಮಾಸರ	೫-೫೦	ಹೆಚ್ಚು, ಅಧಿಕ, ಸೊಗಸು (?)
ಮಿಸುಗು	೮-೮೫	ತೊಳಗು
ಮಿಹಿರಾಧ್ವ	೬-೫೮	ಆಕಾಶ
ಮಿಳಿರ್	೮-೮೯	ಅಲುಗಾಡು
ಮಿಳ್ಳಿಸು	೧-೬೧	ಅಲುಗಾಡು
ಮುಕುರ	೧-೭ ಗ.	ಕನ್ನಡಿ
ಮುನ್ನೀರ್	೭-೧೬	ಸಮುದ್ರ
ಮುಯ್ವು	೮-೭೯ ಗ.	ಹೆಗಲು
ಮೃಗಮದ	೪-೭೪	ಕಸ್ತೂರಿ
ಮೇಲುದು	೫-೬೪ ಗ.	ಮೇಲಿನ ಬಟ್ಟೆ, ಉತ್ತರೀಯ
ಮೊಗ್ಗೆ	೨-೯ ; ೭-೧೬	ಮೊಗ್ಗು + ಎ ; ಸಾಧ್ಯವೆ ?
ಮೊನೆ	೫-೭೮	ಯುದ್ಧ
ಮೊಱೆ	೩-೩೪	ಕ್ರಮ, ಕರ್ತವ್ಯ
ಮೋದು	೪-೨೧	ಹೊಡೆ
ಮುಂಗೋಳ್	೨-೭ ಗ.	ಸೇನೆಯ ಮುಂಭಾಗ

ಯ

ಯಾನಪಾತ್ರ	೩-೭೫ ಗ.	ನಾವೆ, ದೋಣಿ
ಯೂಥ	೭-೨೩	ಹಿಂಡು

ರ

ರಾವಣಹಸ್ತ	೫-೪೯	ತೆಂಗಿನಚಿಪ್ಪನ್ನುಳ್ಳ ಒಂದು ಬಗೆಯ ಚಿಕ್ಕ ವೀಣೆ (ತಮಿಳು : ಇರಾವಣಾತ್ತಮ್)
ರುಚಿ	೪-೧೪	ಕಾಂತಿ
ರುತಿ	೬-೧೨ ಗ.	ಶಬ್ದ
ರೂಪಪರಾವರ್ತನ	೧-೩೪ ಗ.	ರೂಪದ ಬದಲಾವಣೆ
ರೋದೋಂತರ	೭-೩೧	ಆಕಾಶದ ಒಳಗು
ರೈವೃಷ್ಟಿ	೪-೧೦	ಸಂಪತ್ತಿನ ಮಳೆ (ಚಿನ್ನದ ಮಳೆ)

ಱ

ಱಾಟಳ	೩-೬	ನೀರನ್ನು ಎತ್ತುವ ರಾಟವಾಳ
ಱುಕ್ಕಟಂ	೧-೮	ಸುಮ್ಮನೆ, ಮೌನವಾಗಿ

ಲ

ಲತಾಂತ	೪-೭೫	ಹೂ
ಲಾಕ್ಷಾ	೧-೨೬ ಗ.	ಅರಗು
ಲುಬ್ಧಕ	೨-೫	ಬೇಡ
ಲುಲಿತ	೯-೩೪ ಗ.	ವ್ಯಾಪ್ತವಾದ
ಲೋಹಿತ	೪-೧೦೮	ರಕ್ತ
ಲುಂಟಾಕ	೨-೧೭	ಕೊಳ್ಳೆಹೊಡೆಯುವವ ; (ಸಂ.ಲುಂಠಾಕ)
ಲೆಂಕೆ	೫-೨೨	ಸೇವಕಿ, ತೊತ್ತು

ವ

ವಹಿತ್ರ	೩-೭	ಚೈತ್ರ, ತೆಪ್ಪ
ವ್ಯಗ್ರ	೪-೭೭ ಗ.	ವ್ಯಾಕುಲವಾದ
ವಾರಣ	೫-೬೪ ಗ.	ಆನೆ
ವಿಘಟನ	೧-೨೬	ಒಡೆಯುವುದು
ವಿದಾರಿಸು	೪-೩೯	ಸೀಳು, ಕತ್ತರಿಸು
ವಿದ್ರಾವಣ	೭-೧೫	ಓಡಿಸುವ
ವಿದ್ರುಮ	೧-೧೯	ಹವಳ
ವಿಧುರೆ	೬-೨೩ ಗ.	ವಿಯೋಗವನ್ನು ಹೊಂದಿದವಳು
ವಿಪಣಿ	೩-೬೫ ಗ.	ಅಂಗಡಿ
ವಿಪ್ರತಿಪತ್ತಿ	೭-೨೬ ಗ.	ಭಿನ್ನಾಭಿಪ್ರಾಯ
ವಿವರ	೪-೩೩ ಗ.	ರಂಧ್ರ, ತೂತು
ವಿಶ್ರುತ	೧-೪	ಪ್ರಸಿದ್ಧ
ವಿಸ್ಫುಲಿಂಗ	೪-೬೩ ಗ.	ಕಿಡಿ
ವೀಜನ	೩-೧೨	ಬೀಸಣಿಗೆ
ವೀತಾಂಕುಶ	೧-೨೪	ಕಳೆದುಹೋದ ಅಂಕುಶವುಳ್ಳವನು, ಸ್ವೇಚ್ಛಾಚಾರಿ
ವೃಜಿನ	೩-೬೮	ಪಾಪಕರ್ಮ
ವೈಜಯಂತಿ	೩-೩೪	ಬಾವುಟ
ವಂಶ	೪-೧೬ ಗ.	ಬಿದಿರು

ಶ

ಶರಧಿ	೫-೫೪	ಬತ್ತಳಿಕೆ
ಶರಾಸನ	೨-೬ ಗ.	ಬಿಲ್ಲು
ಶಾರ್ವರಿ	೨-೫೫	ರಾತ್ರಿ
ಶಿಲೀಮುಖ	೪-೪೭	ಬಾಣ
ಶಂಕಾ	೪-೫೪	ಭಯ

ಷ

ಷಂಡ	೫-೩೨ ಗ.	ಗುಂಪು

ಸ

ಸಜ್ಜನಿಕೆ	೪-೮೪	ಪಾತಿವ್ರತ್ಯ (ಸಜ್ಜನ=ಕುಲಸ್ತ್ರೀ)
ಸಟಾ	೪-೯	ಜಡೆ, ಬಿಳಲು
ಸತ್ವ	೪-೨೮	ಪ್ರಾಣಿ
ಸಪತ್ನ	೩-೬೧	ದ್ವೇಷಿ
ಸಮಕಕ್ಷ್ಯ	೬-೫೨	ಸರಿಸಮನಾದವನು
ಸಮಾಹಿತ	೩-೬೫	ಸಮಾಧಾನಗೊಂಡ
ಸಯ್ಪು	೩-೩೨	ಪುಣ್ಯ
ಸಯ್ತು	೭-೧೪	ನೆಟ್ಟಗೆ, ಕ್ಷೇಮವಾಗಿ
ಸಲವು	೬-೧೭	(ಧಾ. ಸಲ್); ಪ್ರವೇಶ
ಸ್ಥಗಿತ	೫-೨೬	ಆಚ್ಛಾದಿಸಲ್ಪಟ್ಟ, ಮುಚ್ಚಿದ
ಸ್ರಕ್	೧-೫೮	ಹೂವಿನ ಹಾರ
ಸ್ವರ್ಗಾಲಯ	೬-೨೯	ಸ್ವರ್ಗದ ಮನೆ
ಸ್ವರ್ಭಾನು	೧-೧೨	ರಾಹು
ಸಾರ್ಕೆ	೫-೫೮	ಸನಿಾಪ
ಸಾಧನ	೨-೮	ಸೈನ್ಯ
ಸಾಮಜ	೫-೫೨	ಆನೆ
ಸಾಯಕ	೫-೧೪	ಬಾಣ
ಸಾರ್	೧-೨೧	ಕೂಡು, ಸೇರು
ಸಾರೆವೋಗು	೮-೧೮ ಗ.	ಹತ್ತಿರ ಹೋಗು
ಸಿಡಿಮಿಡಿಗೊಳ್	೮-೭೧	ಕೆರಳು, ರೇಗು
ಸಿರಿಯೊಡೆಯ	೭-೧೧	ಸಂಪತ್ತುಳ್ಳವನು
ಸಿವಿಗೆ	೧-೩೮ ; ೯-೨೫ ಗ.	(ಸಂ.) ಶಿಬಿಕಾ ; ಪಲ್ಲಕ್ಕಿ
ಸುಟ್ಟಿತೋಱು	೨-೧೫	ಬೆರಳಿನಿಂದ ತೋರಿಸು
ಸುಟ್ಟುರೆ	೭-೩೨	ಸುಂಟರಗಾಳಿ
ಸುರಚಾಪ	೩-೪೧	ಮಳೆಬಿಲ್ಲು
ಸೂಡು	೧-೪೩	ಮುಡಿಸು, ಮಾಲೆಹಾಕು
ಸೂಡು	೪-೬೭	(ಧಾ. ಸುಡು) ; ಸುಡುವುದು
ಸೂರುಳ್	೯-೧೮ ಗ.	ಪ್ರತಿಜ್ಞೆಮಾಡು
ಸ್ಪೃಹೆ	೪-೪೮	ಅತ್ಯಾಸೆ
ಸೆಡೆ	೩-೭೬	ಹಿಂಜರಿ, ಹೆದರು

ಪಂ...

...ing College Library

ಸೆರಗು	೬-೩೦	ಘ...
ಸೇಕ	೫-೨೨	ಚುಮುಕಿ...
ಸೇದೆ	೩-೬೫	ಆಯಾಸ
ಸೈಕತ	೫-೫೦ ಗ.	ಮರಳು
ಸೋವತ	೮-೯೩	ಆಹಾರ
ಸಂಛನ್ನ	೭-೫೫	ಮುಚ್ಚಿದ
ಸ್ತಂಬೇರಮ	೯-೧	ಆನೆ
ಸ್ತಂಭಿಸು	೫-೪೬ ಗ.	ನಿಲ್ಲಿಸು, ತಡೆ
ಸ್ಪಂದ	೯-೧೨	ಅದುರಿಕೆ, ನಡುಕ
ಸ್ಯಂದನ	೮-೫೬	ರಥ
ಸಿಂದೂರ	೧-೧೯	ಕೆಂಪುಬಣ್ಣ (ಚಂದ್ರ)
ಸಿಂಹಾಸಂದಿ	೩-೬೧	ಸಿಂಹಾಸನ
ಸೈಂಹಿಕೇಯ	೪-೬೩	ರಾಹು

ಹ

ಹರ್ಮ್ಯ	೩-೨೦	ಉಪ್ಪರಿಗೆ ಮನೆ
ಹರಿಪೀಠ	೧-೧	ಸಿಂಹಾಸನ
ಹಾರಯಷ್ಟಿ	೧-೨	ಮುತ್ತಿನ ಸರ

VIJAYA EVENING COLLEGE,
LIBRARY
BANGALORE-4.
ACCN. NO 1970
SECTION
COST Rs 2/-
Date 21/7/70 Librarian

PRINTED AT THE WESLEY PRESS AND PUBLISHING HOUSE, MYSORE CITY

Call No:

Author : ಕೆ. ವಿ. ಪುಟ್ಟಪ್ಪ (ಪ್ರಧಾನ ಸಂಪಾದಕ)

Title : ಶಂಕರ ರಾಮಾಯಣ ಸಂಗ್ರಹ

Signature	Borrowing Date
P. Ramappa	7.1.83.
[illegible]	13/8/

1970